# ನಾಸ್ತಿಕ ಕೊಟ್ಟ ದೇವರು

ಕಥಾ ಸಂಕಲನ

ನಿರಂಜನ

ರಶ್ಮಿ

ಜಯನಗರ : ಬೆಂಗಳೂರು-೧೧

c

CJ

A. B. Channabasappa.
B. A., (Hons)
91/3, CORONATION ROAD,
BANGARAPET.

## ಈ ಸಂಕಲನವನ್ನು ಕುರಿತು

ಕಳೆದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ನಾನು ಬರೆದ ಸಣ್ಣಕತೆಗಳಿಂದ ಹನ್ನೆರಡನ್ನು ಆರಿಸಿ ಈ ಸಂಗ್ರಹದಲ್ಲಿ ಪ್ರಕಟಿಸಲಾಗಿದೆ.

ಸನ್ಮಿತ್ರರಾದ ಪ್ರೊ. ಜಿ. ವೆಂ. ಕತೆಗಳನ್ನು ತೂಗಿನೋಡಿ ಮೇಲ್ನುಡಿಯನ್ನು ಬರೆದುಕೊಟ್ಟು ಉಪಕಾರಮಾಡಿದ್ದಾರೆ.

ಗೆ. ಮಿತ್ರ ಸಂಕಲನವನ್ನು ಮುದ್ರಣಕ್ಕೆ ಅಣಿಗೊಳಿಸು ವುದರಲ್ಲಿ ನೆರವು ನೀಡಿದ್ದಾರೆ.

ಗೆ. ಶೇಷನಾರಾಯಣರು ಕನ್ನಡ ಸಾಹಿತ್ಯ ಪರಿಷತ್ತಿನ ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟದಲ್ಲಿ ಇದನ್ನು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ.

ಇವರಿಗೆಲ್ಲ ನಾನು ಋಣಿ.

ಗಣೇಶ ಚತುರ್ಥಿ
೧೯೬೫
ಜಯನಗರ

ನಿರಂಜನ

## ಒಳಗಡೆ


೧. ನಾಸ್ತಿಕ ಕೊಟ್ಟ ದೇವರು . . ೧

೨. ಮಣ್ಣಿನ ಮಗ ಗನ್ನು ತಂದ . . ೮

೩. ಹನೂಲ ಇಮಾಮ್ ಸಾಬಿ . . ೨೧

೪ ತಪ್ಪು ಎಣಿಕೆ . . ೩೯

೫ ಸ್ವಸ್ತಿಪಾನ . . ೫೮

೬. ಯಾವ ಜನ್ಮದ ಶಾಪ? . . ೭೩

೭ ಅನ್ನಪೂರ್ಣಾ . . ೧೦೬

೮ ಅನ್ನದೇವರ ರೈಲು ಪ್ರಯಾಣ . . ೧೧೧

೯ ಆ ಕಾಳ ರಾತ್ರಿ . . ೧೧೮

೧೦ ಒಂಟಿ ನಕ್ಷತ್ರ ನಕ್ಕಿತು . . ೧೨೭

೧೧ ನಂ. ೨೦೮ ಮತ್ತು ನೀಲಿ ಬುಶ್‌ಕೋಟು . . ೧೩೬

೧೨ ಡಿ ಲಕ್ಸ್ . . ೧೪೯

ಮೇಲ್ನುಡಿ . . ೧೬೦

ಶ್ರೇಷ್ಠ ಮಾನವವಾದಿ

ದಿವಂಗತ

ದಾಮೋದರ ಚಿತ್ತಾಲ

ಇವರ

ಸ್ಮರಣೆಗೆ

## ಕಥೆ : ಒಂದು

# ನಾಸ್ತಿಕ ಕೊಟ್ಟ ದೇವರು

ಆ ಯಾಲಕ್ಕಿ ತೋಟದ ಸ್ನೇಹಿತರ ಮನೆಯಲ್ಲಿ, ಎರಡು ತಿಂಗಳ ಕಾಲ ಎಣಿಕೆಗೆ ಸಿಗದ ಹಾಗೆ ಕಳೆದುಹೋಗಿತ್ತು. ಸಂಚಾರಜೀವಿಯಾದ ಸೀತಾಪತಿಯನ್ನು ದೂರದ ಹಾದಿಗಳು ತಿರುತಿರುಗಿ ಕರೆಯುತ್ತಿದ್ದುವು. ಕಲ್ಪನೆಯ ಹಕ್ಕಿ ದೂರ ದೂರಕ್ಕೆ ಹಾರತೊಡಗಿತ್ತು.

ಮನಸ್ಸಿನ ನೆಮ್ಮದಿ ಮರಳಿಬಂದ ಹಾಗಾಯಿತು ಎಂದು ಭಾವಿಸಿದಾಗಲೇ, ಆ ಬೆಳಗ್ಗೆ ನಡೆದ ಘಟನೆಯೊಂದು ಅವನ ಕಲಾಹೃದಯದ ಮೇಲೆ ಕಾದ ಬರೆ ಎಳೆಯಿತು.

ಆ ಕೆಲಸಗಾರರೋ! ತುಳು ಮಾತು, ಮಲೆಯಾಳ ಮಾತು, ಕನ್ನಡ . . . ದುಡಿದು ಬದುಕುವ ಆಸೆ ಕಟ್ಟಿಕೊಂಡು ಬಯಲು ಭೂಮಿಯಿಂದ ಮೈಸೂರಿನ ಆ 'ಘಟ್ಟ ಸೀಮೆ'ಗೆ ಬಂದಿದ್ದ ಬಡವರು. ಊರಲ್ಲಾದರೆ ಅವರು ದಿನಗೂಲಿಯ ಕೃಷಿಕೂಲಿಕಾರರು; ಇಲ್ಲವೆ ಒಪ್ಪೊತ್ತು ಊಟವೂ ದೊರೆಯದಂಥ ಉತ್ಪತ್ತಿ ಇರುವ ಪುಟ್ಟ ಹೊಲಗಳ 'ಒಕ್ಕಲು-ಯಜಮಾನರು.' ಇಲ್ಲಿಯೋ, ಸ್ವಂತದ ಶ್ರಮವನ್ನು ಮಾರಿ ಬದುಕುವ ಸ್ವತಂತ್ರರು ಅವರು.

ಆದರೆ ಆ ಸ್ವಾತಂತ್ರ್ಯ!

ಎರಡು ಬದಿಗಳಲ್ಲೂ ಎತ್ತರದ ಗಿಡಗಳಿದ್ದ ಕಣಿವೆಯಂಥ ಹಾದಿಯಲ್ಲಿ ಆ ಭಾನುವಾರ ಬೆಳಗ್ಗೆ ಸೀತಾಪತಿ ವಾಯುಸೇವನೆಗೆ ಹೊರಟಿದ್ದ. ಅದು ರಜಾ ದಿನ. ಮಾನವರ ಸುಳಿವೇ ಇಲ್ಲದೆ ಗಿಡಮರಗಳಿಗೆಲ್ಲ ಏಕಾಂತದ ಸುಖ ದೊರೆತಿತ್ತು ಆ ಹೊತ್ತು. ಕ್ರಮ ಕ್ರಮವಾಗಿ ಹೆಜ್ಜೆ ಇಡುತ್ತಾ, ನಡೆಗೋಲನ್ನು ಬೀಸುತ್ತಾ ತಂಗಾಳಿಗೆ ಮೈಯೊಡ್ಡಿ ಸೀತಾಪತಿ ಸಾಗಿದ್ದ.

ಹಾಗೆ ಒಂದು ಮೈಲಿ ಸಾಗಿದ ಬಳಿಕ ವಾಪಸು ಹೋಗೋಣವೆಂದುಕೊಂಡ ಸೀತಾಪತಿ.

ಇನ್ನೇನು ತಿರುಗಬೇಕೆನ್ನುವಷ್ಟರಲ್ಲಿ "ಅಯ್ಯೋ ಸತ್ತೆ! ಮಾರಿ ಬಡಿಯ ನಿಂಗೆ! ನಿನ್ ಕೈ ಕತ್ತರ್ಸಿ ಹೋಗ! ಅಯ್ಯೋ ಅವ್ವಾ!. . ." ಎಂಬ ಕೂಗು ಕೇಳಿಸಿತು. ಯಾತನೆಯ ಆಲಾಪನೆ ಮಾಡುತ್ತಿದ್ದ ಬಲು ಬಳಲಿದ ಹೆಣ್ಣು ಸ್ವರ . . .

ಸೀತಾಪತಿ ಶಿಲಾಪ್ರತಿಮೆಯಂತೆ ಅಲ್ಲೇ ನಿಂತ.

ನೋವಿನ ನರಳಾಟದೊಂದಿಗೆ ಒಂದು ಸ್ವರ ಕೂಗಾಡುತಿತ್ತು :

"ಕೆಟ್ಟ ರಂ–! ಮುದುಕಪ್ಪ ಕಣ್‌ಕಾಣಿಸ್ದೆ ಬಿದ್ದನ್ನೆ. ಉಡುಗ್ರು ಅಸಿದವೆ. ಜರಾ ಬಂದು ನಾನು ಸಾಯ್ತಿದ್ರೆ, ಅಬ್ಬ ಇವ್ನ ಸೊಕ್ಕೆ! ಹಳ್ಳಿಗೆ ಓತಾಳಂತೆ. . . ಊರ್ಗೆ ಓಗ್ಗೇಕಂತೆ . . . ಹೂಂ!"

ಸೀತಾಪತಿಯ ಮುಖ ಕಪ್ಪಿಟ್ಟಿತು. ಮತ್ತೆ ಅದೇ ಕತೆ. ಆ ಗುಡಿಸಲಿನತ್ತ ಸಾಗೋಣ ಎಂದಿತು ಮನಸ್ಸು. ಆದರೆ ಆತ ಏನುಮಾಡಬಲ್ಲ? ಎಂಥ ಪರಿಹಾರ ಸೂಚಿಸಬಲ್ಲ? ಏನು ಸಹಾಯ ನೀಡಬಲ್ಲ? ಮನಸ್ಸು ಹಿಂಜರಿಯಿತು. ಶರೀರ ಕದಲಲಿಲ್ಲ.

ಅಲ್ಲೇ ಪಕ್ಕದಲ್ಲೇ ಇರಬೇಕು ಆ ಗುಡಿಸಲು. ಹೌದು, ಆ ಜಾಗದಿಂದಲೇ ಅವರ ಕೇರಿ ಆರಂಭವಾಗುವುದು. ಆ ಸಂಭಾಷಣೆಯ ಹಿಂದಿನ ವ್ಯಕ್ತಿಗಳನ್ನು, ಆ ವಾತಾವರಣವನ್ನು, ಸೀತಾಪತಿ ಚಿತ್ರಿಸಿಕೊಂಡ. ಮಗ–ಸೊಸೆಯರ ಜಗಳದೆಡೆಯಲ್ಲಿ ಮೂಕನಾಗಿ ಮೌನದ ಕಣ್ಣೀರು ಸುರಿಸುವ ಕುರುಡು ತಂದೆ. ಮಲೆ ಜ್ವರ ಹಿಡಿದು ಕೃಶನಾಗಿ ಕೊಳಕು ಕಂಬಳಿಯೊಳಗೆ ಮುದುಡಿ ಮಲಗಿರುವ ಯಜಮಾನ . . . ಹಳ್ಳಿಗೆ ಹೊರಟು ಹೋಗೋಣವೆಂದು ಹಂಬಲಿಸುತ್ತಿರುವ, ಯೌವನದಲ್ಲೇ ಮುಪ್ಪು ಕಂಡ, ಆ ಹೆಣ್ಣು . . . ಭೀತರಾಗಿ ಮೂಲೆಯಲ್ಲಿ ಅವಿತಿರುವ ಪುಟಾಣಿ ಮಕ್ಕಳಿಬ್ಬರು . . .

ಸೀತಾಪತಿಯ ಕಾಲುಗಳು ಅವನ ಸ್ನೇಹಿತನ ಮನೆಯತ್ತ ಚಲಿಸಿದುವು. ಸೀದುಹೋಗಿತ್ತು ಹೃದಯ. ಬಿರಿಯುವ ಭೀತಿ ತೋರಿಸುತ್ತ ಮೆದುಳು ಗುಡುಗುಟ್ಟುತಿತ್ತು.

ಮನೆಯ ಮೆಟ್ಟಲೇರಿದಾಗಲೇ ಎದುರಿನ ನಿಲುವುಗನ್ನಡಿ ಅವನ ಪ್ರತಿಬಿಂಬವನ್ನು ತೋರಿತು. ಸೀತಾಪತಿ ಕಂಡುದು ತನಗೇ ಅರ್ಥವಾಗದಂಥ ಒಂದು ಮುಖಮುದ್ರೆ. ತುಟಿಗಳು ಬಿಗಿದುಕೊಂಡಿದ್ದುವು. ಹಣೆ ನೆರಿಗೆ ಕಟ್ಟಿತ್ತು. ಕೆನ್ನೆಯ ಎಲುಬುಗಳು ಎದ್ದು ಕಾಣಿಸುತ್ತಿದ್ದುವು. ಶೀಘ್ರ

ಗತಿಯಿಂದ ಬಿಳಿ ಬಣ್ಣಕ್ಕೆ ತಿರುಗುತ್ತಿದ್ದ ತೆಳ್ಳಗಿನ ನೀಳವಾದ ತಲೆಗೂದಲು . . .

ಕಲಾವಿದ ಸೀತಾಪತಿ ಆರಾಮ ಕುರ್ಚಿಯ ಮೇಲೆ ಕುಳಿತು ಕಾಲು ನೀಡಿದ. ಪೈಪ್ ಹೊರತೆಗೆದು, ತಂಬಾಕು ತುಂಬಿಸಿ, ಕಡ್ಡಿಗೀರಿದ. ಇಲ್ಲ, ಪೈಪನ್ನೆಷ್ಟು ಚೀಪಿದರೂ ಕದಡಿ ಹೋದ ಮನಸ್ಸಿನ ನೆಮ್ಮದಿ ಮರಳಿ ಬರಲಿಲ್ಲ. ಆ ಸಂಭಾಷಣೆ ಪ್ರತಿಧ್ವನಿಸುತ್ತಿತ್ತು. ಅದರ ಹಿಂದಿನ ಚಿತ್ರ ಕಣ್ಣಿಗೆ ಕಟ್ಟುತ್ತಿತ್ತು.

—ಆ ಬಡ ರೈತ ಕುಟುಂಬಕ್ಕೆ ಹಳ್ಳಿಗೆ ಹೋಗಬೇಕೆಂಬ ಆಸೆಯಿದೆ–ಬಲವತ್ತರವಾದ ಆಸೆ. ಅವರು 'ಅಡ್ವಾನ್ಸ್' ಇಸಕೊಂಡಿದ್ದಾರೆ. ಕಾಗದಗಳಿಗೆ ಹೆಬ್ಬೆಟ್ಟಿನ ಮುದ್ರೆಯೊತ್ತಿದ್ದಾರೆ. ಹೆಂಡದಂಗಡಿಯಲ್ಲಿ, ದಿನಸಿ ಅಂಗಡಿಯಲ್ಲಿ, ಅವರಿಗೆ ಸಾಲವಾಗಿದೆ. ಅವರನ್ನು ಅಲ್ಲಿಗೆ ಕರೆದು ತಂದ ಮೇಸ್ತ್ರೀಯೇ ಅವರ ಪಾಲಿನ ಪರದೈವ. ಆ ತೋಟದಿಂದ ಬಿಡುಗಡೆಯಾಗಬೇಕಾದರೆ ಆತ ಕರುಣಿಸಬೇಕು . . .

ಅಂಥ ಯೋಚನಾಸರಣಿಯಲ್ಲಿ, ಆ ಹೆಣ್ಣಿನ ಚಿತ್ರವೊಂದೇ ಕ್ರಮಶಃ ರೂಪುಗೊಂಡು ಸೀತಾಪತಿಯ ಮನಸ್ಸಿನಲ್ಲಿ ಉಳಿಯಿತು. ಆ ಕಾಲುಗಳಿಗೆ ಬೇಡಿ ಹಾಕಿದ್ದಾರೆ . . . ಆದರೂ ಕುಳಿತಲ್ಲಿಂದಲೇ ಆಕೆ ಹುಟ್ಟೂರಿನತ್ತ ಕೈಚಾಚಿ ಹಂಬಲದ ದೃಷ್ಟಿ ಹರಿಸಿದ್ದಾಳೆ . . . ಅವಳೊಬ್ಬಳದೇ ಅಲ್ಲ ಆ ಆಶಯ. ತೋಟಗಳಲ್ಲಿ ದುಡಿಯಲೆಂದು ಬಯಲು ಭೂಮಿಯಿಂದ ಬರುವ ಎಲ್ಲ ಬಡಪಾಯಿಗಳ ಆಸೆಯ ಪ್ರತಿನಿಧಿ ಆಕೆ.

ಚಟುವಟಿಕೆಯಿಂದ ಸೀತಾಪತಿ ಎದ್ದುನಿಂತು, ಗೆಳೆಯ ತನಗಾಗಿಯೇ ತೆರವು ಮಾಡಿಸಿದ್ದ ಕೊಠಡಿಯತ್ತ ಸಾಗಿದ. ನರನಾಡಿಗಳಲ್ಲಿ ಚೈತನ್ಯ ಹರಿಯಿತು. ಕೈಬೆರಳುಗಳಲ್ಲಿ ಲವಲವಿಕೆ ತುಂಬಿತು. ಆ ಕಣ್ಣುಗಳು ಮಿನುಗಿದುವು . . . ಸೀತಾಪತಿ ಮೃದುವಾದ ಮಣ್ಣಿನ ಮೇಲೆ ಕೈಯಾಡಿಸಿ ಅದನ್ನು ಹದಗೊಳಿಸಿದ.

. . . ಮುಂದೆ ಐದು ಗಂಟೆಗಳ ಕಾಲ ಒಂದೇ ಸಮನೆ ನಿರ್ಮಾಣ ಕಾರ್ಯದಲ್ಲಿ ಸೀತಾಪತಿ ನಿರತನಾದ. ಕೊನೆಯಲ್ಲಿ, ಹುಟ್ಟೂರಿನ ನೆಲಕ್ಕಾಗಿ ಹಂಬಲಿಸುವ ಒಂದಡಿ ಎತ್ತರದ ಹೆಣ್ಣು ಸಿದ್ಧವಾದಳು . . . ಕಾಲುಗಳಿಗೆ ಬೇಡಿ. . .ನೀಡಿದ ಕೈ. . .ಕಣ್ಣುಗಳಲ್ಲಿ ಆಸೆಯ ದೂರ ನೋಟ. . .

೨

ಆಕೃತಿ ಸಿದ್ಧವಾದ ಮೇಲೆ ಸ್ವಲ್ಪ ಕಾಲ ಮನಸ್ಸಿಗೆ ನೆಮ್ಮದಿ ಎನ್ನಿಸಿತು. ಸೀತಾಪತಿ ಹೊರಹೋಗಿ, ಮತ್ತೆ ಶೂನ್ಯವನ್ನೆ ನೋಡುತ್ತ ಕುಳಿತ. ತಿರುಗಿ ಆ ಶೂನ್ಯ, ಅವ್ಯಕ್ತ ವೇದನೆಯ ಭಾರವಾದ ಹೊರೆಯನ್ನು ಅವನ ಮೇಲೆ ಹೇರಿತು . . . ಆ ನೋವು–ಅಸಮಾಧಾನ–ಕ್ಷೋಭೆ . . .

ದೀಪ ಹಚ್ಚುವ ಹೊತ್ತಿಗೆ ಆ ಪ್ರದೇಶದ ಧರ್ಮಗುರು ಬಂದರು.

"ಮನೆಯವರನ್ನು ಕಾಣಬೇಕಾಗಿತ್ತೆ? ಆತ ಊರಲಿಲ್ಲ," ಎಂದ ಸೀತಾಪತಿ.

"ಇಲ್ಲ ಮಿಸ್ಟರ್ ಸೀತಾಪತಿ, ನಿಮ್ಮನ್ನೇ ಕಾಣಲು ಬಂದೆ."

"ನಾನು ಬರಹೇಳಿದ್ದು ನೆನಪಿಲ್ಲ."

"ಇಲ್ಲ, ನಾನಾಗಿಯೇ ಬಂದೆ."

"ಅಪ್ಪಣೆಯಾಗಲಿ! ಏನು ಸಮಾಚಾರ?"

ಅವರು ಸಮಾಚಾರ ಹೇಳಿದರು. ಸೀತಾಪತಿ ಅಳ್ಳೆ ಬಿರಿಯುವಂತೆ ಬಿದ್ದು ಬಿದ್ದು ನಕ್ಕ.

"ನಿಮ್ಮದು ಅಭಿನಂದನೀಯ ಸಾಹಸ ಗುರುಗಳೆ! ಹೀಗೆಲ್ಲ ಕೇಳಿ ನೀವು ನನ್ನನ್ನು ಗೌರವಿಸುತ್ತಿದ್ದೀರಿ!"

"ಇಲ್ಲ ಸೀತಾಪತಿ. ನೀವು ತಪ್ಪುಗ್ರಹಿಸಬಾರದು. ಇದು ಮಹತ್ವದ ವಿಷಯ."

ಸೀತಾಪತಿಯೊಂದು ದೇವರನ್ನು ನಿರ್ಮಿಸುವುದು ಮಹತ್ವದ ವಿಷಯ ವಲ್ಲದೆ ಮತ್ತೇನು?

ತೋಟದ ಜೀವನದಲ್ಲಿ ಕೆಲಸಗಾರರು ಸುಖ ಕಾಣುವುದಿಲ್ಲ. ಅವರ ಯೋಚನೆ ಸತ್ಪಥದಲ್ಲಿ ಸಾಗುವುದಿಲ್ಲ. ಅವರನ್ನು ನಾಗರಿಕರನ್ನಾಗಿ ಮಾಡಲು ಇರುವ ಸಾಧನ, ಧರ್ಮವೊಂದೇ. ಅವರು ಈಗ ಕಷ್ಟಪಡುತ್ತಿರುವುದು ಹಿಂದಿನ ಜನ್ಮದಲ್ಲಿ ಅವರು ಮಾಡಿದ ಕೆಟ್ಟ ಕೃತಿಗಳ ಕಾರಣದಿಂದ. ಈಗ ಧರ್ಮನಿಷ್ಠರಾಗಿ ದೈವಭಕ್ತರಾಗಿ ಸ್ವಾಮಿಭಕ್ತರಾಗಿ ಸಚ್ಚರಿತ್ರರಾಗಿ ಅವರು ಇದ್ದರೆ, ಮುಂದಿನ ಜನ್ಮದಲ್ಲಾದರೂ ಅವರಿಗೆ ಸುಖ ದೊರೆಯಬಹುದು. ತೋಟದ ಮಾಲಿಕರೂ ಹಾಗೆಯೇ ಹೇಳಿದ್ದಾರೆ. ಶ್ರದ್ಧೆ ಇಲ್ಲದೆ

ಮಾನವ ಬದುಕಲಾರ. ವಿಶ್ವಾಸವಿಡಲು ಒಬ್ಬ ದೇವರಿದ್ದರೆ, ಅವನನ್ನು ನಂಬಿಯಾದರೂ ಜನ ದಿನ ನೂಕುವರು. ಆಗ ತೋಟದಿಂದ ವಾಪಸು ಓಡಿಹೋಗುವ ಪ್ರಯತ್ನವನ್ನು ಯಾರೂ ಮಾಡಲಾರರು.

—ಹೀಗೆ ಧರ್ಮಗುರು ವಿವರಿಸಿದರು. ಸೀತಾಪತಿ ನಗುತ್ತಲೇ ಇದ್ದ. ಕೊನೆಗೆ ಅವನೆಂದ :

" ನನ್ನ ಕತೆ ನಿಮಗೆ ಗೊತ್ತಿರಬಹುದು. ನನಗೂ ಜೀವನದಲ್ಲಿ ಒಂದು ಶ್ರದ್ಧೆಯಿದೆ. ಆದರೆ ಈವರೆಗೂ ದೇವರನ್ನು ನಿರ್ಮಿಸುವ ಸಾಹಸಕ್ಕೆ ನಾನು ಕೈ ಹಾಕಿಲ್ಲ . . ."

ಧರ್ಮಗುರುಗಳು, ಬಟ್ಟೆ ಬರೆ ಮಣ್ಣು ಬಣ್ಣ ಬೀಡಿ ಸಿಗರೇಟು ಗಳೆಲ್ಲ ಅಸ್ತವ್ಯಸ್ತವಾಗಿ ಹರಡಿದ್ದ ಆ ಕೊಠಡಿಯನ್ನು ನೋಡಿದರು. ಗೋಡೆಗಳ ಮೇಲಿದ್ದ ಚಿತ್ರಗಳನ್ನು ಕಂಡರು . . . ಆಮೇಲೆ ಅಲ್ಲಿದ್ದ ವಿವಿಧ ವಿಗ್ರಹಗಳನ್ನು ದೃಷ್ಟಿಸಿದರು.

" ನಾಸ್ತಿಕ . . . ನರಕ ಇವನಿಗೆ ಕಟ್ಟಿಟ್ಟದೆ . . . ಧರ್ಮಲಂಡ" ಎಂದು ಮನಸ್ಸಿನಲ್ಲೇ ಧರ್ಮಗುರು ಟಿಪ್ಪಣಿ ಮಾಡಿಕೊಂಡರು. ಆದರೆ ಪ್ರಕಾಶವಾಗಿ, " ಇಲ್ಲ ಸೀತಾಪತಿ, ನೀವು ಹಾಗೆನ್ನಬಾರದು . . . ಆ ಬಡಪಾಯಿಗಳ ಮೇಲೆ ಕನಿಕರವಿಡಬೇಕು . . . ಒಬ್ಬ ದೇವರನ್ನು ನಿರ್ಮಿಸಿ ಕೊಡಬೇಕು," ಎಂದು ವಿನಯದಿಂದ ನುಡಿದರು.

" ಹಹ್ಹ ! ಬಡಪಾಯಿಗಳ ಮೇಲೆ ಕನಿಕರ ! ಸರಿ ಹೇಳಿದಿರಿ !"

" ಹಾಗಲ್ಲ ಸೀತಾಪತಿ . . . "

ಇದೊಂದು ದೊಡ್ಡ ತಮಾಷೆಯೆನಿಸಿತು ಸೀತಾಪತಿಗೆ. ಅಂತೂ ಬಲು ಪ್ರಯಾಸದಿಂದ ಧರ್ಮಗುರುವನ್ನು ಕಳಿಸಿಕೊಟ್ಟದ್ದಾಯಿತು. ಆದರೆ ಆ ಸ್ವಾರಸ್ಯಕರ ಘಟನೆಯ ನೆನಪನ್ನು ಬೀಳ್ಕೊಡುವುದಾಗಲಿಲ್ಲ . . . ಸೀತಾಪತಿ ನಗುತ್ತಲೇ ಇದ್ದ.

ರಾತ್ರಿ ಏನನ್ನೋ ಆತ ಓದಲು ಯತ್ನಿಸಿದ. ಬಲು ತಡವಾಗಿ ನಿದ್ದೆ ಬಂತು.

ಆದರೆ ಜೋರೋ ಎಂದು ಸುರಿದ ಮಲೆನಾಡಿನ ಮಳೆ ಉಷಃಕಾಲ ದಲ್ಲಿ ಅವನನ್ನು ಎಬ್ಬಿಸಿತು.

ಸೀತಾಪತಿ ಪೈಪ್ ಹಚ್ಚಿ ಬಲು ಹೊತ್ತು ಕುಳಿತ.

ಹಾಗೆ ಕುಳಿತು ಬೇಸರವಾಗಲು, ಎದ್ದು, ಆವೆಮಣ್ಣಿನ ಮೇಲೆ ಕೈಯಾಡಿಸಿದ.

ಉದ್ದಕ್ಕೂ ಮುಗುಳ್ನಗುತ್ತಿದ್ದ ಸೀತಾಪತಿಯ ಕೈಯಲ್ಲಿ ಆ ಆವೆ ಮಣ್ಣು ರೂಪು ತಳೆದು, ಮೆಲ್ಲಮೆಲ್ಲನೆ, ದೇವರಾಗಿ ಮಾರ್ಪಾಟಾಯಿತು!

. . . ಚಿಂತಾಕ್ರಾಂತವಾದ ಹುಬ್ಬು; ಶುಭ್ರ ನಿಚ್ಚಳವಾದ ಕಣ್ಣು; ಮುಗುಳ್ನಗೆ ಮಿನುಗಿಸುವ ತುಟಿ; ಸಾಧುತ್ವವನ್ನು ತೋರಿಸುವ ಆ ಬಡಕಲು ಅಂಗಾಂಗಗಳು. . .ನಗುನಗುತ್ತಲೇ ಸೀತಾಪತಿ ಆ ದೇವರನ್ನು ನಿರ್ಮಿಸಿದ.

ಎರಡು ದಿನಗಳ ಬಳಿಕ ಬಂದ ಧರ್ಮಗುರು, ದೇವರನ್ನು ನೋಡಿ ದೊಡನೆಯೇ ಪ್ರಾರ್ಥನೆ ಸಲ್ಲಿಸಿದರು. ಪ್ರೀತಿಯಿಂದ ಸೀತಾಪತಿಗೆ ಧನ್ಯವಾದ ಅರ್ಪಿಸಿದರು. "ಇಂಥ ಕೃತಿ ನಿರ್ಮಿಸಿದ್ದರ ಫಲವಾಗಿ ಈ ಪಾಪಿ ಪುನೀತನಾಗುವುದು ಖಂಡಿತ. ಇವನಿಗೆ ಸ್ವರ್ಗದಲ್ಲಿ ಸ್ಥಾನ ದೊರೆತೇ ದೊರೆಯುವುದು," ಎಂದು ಗಟ್ಟಿಯಾಗಿ ಉಚ್ಚರಿಸುವ ಧೈರ್ಯವಿಲ್ಲದೆ, ಮನಸ್ಸಿನಲ್ಲೇ ಅಂದುಕೊಂಡರು.

## ೩

ರಜಾ ದಿನವಾದ ಭಾನುವಾರವೇ ದೇವತಾ ಪ್ರತಿಷ್ಠಾಪನೆಗೆ ಯೋಗ್ಯ ವೆಂದು ತೋಟದ ಮಾಲಿಕರು ತಿಳಿಸಿದರು. ದಿನ ಗೊತ್ತಾಯಿತು. ಸೀತಾ ಪತಿಗೂ ಆಹ್ವಾನ ಹೋಯಿತು.

ಶನಿವಾರ ಸಂಜೆಯವರೆಗೂ ಸೀತಾಪತಿ, ತನ್ನ ಗೆಳೆಯ ಬರುವ ನೇನೋ ಎಂದು ಹಾದಿ ನೋಡಿದ. ಕೊನೆಗೂ ಬರದೆ ಇದ್ದಾಗ, "ಇನ್ನು ಇಲ್ಲಿರಲಾರೆ, ನಸುಕಿನಲ್ಲೆ ಹೊರಡ್ತೀನಿ . . . ಆರು ತಿಂಗಳ ಮೇಲೆ ಬಂದರೂ ಬಂದೆ," ಎಂದು ಬರೆದಿಟ್ಟ.

. . . ಎಂಟು ಗಂಟೆಗೆ ಪ್ರತಿಷ್ಠಾಪನೆಯೆಂದು ಜಾಹೀರಾಗಿತ್ತು.

ಆ ಹೊತ್ತಿಗಾಗಲೇ ಸೀತಾಪತಿ ಮೋಟಾರು ಹಾದಿಯನ್ನು ಅರಸುತ್ತ ಆರೆಂಟು ಮೈಲಿ ದೂರ ಸಾಗಿದ್ದ.

ಎಂಟು ಗಂಟೆ . . .

ಸೀತಾಪತಿ, ಮುರಿದು ಬಿದ್ದಿದ್ದ ಮರದ ಒಂದು ಕೊಂಬೆಯಮೇಲೆ ಕುಳಿತು ಪೈಪ್ ಹೊರತೆಗೆದು, ತಂಬಾಕು ತುಂಬಿ, ಕಡ್ಡಿ ಕೊರೆದು ಸೇದ ತೊಡಗಿದ . . .

ಎಂಥ ನಾಟಕ! ಇಷ್ಟು ಹೊತ್ತಿಗೆ ಅಲ್ಲಿ ವಾದ್ಯಗಳು ಮೊಳಗುತ್ತಿರ ಬಹುದು . . . ದೇವರ ಮೆರವಣಿಗೆ . . . ಧರ್ಮಶಾಸ್ತ್ರದ ಪಠನ . . . ಕೂಲಿಕಾರರ ಸಮುದಾಯ ಭಯಭಕ್ತಿಯಿಂದ ಕೈಜೋಡಿಸಿ ನಿಂತಿರುವ ದೃಶ್ಯ . . . ಆ ಸಮಾರಂಭದ ಸರ್ವ ವೆಚ್ಚವನ್ನೂ ವಹಿಸಿದ ತೋಟದ ಮಾಲಿಕರ ಉಪಸಂಹಾರ ಭಾಷಣ . . .

ನಗಬೇಕೆನ್ನಿಸಿತು ಸೀತಾಪತಿಗೆ . . .

ಆತ ಎದ್ದು ನಿಂತು ಮುಂದೆ ಸಾಗಿದ.

ಕಾಲುಗಳಿಗೆ ಸಂಕೋಲೆ, ನೀಡಿದ ಕೈ, ದೂರನೋಡುತ್ತ ಹಂಬಲಿಸುವ ದೃಷ್ಟಿ–ಅಂಥ ಆ ಬಡಪಾಯಿ ಹೆಣ್ಣು ಕಣ್ಣೆದುರಿಗೆ ಬಂದಳು. ಸ್ಮರಣೆಯಲ್ಲಿ ಆ ಸ್ಥಿರಚಿತ್ರವನ್ನು ಹೊತ್ತು ಅವನು ದಾರಿ ನಡೆದ.

## ಕಥೆ : ಎರಡು

# ಮಣ್ಣಿನ ಮಗ ಗನ್ನು ತಂದ

"ಗುಲ್ಡು . . . ಗುಲ್ಡೂ . . . "

[ಯಾವ ಗವಿಯಿಂದಲೋ ಇದೊಂದು ಧ್ವನಿ ಬರುತ್ತಿದೆಯಲ್ಲ ?]

"ಗುಲ್ಡು . . . ಗುಲ್ಡೂ . . . "

[ಅಮ್ಮ? ನೀನಾ ಅಮ್ಮ ಕರೀತಿರೋದು ?]

"ಗುಲ್ಡೂ !"

[ಎಳೆಯ ಕಂಠ. ತಂಗೀನೆ ಇರ್ಬೇಕು. ಸೀತೂ ! ಏ ಸೀತಾ !]

"ಗುಲ್ಡು !"

[ನಮ್ಮ ಮೇಷ್ಟ್ರು ! ಅಬ್ಬ ! ರಾಮೇಶ್ವರಕ್ಕೆ ಹೋದರೂ ಬಿಡನಲ್ಲ, ಈ ಶನೀಶ್ವರ !]

"ಗುಲ್ಡು . . . ಓ ಗುಲ್ಡೂ . . . "

[ಯಾರಿದು ? ಕಣ್ಣು ತೆರೆದು ನೋಡೋಣ ಅಂದರೆ ಯಾರೋ ಕಣ್ಣಿನ ರೆಪ್ಪೆಗಳನ್ನು ಬಲವಾಗಿ ಅದುಮಿ ಹಿಡಿದಿದಾದರಲ್ಲ . . . ಅಲ್ಲ- ಹೀಗೇ ಮಲಗಿರಲೊ ? ಬೇಜಾರು. ಯಾರು ಏಳೋರು ? ಅಗೋ ತುತೂರಿಯ ಸದ್ದು ! ತುತೂರಿ ! ನಾನು ಏಳ್ಬೇಕು ಪರೇಡಿಗೆ. ಹೊತ್ತಾಯ್ತು ! ಕರ್ನಾಯಿಲ್ ಭಾಯಿ ! ಏಳು, ಕರ್ನಾಯಿಲ್ ಭಾಯಿ !]

* * * *

"ಏಳು ಕರ್ನಾಯಿಲ್ ಭಾಯಿ !"

"ಶ್ ಗುಲ್ಡು ! ನೀನು ಏಳ್ಬಾರ್ದು. ಸರ್ಜನ್ ಸಾಹೇಬರ ಆಜ್ಞೆ ಯಾಗಿದೆ."

"ಹ್ಞ ?"

"ಅಂತೂ ನಿನಗೆ ಎಚ್ಚರವಾಯ್ತಲ್ಲ, ಗುಲ್ಡು !"

"ಹೂಂ ಕರ್ನಾಯಿಲ್ ಭಾಯಿ. ಎಲ್ಲಿದೀಯಾ ನೀನು ?"

"ನಿನ್ನ ಮಗ್ಗುಲಲ್ಲಿ ತಿರುಗಿ ನೋಡು . . . "

"ತುಂಬಾ ಅಶಕ್ತಿ."

"ಮಗ್ಗಲು ಹೊರಳ್ಬೇಡ. ಹುಚ್ಚಪ್ಪ! ಹಾಗೆ-ದೃಷ್ಟಿ ತಿರುಗಿಸು."

"ಆ, ಇದೇನು ಕರ್ನಾಯಿಲ್ ನಿನ್ನ ಕಾಲಿಗೆ? ರಗ್ಗಿನ ಸಂದಿಯಿಂದ ಏನೋ ಕಾಣಿಸ್ತಿದೆಯಲ್ಲ?"

"ಬ್ಯಾಂಡೇಜು, ಗುಲ್ಲು . . . ಹಿಮ ಕಡಿದದ್ದು."

"ಹಿಮ?"

"ಹ್ಞ."

"ನಾನು?"

"ನನ್ನ ಪಕ್ಕದಲ್ಲೆ ಮಂಚದ ಮೇಲೆ ಮಲಗಿದೀಯಾ."

"ಇದು ಕ್ಯಾಂಪ್ ಅಲ್ಲ?"

"ಅಲ್ಲ ಗುಲ್ಲು. ಇದು ಆಸ್ಪತ್ರೆ ಡೇರೆ."

"ಆಸ್ಪತ್ರೆ? ನಾವು ಮಲಗಿದೀವಿ?"

"ಎದುರಿಗೆ, ಆಚೆ ಮಗ್ಗುಲಿಗೆ, ಎಲ್ಲಾ ಕಡೆ ನಮ್ಮವರು ಮಲಗಿದಾರೆ."

"ವೆಲಾಂಗ್?"

"ಇದು ತೇಜಪುರ, ಗುಲ್ಲು."

"ತೇಜಪುರ? ಇಲ್ಲಿಗೆ ನಾವು ಹ್ಯಾಗ್ಬಂದ್ವಿ? ಯಾಕ್ಬಂದ್ವಿ?"

"ಶ್! ಸ್ವರ ಏರಿಸ್ಬಾರ್ದು, ಗುಲ್ಲು. ನೀನು ಹೀರೋ. ನಮ್ಮ ಹೀರೋಗಳಲ್ಲಿ ಒಬ್ಬ."

"ಹೀರೋ? ನಾನು? . . . ಆಯ್! ಏಳೋಕೆ ಆಗ್ತಿಲ್ವಲ್ಲ!"

"ನಿನ್ನ ಪಕ್ಕೆಗೆ ತಗಲಿದ ಎರಡು ತೋಟಾಗಳನ್ನ ಸರ್ಜನ್ ಸಾಹೇಬರು ತೆಗೆದಿದಾರೆ."

"ನನ್ನ ಪಕ್ಕೆಗೆ ತಗಲಿದ ಎರಡು ತೋಟಾಗಳು? ಹ್ಞಂ. ಹ್ಞಂ. ಆ ದಿನ..."

* • * * *

ವೆಲಾಂಗ್.

ಕತ್ತಲೆಯ ಮುಸುಕಿನಲ್ಲಿ ಚೀಣೀ ಪಡೆಗಳು ನುಸುಳಿಬಂದಿದ್ದುವು. ಒಮ್ಮಿಂದೊಮ್ಮೆಲೆ ಟ್ಯಾಂಕುಗಳು ಬೆಂಕಿಯುಂಡೆಗಳನ್ನು ಉಗುಳಿ ಬೆಳಕು

ಮಾಡಿದ್ದುವು. ಸನ್ನದ್ಧರಾಗಿದ್ದ ಭಾರತೀಯ ಯೋಧರ ಗುಂಡುಗಳು ಪ್ರತ್ಯುತ್ತರ ನೀಡಿದ್ದುವು.

"ಹಿಂದೀ ಚೀನೀ ಭಾಯಿ ಭಾಯಿ !"

ಅಲ್ಲವೆ ಪಾಪ! ತಗೋ, ಇದೊಂದು.

ಇದು ಒಂದು, ಇನ್ನೊಂದು . . .

ಗಿರಿಕಂದರಗಳ ತುಂಬ ಗುಂಡಿನ ಘೋರ್ಗರೆತದ ಧ್ವನಿ, ಪ್ರತಿಧ್ವನಿ.

"ಫಯರ್! ಫಯರ್!"

ನಿಕರದ ಕಾಳಗ. ಅಂಗುಲ ಅಂಗುಲ ನೆಲಕ್ಕೆ. ಆ ಇರುಳು. ಒಂದು ಹಗಲು, ಮತ್ತೊಂದು ಇರುಳು.

ಕರ್ಕಶವಾದ ಮೃಗೀಯ ಹೇಷಾರವಕ್ಕೆ ಉತ್ತರ:

"ಭಾರತ್ ಮಾತಾ ಕಿ ಜಯ್!"

ಹಿಮ್ಮೆಟ್ಟಬೇಕೆಂಬ ಆಜ್ಞೆ ಆಗ ಬಂತು. ಚೆಲ್ಲಾಪಿಲ್ಲಿಯಾಗಿ ಚೆದುರುವುದಲ್ಲ. ಆಯಕಟ್ಟಿನ ಇನ್ನೊಂದು ಸ್ಥಳದಿಂದ ಮತ್ತೆ ಹೋರಾಡುವುದಕ್ಕಾಗಿ ಹಿನ್ನಡೆ; ಗಾಯಗೊಂಡವರನ್ನು ಎತ್ತಿಕೊಂಡು, ಆಯುಧಗಳಿಗೆ ಆತುಕೊಂಡು.

ಎಲ್ಲಿ ಒಡನಾಡಿಗಳು? ತುಕ್ಕಡಿಯಲ್ಲಿ ಸೇರ್ಪಡೆಯಾದ ದಿನದಿಂದ ಮೊದಲ್ಗೊಂಡು ತನ್ನ ಆತ್ಮೀಯ ಬಂಧುವಾಗಿ ಜತೆಗಿದ್ದ ಕರ್ನಾಯಿಲ್ ಸಿಂಗ್? ಹಾಸ್ಯಪಟು ರಾಮನ್ ನಾಯರ್? ಚಲಚ್ಚಿತ್ರಗೀತೆಗಳನ್ನು ಅದ್ಭುತವಾಗಿ ಹಾಡುತ್ತಿದ್ದ ಶೇರ್‌ಗಾಂವ್‌ಕರ್?

ಸೈನಿಕರು ಹರಿದುಹಂಚಿಹೋದಾಗ ತಾನೊಬ್ಬನೇ ಆದೆ. ಕೈಯಲ್ಲಿ ಬಂದೂಕಿತ್ತು. ಅದನ್ನೆತ್ತಿಕೊಂಡು ಹಿಂದಕ್ಕೆ ತಿರುಗಬೇಕೆನ್ನುವಷ್ಟರಲ್ಲೆ ಸಪ್ಪಳ ಕೇಳಿಸಿತು. ರಟಟಟ ಟ್‌ಟ–ತನ್ನ ಕಡೆಗೆ. ತಾನು ಅಂಗಾತ ಮಲಗಿ ಆ ಗುಂಡಿನೇಟುಗಳಿಂದ ತಪ್ಪಿಸಿಕೊಂಡೆ. ಕತ್ತಲಲ್ಲಿ ಮೂರು ಆಕೃತಿಗಳು ತನ್ನನ್ನು ಹುಡುಕಿಕೊಂಡು ಬರುತ್ತಿದ್ದುವು. ತಾನು ಸತ್ತಿರುವೆನೋ ಇಲ್ಲವೋ ಎಂಬುದನ್ನು ಖಚಿತಪಡಿಸುವುದಕ್ಕೋಸ್ಕರ ಇರಬೇಕು . . .

. . . ಮಲಗಿದಲ್ಲಿಂದಲೇ ಗುಂಡು ಹಾರಿಸಿದೆ. ಒಂದು ಎರಡು ಮೂರು.

ಆಕೃತಿಗಳಲ್ಲಿ ಎರಡು ನೆಲಕ್ಕುರುಳಿದುವು:

ಇನ್ನೊಬ್ಬನಿಂದ ಬಂತು :

" ರಟ್-ಟಟ ಟಟ."

ಗುರಿ ಇಡಲು ಬಾರದ ಯೋಧ.

ತನ್ನ ಒಂದು ಗುಂಡಿಗೆ ಇವನೀಗ ಬಲಿಯಾಗಬೇಕು.

ಕ್ಲಕ್.

ಅಯ್ಯೋ ! ಮದ್ದು ತೀರಿದೆಯಲ್ಲ! ಹತ್ತಿರವೇ ಬಂದ!

ಉ ಉ ಉ-ಅವನನ್ನೀಗ ಕಾಲು ಹಿಡಿದೆಳೆದು ನೆಲಕ್ಕುರುಳಿಸಿ—

" ಹ್ವಾ ಯಾ ! "

ಕೆಳಗೆ ಬಿದ್ದ ವೈರಿ ಸೈನಿಕನ ಆಯುಧದಿಂದ ಗುರಿತಪ್ಪಿದ ಗುಂಡುಗಳನೇಕ ಆಕಾಶದತ್ತ ಹಾರಿದುವು.

ಬಿದ್ದವನ ಎದೆಯ ಮೇಲೆ ತಾನು. ಲೈಟ್ ಮೆಷಿನ್ ಗನ್ . . . ಅದನ್ನು ಹಿಡಿದೆಳೆದು, ಅದರಿಂದಲೇ ಅವನ ತಲೆಗೆ ಚಚ್ಚಿದೆ. ಎದ್ದು, ಆ ಆಯುಧವನ್ನೆತ್ತಿಕೊಂಡು ಓಡಿದೆ . . . ಅದು, ಪರ್ವತಶ್ರೇಣಿಯ ಅಂಚು. ಮುಂದೆ-ದಾರಿಯಿಲ್ಲ.

ಸುಂಯ್ . . . ಸುಂಯ್ . . .

ಗುಂಡುಗಳು ತನ್ನ ಎಡದಿಂದಲೂ ಬಲದಿಂದಲೂ ಧಾವಿಸಿ ಬರುತ್ತಿದ್ದುವು. ಓಡಲು ಎಡೆಯಿಲ್ಲ. ನಿಂತೆನೋ ಸಾವು ನಿಶ್ಚಿತ.

ಧುಮುಕಿದರೆ ? ಆಳವೆಷ್ಟೊ ? ಸಾವಿರ ಅಡಿಗಳೊ ? ಅದಕ್ಕಿಂತಲೂ ಹೆಚ್ಚೊ ? ಅಲ್ಲೇನಿದೆಯೊ ಕೆಳಗೆ ?

ಯೋಚಿಸುತ್ತಲಿದ್ದಂತೆಯೇ ಆತ ಧುಮುಕಿದ-ಕೆಳಕ್ಕೆ, ಭಾರವಾದ ಅಸ್ತ್ರದೊಡನೆ.

* * * *

" ನಾನು ಧುಮುಕಿದೆ ಕರ್ನಾಯಿಲ್ ಭಾಯಿ."

" ಹ್ಞ ಬೇಟಾ. ನೀನು ಬಿದ್ದೆ. ಪ್ರಜ್ಞೆ ತಪ್ಪಿತು. ವೈರಿಗಳ ಪಡೆ ಬೇರೆ ದಾರಿಯಾಗಿ ಸೂರ್ಯೋದಯಕ್ಕೆ ಮುಂಚೆಯೇ ಸಾಗಿದ್ದರಿಂದ ಅವರ ಕಣ್ಣಿಗೆ ನೀನು ಬೀಳ್ಲಿಲ್ಲ."

" ಹುಂ."

" ಹಗಲು ನಿನಗೆ ಪ್ರಜ್ಞೆ ಬಂತು. ಆದರೆ ಎದ್ದು ನಿಲ್ಲೋಕಾಗ್ಲಿಲ್ಲ. ಕಾಲು ಉಳುಕಿತ್ತು."

" ಹೌದು."

" ಆ ಭಾರ ಬೇರೆ!"

" ಹ್ಞ."

" ಹಾಗೇ ಮಲಗಿಬಿಟ್ಟೆ."

" ಹುಂ."

" ಮಾರನೆಯ ದಿನ ನಮ್ಮ ಶೋಧಕ ತಂಡದ ಕಣ್ಣಿಗೆ ಬಿದ್ದೆಯಂತೆ. ಹೆಲಿಕಾಪ್ಟರ್‌ನಲ್ಲಿ—"

" ನೆನಪಿದೆ."

" ನಿನ್ನನ್ನಿಲ್ಲಿಗೆ ತಂದ್ರು."

" ಹ್ಞ."

" . . . "

" ಭಾಯಿ ಸಾಬ್ . . ."

" ಏನು ಬೇಟಾ ?"

" ರಾಮನ್ ನಾಯರ್ ?"

" ಗೊತ್ತಿಲ್ಲ."

" ಶೇರ್‌ಗಾಂವ್‌ಕರ್ ?"

" ಇಲ್ಲಿಲ್ಲ."

" . . . "

" ಬೇಟಾ, ಕಣ್ಣೀರು ಹಾಕ್ಬಾರ್ದು. ರಕ್ತಸ್ರಾವವಾಗುತ್ತೆ."

" ನಾನು ಅಳ್ತಾ ಇಲ್ಲ, ಭಾಯಿ ಸಾಬ್."

" ಒಳ್ಳೇ ಹುಡುಗ."

" ಈಗ ಅದೆಲ್ಲಿದೆ, ಗೊತ್ತಾ ? ಅದು—"

" ಅದೇ !? ಇದೆ–ಮೇಜರ್ ಸಾಹೇಬರ ಹತ್ತಿರ !"

* * * *

ಒಂದು ದಿನ ಕಳೆದ ಬಳಿಕ—

" ಹಲ್ಲೋ ಗುಲ್ಲು, ಚೆನ್ನಾಗಿದೀಯಾ ಇವತ್ತು ?"

ದೇವಕನ್ಯೆ. ನೋವಿನ ನರಕಕ್ಕೆ ಸಂದರ್ಶನವೀಯುವ ಸುಂದರಿ.

"ಹ್ಞ, ಸಿಸ್ಟರ್. ಯಾತಕ್ಕೆ ಕೈಗಳನ್ನು ಹಿಂದಕ್ಕೆ ಕಟ್ಕೊಂಡಿದೀರಾ ?"

"ನಿಮಗಾಗಿ ಒಂದು ವಸ್ತು ತಂದಿದೀನಿ, ಏನೂಂತ ಹೇಳಿ."

"ಔಷಧಿ."

"ಅಲ್ಲ."

"ತಿಂಡಿ."

"ಅಲ್ಲ ! ಸೋತಿರಿ. ಕಾಗದ, ನಿಮ್ಮೂರಿಂದ !"

ಊರಿನಿಂದ ಬಂದ ಕಾಗದ. ತಂಗಿ ಸೀತವ್ವ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರೆದುದು.

ಸಿಪಾಯಿ ಗುಲ್ಡು ಬೀರಣ್ಣನವರಿಗೆ–

"ಅಣ್ಣ ಗುಲ್ಡು,"

ಒತ್ತಾರೆ ಅಂಚಿನ ಮನೆ ಇಸಕಂಟಿ ಬಂದು ಏಳ್ದ, ಯುದ್ದ ಸುರುವಾಗೈತೆ ಅಂತ. ನೀನು ತಕ್ಸಣ ಒಂಟು ಬರಬೈಕೂಂತ ಅವ್ವ ಗಲಾಟಿ ಮಾಡ್ತಾ ಕುಂತವಳೆ, ನೀನು ಕ್ಸೇಮವಾಗಿರತೀಂತ ನನಗೇನೋ ನಂಬ್ಕೆ ಐತೆ. ಆದರೂ ಅನುಮಪ್ಪಗೆ ಕಾಯಿ ಒಡಸ್ತೀನಿ ಅಂತ ಅರಕೆ ಒತ್ತಿವ್ನಿ. ಬ್ಯಾಗ್ನೆ ಬಾ. ಅವ್ವನಿಗೆ ಮೈ ಉಸಾರಿಲ್ಲ. ಇಲ್ಲೀವ್ರು ನಾಲ್ಕೈದು ಜನ ಮಿಲ್ಟ್ರೀಗೆ ಸೇರ್ಕೊತೀವಿ ಅಂತ ಏಳ್ತಾ ಅವರೆ. ಅವರೇನೂ ಲಾಯಕ್ಕಿಲ್ಲ. ಜಾಗ್ರತೆ ಬಾ."

ಗುಲ್ಡು ಬೀರಣ್ಣ ಓದಿದ. ಸಹಿಯೇ ಇಲ್ಲದ ಕಾಗದ. ಕೊನೆಯಲ್ಲಿ ಹೆಸರು ಬರೆಯಬೇಕೆನ್ನುವುದೂ ತಿಳಿಯದು ಸೀತೂಗೆ.

ಬರೆದದ್ದೂ ಎಂಥಾ ಕಾಗದ. ಥುತ್.

ಪಕ್ಕದ ಮಂಚದಿಂದ :

"ಬೇಟಾ ಗುಲ್ಡೂ . . . "

"ಹ್ಞ."

"ತಂಗಿ ಬರೆದಿದಾಳಾ ?"

"ಹುಂ."

"ಮುಖ ಬಾಡಿಸ್ಕೊಂಡಿದೀಯಾ. ಕೆಟ್ಟ ಸುದ್ದಿ ಏನಾದರೂ . . ."

"ಏನಿಲ್ಲ ಭಾಯಿಸಾಬ್! ನಾನು ಊರ್ಗೆ ಬರ್ಬೇಕಂತೆ."

"ಯಾವಾಗ ಬರೆದ ಕಾಗದ?"

"ಎರಡು ವಾರವಾಯ್ತು."

"ಹೋಗುವಿಯಂತೆ. ನಿನಗೆ ಲೀವ್ ಕೊಟ್ಟೇ ಕೊಡ್ತಾರೆ."

"ಅದಲ್ಲ! ಯಾರಿಗೆ ಬೇಕು ಲೀವು? ನಮ್ಮ ಹಳ್ಳೀ ಜನಕ್ಕೆ ಬುದ್ಧಿ ಇಲ್ಲಾಂತ ಬೇಸರ."

* * * *

ಅವನ ಹಳ್ಳಿ ಮಣ್ಣೂರು. ಕನ್ನಡ ರಾಜ್ಯದ ಮಂಡ್ಯದಿಂದ ಊರು ಬಸ್ಸಿನಲ್ಲಿ, ಹದಿನೆಂಟು ಮೈಲಿ ಪ್ರಯಾಣ ಮಾಡಬೇಕು ಆ ಹಳ್ಳಿಯನ್ನು ತಲುಪಲು.

ಬೀರಣ್ಣ, ತಂಗಿ ಸೀತಮ್ಮ, ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡವರು. ತಾಯಿ, ಕೂಲಿ ನಾಲಿ ಮಾಡಿ ಬದುಕು ಸಾಗಿಸುವ ಬಡವೆ. ಹಳ್ಳಿಯ ಸಾಲೆಗೆ ಅವಳ ಮಕ್ಕಳು ಸ್ವಲ್ಪ ದಿನ ಮಣ್ಣು ಹೊತ್ತಿದ್ದರು. ಬೀರಣ್ಣ ಅರೆ ಹೊಟ್ಟೆಯಲ್ಲಿದ್ದರೂ ಹೃಷ್ಟಪುಷ್ಟನಾಗಿದ್ದ. ಆಟ ಅವನಿಗೆ ಇಷ್ಟ. ಪಂದ್ಯಾಟದಲ್ಲಿ ಮೊದಲಿಗ. ಪಾಠ ಸೇರುತ್ತಿರಲಿಲ್ಲ. ಮಾಧ್ಯಮಿಕ ಶಾಲೆಯ ಕೊನೆಯ ವರ್ಷದಲ್ಲಿದ್ದಾಗ ಅವನ ಮೇಷ್ಟ್ರು ಗುಡುಗಿದರು:

"ದಡ್ಡ ಶಿಖಾಮಣಿ! ನೀನೊಬ್ಬ ಗುಲ್ಡು ಕಣೋ. ಯಾವ ದಂಡಕ್ಕೆ ಬರ್ತೀಯಾ ಶಾಲೆಗೆ? ಹೋಗು! ಎಮ್ಮೆ ಕಾಯೋಕೆ ಹೋಗು!"

ಹಾಗೆ ಹೊರಟ ಬೀರಣ್ಣ ಮತ್ತೆ ವಿದ್ಯಾಭ್ಯಾಸದ ಉಸಾಬರಿಗೆ ಹೋಗಲಿಲ್ಲ.

ಅವನ ಹೆಸರು ಮಾತ್ರ ಅಂದಿನಿಂದ 'ಗುಲ್ಡು' ಎಂದಾಯಿತು.

ತಾತ್ಸಾರದಿಂದ ಹಾಗೆ ಕರೆಯುವವರಿದ್ದರು. ಆದರೂ ಬೀರಣ್ಣನಿಗೆ ಆ ಹೆಸರು ಅಪ್ರಿಯವಾಗಿ ತೋರಲಿಲ್ಲ.

ಯಾರಾದರೂ ತನ್ನ ತಂಟೆಗೆ ಬಂದರೆ ಅವನೆನ್ನುತ್ತಿದ್ದ:

"ನಾನು ಯಾರು ಗೊತ್ತೇನ್ರೊ? ಗುಲ್ಡು! ಹುಷಾರ್!"

ಹಳ್ಳಿಯ ಉಳ್ಳವರ ಹೊಲ ಎತ್ತುಗಳನ್ನು ಗುಲ್ಡು ಮೇಯಿಸ ಹೊರಟ. ಒಂದೆರಡು ಸಲ ಕೆಲವು ತಪ್ಪಿಸಿಕೊಂಡುವು. ಎಣಿಕೆಯಲ್ಲಿ ಕಡಮೆ ಬಂದು ಯಾರಾದರೂ ಗದರಿದಾಗ ಗುಲ್ಡು ಎನ್ನುತ್ತಿದ್ದ:

"ಲೆಕ್ಕ ಪಕ್ಕ ನನಗೆ ಬರದು. ಮೇಷ್ಟ್ರು ಸರಿಯಾಗಿ ಹೇಳ್ಕೊಟ್ಟೇ ಇಲ್ಲ."

ಹಳ್ಳಿಯಲ್ಲಿ ಪಾರ್ಟಿಗಳಿದ್ದುವು. ಮಾರಪ್ಪನದೊಂದು; ಈಶ್ವರಪ್ಪನ ದೊಂದು. ದಿನವೂ ಬೈಗಳು, ಜಗಳ. 'ಒಂದಿಷ್ಟು ಹೊಲ ಕೊಡಿಸ್ತೀನಿ, ಗುಲ್ಡು ಸಾಗುವಳಿ ಮಾಡ್ಲಿ' ಎಂದಿದ್ದ ಮಾರಪ್ಪ, ಬೀರಣ್ಣನ ತಾಯಿ ಯೊಡನೆ. ಈಶ್ವರಪ್ಪನೂ ಅಂದಿದ್ದ 'ನಾನು ಕೊಡಿಸ್ತೀನಿ ಹೊಲ' ಅಂತ. ಕೊಡಿಸಿದವರು ಮಾತ್ರ ಯಾರೂ ಇಲ್ಲ.

ಸೀತಮ್ಮ ಬೇರೆ, ದೊಡ್ಡವಳಾಗಿ ಬೆಳೆದಿದ್ದಳು. ಹಳ್ಳಿಯ ಯುವಕರು ಗುಲ್ಡುವನ್ನು ತಮ್ಮ ಜಗಳಗಳಿಗೆ ಎಳೆದರು.

ತಾಯಿ ಗೋಳಾಡಿ ಎಂಥ ಮಗ ಹುಟ್ಟಿದನಪ್ಪ ತನಗೆ–ಎಂದು ಕಹಿ ಮಾತು ಆಡಿದಳು.

ಆ ಮಾರನೆಯ ಬೆಳಗ್ಗೆ ಬೀರಣ್ಣ ಹಟ್ಟಿಯಲ್ಲಿರಲಿಲ್ಲ.

ಎರಡು ತಿಂಗಳಾದ ಮೇಲೆ ಅವನಿಂದ ಕಾಗದ ಬಂತು:

"ನಾನು ಮಿಲ್ಟ್ರಿಗೆ ಭರ್ತಿಯಾಗಿದೀನಿ; ನನ್ನ ಯೋಚ್ನೆ ಬುಟ್ಬುಡಿ."

*   *   *   *

ಹಳ್ಳಿಯ ಪುಢಾರಿ ರಂಗಪ್ಪನ ಕಾಲು ಹಿಡಿದು, ಮಗನ ಭೇಟಿಗೆಂದು ಅವನನ್ನು ತಾಯಿ ಕಳುಹಿದ್ದಳು. ಬೆಂಗಳೂರಿನ ದಂಡಿನ ಶಿಬಿರದಲ್ಲಿ ಗುಲ್ಡು ವನ್ನು ಆತ ಕಂಡ.

ಅವನಿಗೆ ಗುಲ್ಡು ಕೊಟ್ಟುದೊಂದೇ ಉತ್ತರ:

'ಮಿಲ್ಟ್ರಿ ಸೇರ್ಕೊಂಡಿದ್ನಿ. ಕೈನಲ್ಲಿ ಗನ್ನಿರ್ತೈತೆ!'

ರಂಗಪ್ಪ ವಿಧಾನಸೌಧದ ಉದ್ದಗಲಕ್ಕೆ ಓಡಾಡಿ ಊರಿಗೆ ಮರಳಿದ.

'ನನ್ನ ಯೋಚ್ನೆ ಬುಟ್ಬುಡಿ' ಎಂದು ಬರೆದಿದ್ದನಲ್ಲ ಗುಲ್ಡು?

ಅವರ ಯೋಚನೆ ಮಾತ್ರ ಇವನನ್ನೆಂದೂ ಬಿಟ್ಟಿರಲಿಲ್ಲ.

ಸಿಪಾಯಿ ಗುಲ್ಡು ಹದಿನೈದು ರೂಪಾಯಿಗಳನ್ನು ಮನಿಯಾರ್ಡರ್ ಮಾಡುತ್ತಿದ್ದ ತಾಯಿಗೆ. ಹದಿನೈದು ರೂಪಾಯಿ! ಮಗ ಹತ್ತಿರವಿಲ್ಲದ ದುಃಖವನ್ನು ಸ್ವಲ್ಪಮಟ್ಟಿಗೆ ಶಮನ ಮಾಡುವ ಸಾಮರ್ಥ್ಯವಿತ್ತು ಅದಕ್ಕೆ.

ಮುಂದೆ ಒಂದು ವರ್ಷದಲ್ಲಿ ಗುಲ್ಡು ಕಂಡ ಜಗತ್ತು ಎಷ್ಟೊಂದು ವಿಶಾಲವಾಗಿತ್ತು! ಮಿಲಿಟರಿ ಬದುಕೊಂದು ಬೇರೆಯೇ ಲೋಕ. ಆ

ಒರಟು ಜೀವನ, ನಗೆಮಾತು, ಶಿಸ್ತು . . . ಇವೆಲ್ಲ ಗುಲ್ಡುವಿನ ಒಂದಂಶ ವಾದುವು. ಹಳ್ಳಿಯಲ್ಲಿ ಚಡಪಡಿಸುತ್ತಿದ್ದ ಮೀನು ಕೊನೆಗೊಮ್ಮೆ ಆಳದ ನೀರಿಗಿಳಿದಂತಾಗಿತ್ತು.

ದೇಶದ ನಾನಾ ಕಡೆಗಳಿಂದ ಆಯ್ದ ಸೈನಿಕರ ತುಕಡಿಯೊಂದನ್ನು ರಚಿಸಿದ್ದರು. ಹರಕು ಮುರುಕು ಹಿಂದಿ ಭಾಷೆಯ ಕುದುರೆಯನ್ನೇರಿ ನೂರಾರು ಮನಸುಗಳ ಕೋಟೆಗಳಿಗೆ ಗುಲ್ಡು ಲಗ್ಗೆ ಇಟ್ಟ.

ಪರಕೀಯರು ಈ ನಾಡಿನಮೇಲೆ ದುರಾಕ್ರಮಣ ನಡೆಸಿದಾಗ ಹೋರಾಡುವ ಅವಕಾಶ ದೊರೆಯಿತು ಗುಲ್ಡುವಿಗೆ.

* * *

ಹೋರಾಟದ ಬಳಿಕ ಈಗ ವೀರನಿಗೆ ಒಂದು ತಿಂಗಳ ರಜಾ.

ಮೇಜರ್ ಅಂದರು :

" ನಿನ್ನ ವಿಷಯದಲ್ಲಿ ನನಗೆ ಹೆಮ್ಮೆ. ದೇಶದ ಎಲ್ಲಾ ಪತ್ರಿಕೆಗಳು ನಿನ್ನ ಸಾಹಸವನ್ನು ಕೊಂಡಾಡಿವೆ. ಡೆಕರೇಶನ್‌ಗೆ ನಿನ್ನ ಹೆಸರು ರೆಕಮೆಂಡ್ ಮಾಡ್ತೀನಿ. ಒಂದು ತಿಂಗಳ ಲೀವ್. ಊರಿಗೆ ಹೋಗಿ ಬಾ."

ಗುಲ್ಡು ಹಿಮ್ಮಡಿಗಳನ್ನು ತಾಕಿಸಿ ಸೆಲ್ಯೂಟ್ ಕೊಟ್ಟ.

ಮೇಜರ್ ಮತ್ತೂ ಅಂದರು :

" ಈ ಚೀಣೀ ಲೈಟ್ ಮೆಷಿನ್‌ಗನ್–ಇದು ನಿನಗೆ!"

ಸೆಲ್ಯೂಟಿನ ಭಂಗಿಯಲ್ಲಿ ನಿಂತಿದ್ದ ಗುಲ್ಡುವಿನ ತುಟಿಗಳು ಮೌನವಾಗಿ ಅಲುಗಿದುವು. ಬೆರಳುಗಳು ಅರೆ ಕ್ಷಣ ಕಂಪಿಸಿದುವು.

ಕರ್ನಾಯಿಲ್‌ಸಿಂಗ್, ತನ್ನ ಬಂಧುವನ್ನು ಬೀಳ್ಕೊಡಲೆಂದು ಬಂದ. ಮೆಷಿನ್‌ಗನ್ ಹೊತ್ತು ಹೊರಟ ಗುಲ್ಡುವಿಗೆ ಅದೆಷ್ಟೊಂದು ಕೈಗಳು ಚಾಚಿ ಬೀಸಿ ಬೀಸಿ ವಿದಾಯ ನುಡಿದುವು! ಅವನನ್ನು ಹಿಂಬಾಲಿಸಿಯೂ ಅದೆಷ್ಟು ಜನ ಬಂದರು!

ಗುಲ್ಡುವಿನ ಕಣ್ಣುಗಳಲ್ಲಿ ಹನಿ ಆಡಿತು.

" ಯಾಕೆ ಬೇಟಾ?"

" ಊರಿಗೆ ಹೋಗೋಕೆ ಮನಸ್ಸಿಲ್ಲ, ಕರ್ನಾಯಿಲ್‌ಭಾಯಿ."

" ಹಾಗನ್ನಬಾರದು ಬೇಟಾ ! ಹೋಗಿ ಬಾ. ನೀನು ಬರ್ತೀ ಅಂತ ನಿಮ್ಮೂರಿಗೆ ತಂತಿ ಕೊಡ್ತೀನಿ."

* * * *

ಡಕೋಟಾ ವಿಮಾನ ಗುಲ್ಡುವನ್ನೂ ಜೊತೆಗೆ ಬೇರೆ ಹತ್ತೊಂಬತ್ತು ಜನರನ್ನೂ ಕಲ್ಕತ್ತೆಗೆ ತಂದುಬಿಟ್ಟಿತು. ಅಲ್ಲಿಂದ ಮದರಾಸಿಗೆ, ಮುಂದೆ ಬೆಂಗಳೂರಿಗೆ, ಬಳಿಕ ಮಂಡ್ಯಕ್ಕೆ.

ಸಿಪಾಯಿ ಉಡುಗೆಯ ಯುವಕ; ಕುಡಿ ಮೀಸೆ ಮುಖದ ಮೇಲೆ. ಜಗತ್ತನ್ನು ದಿಟ್ಟನೋಟದಿಂದ ನೋಡುವ ಸಾಮರ್ಥ್ಯ. ಆಭರಣಗಳೇನೋ ಎಂಬಂತೆ ಒಂದು ಗಂಟನ್ನು ಭದ್ರವಾಗಿ ಹಿಡಿದಿದ್ದ ಶಿವಿ.

" ಅದೇನು ?"

—ಕೆಲವರು ಕೇಳಿದರು.

" ಏನಿಲ್ಲ."

—ಉತ್ತರ.

" ಗನ್ನೇ ಇರ್ಬೇಕು."

—ಊಹೆ.

* * * *

ಊರು ಬಸ್ಸು ಮಂಡ್ಯ ಬಿಟ್ಟಿತು. ಧೂಳೇಳುವ ಮಣ್ಣು ದಾರಿ ಮಣ್ಣೂರಿಗೆ.

ಇಲ್ಲ, ಅವನ ಹಳ್ಳಿಯವರೊಬ್ಬರೂ ಇರಲಿಲ್ಲ ಬಸ್ಸಿನಲ್ಲಿ.

ಗ್ರಾಮದಿಂದ ಯಾರೂ ಈ ದಿನ ಹೊರಬಿದ್ದೇ ಇಲ್ಲವೇನೋ. [ಯುದ್ಧ ಅಂತ ಹೆದರ್ಕೊಂಡಿರ್ಬೇಕು ನನ್ಮಕ್ಳು.] ಸೀತಮ್ಮನ, ತನ್ನ ಅಮ್ಮನ, ನೆನಪುಗಳು ಗುಲ್ಡುವನ್ನು ಕಾಡಿದವು.

[ಏನೇ ಆಗಲಿ, ಆದಷ್ಟು ಬೇಗ ವಾಪಸು ಹೊರಟ್ಬಿಡ್ಬೇಕು. ಬೆಂಗಳೂರಲ್ಲಿ ದಿವಸ ಕಳೆದು ಲೀವ್ ಪೀರೆಡ್ ಮುಗಿಸಿದರಾಯ್ತು.]

ಎದೆ ಸುಮ್ಮನೆ ಹೊಡೆದುಕೊಳ್ಳುತ್ತಿತ್ತು.

ಕಂಡಕ್ಟರಿಗೆ ವಿಷಯ ತಿಳಿಯುವ ಚಪಲ. ಬಾಯಿ ಬಿಚ್ಚಿದೆನೋ ಯುದ್ಧದ ಕಥೆಯನ್ನೆಲ್ಲ ಹೇಳಬೇಕು. ಮಾತನಾಡುವ ಮನಸ್ಸಿಲ್ಲ, ಗುಲ್ಡುಗೆ.

ದಾರಿ ಮುಗಿಯುತ್ತ ಬಂತು.

ಆ ಗುಡ್ಡ ದಾಟಿ ಆಚೆಗಿಳಿದರೆ ಮಣ್ಣೂರು.

ಫಸ್ಟ್ ಗೇರಿನಲ್ಲಿ ಬಸ್ಸು ಹೊರಟಿತು, ಕೊರ್‍ರ್ಯೋ ಎಂದು ಸದ್ದು ಮಾಡುತ್ತ.

ಗುಡ್ಡ ದಾಟಿದಾಗ—

ಒಬ್ಬರೆಂದರು :

" ಇಲ್ಲೇನಪ್ಪಾ ಜಾತ್ರೆ ಇದು ?"

[ಜಾತ್ರೆ ? ಹಳ್ಳಿಯ ಜಾತ್ರೆಗೆ ಇನ್ನೂ ತಿಂಗಳಿದೆ.]

" ಯಾರೋ ಮಿನಿಸ್ಟರು ಬರ್‍ತಿರ್‍ಬೇಕು. 'ಅಕೋ ಬಾವುಟ."

ಅಲಂಕರಿಸಿದ ಎತ್ತಿನ ಬಂಡಿಗಳು ಹಲವು. ಬಾವುಟ ವಾದ್ಯ . . .

ಬಸ್ಸು ನಿಂತಿತು.

" ಎಲಾ ! ಬಸ್ಸಿನ ಕಡೆಗೇ ಓಡಿ ಬರ್‍ತಿದಾರಲ್ಲಾ."

ಕಂಡಕ್ಟರೆಂದ :

" ಮಣ್ಣೂರ್ !"

ಇಳಿಯಲಿದ್ದವನು ಸಿಪಾಯಿಯೊಬ್ಬನೇ.

ಹಲವರು ಯೋಚಿಸಿದರು :

' ಈತನಿಗೋಸ್ಕರ ಇರಲಾರದು ಈ ಸ್ವಾಗತ.'

ಆತನಿಗೋಸ್ಕರವೇ !

ಜನ ಓಡಿ ಬರುತ್ತಿದ್ದರು—ಮಾರಪ್ಪ, ಈಶ್ವರಪ್ಪ, ರಂಗಣ್ಣ, ಶಾಲೆಯ ಮೇಷ್ಟ್ರು . . .

ಸೀತಮ್ಮ, ಅಮ್ಮ . . . .

[ಎಲ ಎಲಾ !]

ಕೈಯಲ್ಲಿ ಹಾರಗಳು.

ಜಯಕಾರ.

" ಭಾರತಮಾತೆಗೆ ಜಯವಾಗಲಿ !"

" ಗುಲ್ಡು ಬೀರಣ್ಣನಿಗೆ ಜಯವಾಗಲಿ !"

ಗುಲ್ಡು ತನ್ನನ್ನು ತಾನೇ ನಂಬದಾದ. ಕತ್ತಿನ ನರಗಳು ಬಿಗಿದುವು. ಉಸಿರು ಕಟ್ಟಿತು.

ಮಣ್ಣೂರಿಗೆ ಮಣ್ಣೂರೇ ಅಲ್ಲಿ ನೆರೆದಿತ್ತು.

ನಿಂತು ಮುಂದೆ ಹೊರಟ ಬಸ್ಸು ಮತ್ತೆ ನಿಂತಿತು. ಜನ ಇಳಿದು ಸ್ವಾಗತದ ದೃಶ್ಯವನ್ನು ನೋಡಿದರು. ಕಂಡಕ್ಟರ್ ಖಾಲಿ ಕ್ಯಾನನ್ನೆತ್ತಿ ಕೊಂಡು ಹಳ್ಳಿಯಿಂದ ನೀರು ತರುವ ನೆಪಮಾಡಿ ಸಂದಣಿಯತ್ತ ನಡೆದು ಹೋದ.

* * * *

ಮಣ್ಣೂರು ಬದಲಾಗಿತ್ತು. ಹಿಂದೆಂದೂ ಇದ್ದಿರದ ಐಕಮತ್ಯವಿತ್ತು ಈಗ.

ಅಮ್ಮ ಅಂದಳು :

" ಸೀತಮ್ಮನ ಸೊಸೆಯಾಗಿ ಕರಕೋತೀವಿ ಅಂತ ಎಷ್ಟೋ ಜನ ಕೇಳವರೆ."

ನಾಚಿ ಚೀತರಿಸಿಕೊಂಡ ಸೀತಮ್ಮ ಅಂದಳು :

" ಯುದ್ಧ ಮುಗಿದ್ಮ್ಯಾಕೆ ನಿನಗೂ ಎಣ್ಣು ಕೊಡ್ತಾರಂತೆ ಗುಲ್ಡು."

" ಸುಮ್ಕಿರು !"

ಅಮ್ಮ ಅಂದಳು :

" ಸರಕಾರ ನಮಗೆ ಹೊಲ ಕೊಡುತ್ತಂತಪ್ಪ."

ಗುಲ್ಡು ತಂದ ಚೀಣೀ ಗನ್ನು ಮಣ್ಣೂರಿನ ಮನೆ ಮಾತಾಯಿತು.

ಅದನ್ನು ಹಟ್ಟಿಯ ಒಳಗಿನ ಕೊಠಡಿಯಲ್ಲಿಟ್ಟು ಗುಲ್ಡು ಬೀಗ ತಗಲಿಸಿದ, ದೃಷ್ಟಿಯಾಗದಿರಲಿ ಎಂದು.

. . . ಮಾರನೆಯ ಸಂಜೆ ಶಾಲೆಯ ಆವರಣದಲ್ಲಿ ಮೇಷ್ಟ್ರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನೆರೆಯಿತು.

ಆ ಕಲರವದ ಕಡೆಗೆ ಮದುವೆಯ ಗಂಡಿನಂತೆ ಗುಲ್ಡುವನ್ನು ಕರೆದು ತಂದರು.

ಬೊಂಬುಗಳ ಸಣ್ಣ ಅಟ್ಟಣಿಗೆಯ ಮೇಲೆ ಅದೇನನ್ನೋ ಇರಿಸಿ ಶಾಲು ಹೊದಿಸಿ ಮುಚ್ಚಿದ್ದರು.

ಕ್ಯಾಮರಾ ಇರಬೇಕು ಎಂದುಕೊಂಡ ಗುಲ್ಡು.

ವಾದ್ಯಗಳು ಮೊಳಗುತ್ತಿದ್ದಾಗ ಸಭೆಯ ಅಧ್ಯಕ್ಷರು ಶಾಲನ್ನು ಎತ್ತಿದರು.

ಅನಾವರಣಗೊಂಡುದು ಮೆಷಿನ್‌ಗನ್ನು !

ಗುಲ್ಡುವಿನ ದೃಷ್ಟಿ ತನ್ನ ತಂಗಿಯನ್ನು ಹುಡುಕಿತು. ಅಣ್ಣನ ನೋಟವನ್ನು ತಪ್ಪಿಸಿಕೊಳ್ಳಲೆಂದು ಸೆರಗಿನಿಂದ ಮುಖವನ್ನು ಮರೆಸಿ ಆಕೆ ಕಿಸಕ್ಕನೆ ನಕ್ಕಳು.

[‘ ಕಳ್ಳಿ ! ಬೀಗ ತೆಗೆಸಿ ಪ್ರದರ್ಶನಕ್ಕೆ ಕೊಟ್ಟಿದ್ದಾಳೆ ’.]

ಮೇಷ್ಟ್ರು ಗುಲ್ಡುವನ್ನು ಹೊಗಳಿ ಮಾತನಾಡಿದರು ; ಗುಲ್ಡು ಬೀರಣ್ಣನನ್ನು ಕುರಿತು ಪತ್ರಿಕೆಗಳಲ್ಲಿ ಬಂದಿದ್ದುದನ್ನು ಓದಿದರು.

ಸಭೆ ಜಯಕಾರ ಮಾಡಿತು.

“ ಗುಲ್ಡು ಬೀರಣ್ಣನಿಗೆ ಜಯವಾಗಲಿ !”

“ ಭಾರತ ಮಾತೆಗೆ ಜಯವಾಗಲಿ !”

## ಕಥೆ: ಮೂರು

# ಹಮಾಲ ಇಮಾಮ್ ಸಾಬಿ

ಮೊದಲ ಮಳೆ ಕಳೆದ ಬಳಿಕ, ಸೂರ್ಯ ಧೈರ್ಯಗೊಂಡು ಮತ್ತೊಮ್ಮೆ ಚಕ್ರಕುಣಿತ ಆರಂಭಿಸಿದ್ದ.

ನೀಲಿ ವರ್ಣದ ವೇದಿಕೆಯ ಮೇಲೆ ಹಗಲು, ಕರಿ ಪರದೆಯ ಹಿಂದೆ ರಾತ್ರಿ. ಕತ್ತಲು ಆವರಿಸಿದಾಗ ಚಂದ್ರನೊಂದು ಕಂದೀಲು. ನೀರು ಕುಡಿದ ನೆಲ ತೃಪ್ತವಾಗಿತ್ತು. ಗಿಡ ಮರಗಳೆಲ್ಲ, ಹಸಿರುಮಯ. ಮನುಷ್ಯ ತುಳಿವ ದಾರಿಗೆರೆಯ ಎರಡು ಪಕ್ಕಗಳಲ್ಲೂ ಗರಿಕೆಹುಲ್ಲು ಟಿಸಿಲೊಡೆದು ಮುಸಿಮುಸಿ ನಗುತ್ತಿತ್ತು.

ಬಹಳ ಹೊತ್ತು ನೆಲೆಸಿದ ನೀರವತೆಯನ್ನು ಭೇದಿಸಿ ಒಂದು ಸದ್ದು ಬಂತು.

ಫೋನ್ ಯಂತ್ರದ ಖಣಖಣತ್ಕಾರ. ಅದನ್ನು ಹಿಂಬಾಲಿಸಿ:

"ಹಲ್ಲೋ . . .ಹಲ್ಲೋ. . ."

ಇನ್ನೊಂದು ನಿಲ್ದಾಣದ ವೃತ್ತಿಬಂಧುವಿನೊಡನೆ ಈ ಮಾಸ್ತರರ ಸಂವಾದ.

ಹೆಬ್ಬಾಗಿಲ ಹೊರಗೆ ಸಿಮೆಂಟಿನ ಒರಗು ಬೆಂಚಿನ ಮೇಲೆ, ಹೂಬಿಸಿ ಲಲ್ಲಿ ವೈಕಾಯಿಸುತ್ತ ಇಮಾಮ್ ಸಾಬಿ ಕುಳಿತಿದ್ದ.

"ಅರೇ, ಗಾಡಿ ಔಟಾಯಿತೇನು ಹಾಗಾದರೆ?"

ನಿರ್ಜನವಾಗಿದ್ದ ನಿಲ್ದಾಣ. ಔಟಾಗುವುದೆಂದರೇನು? ಲೋಕಲನ್ನು ಕಳುಹಿಬಂದು ಅರ್ಧ ಘಂಟೆ ಕೂಡಾ ಆಗಲಿಲ್ಲವಲ್ಲ ಇನ್ನೂ?

ಮಾಲ್‌ಗಾಡಿಯೇ ಇರಬೇಕು. ಮುಂದಿನ ನಿಲ್ದಾಣದಲ್ಲೋ ಅದ ರಾಚೆಗೋ ಕ್ರಾಸಿಂಗ್. ಇಳಿಸುವ ಸಾಮಾನು ಇದ್ದರಷ್ಟೆ ಅದಿಲ್ಲಿ ನಿಲ್ಲ ಬಹುದು. ಇಲ್ಲವೆಂದಾದರೆ, ಸಿಗ್ನಲಿನ ಗೌರವರಕ್ಷೆ ಸ್ವೀಕರಿಸಿ, ಹಸುರು ನಿಶಾನೆಯಿಂದ ಗಾಳಿ ಹಾಕಿಸಿಕೊಂಡು, ಮುಂದಕ್ಕೆ ಪಯಣ.

ಮಾಲ್‌ಗಾಡಿಯೊಂದೇ ಅಲ್ಲ. ಮೇಲ್ ಎಕ್ಸ್‌ಪ್ರೆಸ್ ಗಾಡಿಗಳೂ ಹಿಂದೆ ಅಲ್ಲಿ ನಿಲ್ಲುತ್ತಿರಲಿಲ್ಲ. ಒಮ್ಮೆಯಷ್ಟೇ ವಿಶೇಷ ಸಂದರ್ಶಕರು ಬಂದ ರೆಂದು ಮೇಲ್‌ಗಾಡಿ ನಿಂತುದು, ಆಗಿನ ತಳಿರು ತೋರಣಗಳ ಸಂಭ್ರಮ, ಇಮಾಮ್ ಸಾಬಿಗೆ ನೆನಪಿತ್ತು. ಬಂದಿಳಿದಿದು ಒಬ್ಬ ಆಂಗ್ಲ ಉಚ್ಚಾಧಿ ಕಾರಿ. ಅರಸರಲ್ಲ, ಮೈಸರಾಯರೋ ರೆಸಿಡೆಂಟರೋ–ಯಾರೋ ಒಬ್ಬರು. ಇಮಾಮ್ ಆಗಿನ್ನೂ ಮೂವತ್ತು ವರ್ಷಗಳ ಜವ್ವನಿಗ.

ಆಗ ಅವನ ವಯಸ್ಸು ಖಚಿತವಾಗಿ ಅಷ್ಟೇ ಎಂದು ಹೇಳಲು ಯಾವ ಆಧಾರವಿತ್ತು? ಬೀಬಿ ಮನೆಗೆ ಬಂದ ವರ್ಷ ಅದು. ಎರಡನೆಯ ಬೀಬಿ. ಚೊಚ್ಚಲ ಹೆರಿಗೆಗೆಂದು ತವರುಮನೆಗೆ ಹೋದ ಮೊದಲಿನಾಕೆ ಮರಳಿ ಬಂದಿರಲಿಲ್ಲ. ಪ್ರವಸದ ವೇಳೆ, ಬಸಿರಲ್ಲಿದ್ದ ಜೀವದೊಡನೆ ಆಕೆಯೂ ಅಪ ಮೃತ್ಯುವಿಗೆ ಗುರಿಯಾಗಿದ್ದಳು. ಅದು, ಇಮಾಮ್ ಸಾಬಿಯ ಚಿತ್ತಫಲ ಕದ ಮೇಲೆ ಅಳಿಸಲಾಗದ ಚಿತ್ರನ್ನು ಉಳಿಸಿಹೋದ ಘಟನೆ. ಆ ಯಾತನೆ ಯನ್ನು ಮೂಲೆಗೊತ್ತಿ ಇನ್ನೊಬ್ಬಳ ಕೈಹಿಡಿಯಲು, ಆರೆಂಟು ವರ್ಷಗಳ ಅವಧಿಯೇ ಅವನಿಗೆ ಬೇಕಾಯಿತು. ಆಗ ಆತನ ಸೋದರಮಾವ ಅಂದಿದ್ದ:

"ಮೂವತ್ತು ವರ್ಷವಾಯ್ತು ನಿನಗೆ. ಇನ್ನೂ ತಡಮಾಡ್ಬೇಡ."

ಅನಂತರವೂ ದಿನ ತಿಂಗಳು ವರ್ಷಗಳ ಲೆಕ್ಕವಿಡುವ ಗೊಡವೆಗೆ ಇಮಾಮ್ ಸಾಬಿ ಹೋದವನಲ್ಲ. ಗಳಿಸಿದ ದುಡ್ಡನ್ನಷ್ಟು ಹೆಂಡತಿಗೆ ದಿನವೂ ಒಪ್ಪಿಸಿದರಾಯ್ತು ಅವನ ಕೆಲಸ. ಬೀಬಿ ಒಳ್ಳೆಯ ಹೆಂಡತಿ, ಒಳ್ಳೆಯ ತಾಯಿ. ಅವಳು ಹೆತ್ತುದು ಒಟ್ಟು ಐದು ಮಕ್ಕಳನ್ನು. [ಒಂದರ ಅನಂತರ ಒಂದಾಗಿ. ಐದೂ ಗಂಡೇ.] ತಮ್ಮ ವಿವಾಹವಾಗಿ ಎಷ್ಟು ಕಾಲವಾಯಿತು? ಮಕ್ಕಳ ವಯಸ್ಸೆಷ್ಟು—ಎಂಬುದನ್ನೆಲ್ಲ ಕೂಡಿಸಿ ಕಳೆದು ಹೇಳುತ್ತಲಿದ್ದವಳು ಇಮಾಮ್ ಸಾಬಿಯ ಹೆಂಡತಿಯೇ.

ಇದೇ ಮೊನ್ನೆ ಆಕೆ ಅಂದಿದ್ದಳು:

"ಈ ಬಕ್ರೀದ್‌ಗೆ ನಮ್ಮ ಲಗ್ನ ಆಗಿ ಮೂವತ್ತು ವರ್ಷ ಆಯ್ತೂಂದ್ರೆ"

ಅವನಿಗೆ ಅಚ್ಚರಿಯಾಗಿತ್ತು.

"ಹಾಂ? ಹೌದಾ? . . . ಹಾಗಾದರೆ ನನಗೆಷ್ಟು ವರ್ಷ ಈಗ?"

"ನನ್ನ ಕೇಳ್ತೀರಲ್ಲ? ಅರವತ್ತು ಆಗ್ಲಿಲ್ವೇನು?"

"ಹೌದಾ? ಸರಿ! ಮುದುಕ ಆದೆ ಅನ್ನು!"

" ನೀವು ಮುದುಕ, ನಾನು ಮುದುಕಿ. "

ಜೀವನದುದ್ದಕ್ಕೂ ಬಡತನದ ಬುತ್ತಿಯೇ ಆದರೂ, ನೇಗಿಲಗೆರೆಗಳಿಲ್ಲದ ಸುಕ್ಕುಗಳಿಲ್ಲದ ಸೊಂಪಾದ ಮುಖ, ಮೇಣದ ಬೊಂಬೆಯಂತಹ ದುಂಡಗಿನ ಮೃದು ಶರೀರ. ಮುಗ್ಧ ಹಸುಳೆಯ ಛಾಯೆ ತುಟಿಗಲ್ಲಗಳಲ್ಲೆಲ್ಲ. ಮುಖದ ಮೇಲೆ ಬಿಳಿಯ ಬೆಳೆಯಿತ್ತು. ಸೋತು ಜೋತ ತೆಳ್ಳಗಿನ ಮೀಸೆ. ವಿರಳವಾಗಿ ಬೆಳೆದು ತಿಂಗಳಿಗೊಮ್ಮೆ ಕ್ಷೌರಿಕನ ಕತ್ತಿಗೆ ಬಲಿಯಾಗುತ್ತಿದ್ದ ಗಡ್ಡ. ಮುಗುತನವನ್ನು ಮರೆಸಲು ಎಳೆಯನೊಬ್ಬ ಕೃತ್ರಿಮ ಗಡ್ಡ-ಮೀಸೆಗಳನ್ನೇ ಅಂಟಿಸಿಕೊಂಡ ಹಾಗಿತ್ತು, ಆ ನೋಟ. ಮಹಾ ಸಾತ್ವಿಕನಂತೆ ತೋರುತ್ತಲಿದ್ದ, ನಡು ಎತ್ತರದ ಈ ಮನುಷ್ಯ . . .

' ಕುಕ್ ' ' ಕುಕ್ ' ಎಂದು ಸದ್ದು ಕೇಳಿಸತೊಡಗಿತು, ದೂರದೊಂದು ಹಿಟ್ಟಿನ ಗಿರಣಿಯಿಂದ.

' ಮಿಲ್ ಶುರುವಾಯ್ತು. '

ಗಿರಣಿಯ ಕೂಗಿನಿಂದ ಕೆರಳಿತೆನ್ನುವಂತೆ ಕತ್ತೆಯೊಂದು ಅರಚುತ್ತ ದೂರ ಸಾಗಿತು ಹತ್ತಿರದಿಂದ.

ಇಮಾಮ್ ಸಾಬಿ ಕುಳಿತಿದ್ದ ಒರಗು ಬೆಂಚು ಹೊಸದು. ನಿಲ್ದಾಣದ ಹೊರ ಆವರಣದಲ್ಲಿ ಅಂತಹವು ಎರಡು ಇರಲೆಂದು ರೈಲ್ವೆ ಇಲಾಖೆಯವರು ತರಿಸಿ ಹಾಕಿದ್ದರು. ಅವುಗಳ ಮೇಲೆ ಕುಳಿತವರ ಕಣ್ಣಿಗೆ, ಹೊಸದಾಗಿ ನೆಟ್ಟು ಬೆಳಸಿದ್ದ ಹೂವಿನ ಗಿಡಗಳು ಕಾಣುತ್ತಿದ್ದುವು. ದೀಪಸ್ತಂಭದ ಬುಡದಲ್ಲಿ ಮುಳ್ಳುತಂತಿಯ ವೃತ್ತದೊಳಗೆ ಬಂದಿಗಳಾಗಿ (ಸುರಕ್ಷಿತವಾಗಿ) ಬಣ್ಣ ಬಣ್ಣದ ಬಗೆಬಗೆಯ ಹೂಗಳಿದ್ದವು. ಮೊಗ್ಗುಗಳು ; ಅರೆಬಿರಿದ, ಪೂರ್ಣವಾಗಿ ಅರಳಿ ಬಾಡಿ ಜೋಲುತ್ತಿದ್ದ ಹೂಗಳು.

ವಯಸ್ಸಿನೊಡನೆ ಮಂದವಾಗುತ್ತ ನಡದಿದ್ದ ಇಮಾಮ್ ಸಾಬಿಯ ದೃಷ್ಟಿ, ಹೂವಿನ ಸಸಿಗಳ ಮೇಲೆ ಸೋಮಾರಿಯಂತೆ ಎರಗಿತು. ಆ ಸೊಬಗಿನ ಆಸ್ವಾದನೆ ಅವನ ಸಾಮರ್ಥ್ಯಕ್ಕೆ ನಿಲುಕದ್ದು. ನೋಟ ಪುಷ್ಪರಾಶಿಯ ಮೇಲಿದ್ದರೂ ಆತ ಯೋಚಿಸುತ್ತಿದ್ದುದು ಬೇರೆಯೇ ಒಂದು :

ಕಿರಿಯ ಮಗನ ಹೆಂಡತಿ ತುಂಬಿದ ಗರ್ಭಿಣಿ. ಬೀಬಿ ನುಡಿದಿದ್ದಳು,– " ಇವತ್ತೋ ನಾಳೆಯೋ ಆಗಬಹುದು." ಚೊಚ್ಚಲು.

ಚೊಚ್ಚಲು—

ಆ ಅಂಶ ಮತ್ತೆ ಮತ್ತೆ ನೆನಪಾಗಿ, ಇಮಾಮ್ ಸಾಬಿಯ ಒಳಗೆ ಚಳಿ ಎನಿಸುತ್ತಿತ್ತು.

ಅವನು ತಾತನಾಗಲಿದ್ದುದು ಅದೇ ಮೊದಲ ಸಲವೇನೂ ಆಗಿರಲಿಲ್ಲ. ಹಾಗೆ ನೋಡಿದರೆ, ರೆಂಬೆಗಳು ವಿಶಾಲವಾಗಿ ಹರಡಿದ್ದ ವೃಕ್ಷ ಆತ. ಆದ ರೇನು? ಕೊಂಬೆಗಳು ಬಲಿತಂತೆ ಬೇರೆ ಬೇರೆ ದಿಕ್ಕುಗಳಿಗೆ ಅವುಗಳನ್ನು ಕಡಿ ದೊಯ್ದಿದ್ದರು. ಈಗ ಉಳಿದಿದ್ದುದು ಕಾಂಡ ಮತ್ತು ಕೊನೆಯ ರೆಂಬೆ ಮಾತ್ರ. ಎಲ್ಲ ಗಂಡು ಸಂತಾನವೆಂದೇ ಅಸೂಯೆಪಟ್ಟವರೆಷ್ಟು ಜನ! ಹಾಗೆ ಅವರು ಆಡಿದ್ದೇ ಕೆಡುಕು ಮಾಡಿತೋ ಏನೋ. ಇಮಾಮ್ ಸಾಬಿ ಮಕ್ಕಳನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡಿದ್ದೇ ಬಂತು. ಕಿರಿಯ ಒಬ್ಬನ ಹೊರತಾಗಿ ಯಾರೂ ಅವನಿಗೆ ದಕ್ಕಲಿಲ್ಲ.

ಕೂ ಎಂಜಿನಿನ ಜುಕುಜುಕುಜೂ ಆಟವೇ ಎಳೆಯರಿಗೆ. ಹಿರಿಯವನಿ ಗಿಷ್ಟು ಸಾಲೆ ಓದಿಸಿ ರೈಲ್ವೆಯಲ್ಲಿ ನೌಕರಿ ದೊರಕಿಸಿಕೊಡಬೇಕೆಂದು ಇಮಾಮ್ ಸಾಬಿ ಆಸೆ ಕಟ್ಟಿಕೊಂಡಿದ್ದ. ಆದರೆ, ಹಿರಿಯವನಿಗಷ್ಟೇ ಅಲ್ಲ, ಅವನ ಮಕ್ಕಳು ಯಾರಿಗೂ ಸಾಲೆ ಇಷ್ಟವಾಗಲಿಲ್ಲ.

"ಅಪ್ಪನಿಗೂ ಹೆಬ್ಬೆಟ್ಟಿನ ಗುರುತು; ಮಕ್ಕಳಿಗೂ ಹೆಬ್ಬೆಟ್ಟಿನ ಗುರುತು. ಅಲ್ಲಾನಿಗೆ ಇದೇ ಇಷ್ಟವೆಂದಾದರೆ ಹಾಗೆಯೇ ಆಗಲಿ," ಎಂದುಕೊಂಡ ಇಮಾಮ್ ಸಾಬಿ.

ಕುಡಿಮೀಸೆ ಚಿಗುರುವ ವೇಳೆಗೆ ದೊಡ್ಡವನು ಜಟಕಾವಾಲನಾದ. ಮನೆಯ ಸೊಸೆ ತವರಿಗೆ ಹೋಗಿ, ಇಮಾಮ್‌ಸಾಬಿಯ ಮೊಮ್ಮಗನೊಡನೆ ಮರಳಿದಳು.

ಆದರೆ ಆ ಬಗೆಯ ಸಮೃದ್ಧ ಬದುಕಿನ ಸೌಭಾಗ್ಯ ಬಹಳ ದಿನ ಇಮಾಮ್ ಸಾಬಿಗೆ ದೊರೆಯಲಿಲ್ಲ. ಮಗ ಜಗಳವಾಡಿ, ತಾನು ಸಂಪಾ ದಿಸಿ ಕೂಡಿಟ್ಟಿದ್ದ ಹಣದೊಡನೆ, ಮತ್ತೊಮ್ಮೆ ಗರ್ಭಿಣಿಯಾಗಿದ್ದ ಹೆಂಡತಿ ಹಾಗೂ ಮಗುವಿನೊಡನೆ ಮನೆ ಬಿಟ್ಟು ಮುಂಬಯಿಗೆ ಹೊರಟುಹೋದ.

ಅನಂತರ ಇಬ್ಬರು ಜಗಳವಾಡದೆಯೇ ಮನೆಬಿಟ್ಟು ಹೋದರು, ಉತ್ತರ ಹಿಂದೂಸ್ಥಾನಕ್ಕೆಂದು.

ಊರಿಗೊಮ್ಮೆ ಸರ್ಕಸ್ ಬಂದು ಬೀಡು ಬಿಟ್ಟಿತ್ತು. ಇಪ್ಪತ್ತು ದಿನ ಅಲ್ಲಿದ್ದು ಡೇರೆ ಕಿತ್ತಾಗ ಇಮಾಮ್ ಸಾಬಿಯ ನಾಲ್ಕನೆಯ ಹುಡುಗ ನಾಪತ್ತೆ

ಯಾದ. ಸರ್ಕಸ್ಸಿನವರು ಅಪಹರಿಸಿರಬೇಕೆಂಬ ಶಂಕೆ ತಂದೆಗೆ. ಆ ಶಂಕೆ ನಿಜವಾಯಿತು.

ಕೊನೆಯ ಮಗನನ್ನು ತಂದೆ ತಾಯಿ ಬಹಳ ಜೋಪಾನವಾಗಿ ಬೆಳೆಸಿದರು. ಆರೈಕೆ ಅತಿಯಾಗಿತ್ತೆಂದೇ ಆತ ಬಡಕಲು ಶರೀರದವನಾದ. ಒಮ್ಮೆ ಆತ ವಿಷಮಶೀತಜ್ವರಕ್ಕೆ ತುತ್ತಾದಾಗಲಂತೂ ಇಮಾಮ್ ಸಾಬಿ ಅರೆಹುಚ್ಚನಾದ. ಅವನ ಹೆಂಡತಿ, ಮುಸಲ್ಮಾನ-ಹಿಂದೂ ದೇವರಿಬ್ಬರಿಗೂ ಹರಕೆ ಹೊತ್ತಳು . . . ಹುಡುಗ ಕುತ್ತಿನಿಂದ ಪಾರಾದ . . . ಹಳ್ಳಿಯ ಹುಡುಗಿಯೊಬ್ಬಳು ಅವನ ಮಡದಿಯಾಗಿ ಬಂದಳು.

ಆ ಕಿರಿಯವನೇ, ತನ್ನ ಜೀವನಾಧಾರವಾದ ರೈಲ್ವೆಶಾಖೆಗೆ ಇಮಾಮ್ ಸಾಬಿ ನೀಡಿದ ಕಾಣ್ಕೆ. ಹಿಂದೆ ಇಬ್ಬರೇ ಹಮಾಲರಿದ್ದ ನಿಲ್ದಾಣದಲ್ಲಿ ಈಗ ನಾಲ್ವರಿದ್ದರು. ಇಮಾಮ್ ಸಾಬಿಯ ಮಗ ಕರೀಂ ಐದನೆಯವನಾದ.

"ನನಗೆ ವಯಸ್ಸಾಯ್ತು. ಇನ್ನು ಕರೀಂ ಇರ್ತಾನೆ."

"ನೀನು ರಾತ್ರಿ ನಿದ್ದೆ ಕೆಡ್ಬೇಡ, ದಾದಾ ಮಿಯಾ. ತ್ರೀ-ಅಪ್ ಫೋರ್ ಡೌನ್ ಎಲ್ಲಾ ಕರೀಂ ನೋಡ್ಕೊಳ್ಳಿ."

"ಹೂಂ, ಹೂಂ."

ಹೂಂ-ಎಂದನಾದರೂ, ಸದಾ ಕಾಲವೂ ರಾತ್ರಿಯ ದುಡಿಮೆಯನ್ನು ಮಗನಿಗೇ ವಹಿಸಿ ಕೊಡಲಿಲ್ಲ ಇಮಾಮ್‌ಸಾಬಿ. ಒಂದು ವಾರ ಇವನಾದರೆ ಒಂದು ವಾರ ಅವನು.

ಆ ಹುಡುಗಿ, ತನ್ನ ಕಿರಿಯ ಸೊಸೆ, ಈಗ ತುಂಬಿದ ಗರ್ಭಿಣಿ. ಹಳ್ಳಿಯಲ್ಲಿ ಬಾಣಂತಿತನಕ್ಕೆ ಅನುಕೂಲವಿರಲಿಲ್ಲವೆಂದು ಇಮಾಮ್ ಸಾಬಿ ಇಲ್ಲಿಯೇ ಇರಿಸಿಕೊಂಡಿದ್ದ. ಅಲ್ಲದೆ, ಹೆಣ್ಣು ಮಕ್ಕಳಿಲ್ಲದ ವೃದ್ಧ ದಂಪತಿಗಳು ಆ ಮುಗ್ಧೆಯ ಬಗೆಗೆ ವಿಶೇಷ ಒಲವನ್ನು ತೋರಿಸುತ್ತಲಿದ್ದರು. ಇಮಾಮ್ ಸಾಬಿಯ ಹೆಂಡತಿ ಆ ಹುಡುಗಿಗೆ ಅತ್ತೆಯೂ ಆಗಿದ್ದಳು.

ಚೊಚ್ಚಲ ಹೆರಿಗೆ ಬೇರೆ—

ಬೆನ್ನು ಹುರಿಯನ್ನು ನಡುಕ ಮುತ್ತಿಡಲು ಇಮಾಮ್ ಸಾಬಿ ತನ್ನಷ್ಟಕ್ಕೆ ಅಂದುಕೊಂಡ :

"ಈಗ ಸೂಲಗಿತ್ತಿ ಇದ್ದಾಳೆ. ತಾನೆಲ್ಲಾ ನೋಡ್ಕೊಳ್ತೀನಿ ಅಂದಿದ್ದಾಳೆ. ಐದು ರೂಪಾಯಿ ಕೊಟ್ಟರಾಯ್ತು."

ಆ ಸಾರೆ, ತನ್ನ ಮೊದಲ ಬೀಬಿಯ ಹೆರಿಗೆಯ ವೇಳೆ, ಸೂಲಗಿತ್ತಿ ಇರಲಿಲ್ಲ.

ತಳವೇ ಇಲ್ಲವೇನೋ ಎನ್ನುವಂತಹ ಆಳದಿಂದ ಇಣಿಕಿ ನೋಡು ತ್ತಿತ್ತು ನೋವಿನ ಆ ನೆನಪು.

"ಈಗ ಯಾಕೆ ಆ ಇಚಾರ . . ."

ಇದಕ್ಕಿಂತಲೂ ಹಿಂದಕ್ಕೆ ಸರಿಯಿತು ಸ್ಮರಣೆ.

ತಂದೆಯನ್ನು ಕಳೆದುಕೊಂಡಿದ್ದರೂ ಬಾಲ್ಯ ಸುಖಕರವಾಗಿಯೇ ಇತ್ತು, ಸೋದರಮಾವ ನೀಡಿದ ಆಶ್ರಯದ ನೆರವಿನಿಂದ.

ಆ ಮಾವನೂ ಹಮಾಲ. ರೈಲ್ವೆ ಸ್ಟೇಷನ್ನಿನ ಮುಖದರ್ಶನ ಏಳು ಎಂಟರ ಹರೆಯದವನಾಗಿದ್ದಾಗಲೇ ತನಗೆ ಆಗಿತ್ತು. ಪ್ರತಿಯೊಂದು ಗಾಡಿ ಯನ್ನೂ ಇದಿರು ನೋಡುತ್ತ ತಾನು ಕಳೆಯುತ್ತಿದ್ದ ಆ ದಿನಗಳು . . .

**ಧಡ್ ಧಡಾಲ್ !**

[ಸಿಡಿಮದ್ದು ಕಲ್ಲುಬಂಡೆಗಳನ್ನು ಒಡೆದಂತಹ, ಬೆಟ್ಟದೊಂದು ತುಣುಕು ಜಾರಿ ಪ್ರಪಾತಕ್ಕೆ ಬಿದ್ದಂತಹ, ಸಹಸ್ರ ತೋಪುಗಳು ಏಕಕಾಲ ದಲ್ಲೇ ಗುಂಡಿನ ಮಳೆಗರೆದಂತಹ—ಸದ್ದು.]

"ಆಕ್ಸಿಡೆಂಟ್ !"

ಇಮಾಮ್ ಸಾಬಿ ಹೌಹಾರಿ ಬೊಬ್ಬಿಟ್ಟ:

"ಆಕ್ಸಿಡೆಂಟ್ !"

ಬೆಂಕಿ ಬಿದ್ದ ಮನೆಯ ಎದುರು ಆರ್ತನಾದ ಮಾಡುವ ಎಳೆಯ ಬಾಲಕನಂತೆ ಅರಚುತ್ತ ಇಮಾಮ್ ಸಾಬಿ, ನಿಲ್ದಾಣದ ಹೆಬ್ಬಾಗಿಲಿನತ್ತ ಧಾವಿಸಿದ.

ಓಡುತ್ತ, ಏದುಸಿರು ಬಿಡುತ್ತ, ಆತ ಕೂಗಿ ಕೇಳಿದ:

"ಎಲ್ಲಿ ? ಏನಾಯ್ತು ?"

ಧ್ವನಿಯನ್ನುಕೇಳಿ, ತಮ್ಮ ಕೊಠಡಿಯಿಂದ ಹೊರಬಂದ ಸ್ಟೇಶನ್ ಮಾಸ್ತರು, ಓಡಿ ಬರುತ್ತಲಿದ್ದ ಇಮಾಮ್ ಸಾಬಿಯನ್ನು ತಡೆಯುತ್ತ ಅಂದರು:

"ಯಾಕಪ್ಪಾ ? ಏನಿದು ?"

ಮಾಸ್ತರು ಅಲ್ಲಿಗೆ ಹೊಸಬರು. ಆದರೂ ಇಮಾಮ್ ಸಾಬಿಯ ಬಗೆಗೆ ಆಗಲೇ ಅವರು ಸಾಕಷ್ಟು ತಿಳಿದಿದ್ದರು. ಅವರ ನೋಟ ಛೇಡಿಸು ತ್ತಿತ್ತು. ಮುಗುಳುನಗೆ ಮೂಡಿತ್ತು ಮುಖದಮೇಲೆ.

"ಆಕ್ಸಿಡೆಂಟ್ ಆಗಿಲ್ವ ಮಾಸ್ತರ್‌ಸಾಬ್?"

"ಕನಸು ಬಿತ್ತೇನಪ್ಪ?"

ನಿಲ್ದಾಣದೆದುರಿಗೆ ಮೂರನೆಯ ಸಾಲಿನಲ್ಲಿ ಕಟ್ಟೆಗೆ ತಾಗಿ ನಿಂತಿತ್ತು ಮಾಲ್‌ಗಾಡಿ. ತುಂಬಿದ್ದ ಡಬ್ಬಿಯೊಂದನ್ನು ತಂದು ಎಂಜಿನು, ಗಾಡಿಗೆ ಅಂಟಿಸಿತ್ತು. ಆಗ ಕೊಂಡಿ ತಗಲಿ, ತಮಗೆ ನೋವಾಯಿತೆಂದು ಎಲ್ಲ ಡಬ್ಬಿಗಳೂ ತುಸು ಗದ್ದಲ ಮಾಡಿದ್ದುವು.

ಅದೇ ಸದ್ದು—ಢಡ್‌ಢಡಾಲ್.

ಆಕ್ಸಿಡೆಂಟ್.

ನಾಚಿಕೆಯಿಂದ ಇಮಾಮ್ ಸಾಬಿಯ ಮುಖ ಕೆಂಪೇರಿತು.

"ವಯಸ್ಸಾಗೋಯ್ತು ನಂಗೆ!" ಎಂದು ನುಡಿದು, ತಲೆ ತಗ್ಗಿಸಿ ನೆಲ ನೋಡುತ್ತ, ಪ್ಲಾಟ್‌ಫಾರ್ಮಿನುದ್ದಕ್ಕೂ ಆತ ನಡೆದುಹೋದ.

ಕಟ್ಟಡ ಮುಗಿದು ಕಪ್ಪು ಪಟ್ಟೆಯ ಬೇಲಿ ಮೊದಲಾದೆಡೆ, ಹೊರಗೆ ಬೆಳೆದು ಒಳಕ್ಕೂ ನೆರಳು ನೀಡಿದ್ದ ಹುಣಿಸೆಮರದ ಕೆಳಗೆ, ಬೇಲಿಗೊರಗಿ ರುಮಾಲು ತೆಗೆದು ಕೆಳಕ್ಕೆಳೆದು, ಸುರುಳಿ ಬಿಚ್ಚಿಕೊಂಡ ತುದಿಯಿಂದ ತಲೆಯನ್ನೂ ಮುಖವನ್ನೂ ಒರಸಿದ.

ಹೇಗೆ ಬೇಸ್ತು ಬಿದ್ದೆ ತಾನು!

ಹಿಂದೆಯೂ ಹತ್ತಾರು ಸಾರೆ ಆ ರೀತಿ ಅವನಿಗೆ ಆಗಿತ್ತು. ಗಾಢನಿದ್ರೆಯಲ್ಲೂ ಕನಸು ಕಂಡು, ಮೂಕನಂತೆ ಅಸ್ಪಷ್ಟ ಸ್ವರ ಹೊರಡಿಸುತ್ತ ಆತ ಗಡಬಡಿಸಿ ಎದ್ದುದಿತ್ತು. ಅವನು ಯುವಕನಾಗಿದ್ದಾಗ ಅವನ ಊರಿನಿಂದ ಕೆಲವೇ ಮೈಲುಗಳಾಚೆ ಸಂಭವಿಸಿದ್ದೊಂದು ರೈಲು ಅವಘಡದ ಪ್ರತಿಧ್ವನಿ ಅದೆಲ್ಲ. ಅವಘಡವನ್ನು ಕಣ್ಣಾರೆ ಕಂಡಿರಲಿಲ್ಲ ಇಮಾಮ್ ಸಾಬಿ. ಆದರೂ ಅದು ಸಂಭವಿಸಿದ ಕೆಲವೇ ಗಂಟೆಗಳಲ್ಲಿ, ಆತ ಸ್ಥಳಕ್ಕೆ ಬಂದಿದ್ದ. ಕತ್ತಲಲ್ಲಿ ಬರಿಗಾಲಲ್ಲೇ ನಡೆದು ತಲುಪಿದ್ದ. ಮುಂದೆ ಕೆಲವೇ ನಿಮಿಷಗಳಲ್ಲಿ ವೈದ್ಯಕೀಯ ಸಹಾಯವನ್ನೂ ಮತ್ತಿತರ ಪರಿಹಾರವನ್ನೂ ರಿಲೀಫ್ ಟ್ರೈನು ತಂದಿತ್ತು. ಅದರಲ್ಲಿದ್ದ ನಗರದ ರೈಲ್ವೆ ಆಳುಗಳನ್ನು ಇಮಾಮ್

ಸಾಬಿ ಸೇರಿಕೊಂಡು ಆರ್ತರಿಗೆ ನೆರವು ನೀಡಿದ್ದ. ಮುಳುಗಿ ಸಾಯಲು ಸಾಕಷ್ಟು ನೀರಿಲ್ಲದ ನದಿ. ಆದರೂ ಹಳೆಯ ಸೇತುವೆ ಬಿರುಕುಬಿಟ್ಟು, ಎಂಜಿನ್ ಹಾಗೂ ಎದುರಿನ ಮೂರು ಡಬ್ಬಿಗಳು ಕೆಳಕ್ಕೆ ಉರುಳಿದ್ದುವು. ಪ್ರಯಾಣಿಕರ ಆಕ್ರಂದನ ಕರ್ಣಭೇದಕವಾಗಿತ್ತು. ಅವಸರ ಅವಸರವಾಗಿ ವ್ಯವಸ್ಥೆಗೊಳಿಸಿದ ಸರ್ಚ್ ಲೈಟುಗಳ ಬೆಳಕಿನಲ್ಲಿ, ಸಾವಿನ ಬೋನು ಕತ್ತರಿಗಳಲ್ಲಿ ಸಿಲುಕಿಕೊಂಡವರ—ಬದುಕಿ ಉಳಿದವರ–ರಕ್ಷಣೆಗಾಗಿ ಯತ್ನ ನಡೆಯಿತು. ಬಾಹುಗಳಲ್ಲಿ ನೂರು ಜನರ ಬಲವಿದ್ದವರಂತೆ ಇಮಾಮ್ ಸಾಬಿ ದುಡಿದ. ಬೆಳಕು ಹರಿದು ಸೂರ್ಯ ನಡುನೆತ್ತಿಗೆ ಬರುವ ಹೊತ್ತಿಗೆ ಆ ದುಡಿಮೆ ಮುಗಿಯಿತು. ಸತ್ತವರ ಶವಗಳೆಲ್ಲ ದೊರೆತಿದ್ದುವು—ಐವತ್ತೆಂಟು ಜನ. ಗಂಭೀರ ಸ್ವರೂಪದ ಗಾಯಗಳಾಗಿದ್ದುದು ಇಪ್ಪತ್ತೆರಡು ಮಂದಿಗೆ. ಸಣ್ಣ ಪುಟ್ಟ ಗಾಯಗಳು ಇನ್ನೂ ಅನೇಕರಿಗೆ.

ಮುಂದೆ ಅನೇಕ ವರ್ಷಗಳ ಅನಂತರವೂ ಕನಸಿನಲ್ಲಿ ಕಾಣುವಷ್ಟು ಭೀಕರವಾಗಿತ್ತು ಆ ಘಟನೆ.

ಅಂದು ದುಡಿಮೆ ಮುಗಿದಾಗ, ಎಲ್ಲ ಬಳಲಿಕೆಯೂ ಒಟ್ಟಿಗೆ ಕಾಣಿಸಿಕೊಂಡು ಕಾಲು ಕಟ್ಟಿತು. ಅವಘಡದ ಸನ್ನಿವೇಶವನ್ನು ನೋಡಲೆಂದು ಇಮಾಮ್ ಸಾಬಿ ಕುಳಿತ. ಮೈ ಥರಥರನೆ ನಡುಗುತ್ತಿತ್ತು. ತೀವ್ರಗೊಂಡಿದ್ದ ಎದೆಗುಂಡಿಗೆಯ ಬಡಿತ ಇನ್ನೂ ಕಡಮೆಯಾಗಿರಲಿಲ್ಲ. ತಲೆ, ಮುಖ, ಕಂಕುಳು, ಎದೆ–ಎಲ್ಲಾ ಬೆವತಿದ್ದುವು.

ಕಂಪಿಸುತ್ತಿದ್ದ ಬೆರಳುಗಳಿಂದ ಕೆಂಪು ರುಮಾಲನ್ನು ಸರಿಪಡಿಸುತ್ತ ಊರಿನಿಂದ ಬಂದಿದ್ದ ಹಲವರೊಡನೆ, ರಾತ್ರಿ ತಾನು ಕಂಡುದನ್ನು ಅವರಿಗೆ ಬಣ್ಣಿಸುತ್ತ, ಇಮಾಮ್ ಸಾಬಿ ಹಿಂದಿರುಗಿದ.

ಅವನನ್ನು ಇದಿರ್ಗೊಂಡವರಲ್ಲಿ ಕೆಲವರು ಹೇಳಿದ್ದರು:

"ಭಾರಿ ಸಂಪಾದನೆಯಾಗಿರ್ಬೇಕು ಇಮಾಮ್‌ಗೆ!"

ಅದನ್ನು ಕೇಳಿ, ರಕ್ತವೆಲ್ಲ ಮುಖಕ್ಕೇರಿ ಬಂದು ಕಣ್ಣಿಗೆ ಕತ್ತಲು ಕವಿದಂತಾಯಿತು ಈತನಿಗೆ.

ಇವನು ಸ್ವರವೇರಿಸಿ ಅಂದಿದ್ದ:

"ಥೂ ನಿಮ್ಮ! ನೀವು ಮನುಷ್ಯರೋ ಮೃಗಗಳೋ?"

ಶ್ರೀಮಂತ ಪ್ರಯಾಣಿಕರು ಕೆಲವರು ಅವನಿಗೆ ಹಣ ಕೊಡಲು ಬಂದಿದ್ದುದು ನಿಜ. ಆದರೆ ಬಿಡಿಕಾಸನ್ನೂ ಅವನು ಮುಟ್ಟಿರಲಿಲ್ಲ.

ಹಣಕಾಸಿನ ವಿಷಯದಲ್ಲಿ ಅವನಿಗೂ ಅವನ ಸಹೋದ್ಯೋಗಿಗಳಿಗೂ ಸದಾ ಕಾಲವೂ ಭಿನ್ನಾಭಿಪ್ರಾಯವಿದ್ದೇ ಇತ್ತು. ಹೊಸ ಮುಖಗಳನ್ನು ಕಾಡಿಸಿ ಪೀಡಿಸಿ ಆದಷ್ಟು ಕಿತ್ತುಕೊಳ್ಳಲು ಅವರು ಯತ್ನಿಸುತ್ತಿದ್ದರು. ಎಷ್ಟೋ ಸಾರಿ ಗೆಲ್ಲುತ್ತಿದ್ದರು. ಯಾರಾದರೂ ಗದರಿದರೆ ಜಗಳಕಾಯುತ್ತಿದ್ದರು. ಇಮಾಮ್ ಸಾಬಿ ಮಾತ್ರ, ಅಷ್ಟು ಕೊಡಿ-ಇಷ್ಟು ಕೊಡಿ ಎಂದು ಕೇಳಿದವನಲ್ಲ. "ಎಷ್ಟು ಕೂಲಿ?" ಎಂದು ಯಾರಾದರೂ ಕೇಳಿದರೆ, ಇಂತಿಷ್ಟು-ಎಂದು ನ್ಯಾಯಸಮ್ಮತವಾದುದನ್ನು ತಿಳಿಸುತ್ತಿದ್ದ . . .

ಮತ್ತೆ ಹಲ್ಲೋ! ಹಲ್ಲೋ! [ಫೋನಿನ ಖಣಖಣತ್ಕಾರ]

ನೌಕರ ಘಂಟೆ ಬಾರಿಸಿದ.

ಕೆಲ ನಿಮಿಷಗಳ ಅನಂತರ ಬೀಗ ತೆಗೆದು ಹಿಡಿಯನ್ನು ಎಳೆದ. ಕೈಕಂಬ ಮಿಸುಕಿ ಸಿಗ್ನಲ್ ಬಿತ್ತು.

ಘಂಟೆಯ ಸಪ್ಪಳ ಇಮಾಮ್ ಸಾಬಿಗೆ ಕೇಳಿಸಿದುದು ಸ್ವಲ್ಪ ಅಸ್ಪಷ್ಟವಾಗಿಯೇ. ಕೈಕಂಬ ಕಾಣಿಸುತ್ತಿದ್ದುದೂ ಮಸಕು ಮಸಕಾಗಿಯೇ. ಆದರೂ ಸಿಗ್ನಲ್ ಬಿತ್ತೆಂಬುದನ್ನು ಅಭ್ಯಾಸ ಬಲದಿಂದ ಆತ ಬಲ್ಲ.

ನಿಲ್ದಾಣದ ನೀರವತೆ ಮಾಯವಾಗಿ ಗುಸುಗುಸು ಸದ್ದು ಆಗಲೇ ಕೇಳಿಸತೊಡಗಿತ್ತು. ಸೋಮಾರಿಯಾದೆ ತಾನು—ಎಂದು ಛೀಗಳೆಯುತ್ತ ಇಮಾಮ್ ಸಾಬಿ ಎದ್ದು ರುಮಾಲು ಸುತ್ತಿದ. ಅವನ ಬರಿಯ ಪಾದಗಳು ದೇಹದ ಭಾರವನ್ನು ಹೊತ್ತು ಮಹಾದ್ವಾರದೆಡೆಗೆ ಚಲಿಸಿದುವು.

ಗೂಡ್ಸ್ ಕಟ್ಟೆಯಲ್ಲಿದ್ದ ಮೂವರು ಹಮಾಲರು ಅದೆಷ್ಟು ಹೊತ್ತಿಗೆ ಇತ್ತ ಜಿಗಿದರೋ! ಪ್ರಯಾಣಿಕರ ಸುಖದುಃಖ ವಿಚಾರಿಸುವುದರಲ್ಲಿ ಅವರಾಗಲೇ ಮಗ್ನರಾಗಿದ್ದರು. ಯುವಕರು. ಒಬ್ಬನಂತೂ ಮಹಾ ಖದೀಮ.

ಪ್ಯಾಸೆಂಜರ್ ಗಾಡಿ ಹತ್ತುವವರೂ ಕಡಮೆ, ಇಳಿಯುವವರೂ ಕಡಮೆ. ಇಮಾಮ್ ಸಾಬಿ ಹೊರಗೆ ಹೋಗದೆ ಒಳಗೇ ನಿಂತ.

ಲಗುಬಗೆಯಿಂದ ಗಾಡಿ ಬಂತು. ನಿಂತು ಮುಂದಕ್ಕೆ ಸಾಗಿತು. ಕಣ್ಣೆದುರು ಅತ್ತಿತ್ತ ಸರಿದ ಜನರು ತುಂತುರು ಮಳೆಯಂತೆ ಚೆದುರಿ ಮಾಯವಾದರು.

ಅಪರಿಚಿತನಂತೆ ಕಂಡ ಒಬ್ಬರ ಹಗುರವಾದ ಸೂಟ್‌ಕೇಸನ್ನು ಇಮಾಮ್ ಸಾಬಿ ಹೊರಕ್ಕೊಯ್ದು ಜಟಕಾದಲ್ಲಿರಿಸಿದ. ಅವರಿತ್ತ ಎರಡಾಣೆಯನ್ನು ತನ್ನ ನೀಲಿ ಅಂಗಿಯ ಜೇಬಿಗೆ ಸೇರಿಸಿದ.

ಮೊದಲಾದರೆ, ಹೋಗುತ್ತಿದ್ದವರು ಬರುತ್ತಿದ್ದವರೆಲ್ಲ ಪರಿಚಿತರೇ. ಈಗ ಕೆಲವು ವರ್ಷಗಳಿಂದ ಬೀಡಿ ಕಾರಖಾನೆಗಳಾಗಿ, ಹತ್ತಿ ಹಿಂಜುವ ಒಂದು ಗಿರಣಿಯೂ ಪ್ರಾರಂಭವಾಗಿ, ಊರಿನ ಜನಸಂಖ್ಯೆ ಹೆಚ್ಚಿತ್ತು. ಹಲವು ಹೊಸ ಮುಖಗಳು ನಿಲ್ದಾಣದಲ್ಲಿ ಕಾಣಿಸಿಕೊಳ್ಳುತ್ತಿದ್ದುವು.

ಸ್ವತಃ ನಿಲ್ದಾಣವೇ ಎಷ್ಟೊಂದು ಬದಲಾಗಿ ಬಿಟ್ಟಿತ್ತು! ಸೀಮೆ ಎಣ್ಣೆಯ ಆಗಿನ ಮಿಣಿ ಮಿಣಿ ದೀಪಗಳೆಲ್ಲಿ, ಧಾಳಾಗಿ ಉರಿಯುವ ಈಗಿನ ವಿದ್ಯುತ್ ಬಲ್ಬುಗಳೆಲ್ಲಿ! ಆಗ ಸ್ಟೇಷನ್ ಮಾಸ್ತರರು ಎಲ್ಲ ಕೆಲಸವನ್ನೂ ಮಾಡಬೇಕಾಗಿತ್ತು. ಟಿಕೆಟ್ ಮಾರುವುದು, ಕೀಲಿಕೈ ಕೊಡುವುದು, ಪಡೆಯುವುದು, ಬಾವುಟ ಬೀಸುವುದು, ಗೇಟು ತೆರೆದು ಇಳಿದವರನ್ನು ಹೊರಬಿಡುವುದು–ಪ್ರತಿಯೊಂದನ್ನೂ. ಈಗ ಅವರಿಗೊಬ್ಬ ಸಹಾಯಕ ನಿದ್ದ. ಗೂಡ್ಸ್ ವಿಭಾಗವನ್ನು ನೋಡಿಕೊಳ್ಳಲು ಮತ್ತೂ ಒಬ್ಬನಿದ್ದ. ಹಿಂದಿನ ಕಟ್ಟಡವೂ ಗುರುತು ಸಿಗದಂತೆ ಮಾರ್ಪಾಟು ಹೊಂದಿತ್ತು. ಹಂಚುಗಳೆಲ್ಲ ಮಾಯವಾಗಿ ತಾರಸಿ ಛಾವಣಿಗಳು ಎತ್ತರದಲ್ಲಿ ಹರಡಿ ಕೊಂಡಿದ್ದುವು. ಹಳೆಯ ತಲೆಮಾರಿನ ಮಾಸ್ತರುಗಳೂ ಈಗಿಲ್ಲ. ಇತ್ತೀಚಿನ ಒಬ್ಬಿಬ್ಬರಂತೂ ಇಮಾಮ್ ಸಾಬಿಯನ್ನು 'ಹಮಾಲ್' ಎನ್ನುತ್ತಿರಲಿಲ್ಲ; 'ಪೋರ್ಟರ್' ಎಂದು ಕರೆಯುತ್ತಿದ್ದರು. ಕೈಗೆ ಕಟ್ಟಿಕೊಳ್ಳಲು ಹಿತ್ತಾಳೆಯ ಬಿಲ್ಲೆಗಳು ಬಂದಿದ್ದುವು. ಪೋರ್ಟರನ ನಂಬರು; 'ಒಂದು ಮಣವನ್ನು ಮೀರಿದ ಹೇರಿಗೆ ಎರಡಾಣೆ.' ಅದನ್ನು ಧರಿಸಲೇ ಬೇಕಾಗಿ ಬಂದಾಗ ಇಮಾಮ್ ಸಾಬಿ ಪಟ್ಟ ವ್ಯಥೆ ಅಷ್ಟಿಷ್ಟಲ್ಲ. ಅಷ್ಟು ಮಟ್ಟಿನ ಅವಿಶ್ವಾಸಕ್ಕೂ ಪ್ರಾಪ್ತವಾಯಿತೆ ತನ್ನ ವೃತ್ತಿ? ಇಂತಹ ಅವ ಮಾನವನ್ನೂ ಸಹಿಸಬೇಕೆ ತಾನು? ಆದರೆ ಅವನ ಮಗ ಕರೀಮುನಿಗೆ ಆ ಬಗೆಯ ಯಾವ ಕಸಿವಿಸಿಯೂ ಇಲ್ಲ. "ರೂಲ್ಸ್ ಬಾಬಾ, ರೂಲ್ಸ್," ಎನ್ನುತ್ತಿದ್ದ ಆತ.

ಎರಡು ತಲೆಮಾರುಗಳ ನಡುವಿನ ಅಂತರವನ್ನು ನೆನೆದು ಇಮಾಮ್ ಸಾಬಿಗೆ ಸೋಜಿಗವೆನಿಸುತ್ತಿತ್ತು.

. . .ಅರಿವಿಲ್ಲದಂತೆಯೇ ತನ್ನ ಮುಖವನ್ನು ಆವರಿಸಿದ ಮಂದಹಾಸವನ್ನು ಬದಿಗೆ ಸರಿಸುತ್ತ ಇಮಾಮ್ ಸಾಬಿ, ಮತ್ತೆ ಹೊರಗಿನ ಒರಗುಬೆಂಚಿನತ್ತ ಸಾಗೋಣವೇ ಎಂದು ನೋಡಿದ. ಆದರೆ ಬಿಸಿಲಿನ ಝಳ ಕಣ್ಣನ್ನು ಕುಕ್ಕಿತು. ಪ್ಲಾಟ್ ಫಾರ್ಮಿನುದ್ದಕ್ಕೂ ಎರಡು ಸಾರೆ ಅತ್ತಿತ್ತ ನಡೆದ.

ಇನ್ನು ಪೂನಾದಿಂದ ಬರುವ ಮೇಲ್ ಗಾಡಿ. ಅದಾದಮೇಲೆ ಹೆಂಡತಿ ತರುವ ಬುತ್ತಿಯೂಟ. ಮುಂದೆ, ಬೆಂಗಳೂರಿನಿಂದ ಬರುವ ಮೇಲ್ ಗಾಡಿ. ನಾಲ್ಕರ ಸುಮಾರಿಗೊಂದು ಲೋಕಲ್. ಸಂಜೆಗೆ ದಕ್ಷಿಣಾಭಿಮುಖವಾಗಿ ಪ್ಯಾಸೆಂಜರ್. ಅದರ ನಿರ್ಗಮನದ ಬಳಿಕ ತಾನು ಮನೆಗೆ. . .

" ಇವತ್ತೋ ನಾಳೆಯೋ ಆಗಬಹುದು. "

—ಇವತ್ತು ರಾತ್ರಿಯೇ ಆಗಲೂ ಬಹುದು.

ಗೇಟಿನ ಹೊರಗೆ ಗೋಡೆಗೊರಗಿ ಇಮಾಮ್ ಸಾಬಿ ಕುಳಿತ. ಜನ ಬರತೊಡಗಿದ್ದರು. ಮೂರನೆಯ ತರಗತಿಯವರು.

ಫೋನ್ ಕರೆ. ಗಂಟೆ.

ಒಂಟಿ ಎತ್ತಿನ ಗಾಡಿಯಲ್ಲಿ ಸಾಮಾನು ಹೇರಿಸಿಕೊಂಡು ಸಂಸಾರವೊಂದು ಬಂತು. ಯಾರು? ಕಾಣಿಸುತ್ತಿಲ್ಲ ಸರಿಯಾಗಿ.

ಅಬ್ದುಲ್ಲನ ಸ್ವರ ಕೇಳಿಸಿತು :

" ಬಾ ದಾದಾ ಮಿಯಾ. "

ಇಮಾಮ್ ಸಾಬಿ ಎದ್ದು ಅಬ್ದುಲ್ಲನನ್ನು ಹಿಂಬಾಲಿಸಿದ.

" ಒಟ್ಟು ಹನ್ನೊಂದು ಸಾಮಾನು. ಮೊದಲೇ ಹೇಳಿಬಿಡಿ. ಆಮೇಲೆ ತಕರಾರು ಬೇಡ. "

ಅಬ್ದುಲ್ಲ :

" ಮೂರು ರೂಪಾಯಿ ಕೊಟ್ಬಿಡಿ ಬುದ್ಧಿ . . ."

" ಮೂರು ರೂಪಾಯಿ ! ಎಲ್ಲಾದರೂ ಉಂಟೆ ? ಒಂದು ರೂಪಾಯಿ ಕೊಡ್ತೀನಿ—ಇಬ್ಬರಿಗೂ ಸೇರಿಸಿ. "

ನರೆಗೂದಲಿಗೆ ಗೌರವ ಕೊಡುವವನಂತೆ ಇಮಾಮ್ ಸಾಬಿಯತ್ತ ತಿರುಗಿ ಆತ ಮತ್ತೂ ಅಂದ :

" ಸರಿಯೇನಪ್ಪ ? "

ಅಬ್ದುಲ್ಲನ ಕೆಕ್ಕರಗಣ್ಣನ್ನು ಲಕ್ಷ್ಯಕ್ಕೆ ತರದೆ ಇಮಾಮ್ ಸಾಬಿ ಯೆಂದ :

" ಅನ್ನೆರಡನ್ನೆರಡಾಣೆ ಕೊಡಿ ಸೋಮಿ. "

. . . ರೈಲು ಬಂದು ಹೋಯಿತು. ದೊರೆತ ಒಂದೂವರೆಯಿಂದ ಎಂಟಾಣೆಯ ನಾಣ್ಯವನ್ನು ಅಬ್ದುಲ್ಲ ಇಮಾಮ್ ಸಾಬಿಗೆ ಕೊಟ್ಟು, ಬಳಿಕ ತನ್ನ ಜೇಬಿನೊಳಗಿಂದ ಸಣ್ಣ ಪುಟ್ಟ ನಾಣ್ಯಗಳು ಕೆಲವನ್ನು ತೆಗೆದು ಮುದುಕನಿಗೆ ಕೊಡುತ್ತ ಅಂದ :

" ಇಪ್ಪತ್ತೈದು ಪೈಸೆ . . . ನೀನು ಬಾಯಿ ಮುಚ್ಕೊಂಡಿದ್ದಿದ್ದರೆ ಒಂದೊಂದು ರೂಪಾಯಾದರೂ ಬರ್ತಿತ್ತು. "

" ಹೋಗಲಿ ಬಿಡು," ಎಂದ ಇಮಾಮ್ ಸಾಬಿ.

ನಯೇ ಪೈಸೆಗಳ ಲೆಕ್ಕ ಅವನಿಗೆ ತಿಳಿಯದು. ಆದರೆ ತನ್ನ ಕಣ್ಣೆದು ರಲ್ಲೇ ಬೆಳೆದ ಅಬ್ದುಲ್ಲನಾಗಲೀ ಇತರ ಹುಡುಗರಾಗಲೀ ತನಗೆ ಮೋಸ ಮಾಡಲಾರರೆಂಬ ವಿಶ್ವಾಸವಿತ್ತು ಅವನಿಗೆ.

ಇನ್ನೊಬ್ಬ ಹಮಾಲ ಅತ್ತ ಬರುತ್ತ ಅಂದ :

" ಪೂನಾ ಗಾಡಿ ತೊಂಬತ್ತು ಮಿನಿಟ್ ಲೇಟ್. "

ಗಾಡಿ ತಡವಾಗುವುದಂತೂ ಹೊಸದಲ್ಲ. ತಡವಾಗದ ದಿನವಾದರೂ ಯಾವುದು ? ಹತ್ತಿಪ್ಪತ್ತು ವರ್ಷಗಳಿಗೆ ಹಿಂದೆಯೊಂದು ಯುದ್ಧ ನಡೆದಿತ್ತಲ್ಲ ? ಆಗ ಅಸ್ತವ್ಯಸ್ತವಾಗಿದ್ದ ರೈಲು ವ್ಯವಸ್ಥೆ ಸರಿ ಹೋಗಿಯೇ ಇರಲಿಲ್ಲ.

ನಿಲ್ದಾಣ ಮತ್ತೆ ನಿರ್ಜನವಾಯಿತು. ಮಾಸ್ತರರು ಊಟಕ್ಕೆ ಹೋದರು. ಇಬ್ಬರು ಹಮಾಲರು ಊಟಕ್ಕೆ ತೆರಳಿದರು. ಒಬ್ಬ ಪ್ಲಾಟ್ ಫಾರ್ಮಿನ ಮೇಲೆಯೇ ಒಂದೆಡೆ ಮೈಚೆಲ್ಲಿ, ಕೆಂಪು ರುಮಾಲನ್ನು ದಿಂಬಾಗಿ ಮಾಡಿ, ನಿದ್ದೆಹೋದ.

ಇಮಾಮ್ ಸಾಬಿ ಪ್ಲಾಟ್‌ಫಾರ್ಮ್‌ನ ಉತ್ತರ ತುದಿಗೆ ಸಾಗಿ, ಮರದ ನೆರಳಿನಲ್ಲಿ ಕುಳಿತ. ಅವನ ಬೀಬಿ ಊಟ ತರುತ್ತಿದ್ದುದು ಆ ತಾಣಕ್ಕೆ. ಒಳ ಹಾದಿಯಾಗಿ ಅಲ್ಲಿಗೆ ಬರುತ್ತಿದ್ದಳು ಆಕೆ.

ಮರದ ಕೆಳಗೆ ಕುಳಿತು ಆದೆಷ್ಟು ಹೊತ್ತಾಯಿತೋ. ಬೀಬಿ ಇಷ್ಟರಲ್ಲೇ ಬರಬೇಕಾಗಿತ್ತು. ಯಾಕೆ ಬರಲಿಲ್ಲ ?

ಇಮಾಮ್ ಸಾಬಿಯ ಗುಂಡಿಗೆ ಡವಡವನೆಂದಿತು.

ಬೇಲಿಯ ಪಟ್ಟಿಗಳೆಡೆಯಿಂದ ಅವನ ಕಣ್ಣುಗಳು, ಪೊದೆ ಪೊದರುಗಳನ್ನು ಬಳಸುತ್ತ ಸಾಗಿದ್ದ ಕಾಲುದಾರಿಯತ್ತ ಹರಿದುವು. ಮಬ್ಬು ಮಬ್ಬಾಗಿ ಕಾಣಿಸುತ್ತಿತ್ತು ಎಲ್ಲವೂ. ಹಸುರು ನೋಡಿ ನೋಡಿ ನೋವಾಗಲು ಆತ ಎವೆ ಮುಚ್ಚಿದ. ಗುಡ್ಡದಾಚೆಗಿಂದ ತಪ್ಪಿಸಿಕೊಂಡು ಬಂದ ಸಣ್ಣನೆಯ ತಂಗಾಳಿಯೊಂದು ಬೀಸಿದಂತೆ, ಸ್ವಲ್ಪ ಹಾಯೆನಿಸಿತು. ಯೋಚನೆಗಳ ಪೆಟ್ಟಿಗೆಯ ಮುಚ್ಚಳ ಮುಚ್ಚಿಕೊಂಡಿತು. ತಲೆ ಎದೆಯ ಮೇಲಕ್ಕೆ ತಾಗಿತು. ತೂಕಡಿಕೆ ಬಂತು.

"ಬಾಬಾ—"

...

"ಬಾಬಾ!"

ಇಮಾಮ್‌ಸಾಬಿ ಹೌಹಾರಿ ಎದ್ದ.

"ಏನಾಯ್ತು? ಏನಾಯ್ತು?"

"ನಾನು, ಬಾಬಾ. ಊಟ ತಂದಿದೀನಿ."

"ಹ್ಞಾ..."

ಬೀಬಿಯ ಬದಲು ಮಗ ಕರೀಮನೇ ಬಂದಿದ್ದ.

ತಂದೆ ಕೇಳಲಿದ್ದ ಪ್ರಶ್ನೆಯನ್ನು ಮೊದಲೇ ಗ್ರಹಿಸುತ್ತ ಅವನೆಂದ:

"ಅವಳು ನೋವು ತಿನ್ತಾ ಇದಾಳೆ."

ವೃದ್ಧನ ಎದೆಗುಂಡಿಗೆ ಮತ್ತೆ ಬಲವಾಗಿ ಬಡಿದುಕೊಂಡಿತು.

"ಎಷ್ಟು ಒತ್ತಾಯ್ತು?"

"ಅತ್ತು ಗಂಟೆಯಿಂದ."

"ಸೂಲಗಿತ್ತಿ?"

"ಬಂದವಳೆ. ಚೊಚ್ಚಲು; ತಡವಾಗ್ಬೌದು-ಅಂದ್ಲು."

ಬುತ್ತಿಯನ್ನು ಬಿಚ್ಚುತ್ತ ಇಮಾಮ್ ಸಾಬಿಯೆಂದ:

"ಹೂಂ. ಹೂಂ."

ಬೀಬಿ ಬುತ್ತಿ ತಂದಾಗ, 'ಕುಡಿಯುವ ನೀರು' ಎಂದು ಬರೆದ ಗಡಿಗೆಯತ್ತ ಇಮಾಮನೇ ಹೋಗಿ ನೀರು ತರುತ್ತಿದ್ದ. ಇಂದು, ಕಾಲುಗಳಲ್ಲಿ ಬಲವೇ ಇಲ್ಲ—ಎನಿಸಿತು. ಅಲ್ಲದೆ—ಬಳಿಯಲ್ಲಿ ಮಗನಿದ್ದ.

"ನೀರು ತಾ."

ನಜ್ಜುಗುಜ್ಜಾಗಿದ್ದ 'ಎಲ್ಮಿನಿ' ತಟ್ಟೆಯಲ್ಲಿ ಕರೀಂ ನೀರು ಹಿಡಿದು ತಂದ.

. . . ಊಟ ಮುಗಿದಾಗ ತಂದೆ ಮಗನಿಗೆ ಅಂದ:

"ನೀನು ಮನೇಲೇ ಇರು."

. . . ಒರಗಿ ಕುಳಿತಲ್ಲೇ, ಸೊಸೆಯನ್ನು ಕುರಿತು ಯೋಚಿಸುತ್ತಿದ್ದಂತೆಯೇ, ಇಮಾಮ್ ಸಾಬಿಗೆ ಜೊಂಪುಹತ್ತಿತು. ಆದರೆ ಹತ್ತಿಪ್ಪತ್ತು ನಿಮಿಷಗಳಲ್ಲಿ ಮಾಸ್ತರರ ಆಳಗಂಟಲ "ಹಲ್ಲೋ — ಹಲ್ಲೋ —" ಅವನನ್ನು ಎಚ್ಚರಿಸಿತು.

ನೆರಳು ಸರಿದು, ಕೊಂಬೆಗಳೆಡೆಯಿಂದ ಬಿಸಿಲು ಅವನ ಅಂಗಾಂಗಗಳ ಮೇಲೆ ಬಿದ್ದಿತ್ತು.

ಗಾಡಿ ತಡವೆಂದು ತಿಳಿಯದೆ ಜನ ಬರತೊಡಗಿದ್ದರು. ಜಟಕಾ ಬಂಡಿಗಳು ಬಂದುವು. ಅರಳೆ ಹಿಂಜುವ ಗಿರಣಿಯೊಡೆಯರ ಕಾರೂ ಬಂತು.

ಆದರೆ ಇಮಾಮ್‌ಸಾಬಿಯನ್ನು ಮೌಢ್ಯ ಆವರಿಸಿಬಿಟ್ಟಿತ್ತು. ಪಾದಗಳು ಚಲಿಸುತ್ತಿರಲಿಲ್ಲ. ಪ್ರಯಾಣಿಕರತ್ತ ಅವನ ಗಮನವಿರಲಿಲ್ಲ.

ಒಮ್ಮೆ ಅಬ್ದುಲ್ಲನೆಂದ:

"ನಿಂತೇ ಬಿಟ್ಟೆಯಲ್ಲ, ದಾದಾ ಮಿಯಾ?"

ಇಮಾಮ್‌ಸಾಬಿ ಉತ್ತರವೀಯಲಿಲ್ಲ. ಮುಗುಳುನಗಲು ಯತ್ನಿಸಿದ, ಯತ್ನಿಸಿ ವಿಫಲನಾದ.

ಮನೆಗೆ ಹೊರಟುಬಿಡಬೇಕೆನಿಸಿತು. ರೈಲಿನ ಅವಘಡದ ರಾತ್ರೆ ಅಲ್ಲಿ ಕೇಳಿದಂತಹ ಆರ್ತನಾದವೇ ಈಗಲೂ? ಹೋಗಿ ತಾನು ಮಾಡುವುದಾದರೂ ಏನು?

ಸಂಜೆಯ ಪ್ಯಾಸೆಂಜರ್ ನೋಡಿಕೊಂಡೇ ಹೊರಡುವೆ-ಎಂದು, ಇಮಾಮ್‌ಸಾಬಿ ಗಟ್ಟಿ ಮನಸ್ಸು ಮಾಡಿದ.

ಮೇಲ್‌ಗಾಡಿ ಬಂದು, ಮುಂದಕ್ಕೆ ಸಾಗಿತು.

ಸದಾ ಚಲಿಸುತ್ತಿರುವ ಜನರು. ಹೆಂಗಸರು, ಗಂಡಸರು, ಮಕ್ಕಳು. ತನ್ನಷ್ಟೇ ವಯಸ್ಸಾದವರು ಕೂಡಾ. ತಾನು ಮಾತ್ರ ಒಮ್ಮೆಯೂ ರೈಲಿನಲ್ಲಿ ಪ್ರಯಾಣ ಮಾಡಿರಲಿಲ್ಲ. ಜೀವಮಾನವನ್ನೆಲ್ಲಾ ರೈಲುಮನೆಯಲ್ಲೇ ಸವೆದಿದ್ದರೂ ಗಾಡಿಯಲ್ಲಿ ಮಾತ್ರ ಒಮ್ಮೆಯೂ ಎಲ್ಲಿಗೂ

ಹೋಗಿರಲಿಲ್ಲ. [ವಿಸ್ಮಯಗೊಳಿಸುವಂತಹ ತಥ್ಯ.] ಆದರೆ ತನ್ನ ಮಕ್ಕಳು—ಮೊದಲಿನ ಮೂವರು—ರೈಲು ಗಾಡಿಯಲ್ಲಿ ಕುಳಿತೇ ದೂರದ ಊರುಗಳಿಗೆ ಹೋಗಿಬಿಟ್ಟಿದ್ದರು, ತನ್ನ ಕಣ್ಣು ತಪ್ಪಿಸಿ. ಈಗ ಇದ್ದಕ್ಕಿದ್ದಂತೆ ಅವರು ಬಂದರೆ—! ಹಿರಿಯವನನ್ನು ಪರಿಚಯದವರೊಬ್ಬರು ಮುಂಬಯಿ ಯಲ್ಲಿ ಕಂಡಿದ್ದರಂತೆ. [ತಂದೆಯಂತೆ ಹಮಾಲನೇ!] ನಾಲ್ವರು ಮಕ್ಕಳಂತೆ. ಕೆಲವು ವರ್ಷಗಳೇ ಆಗಿದ್ದುವು ಆ ಮಾತಿಗೆ. ಇಮಾಮ್ ಸಾಬಿಯ ಆಯುಷ್ಯದಲ್ಲಿ ಅಂಚೆಯ ಮೂಲಕ ಒಂದೇ ಒಂದು ಕಾಗದ ಆತನಿಗೆ ಬಂದಿತ್ತು, ಮೂರನೆಯ ಮಗನಿಂದ. ಅಣ್ಣನೊಡನೆ ಪಾಕಿಸ್ತಾನಕ್ಕೆ ಹೋಗುವುದಾಗಿ ಬರೆದಿದ್ದ. ಅದೊಂದು ಹೊಸ ದೇಶ—ಪಾಕಿಸ್ತಾನ. ಚಾಕು ಕಲ್ಲು ಈಟಿಗಳ ಆ ಕತೆಯನ್ನು ಇಮಾಮ್‌ಸಾಬಿ ಕೇಳಿ ತಿಳಿದಿದ್ದ, ಸ್ವಲ್ಪ ಸ್ವಲ್ಪ . . . ಇನ್ನು ನಾಲ್ಕನೆಯವನು. ಆ ಸರ್ಕಸ್ ತಾನು ಬದು ಕಿರುವಾಗಲೇ ಒಮ್ಮೆ ಮತ್ತೆ ಈ ಊರಿಗೆ ಬಂದರೆ . . . ಇಮಾಮ್ ಸಾಬಿಯ ಮಗ ಡೊಂಬರಾಟಕ್ಕೂ ಇಳಿದ. ಅಹಾ! . . .

ವೃದ್ಧ ನೀಳವಾಗಿ ಉಸಿರುಬಿಟ್ಟು, ಗೊತ್ತು ಗುರಿ ಇಲ್ಲದೆ ಅತ್ತಿತ್ತ ನಡೆದಾಡಿದ. ಸಿಗ್ನಲ್ ಕಂಬದ ಈಚೆಗಿದ್ದ ನೀರಿನ ಟ್ಯಾಂಕಿನ ಬಳಿ ಸಾರಿ, ಅಲ್ಲೇ ಕೆಳಗೆ ದಿನ್ನೆಯ ಮೇಲೆ ಕುಳಿತ. ಸೂರ್ಯನ ತಾಪ ಕಡಮೆ ಯಾಗತೊಡಗಿತ್ತು. ಅಲ್ಲಿಂದ ಅವನಿಗೆ, ನೀಳವಾಗಿ ಮಲಗಿ ಹಸುರು ರಾಶಿ ಯೊಳಗೆಲ್ಲೋ ಮಾಯವಾಗಿದ್ದ ರೈಲು ಕಂಬಿಗಳು ಕಾಣಿಸುತ್ತಿದ್ದುವು.

ಮನೆಯ ನೆನಪು ಮತ್ತೆ ಮತ್ತೆ ಮುದುಕನನ್ನು ಬಾಧಿಸಿತು. "ಅಲ್ಲಾ! ಎಲ್ಲ ಸಸೂತ್ರವಾಗಿ ನಡೆಸ್ಕೊಡು" ಎಂದ ಆತ, ತುಸು ಧ್ವನಿ ತೆಗೆದೇ ಅನನ್ಯ ಭಕ್ತಿಯಿಂದ, ಬಿಕ್ಕುತ್ತ ಪ್ರಾರ್ಥಿಸಿದ.

. . . ಲೋಕಲ್ ಬಂದು ಹೋಯಿತು.

. . . ಇನ್ನು ಉತ್ತರದಿಂದ ಬರುವ ಪ್ಯಾಸೆಂಜರ್.

. . . ಆಕಳು, ಮೇಕೆ, ಕುರಿಗಳು ಹಿಂಡು ಹಿಂಡಾಗಿ ಹಾದುಹೋದುವು. ಗೃಹಾಭಿಮುಖವಾಗಿ.

ಇಮಾಮ್ ಸಾಬಿ, ಸಿಗ್ನಲ್ ಕಂಬಿಯ ರುಂಯ್ ಸಪ್ಪಳ ಕೇಳಿಸಿ ದಂತಾಗಿ, ಎದ್ದ. ಪ್ರಯತ್ನಪೂರ್ವಕವಾಗಿ ಚುರುಕಾಗಿ ನಡೆಯುತ್ತ ನಿಲ್ದಾಣದತ್ತ ಬಂದ.

ಹೊರಗೆ, ಬೆಳಗ್ಗೆ ಕುಳಿತಿದ್ದಲ್ಲೇ ಒರಗುಬೆಂಚಿನ ಮೇಲೆ ಆಸೀನನಾದ.

ಒಂದು ಜಟಕಾ ಅವನ ಹತ್ತಿರದಿಂದಲೇ ಬಂತು. ಅದನ್ನು ಕಂಡೂ ಕಾಣದವನಂತಿದ್ದ ಇಮಾಮ್ ಸಾಬಿ. ಕೆಳಕ್ಕೆ ಇಳಿದವನು ಸಿಗರೇಟು ಸೇದುತಲಿದ್ದ ಯುವಕನೊಬ್ಬ. ತಾನು ಏಳದೆ ಕುಳಿತೇ ಇದ್ದುದನ್ನು ಕಂಡು ಆತ ಅಚ್ಚರಿಗೊಂಡಂತೆ ಇಮಾಮ್‌ಸಾಬಿಗೆ ಭಾಸವಾಯಿತು. ಜಟಕಾದವನು ಕರೆದ:

"ಆವೋ ದಾದಾ ಮಿಯಾ."

ಹ್ಞಾ—ಹೋಗಬೇಕು ತಾನು.

ಒಂದು ಸೂಟ್‌ಕೇಸು; ಒಂದು ಕಿಟ್.

"ಇಂಟರ್, ಸಾಬ್?"

ಯುವಕ ಅಬ್ಬರಿಸಿದ:

"ಸೆಕೆಂಡ್ ಕ್ಲಾಸ್! ಇಂಟರಂತೆ—!"

ಇಮಾಮ್ ಸಾಬಿಯ ಮುಖ ಕೆಂಪೇರಿತು. ಇಂಟರ್ ತರಗತಿ ಇತ್ತೆಲ್ಲಿ ಈಗ? ಆದರೂ, ಮತ್ತೆ ಮತ್ತೆ ಹಳೆಯದಕ್ಕೇ ಅಂಟಿಕೊಳ್ಳುತ್ತಿತ್ತು, ಅವನ ಮನಸ್ಸು.

ಬೇರೆಯೂ ಕೆಲ ಪ್ರಯಾಣಿಕರಿದ್ದರು. ಆದರೆ ಇಮಾಮ್ ಸಾಬಿ ಅತ್ತ ನೋಡಲೂ ಇಲ್ಲ.

ಜುಕುಜುಕು ಧ್ವನಿ . . .

ನಿಲ್ಲುವುದೇ ಇಲ್ಲವೇನೋ ಎನ್ನುವಂತೆ ನೇರವಾಗಿ ಮುಂದಕ್ಕೋಡಿ ನಿಂತು ಬಿಡುವ ಗಾಡಿ.

ಎಲ್ಲಿತ್ತು ಸೆಂಕೆಂಡ್ ಕ್ಲಾಸ್?

"ಎಲ್ಲಯ್ಯಾ ಇದೆ?"

ಇಮಾಮ್‌ಸಾಬಿಗೆ ಏನೂ ಕಾಣಿಸುತ್ತಿರಲಿಲ್ಲ.

ರೇಗುತ್ತ ಯುವಕನೇ ಅತ್ತ ಓಡಿದ, ಇತ್ತ ಓಡಿದ. ವಿನೀತನಾಗಿ ಅವನನ್ನು ಹಿಂಬಾಲಿಸಿದ, ವೃದ್ಧ.

"ಇಲ್ಲೇ ಒಳಗಿಡು!"

ಇನ್ನು ಎರಡಾಣೆಗೆ [ಎಷ್ಟು ನಯೇ ಪೈಸೆಗೋ?] ಕೈ ನೀಡಬೇಕು.

ನಾಣ್ಯ ನಾಲ್ಕಾಣೆಯ ತುಣುಕಿನಂತೆ ಕಂಡಿತು.

ಯುವಕನೆಂದ :

“ ಮುದುಕನಾದೆ ನೀನು. ಹೋಗು ! ”

ಇಮಾಮ್ ಸಾಬಿಗೆ ಇದ್ದಕ್ಕಿದಂತೆ ಅಳು ಬಂತು. ಅದನ್ನಾತ ಕಷ್ಟ ಪಟ್ಟು ಅದುಮಿ ಹಿಡಿದು, ಗಾಡಿ ಚಲಿಸಿದಂತೆ ನಿಲ್ಮನೆಯಿಂದ ಹೊರಕ್ಕೆ ಕಾಲಿರಿಸಿದ.

ಇಳಿದವರನ್ನು ಹೊತ್ತುಕೊಂಡೋ ಬರಿದಾಗಿಯೋ ಜಟಕಾ ಗಾಡಿ ಗಳು ತೆರಳುತ್ತಿದ್ದುವು. ನಡೆದೇಹೋಗುತ್ತಿದ್ದರು ಹಲವರು. ಮತ್ತೊಮ್ಮೆ ಎಲ್ಲವೂ ಶಾಂತವಾಗತೊಡಗಿತ್ತು. ಸೂರ್ಯ ಗುಡ್ಡಗಳಾಚೆ ಅವಿತಿದ್ದ.

ಮಬ್ಬು ಬೆಳಕು ಎಲ್ಲವನ್ನೂ ಆವರಿಸಿತು.

ಇಮಾಮ್ ಸಾಬಿಗೆ ಇದ್ದುದೊಂದೇ ಯೋಚನೆ—ಮನೆಗೆ ತಾನು ಹೋಗಬೇಕು, ನೇರವಾಗಿ. ಮಗುವಿಗೆ ಎಷ್ಟು ಸಂಕಟವಾಗುತ್ತಿದೆಯೋ ಏನೋ, ಪಾಪ !

ಎಷ್ಟು ಬೇಗನೆ ಹೆಜ್ಜೆ ಇರಿಸಿದರೂ ಮಾರ್ಗಕ್ರಮಣ ನಿಧಾನ ವಾಗಿಯೇ ಆಗುತ್ತಲಿತ್ತು. ಹೃದಯವೊಂದು ಭಾರಗೊಂಡು, ಅದರ ಹೊರಗೆ ದೇಹವೇ ಕುಸಿಯುವುದೇನೋ ಎನ್ನಿಸುತ್ತಿತ್ತು.

ಮೂರು ಫರ್ಲಾಂಗುಗಳ ದೂರ ಸಾಗಲು ಅದೆಷ್ಟು ಹೊತ್ತು ಹಿಡಿಯಿತೋ ?

ಅದೇ ಮನೆ [ಗುಡಿಸಲು]. ಯಾರು ಬರುತ್ತಿರುವವರು ? ಕರೀಂ ? ಏನಾಯ್ತು ?

ಓಡುತ್ತ ಬರುತ್ತಿದ್ದ ಹುಡುಗ.

ಅ—

“ ಬಾಬಾ ! ”

ಓ ದೇವರೆ—

“ ಗಂಡು ಮಗು ! ”

“ ಹ್ಹಾ ! ”

ಬವಳಿ ಬಂದಂತಾಯಿತು ಇಮಾಮ್ ಸಾಬಿಗೆ. ಪೂರ್ಣಚಂದ್ರ ನಂತೆ ಮುಖ ಅಗಲಗೊಂಡಿತು. ಕಣ್ಣುಗಳಿಂದ ಆನಂದಾಶ್ರು ಒಸರಿತು.

ಆತ ಕೈಯನ್ನು ಮುಂದಕ್ಕೆ ಚಾಚಿದ.

ಕರೀಂ ಅದನ್ನು ಹಿಡಿದುಕೊಂಡ.

ಏನನ್ನೋ ಹೇಳುತ್ತಲೇ ಇದ್ದ ಮಗ—

ಏನನ್ನೋ. ಹುಚ್ಚು ಸಂತಸದ ತೊದಲು ಮಾತಿನ ಹಾಗಿತ್ತು ಅದು.

ನಾಲ್ಕುಹೆಜ್ಜೆ. ಮನೆ.

" ಅಮ್ಮಾಜಾನ್ ! ಬಾಬಾ ಬಂದ್ರು ! "

ಶೇಖರಿಸಿ ಇಟ್ಟಿದ್ದ ಸಕ್ಕರೆಯಿಂದೊಂದು ಚಿಟಿಕಿ ತೆಗೆದು ಬೀಬಿ ಹೊರಕ್ಕೆ ಓಡಿಬಂದಳು.

ಇಮಾಮ್ ಸಾಬಿ ನಿಲ್ಲಲಾಗದೆ, ಗೋಡೆ ಹಿಡಿದು, ಕುಸಿದು ಕುಳಿತಿದ್ದ, ಬಾಗಿಲ ಚೌಕಟ್ಟಿಗೊರಗಿ.

ಬೀಬಿ ಸಕ್ಕರೆಯನ್ನು ಆತನ ಬಾಯಿಗೆ ಹಾಕಲೆಂದು ಬಾಗಿದಳು.

ಬಾಗಿದವಳೇ ಚೀರಿದಳು.

ಕೆಂಪು ರುಮಾಲು, ನೀಲಿ ಅಂಗಿ, ಕೊಳಕು ಧೋತರ, ಎಲ್ಲವೂ ಇದ್ದುವು. ತೆರೆದ ಜೇಬಿನಲ್ಲಿ ನಾಣ್ಯಗಳಿದ್ದುವು—ದಿನದ ಸಂಪಾದನೆ.

ಇಮಾಮ್ ಸಾಬಿ ಮಾತ್ರ ಇರಲಿಲ್ಲ.

## ಕಥೆ: ನಾಲ್ಕು

# ತಪ್ಪು ಎಣಿಕೆ

ಉಮಾಪತಿ ಉಸಿರು ಬಿಗಿಹಿಡಿದು ಚೀಟಿಯನ್ನೋದಿದರು ; ಕೈಗಡಿಯಾರವನ್ನು ದಿಟ್ಟಿಸಿದರು ; ಯಾಂತ್ರಿಕವಾಗಿ ತಲೆ ಎತ್ತಿ ಗೋಡೆ ಗಡಿಯಾರವನ್ನು ನೋಡಿದರು. ಇದರಲ್ಲಿ ಇಪ್ಪತ್ತು ನಿಮಿಷ. ಅದರಲ್ಲಿ ಇಪ್ಪತ್ತೆರಡು. ಚೀಟಿಯನ್ನು ಹಿಡಿದಿದ್ದ ಎಡಗೈಯ ಹೆಬ್ಬೆರಳು ತೋರುಬೆರಳುಗಳು ತುಸು ಮಿಸುಕಿದುವು. ಬೇಗನೆ ಹೊರಟುಬಿಡಲೇ?–ಮನಸ್ಸು ಹೊಯ್ದಾಡಿತು. ಎಷ್ಟೆಂದರೂ ಇನ್ನಿರುವುದು ಇಪ್ಪತ್ತೇ ನಿಮಿಷ; ಅಲ್ಲ ಇಪ್ಪತ್ತೆರಡು ನಿಮಿಷ. ಅವರೆದೆ ಡವಡವನೆಂದಿತು. ನೀಳವಾಗಿ ಉಸಿರೆಳೆದು ಬಿಟ್ಟು, ನೆಮ್ಮದಿಯನ್ನು ಮರಳಿಪಡೆಯಲು ಅವರು ಯತ್ನಿಸಿದರು.

ಆ ಚೂರು ಕಾಗದದ ಒಕ್ಕಣೆ :

"ಡಿಯರೆಸ್ಟ್,

ನನ್ನ ಬೆಂಡೋಲೆ ಕಳವಾಗಿದೆ. ಅಡುಗೆಯವನು, ಮುಸುರೆಯವಳು, ಮಾಲಿ—ಎಲ್ಲರನ್ನೂ ಕೇಳಿದ್ದಾಯಿತು. ಯಾರೂ ಕಂಡಿಲ್ಲವಂತೆ. ನನಗೆ ಯಾಕೋ ಭಯ. ತಕ್ಷಣ ಬನ್ನಿ. —ವೀ"

ಅಸಿಸ್ಟೆಂಟ್ ಕಮಿಷನರ ಮನೆಯಲ್ಲಿ ಕಳವು. ಆ ಊರಿಗೆ ಬಂದಿನ್ನೂ ತಿಂಗಳಿಲ್ಲ, ಅಷ್ಟರಲ್ಲೇ ಅಂತಹ ಅನುಭವ.

"ತಕ್ಷಣ ಬನ್ನಿ . . . "

ಇನ್ನು ಹದಿನೆಂಟು ನಿಮಿಷ.

ಮತ್ತೊಮ್ಮೆ ನೀಳವಾಗಿ ಉಸಿರುಬಿಟ್ಟು ಉಮಾಪತಿ, ಆ ಚೀಟಿಯನ್ನು ನಾಜೂಕಾಗಿ ಒಮ್ಮೆ—ಎರಡು ಸಾರೆ—ಮಡಚಿ, ತಮ್ಮ ಕೋಟಿನ ಒಳಕಿಸೆಯೊಳಕ್ಕೆ ಇಳಿಬಿಟ್ಟರು.

ಪತ್ನಿಯ ಕರೆ ಬಂದುದಕ್ಕೆ ಮುನ್ನ, ಕಚೇರಿಯ ಮುಖ್ಯಸ್ಥ ಸಿದ್ಧಪಡಿಸಿದ ಸುದೀರ್ಘ 'ನೋಟ್' ಒಂದನ್ನು ಅಭ್ಯಸಿಸುತ್ತ ಉಮಾಪತಿ

ಕುಳಿತಿದ್ದರು. ಅದು ಕಚೇರಿಯ ಹಂಗಾಮಿ ಜವಾನ ನಾಗಪ್ಪನಿಗೆ ಸಂಬಂಧಿಸಿದ್ದು.

ನಾಗಪ್ಪ, ಹಿಂದಿನ ಸಾಹೇಬರು ನೇಮಿಸಿಕೊಂಡಿದ್ದ ಮನುಷ್ಯ. ತನ್ನ ಸೇವೆಯ ಮೂರೇ ವರ್ಷಗಳಲ್ಲಿ ಆ ಕಚೇರಿಯ ಬಲಾಢ್ಯ ವ್ಯಕ್ತಿಯಾಗಿದ್ದ. ಹೆಬ್ಬೆಟ್ಟು ಗುರುತಿನ ಈ ಧೀರ, ಕಚೇರಿಯ ಸಿಬ್ಬಂದಿಯನ್ನೆಲ್ಲ ಹದ್ದುಬಸ್ತಿನಲ್ಲಿಡಲು ಸಮರ್ಥನಾದ ಬಗೆ ಅದ್ಭುತವಾಗಿತ್ತು.

ಸಾಲುಸಾಲಿಗೂ ಪುನರುಕ್ತಿಯ ಅನುಪಲ್ಲವಿಯಿದ್ದ ಆ ನೋಟ್‌ನಲ್ಲಿ ಒಟ್ಟಿನಲ್ಲಿ ಇದ್ದುದಿಷ್ಟು:

ಜವಾನ ನಾಗಪ್ಪ ಯಾರ ಅಂಕೆಗೂ ಒಳಪಡುವುದಿಲ್ಲ. ಅವನು ಉದ್ಧಟ. ಸೇವೆಯ ನಿಯಮಗಳನ್ನು ಪಾಲಿಸುವುದಿಲ್ಲ; ಕಚೇರಿಗೆ ಬಂದವರಿಂದ ದುಡ್ಡು ಕಿತ್ತುಕೊಳುತ್ತಾನೆ; ಬೆನ್ನ ಹಿಂದಿನಿಂದ ಅಧಿಕಾರಿಗಳನ್ನು ಹೀನಾಯವಾಗಿ ಜರೆಯುತ್ತಾನೆ; ಕುಡುಕ ಬೇರೆ.

ಕಚೇರಿಯ ಮುಖ್ಯಸ್ಥ ನೋಟ್ ಬರೆಯುವುದಕ್ಕೆ ಮುನ್ನ ಸಾಹೇಬರೊಡನೆ ಚರ್ಚಿಸಿದ್ದ.

ಉಮಾಪತಿ ಕೇಳಿದ್ದರು :

"ಹಿಂದಿದ್ದವರ ವಿಶ್ವಾಸಕ್ಕೆ ಇವನು ಪಾತ್ರನಾಗಿದ್ದ-ಎನ್ನುತ್ತೀರಲ್ಲಾ?"

ಮುಖ್ಯಸ್ಥ ಪ್ರಯಾಸಪಡುತ್ತ ಅಂದಿದ್ದ :

"ಆ ವಿಷಯ ನಾನು ಹೆಚ್ಚು ಹೇಳಬಾರದು . . . "

"ಕುಡುಕ ಅಂತೀರಿ. ಇಲ್ಲಿ ಪ್ರೊಹಿಬಿಷನ್ ಇದೆಯಲ್ಲಾ ?"

"ಇದೆ. ಆದರೆ ಕಳ್ಳಭಟ್ಟಿಯವರೆಲ್ಲ ಇವನಿಗೆ ಸ್ನೇಹಿತರು."

ಉಮಾಪತಿಗೆ ನಗುಬಂದಿತ್ತು.

ತನ್ನ ಮಾತನ್ನು ನಂಬದೆ ಸಾಹೇಬರು ನಕ್ಕರೇನೋ ಎಂದು ಕಚೇರಿಯ ಮುಖ್ಯಸ್ಥನಿಗೆ ಗಾಬರಿಯಾಯಿತು.

ಅವನೆಂದ :

"ತಮ್ಮ ವಿಷಯದಲ್ಲೇ ಅವನು ಆಡ್ತಿರೋದನ್ನ ಕೇಳಿದರೆ . . . "

"ಏನಂತೆ ?"

"ಮಿಾಸೆ ಬರದವರೆಲ್ಲ ಈಗ ಆಫೀಸರಾಗ್ತಾರಂತೆ. ಐ. ಎ. ಎಸ್.

ಮಾಡ್ಕೊಂಡಾಕ್ಷಣಕ್ಕೆ ಸಾಹೇಬ್‌ಗಿರೀನೋ? ಠುಸ್—ಪುಸ್ ಅಂತ ಇಂಗ್ಲಿಷ್ ಮಾತಾಡಿದರೆ ಕೆಲಸ ನಡಿಯುತ್ತೊ?—ಅಂತಾನೆ . . . "

ತಮ್ಮ ಭಾವನೆಗಳಿಗೆಲ್ಲ ನಸುನಗೆಯ ಅವಕುಂಠನವೆಳೆದು ಉಮಾಪತಿ ಅಂದಿದ್ದರು.

" ಒಂದು ನೋಟ್ ತಯಾರ್ಮಾಡಿ."

ಒಂದು ದಿವಸದ ಅವಧಿಯ ಬಳಿಕ ಆ ನೋಟ್ ಬಂದಿತ್ತು.

ಉಮಾಪತಿ ಆಸನದ ಒರಗುದಿಂಬಿಗೊರಗಿ, ಕುರ್ಚಿಯ ಕೈಗಳ ಮೇಲೆ ತಮ್ಮ ಮೊಣಕೈಗಳನ್ನೂರಿ, ಅಂಗೈಗಳನ್ನೂ ಜೋಡಿಸಿ, ಗೋಡೆ ಗಡಿಯಾರದ ಟಿಕ್—ಟಾಕ್ ಸದ್ದಿಗೆ ತಾಳ ಹಾಕುತ್ತ ಮಡಚಿದ ಬೆರಳು ಗಳಿಂದ ತಮ್ಮ ಮೂಗನ್ನು ಮುಟ್ಟುತ್ತಾ ಹೋದರು.

ಇನ್ನು ಹದಿನೈದು ನಿಮಿಷ.

ನಾಳೆಯಿಂದ ಅವರ ಮೊದಲ ಜಮಾಬಂದಿ ಪ್ರವಾಹ. ನಸುಕಿನಲ್ಲೇ ಹೊರಡಬೇಕು. ಹಿಂತಿರುಗುವುದು ಐದು ದಿನಗಳ ಬಳಿಕ.

ಆದರೆ, ಪ್ರವಾಸ ಹೊರಡುವುದಕ್ಕೆ ಮುನ್ನ ಮನೆಯಲ್ಲಿ (ಬಂಗಲೆ ಯಲ್ಲಿ) ಈ ಚೌರ್ಯದ ಪ್ರಕರಣ . . .

ವೀಣಾ ಇವತ್ತು ತಲೆಗೆ ಎರೆದುಕೊಂಡಿರಬೇಕು; ಸ್ನಾನದ ಮನೆ ಯಲ್ಲೇ ಬೆಂಡೋಲೆಗಳನ್ನು ಬಿಟ್ಟಿರಬೇಕು . . .

ಅಡುಗೆಯವನು—ಮುಸುರೆಯವಳು . . . ಆ್ಞ!—ಆಕೆ ನಾಗಪ್ಪನ ಸಂಬಂಧಿಕಳು! ' ಅವನ ತಂಗಿ ' ' ವಿಧವೆ '—ಎಂದಿದ್ದಳಲ್ಲ ವೀಣಾ?

ಅವರ ದೃಷ್ಟಿ, ತಮ್ಮೆದುರು ಮೇಜಿನ ಮೇಲಿದ್ದ ನೋಟ್‌ನತ್ತ ಹರಿಯಿತು.

ಕಚೇರಿಯ ಮುಖ್ಯಸ್ಥ ಒಳಗೆ ಬಂದು ನಿಂತ.

ನಿವೃತ್ತಿಯ ಗೆರೆಯತ್ತ ಕುಂಟುತ್ತ ಸಾಗಿದ್ದ ಆ ವ್ಯಕ್ತಿಯನ್ನು ಉಮಾಪತಿ ದಿಟ್ಟಿಸಿದರು:

(ನಾಗಪ್ಪ ಕೆಟ್ಟವನು. ಆದರೆ ಈತ ಸತ್ಯವಾನನೆ? ಗರ್ಭಗುಡಿಗೇ ಪ್ರವೇಶವಿದ್ದ ಪೂಜಾರಿ ನಾಗಪ್ಪನಿಂದ ಈ ಮರಿದೇವರಿಗೆಲ್ಲ ಸ್ವಲ್ಪ ಅನ್ಯಾಯ ವಾಗಿರಬೇಕು . . .)

ಕುರುಚಲು ನರೆಗಡ್ಡವನ್ನು ಹಿಂಗೈಯಿಂದ ಒರೆಸಿ ಆತನೆಂದ:

"ಪ್ರವಾಸದ ಸಿಬ್ಬಂದಿಯನ್ನೆಲ್ಲಾ ಗೊತ್ತುಪಡಿಸಿದೇನೆ. ಫೈಲು ಗಳನ್ನೆಲ್ಲಾ ಸಾರ್ಟ್ ಮಾಡಿದೇನೆ."

ಉಮಾಪತಿ, ಮೇಜಿನ ಮೇಲೆ ತಾವು ತೆಗೆದಿರಿಸಿದ್ದ ಕೆಲ ಫೈಲುಗಳ ಕಡೆಗೆ ಬೊಟ್ಟುಮಾಡಿ ಅಂದರು :

"ಇವಿಷ್ಟು ಬಂಗ್ಲೆಗೆ. ಈ ನೋಟ್ ಮೇಲ್ಗಡೇನೇ ಇರ್ಲಿ."

"ನೋಟ್ ಸರಿಯಾಗಿದೆಯಾ ಸರ್ ?"

"ಟೂರಿಂದ ಬಂದ್ಮೇಲೆ ಆರ್ಡರ್ ಪಾಸ್ಮಾಡ್ತೀನಿ."

"ಆಗಲಿ, ಸರ್."

ಮುಖ್ಯಸ್ಥ ಅಣಿಗೊಳಿಸಿದ ಫೈಲುಗಳ ಕಂತೆಯನ್ನು ಒಯ್ಯಲು ನಾಗಪ್ಪ ಬಂದ. ಯೌವನದ ಸೀಮೆಯನ್ನು ಉಲ್ಲಂಘಿಸಿದ್ದ ಅವನ ಕಣ್ಣು ಗಳು ನಿರ್ವಿಕಾರವಾಗಿ ಕಚೇರಿಯ ಮುಖ್ಯಸ್ಥನನ್ನೂ ಸಾಹೇಬರನ್ನೂ ನೋಡಿದುವು. ಕಟ್ಟಿನ ಮೇಲುಭಾಗದಲ್ಲೇ ಇದ್ದ ಒಂಟೆ ಹಾಳೆಯನ್ನು ದಿಟ್ಟಿಸಿದುವು.

ಅವನ ದೃಷ್ಟಿಯ ಚಲನವಲನಗಳನ್ನು ಉಮಾಪತಿ ಗಮನಿಸಿದರು. ಆದೇನನ್ನೋ ಹುಡುಕುತ್ತಿದ್ದ ಆ ಅನಕ್ಷರಸ್ಥ ಮನುಷ್ಯ ಆ ಕಾಗದದ ಗುರುತು ಹಿಡಿದಂತಿತ್ತು! ಕ್ಷಣಕಾಲ ಬೂದಿ ಸರಿದು ಆತನ ಕಣ್ಣ ಕೆಂಡ ಗಳು ಮಿನುಗಿದುವು.

ಉಮಾಪತಿ ಕೈಗಡಿಯಾರವನ್ನು ನೋಡಿದರು. ಅಲ್ಲಿಂದ ದೃಷ್ಟಿ ಯನ್ನು ಕಿತ್ತು, ಗೋಡೆ ಗಡಿಯಾರದ ಮೇಲೆ ನೆಟ್ಟರು.

"ಸರ್ವೀಸಿಂಗಿಗೆ ಹೋದ ಜೀಪ್ ಬಂತೇನು ?"

"ಆಗಲೆ ಬಂತು ಸರ್."

"ಸರಿ, ಎಲ್ಲಾ ರೆಡಿಮಾಡಿ. ಸಿಬ್ಬಂದಿ ನಾಳೆ ಬೆಳಗ್ಗೆ ಐದು ಘಂಟೆಗೆ ಬಂಗ್ಲೆಗೆ ಬರ್ಲಿ."

"ಹೂಂ, ಸರ್."

"ನಾಗಪ್ಪ, ನೀನು ನನ್ನ ಜೊತೆಗೆ ಈಗ ಬಾ."

ಹತ್ತಿಕ್ಕಿದ್ದ ಮಾತುಗಳ ಒತ್ತಡಕ್ಕೊಳಗಾಗಿದ್ದ ನಾಗಪ್ಪನ ಗಂಟಲಿ ನಿಂದ ಗೊಗ್ಗರ ಧ್ವನಿ ಹೊರಟಿತು.

"ಆಗ್ಲಿ ಬುದ್ಧಿ."

ಅವನ ತಲೆ ಮಾತ್ರ ಚಿಟ್‌ಚಿಟೆಂದಿತು. ಬಾ ಎಂದು ಹೇಳುವ ಅಗತ್ಯವೇನಿತ್ತು? ಸಾಹೇಬರನ್ನು ಸಂಜೆ ಯಾವಾಗಲೂ ಬಂಗಲೆಗೆ ಹಿಂಬಾಲಿಸುವುದು ಮೂರು ವರ್ಷಗಳಿಂದ ನಡೆದು ಬಂದಿರಲಿಲ್ಲವೆ! ಅದೇನು ಹೊಸ ವ್ಯವಸ್ಥೆಯೆ ನೆನಪು ಮಾಡಿಕೊಡಲು?

ಆತನ ಸೂಕ್ಷ್ಮಬುದ್ಧಿ ಇಂತಹದೇ ಕಾರಣವಿರಬೇಕೆಂದು ಊಹಿಸುತ್ತ, ಕಚೇರಿಯ ಮುಖ್ಯಸ್ಥನ ಮುಖವನ್ನೊಮ್ಮೆ, ತಾನು ಹೊರಬೀಳುತ್ತಲಿದ್ದಂತೆ ಇರಿಯುವ ನೋಟದಿಂದ ಆತ ನೋಡಿದ.

ಮುಖಭಾವದಿಂದ ತೋರ್ಪಡಿಸಲಿಲ್ಲವಾದರೂ ಮನಸ್ಸಿನೊಳಗೆ ಆ ಮುಖ್ಯಸ್ಥ ಅಂದುಕೊಂಡ:

"ನೋಟ್‌ಗೆ ಸಂಬಂಧಿಸಿ ಸಾಹೇಬರು ಇವತ್ತು ವಿಚಾರಣೆ ನಡಸ್ತಾರೆ."

ಗೋಡೆ ಗಡಿಯಾರಕ್ಕೂ ತಮ್ಮದಕ್ಕೂ ಸಾಮ್ಯವಿಲ್ಲದುದನ್ನು ಉಮಾಪತಿ ತಾವು ಅಲ್ಲಿಗೆ ಬಂದ ದಿನದಿಂದಲೂ ಅರಿತಿದ್ದರು. ದಿನವೂ ಎರಡು ನಿಮಿಷ ತಡವಾಗಿಯೇ, ಕಚೇರಿಯ ಸಮಯಸೂಚಿಗನುಸಾರವಾಗಿಯೇ, ಅವರು ಸಂಜೆ ಹೊರಡುತ್ತಿದ್ದರು. ಆದರೆ ಈ ದಿನ ಆ ವ್ಯತ್ಯಾಸ ಅವರಿಗೆ ಅಸಹನೀಯವಾಗಿ ಕಂಡಿತು.

ಕ್ಷಣಕ್ಷಣಕ್ಕೂ ವಿನಾ ಕಾರಣ ಹೆಚ್ಚು ಹೆಚ್ಚಾಗಿ ಕೆಂಪಡರತೊಡಗಿದ್ದ ಸಾಹೇಬರ ಮುಖವನ್ನು ನೋಡಿ, ಕಚೇರಿಯ ಮುಖ್ಯಸ್ಥ ಕಕ್ಕಾಬಿಕ್ಕಿಯಾಗಿ ಅವರ ಸನ್ನಿಧಿಯಿಂದ ಹೊರಟುಬಿಟ್ಟ.

ಆತನನ್ನು ಕೂಗಿ ಕರೆದು ತಮ್ಮ ವಸತಿಯಲ್ಲಾಗಿರುವ ಕಳವಿನ ವಿಷಯ ಹೇಳಬೇಕೆಂದು ಉಮಾಪತಿಯವರಿಗೆ ಅನಿಸಿತು. ಆದರೆ ಮರುಕ್ಷಣವೆ ಮೌನವೇ ಒಳಿತು ಎಂದು ತೋರಿತು.

ಅವರು ಎದ್ದು ಕಿಟಕಿಯ ಬಳಿ ನಿಂತು, ವಿಸ್ತಾರವಾಗಿ ದೂರದವರೆಗೂ ಮೈಚಾಚಿದ್ದ ಬಯಲನ್ನು ನೋಡಿದರು. ಅಲ್ಲಿ ಇಲ್ಲಿ ಕೆಲ ಹಸುಗಳು ಸ್ವೇಚ್ಛೆಯಾಗಿ ಮೇಯುತ್ತಿದ್ದುವು. ಸಂಜೆ ಐದರ ಬಳಿಕ ಸಮೀಪದ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಅದು ಆಟದ ಬಯಲು. 'ಘಂಟೆ ಹೊಡೆಯೋದನ್ನೇ ಹುಡುಗರು ಕಾಯುತ್ತಿರಬೇಕು.'

ಅವರ ಕೈಗಡಿಯಾರದಲ್ಲಿ ಐದಾಯಿತು. ಉಮಾಪತಿ ಲಗುಬಗೆ ಯಿಂದ ಹೊರಗೆ ನಿಂತಿದ್ದ ಜೀಪಿನೆಡೆಗೆ ನಡೆದರು.

ವಂದಿಸಲೆಂದು ತಮ್ಮನ್ನು ಹಿಂಬಾಲಿಸಿ ಬಂದ ಕಛೇರಿಯ ಮುಖ್ಯಸ್ಥ ನಿಗೆ ಅವರೆಂದರು :

" ಆಫೀಸ್ ಗಡಿಯಾರ ಹಿಂದಿದೆ, ಸರಿಪಡಿಸಿ. "

* * * *

ಚಲಿಸುತ್ತಿದ್ದ ಜೀಪಿನ ಹಿಂಭಾಗದಲ್ಲಿ ನಾಗಪ್ಪ ಕುಳಿತಿದ್ದ. ಕೊಳೆ ಯಾಗಿದ್ದ ಖಾದೀ ಸಮವಸ್ತ್ರದ ಬಿಗಿ ಗುಂಡಿಯ ಕೋಟಿನ ಮೇಲಿಂದ ಅವನ ಗಂಟಿಕ್ಕಿದ ಮುಖ ಕಾಣಿಸುತ್ತಿತ್ತು. ಏರುತಗ್ಗುಗಳಲ್ಲಿ ಜೀಪ್ ಕುಪ್ಪಳಿಸಿ ದಾಗಲೆಲ್ಲಾ, ಅವನ ತುಟಿಗಳು ಬೇರ್ಪಟ್ಟು, ಪರಸ್ಪರ ಬಿಗಿದ ಓರೆಕೋರೆ ಹಲ್ಲುಗಳು ಕಂಡುಬರುತ್ತಿದ್ದುವು.

ಸಿಡುಕು ಮುಖವಾಡದ ಹಿಂದೆ ಅವನ ಮನಸ್ಸು ಮಾತ್ರ ಹಲವು ಹದಿ ನೆಂಟು ಸಿಕ್ಕುಗಳನ್ನು ಬಿಡಿಸಿ ವಿಚಾರ ಸರಣಿಯನ್ನು ನೇರಗೊಳಿಸಲು ಪ್ರಯತ್ನಿಸುತ್ತಿತ್ತು.

ಇದ್ದಕ್ಕಿದ್ದಹಾಗೆ ಇದೊಳ್ಳೇ ಫಜೀತಿಗಿಟ್ಟುಕೊಂಡಿತಲ್ಲ ! ಸಾಹೇಬರು ಬದಲಾದ ಮಾತ್ರಕ್ಕೆ ತನ್ನ ಸ್ಥಾನಮಾನಗಳಲ್ಲಿ ಏರುಪೇರಾಗಬೇಕೆ ? ಅವರಿದ್ದಾಗ ಆಫೀಸಿನಲ್ಲೂ ಬಂಗ್ಲೆಯಲ್ಲೂ ತನ್ನದೇ ಆಡಳಿತ ನಡೆದಿತ್ತು. ಅಮ್ಮಾವ್ರು ಮತ್ತು ಸಾಹೇಬರು ಆ ಕಡೆಗೊಂದು ಮುಖ ಈ ಕಡೆಗೊಂದು, ಮುಖ ಆಗಿದ್ದರೂ ಅದೆಷ್ಟು ಪಂಸದಾಗಿ ಅವರಿಬ್ಬರನ್ನೂ ಇಟ್ಟಿದ್ದೆ. ಈಗ ಅವರಿಗೆ ವರ್ಗವಾಗಿ ಈ ಚೋಟುದ್ದ ಸಾಹೇಬ ಬಂದ್ಮೇಲೆ . . .

ಜೀಪ್ ವೇಗವಾಗಿ ಹೋಗಬಾರದೆ ಎನಿಸುತ್ತಿತ್ತು, ಚಾಲಕನ ಬಲ ಮಗ್ಗುಲಲ್ಲಿ ಕುಳಿತಿದ್ದ ಉಮಾಪತಿಯವರಿಗೆ. ಆದರೆ ತಮ್ಮ ಅಪೇಕ್ಷೆಯ ಸುಳಿವನ್ನು ಮಾತ್ರ ಚಾಲಕನಿಗೆ ಅವರು ಹತ್ತಗೊಡಲಿಲ್ಲ. ಆಕ್ಸಿಲರೇಟರನ್ನು ಡ್ರೈವರ್ ಒಂದಿಷ್ಟು ಒತ್ತಿದನೆಂದರೆ ಜೀಪಿಗೆ ಆವೇಶ ಬರುವುದೆಂಬುದನ್ನು ಅವರು ಬಲ್ಲರು.

ಕಳೆದುಹೋದ ಬೆಂಡೋಲೆ ದೊರೆತರೆ ಸರಿ. ಇಲ್ಲದೆ ಇದ್ದರೆ ? ಬೆಳಗಾಗುತ್ತಲೇ ತಾವು ಪ್ರವಾಸ ಹೊರಡಬೇಕು ಬೇರೆ . . .

ತಮ್ಮ ತಾಯಿಯಾಗಲೀ ಅಥವಾ ಅತ್ತೆಯೇ ಆಗಲೀ ಸ್ವಲ್ಪ ಕಾಲದ ಮಟ್ಟಿಗೆ ಬಂದಿದ್ದರೆ ಎಷ್ಟು ಒಳಿತಾಗುತ್ತಿತ್ತು! ಆದರೆ ವೀಣಾಗೆ ಇಷ್ಟವಿರಲಿಲ್ಲ. ಮದುವೆಯಾದ ಹೊಸತಿನಲ್ಲಿ ಇಬ್ಬರೇ ಇದ್ದರೆ ಚೆನ್ನ—ಎಂಬುದು ಅವಳ ಅಭಿಪ್ರಾಯವಾಗಿತ್ತು. ಅಭಿಪ್ರಾಯವಲ್ಲ, ಬಯಕೆ. ಇದೂ ಒಂದು ರೀತಿಯಲ್ಲಿ ಮೇಲು—ಎಂದು ಅಂದುಕೊಂಡಿದ್ದರು. ಆದರೆ ವಸ್ತುಸ್ಥಿತಿ . . .

ನಾಗಪ್ಪ ತನ್ನ ಕಾಲಬುಡದಲ್ಲಿದ್ದ ಕಪ್ಪು ಪೆಟ್ಟಿಗೆಗಳನ್ನು ನೋಡಿದ. ಕಚೇರಿಯ ಕಾಗದ ಪತ್ರಗಳು. ಎದುರು ಸೀಟಿನಲ್ಲಿದ್ದ ಫೈಲುಗಳ ಕಟ್ಟನ್ನು ನೋಡಿದ. ಎಲ್ಲಕ್ಕೂ ಮೇಲೆ ಇರಿಸಿದ್ದ ಆ ನೋಟ್.

ಅದೇನೋ ಕರಾಮತ್ತು ನಡೆದಿದೆ ಎಂದು ಅವನು ಬಲ್ಲ. ಆದರೆ ಈ ಜನ ತನಗೇನು ಮಾಡಬಲ್ಲರು? ತಾನಿಲ್ಲದೆ ಹೇಗೆ ನಡೆದೀತುಕಚೇರಿ?

ಎದುರಿಗಿರುವ ಫೈಲನ್ನು ತಾನು ಎತ್ತಿ ಹೊರಕ್ಕೆಸೆದುಬಿಟ್ಟೆ ಅಂದರೆ?

ಜೀಪು ಬಂಗಲೆಯ ಆವರಣವನ್ನು ಹೊಕ್ಕಿತು. ಇಳಿದು ಮುಂದಕ್ಕೆ ನಡೆದ ಸಾಹೇಬರನ್ನು ಫೈಲುಗಳ ಕಟ್ಟಿನೊಡನೆ ನಾಗಪ್ಪ ಹಿಂಬಾಲಿಸಿದ.

ಪ್ರತಿಯೊಂದೂ ಶಾಂತವಾಗಿತ್ತು. [ಗದ್ದಲವಾಗಲು ಎಳೆಯ ಮಕ್ಕಳಿದ್ದುವೆ ಆ ಮನೆಯಲ್ಲಿ?]

"ನಾಗಪ್ಪ—"ನಡೆಯುತ್ತಲಿದ್ದಂತೆ ತಿರುಗಿ ನೋಡದೆಯೇ ಸಾಹೇಬರೆಂದರು.

"ಬುದ್ಧಿ . . ."

"ಅಮ್ಮಾವ್ರ ಬೆಂಡೋಲೆ ಕಳೆದುಹೋಗಿದೆಯಂತಲ್ಲಪ್ಪ."

"ಹೌದ್ರಾ ಬುದ್ಧಿ? ಅದೆಂಗಾಯ್ತು?"

"ಅದ್ನೇ ಒಂದಿಷ್ಟು ವಿಚಾರಿಸ್ಬೇಕು ಈಗ."

"ಇಚಾರ್‍ಸ್ತಾನ ಬುದ್ಧಿ."

ಆತ ಅರಸು. ಈತ ಮಹಾಪ್ರಧಾನಿ. ಇವನಲ್ಲವೆ ವಿಚಾರಿಸಬೇಕಾದವನು?

ಅನಂತ ಸಾಧ್ಯತೆಗಳಿದ್ದ ಅಪೂರ್ವ ಅವಕಾಶ.

ಆದರೂ ನಾಗಪ್ಪನಿಗೆ ಸ್ವಲ್ಪ ಕಸಿವಿಸಿ ಎನಿಸಿತು, ತನ್ನ 'ಸಂಬಂಧಿಕ'ಳಾದ ಮುಸುರೆಯ ಮಲ್ಲಿಯನ್ನು ನೆನೆದು.

ಸಾಹೇಬರು ನೇರವಾಗಿ, ವಿಶಾಲ ಬಂಗಲೆಯ ಒಳಭಾಗಕ್ಕೆ ನಡೆದರು. ಅವರು ಊಹಿಸಿದ್ದಂತೆಯೇ, ಬೈಠಕುಖಾನೆಯಿಲ್ಲಿ ದಿಕ್ಕುಗೆಟ್ಟವರಂತೆ ಕುಳಿತಿದ್ದರು ಅವರ ಪತ್ನಿ.

ನಾಗಪ್ಪ, ಮಲ್ಲಿಯನ್ನು ಹುಡುಕುತ್ತ ಹಿತ್ತಲ ಬಾಗಿಲಿನೆಡೆಗೆ ಸಾಗಿದ, ಬಂಗಲೆಯನ್ನು ಬಳಸಿ.

ಘಟನೆಯ ವಿವರಗಳನ್ನೆಲ್ಲ ತಿಳಿದ ಉಮಾಪತಿ, ಪತ್ನಿಯೊಡನೆ ಹೊರ ಹಜಾರಕ್ಕೆ ಬಂದರು. ಮೂವರು ಸೇವಕರನ್ನೂ ಕರೆದರು.

"ಸಿಕ್ದವರು ಕೊಟ್ಬಿಡಿ. ನಿಮಗೇನೂ ಶಿಕ್ಷೆ ವಿಧಿಸೋದಿಲ್ಲ. ಇಲ್ದೇ ಹೋದರೆ ಮಾತ್ರ ನಾನು ತೀವ್ರ ಕ್ರಮ ತಗೋಬೇಕಾಗುತ್ತೆ."

ತುಸು ಕಂಪಿಸಿದಂತೆ ಕಂಡ ಆ ಅಧಿಕಾರ ವಾಣಿಯನ್ನು ಕೇಳಿದಾಗ ನಾಗಪ್ಪನಿಗೆ ನಗೆ ಬಂತು. ಆದರೂ ಆತ ತುಟಿಗಳನ್ನು ಬಿಗಿ ಹಿಡಿದು ನಿಂತ.

ದೇವರ ಸಾಕ್ಷಿಯಾಗಿ ಆ ಮೂವರೂ ನುಡಿದರು, ತಮಗೆ ಏನೂ ತಿಳೀದು ಅಂತ. ವಿಚಾರಣೆ ಇಷ್ಟು ಸುಲಭವಾಗಿ ಮುಗಿದು ಹೋಯಿತಲ್ಲ ಎಂದು ಸಾಹೇಬರು ಅಧೀರರಾಗುವುದಕ್ಕೆ ಮುನ್ನವೇ ನಾಗಪ್ಪನೆಂದ:

"ಒಸಿ ನಾ ಇಚಾರಿಸ್ತೀನಿ ಬುದ್ದಿ. ಲೋ ಸಿದ್ದ, ಬಾ ಇಲ್ಲಿ."

ಸಿದ್ದ ಮಾಲಿ. ಹುಡುಗ. ಹತ್ತಿರ ಬಂದ ಅವನ ಕತ್ತು ಬಗ್ಗಿಸಿ ನಾಗಪ್ಪ ಎರಡು ಗುದ್ದು ಹಾಕಿದ. ಪ್ರತಿಭಟಿಸಬೇಕೆನಿಸಿತು ಉಮಾಪತಿಯವರಿಗೆ. ಆದರೂ ಅವರು ಅಸಹಾಯರಾಗಿ ಸುಮ್ಮನಿದ್ದರು.

ಸಿದ್ದ ಬೊಬ್ಬಿಟ್ಟ, ಅಷ್ಟೆ.

ನಾಗಪ್ಪ ಅಡುಗೆಯವನ ಕಡೆ ತಿರುಗಿ ಗದರಿದ:

"ನಂಜಪ್ಪನವರೇ, ಸತ್ಯ ಏಳ್ಬಿಡಿ! ಈ ನಾಗಪ್ಪನ ಕೈಲಿ ಸಿಕ್ಹಾಕೊಂಡೀರಾ!"

ನಂಜಪ್ಪನೆಂದ:

"ಹೆಂಡ್ತಿ ಸತ್ತು ಇಪ್ಪತ್ತು ವರ್ಷ ಆಗೋಯ್ತು. ಯಾರಿಗಪ್ಪ ಕೊಡ್ಲಿ ಬೆಂಡೋಲೇನಾ?"

ನಾಗಪ್ಪ ಅಬ್ಬರಿಸಿದ:

"ಮಲ್ಲೀ! ಸುಳ್ಳೇಳ್ದೆ ಅಂದ್ರೆ ಚಕ್ಕ ಸುಲ್ದೇನು! ಎಲ್ಲೈತೆ ಬೆಂಡೋಲೆ?"

ಮಲ್ಲಿ ಅವನತ್ತ ನೇರವಾಗಿ ನೋಡದೆ ಉಳಿದವರನ್ನೆಲ್ಲ ಉದ್ದೇಶಿಸಿ ಅಂದಳು:

"ಎರಕ್ಕೊಳ್ಳೋವಾಗ್ಲೇ ಕಳೆದ್ಹೋಯ್ತೂಂತ ಅಮ್ಮಾವ್ರು ಯೇಳೋದಾದರೆ ಮೋರೀಲೋ ಮತ್ತೆಲ್ಲೋ ಬಿದ್ದಿರಬೇಕು."

"ಮೋರೀಲೆಲ್ಲಾ ಆಗ್ಲೆ ಹುಡುಕ್ಲಿಲ್ವೆ?" ಎಂದರು ಸಾಹೇಬರ ಪತ್ನಿ.

"ಇನ್ನೊಂದ್ಸಲ ನೋಡಾನಾ ಬನ್ನಿ."

ಮಲ್ಲಿಯ ನಾಯಕತ್ವದಲ್ಲಿ ಶೋಧಕರ ತಂಡ ಹೊರಟಿತು. ಸ್ನಾನಗೃಹದ ಮೂಲೆ ಮೂಲೆಗಳನ್ನೂ ಶೋಧಿಸಿದ್ದಾಯಿತು. ಎಲ್ಲಿಯೂ ಬೆಂಡೋಲೆ ಸಿಗಲಿಲ್ಲ.

ಅಲ್ಲಿಂದ ಅವರೆಲ್ಲ ಹೊರಬೀಳಬೇಕೆನ್ನುವಷ್ಟರಲ್ಲಿ ಮಲ್ಲಿ ಅಂದಳು:

"ಒಸಿ ತಾಳ್ರಿ. ನೀರಿನ ತೊಟ್ಟಿಯಾಗಿಷ್ಟು ನೋಡಾನ. ಅಕಾ, ಅದೇನು ಕಾಣಿಸ್ತಿರೋದು?"

"ಕಸ," ಎಂದ ನಂಜಪ್ಪ.

"ಫಳಫಳ ಅಂತೈತೆ."

"ಏ ಸಿದ್ದಾ, ತೊಟ್ಟಿಗೆ ಜಿಗಿ—ಮುಳುಗ್ನೋಡು," ಎಂದು ನಾಗಪ್ಪ ಆಜ್ಞಾಪಿಸಿದ.

ಐವಡಿ ಎತ್ತರದ ತೊಟ್ಟಿಯನ್ನೇರಿ ಸಿದ್ದ ಒಳಕ್ಕೆ ಹಾರಿದ. ಮುಳುಗಿ ನೋಡಿದ; ಕೈಯಾಡಿಸಿದ; ಒಂದು ಬೆಂಡೋಲೆಯೊಡನೆ ಮೇಲಕ್ಕೆ ಬಂದ.

"ಹ್ಹಾ! ಅದೇನೇ!" ಎಂದು ಉದ್ಗಾರವೆತ್ತಿದರು ಸಾಹೇಬರ ಮಡದಿ.

"ಇನ್ನೊಂದ್ಸಲ ಮುಳುಗು!" ಎಂದ ನಾಗಪ್ಪ.

ಜೊತೆಯ ಬೆಂಡೋಲೆಯೂ ದೊರಕಿತು.

ಪತ್ನಿ ಹರ್ಷಿತಳಾದುದನ್ನು ಕಂಡು ಉಮಾಪತಿಯವರಿಗೂ ಸಮಾಧಾನವಾಯಿತು.

ನಾಗಪ್ಪ, ಸಾಹೇಬರೊಬ್ಬರೇ ಇದ್ದಾಗ ಅವರ ಬಳಿ ಸಾರಿ ನುಡಿದ:

"ಕಳ್ಳ ನನ್ಮಕ್ಳು–ನಂಬೋ ಹಂಗಿಲ್ಲ. ಸಿಕ್ಹಾಕೊಳ್ತೀವಿ ಅಂತ ಎದರಿ ತೊಟ್ಟಿಯೊಳಕ್ಕೆ ಆಕಿದ್ರೂ ಇರಬೋದು."

ವೀಣಾ ಮಾತ್ರ, ತಮ್ಮ ಪತಿಯೊಡನೆ ಅಂದರು :

" ತೊಟ್ಟಿಯ ದಂಡೆ ಮೇಲೆ ಬೆಂಡೋಲೇನ ಇಟ್ಟಿದ್ದೆ. ಜಾರಿಬಿದ್ದಿರ್ಬೇಕು. ಸುಮ್ಸುನ್ನೆ ಎಷ್ಟೊಂದು ಹೆದರ್ಕ್ಕೊಂಡ್ಬಿಟ್ಟೆ ! "

* * * *

ರಾತ್ರಿ ಉಮಾಪತಿ, ಆದಷ್ಟು ಬೇಗನೆ ಹೊರಟು ಬಂದು ಒಂದೆರಡು ತಿಂಗಳ ಮಟ್ಟಿಗೆ ತಮ್ಮೊಡನೆ ಇರಬೇಕೆಂದು ತಮ್ಮ ತಾಯಿಗೆ ಕಾಗದ ಬರೆದರು. ಹೊರಗಿನ ಕೆಲಸಕ್ಕಾಗಿ ಒಬ್ಬಳನ್ನು ಊರಿನಿಂದ ಕರೆದುಕೊಂಡು ಬರಬೇಕೆಂದೂ ತಿಳಿಸಿದರು.

" ಮಲ್ಲಿ ಬೇಡ ಅಂತೀರೇನು ? " ಎಂದರು ವೀಣಾ.

" ಬರೆಯೋದು ಬರೆದಿದೇನೆ. ಮುಂದೆ ನೋಡೋಣ, " ಎಂದು ಉತ್ತರವಿತ್ತರು ಉಮಾಪತಿ.

" ಐದು ದಿನ ಒಬ್ಬಳೇ ಹೇಗಿರ್ಲಿ ? ನಿಮ್ಮ ಜೊತೆ ನಾನೂ ಬರೋಕಾಗಲ್ವೆ ? "

" ಅಸಿಸ್ಟೆಂಟ್ ಕಮೀಶನರು ಅಂದರೆ ಹಳೇ ಕಾಲದ ರಾಜರು ಅಂತ ತಿಳಕೊಂಡೆಯೇನು, ರಾಣೀವಾಸವನ್ನು ಕರಕೊಂಡು ಹೋಗೋದಕ್ಕೆ ? "

" ಇದು ದೆವ್ವದಂಥ ಮನೆ. ಭಯವಾಗುತ್ತಪ್ಪ ! "

" ಭಯವಂತೆ ! ಹುಚ್ಚುಚ್ಚಾರ ಆಡ್ಬೇಡ. "

ಅವರು ಹಾಗೆ ಹೇಳುತ್ತಿದ್ದಂತೆಯೇ ಪಕ್ಕದ ಕೊಠಡಿಯಲ್ಲಿ ಏನೋ ಸದ್ದಾಯಿತು.

" ಯಾರದು ? " ಎಂದರು ಉಮಾಪತಿ, ಧ್ವನಿ ಏರಿಸಿ.

ಉತ್ತರ ಬರಲಿಲ್ಲ. ಸರಸರನೆ ಯಾರೋ ಹಾದು ಹೋದಂತಾಯಿತು. ಉಮಾಪತಿ ಎದ್ದು ಬಾಗಿಲ ಬಳಿ ನಿಂತು ಅತ್ತಿತ್ತ ನೋಡಿದರು.

" ಬೆಕ್ಕಿರಬೇಕು, " ಎಂದರು.

ವೀಣಾ ಅಂದರು :

" ಇದ್ದೀತು. ಬೆಳಗ್ಗೆ ಒಂದು ಬೆಕ್ಕನ್ನ ನೋಡ್ದೆ. ಹುಲಿಯಷ್ಟು ದೊಡ್ಡದು. ಹಿಂದೆ ಇದ್ದವರು ಸಾಕಿದ್ದರಂತೆ. ಆತ ಎಂಥ ವಿಚಿತ್ರ ಮನುಷ್ಯನೋ ಅಂತೀನಿ. "

"ಬೆಳಗ್ಗೆ ನಾನು ಹೋಗ್ತೀನಿ. ಧೈರ್ಯವಾಗಿ ಇದ್ಬಿಡು. ನಿನ್ನ ಬೆಡ್ ರೂಂ ಹೊರಗಡೆ ಮುಸುರೆಯವಳು ಮಲಕ್ಕೊಳ್ಳಿ. ಆ ನಾಗಪ್ಪನಿಗೂ ಇಲ್ಲೇ ಇರೂಂತ ಹೇಳ್ತೀನಿ."

"ನಾಗಪ್ಪ ಧೈರ್ಯವಂತ."

"ಅವನು ಪ್ರಚಂಡ. ನೀನು ಮಾತ್ರ ಹುಷಾರಾಗಿರು."

ಸಾಹೇಬರಾಡಿದ್ದ ಮಾತು ನಾಗಪ್ಪನಿಗೆ ಕೇಳಿಸಿತ್ತು. ಮಾರನೆಯ ದಿನ ಅವರು ಹೊರಟು ಹೋದಮೇಲೆ ಅವನು ಬಹಳ ಹೊತ್ತು ಯೋಚಿಸಿದ. ಇನ್ನು ಕೆಲವೇ ವರ್ಷಗಳೊಳಗೆ ಫಲವತ್ತಾದ ಹೊಲ ಕೊಂಡು ಭವ್ಯವಾದ ಮನೆ ಕಟ್ಟಿಸುವ ಕನಸನ್ನು ಅವನು ಕಂಡಿದ್ದ. ಮನಸ್ಸು ಮಾಡಿದ್ದರೆ ಆ ಮೂರು ವರ್ಷಗಳಲ್ಲೇ ಒಂದಿಷ್ಟು ಉಳಿಸಬಹುದಾಗಿತ್ತು. ಆದರೆ ಖಯಾಲಿ ಖರ್ಚುಗಳಿಗಾಗಿ ಹಣವೆಲ್ಲಾ ವ್ಯಯವಾಗಿತ್ತು. ಈಗ ಕೆಲಸವೇ ಹೋಯಿ ತೆಂದರೆ ಬರಿಗೈ. ಭಿಕಾರಿಯಾಗಿ ಬದುಕು ಆರಂಭಿಸಿದ್ದ ಸ್ಥಿತಿಗೇ ಪುನಃ ಪ್ರವೇಶ. ಇದೆಂಥಾ ಸಾಹೇಬ್ರು ಎಂಥಾ ಅಮ್ಮಾವ್ರು. . .ಥುತ್. . .

ಇನ್ನು ಆರು ದಿನವಂತೂ ಈ ಹೆಂಗಸು ತನ್ನ ಕೈದಿಯಿದ್ದ ಹಾಗೆ. ಇವಳ ಕತ್ತು ಹಿಸುಕಿ ಆಭರಣಗಳನ್ನೆಲ್ಲ ದೋಚಿಕೊಂಡು ಪರಾರಿಯಾಗ ಬಹುದು. ಆದರೆ ಮನೆಯಲ್ಲಿರುವ ಹೆಂಡತಿ ಮಕ್ಕಳ ಗತಿ? ಅವರ ಹಾದಿ ಅವರು ನೋಡಿಕೊಳ್ಳುತ್ತಾರೆ. ಬೇಕಿದ್ದರೆ ಇವಳೊಬ್ಬಳನ್ನು. . .ಸಿಕ್ಕಿಹಾಕಿ ಕೊಂಡರೊ? ಫಾಸಿ ಶಿಕ್ಷೆ! ಇಷ್ಟಕ್ಕೂ ಆಭರಣಗಳೇನೂ ಇಲ್ಲಿ ಇಲ್ಲದೆ ಹೋದರೆ? ಮಲ್ಲಿ ಹೇಳಲಿಲ್ಲವೇ?—ಒಂದು ದಿನವೂ ಬೆಲೆಬಾಳುವಂಥ ದನ್ನೇನೂ ಈಕೆ ತೊಟ್ಟುಕೊಂಡಿಲ್ಲ. ಊರಲ್ಲೇ ಬಿಟ್ಟು ಬಂದಿದ್ದಾರೋ ಏನೋ. ಅಥವಾ ಆಭರಣಗಳೇ ಇಲ್ಲವೋ? ಇದೇ ಈಗ ಆಫೀಸರಾದ ವನ ಕೈಯಲ್ಲಿ ಇನ್ನೇನಿದ್ದೀತು?

ಇವರು ಎಂಥ ಜನವೋ? ಇವರ ಚರಿತ್ರೆಯೇನೋ? ಅಮ್ಮಾವ್ರ ಬಾಯಿ ಬಿಡಿಸಲು ಮಲ್ಲಿ ಸಮರ್ಥಳಾಗಿರಲಿಲ್ಲ. ಅಲ್ಲಿ ಯಾವಾಗಲೂ ಬೀಗ ಬಿಗಿದೇ ಇರುತ್ತಿತ್ತು. ನೋಟಕ್ಕೇನೋ ದ ಪ್ಪ ಪುಷ್ಟೆ. ವಾಸ್ತವವಾಗಿ ಪುಕ್ಕಲೇ ಇರಬೇಕು. ಮೈಯಲ್ಲಿ ಇಷ್ಟೊಟ್ಟು ಮಾಂಸವಿಲ್ಲದ ಎಳೇಕಡ್ಡಿ. ಮಲ್ಲಿಗೆ ಇವಳೆಲ್ಲಿ ಸಮ. . .

ವೀಣಾ ಎಚ್ಚರದಿಂದ ಓಡಾಡಿದರು. ಒಂಟಿಯಾಗಿರಬೇಕಾದ ಪರಿಸ್ಥಿತಿ ಮದುವೆಯಾಗಿ ಒಂದು ವರ್ಷವಾಗಿತ್ತು. ಕಲಕತ್ತೆಯಲ್ಲಿ ಗಂಡ ತರಬೇತಿ ಪಡೆಯುತ್ತಿದ್ದಾಗ ನಾಲ್ಕು ತಿಂಗಳು ವೀಣಾ ಅವರ ಬಳಿ ಇದ್ದರು. ಒಂದೇ ಕೊಠಡಿಯ ಗುಬ್ಬಚ್ಚಿ ಸಂಸಾರ ಸ್ಮರಣೀಯವಾಗಿತ್ತು. ಆ ಪುಟ್ಟ ಆವಾಸ ಸ್ಥಾನದ ಅನಂತರ ಈಗ ಈ ದೊಡ್ಡ ಭವನ. ಆನೆ ಹೊಕ್ಕು ಬರಬಹುದಾದ ಬಾಗಿಲುಗಳು. ಬಾಗಿಲುಗಳಷ್ಟೆ ದೊಡ್ಡದಾದ ಕಿಟಕಿಗಳು. ಒಳ ಹಜಾರವನ್ನು ದಾಟ ಹೊರಗೆ ಬರಲು ಐದು ನಿಮಿಷ ಹಿಡಿಯುತ್ತಿತ್ತು. ಅಂಥ ಹರವು.

ಇಲ್ಲಿ, ಕತ್ತುಹಿಸುಕಿದರೆಂದು ಕಿರಿಚಿಕೊಂಡರೂ ಪ್ರತಿಧ್ವನಿಯಷ್ಟೇ ಕೇಳಿಸಬಹುದು.

ಭಯದಿಂದ ಅವರ ಮೈ ಬೆವತಿತು.

ಒಂಟಿ ಬದುಕಿನ ಮೊದಲ ರಾತ್ರಿ ಅವರಿಗೆ ಬಹಳ ಹೊತ್ತು ನಿದ್ದೆ ಹತ್ತಲಿಲ್ಲ. ಮುಂಪರು ಬಂದಾಗ ಒಮ್ಮೆಲೆ ಎಚ್ಚರವಾಯಿತು. ಪಕ್ಕದ ಕೊಠಡಿಯಲ್ಲಿ ಸದ್ದು. ವೀಣಾ ಉಸಿರು ಬಿಗಿ ಹಿಡಿದರು. ಮಲ್ಲಿ ಒಬ್ಬಳೇ ಮಲಗಿದ್ದಳಲ್ಲ? ಯಾರಾದರೂ ಅವಳ ಕತ್ತು ಹಿಸುಕುತ್ತಿರಬಹುದೆ? ಊಹೂಂ. ಅದಲ್ಲ. ಅಯ್ಯೋ! ಮಲ್ಲಿ ಮತ್ತು ಯಾರು? ಯಾರು ಆತ? ಅಡುಗೆಯವನು? ಹುಡುಗ ಸಿದ್ಧ? ಎಂಥ ಹೊಲಸು!

ಮುಂದೆ, ದಿಂಬನ್ನು ಹಲ್ಲುಗಳೆಡೆ ಕಚ್ಚಿ ಮಲಗಿದ ಅವರಿಗೆ ನಿದ್ದೆ ಬರಲು ಬಹಳ ಹೊತ್ತು ಹಿಡಿಯಿತು.

ಬೆಳಗಾದ ಮೇಲೆ ಅವರು ಮಲ್ಲಿಯನ್ನೂ ಇತರರನ್ನೂ ಸೂಕ್ಷ್ಮವಾಗಿ ದಿಟ್ಟಿಸಿದರು. ಏನೂ ಸ್ಪಷ್ಟವಾಗದಿರಲು ಮಲ್ಲಿಯನ್ನು ಕರೆದು ಅವರು ಕೇಳಿದರು :

"ಪಕ್ಕದ ರೂಮ್ನಲ್ಲಿ ನಿನ್ನೆ ನೀನೊಬ್ಬಳೇ ಮಲಗಿದ್ದೆ, ಅಲ್ವೇನೆ?"

ಕತ್ತು ಕೊಂಕಿಸಿ ಮಲ್ಲಿ ಅಂದಳು :

"ಹೂಂ ಅಮ್ಮಾವ್ರೇ."

"ಯಾರೋ ನಿನ್ಜತೆ ಮಾತಾಡಿದ ಹಾಗಾಯ್ತು."

"ಅದೇ? ನಾಗಣ್ಣ. ಒಸಿ ಸುಣ್ಣ ಎಲೆ ಬೇಕೂಂತ ಬಂದಿದ್ದ."

ಇದು ಸುಳ್ಳೆಂಬುದು ಖಚಿತವಾಗಿದ್ದ ವೀಣಾ ಪ್ರಶ್ನಿಸಿದರು :

" ಅವನು ನಿನ್ನ ಅಣ್ಣ ಅಲ್ವಾ ? "

" ಹೌದು ! ಅಲ್ಲ ಅಂತಾರಾ ? "

ಅಮ್ಮಾವ್ರ ಬಾಯಿ ಕಟ್ಟಿಹೋಯಿತು.

ಮಲ್ಲಿ ಮತ್ತೂ ಒಂದು ಮಾತು ಅಂದಳು :

" ನೀವು ಎಂಗಾರೂ ಒಬ್ರೇ ಇರ್‍ತೀರೋ ಅಮ್ಮಾವ್ರೇ. . .ದೆವ್ವಗಿವ್ವ ಬರ್‍ತೀತೇನೋಂತ ಎದರ್ಕೇನೇ ಆಗ್ತೈತೆ."

" ಹೋಗು ನಿನ್ನ ಕೆಲಸ ಮಾಡು. "

ಆ ಹಗಲು ನಾಗಪ್ಪ ಕಛೇರಿಗೆ ಹೋಗಲಿಲ್ಲ. ಅವನಿಗೆ ಬಂಗಲೆ ಡ್ಯೂಟಿ.

ಅಡುಗೆಯ ನಂಜಪ್ಪನನ್ನು ವೀಣಾ ಪ್ರಶ್ನಿಸಿದರು :

" ರಾತ್ರಿ ನಿನಗೇನಾದರೂ ಸಪ್ಪಳ ಕೇಳಿಸ್ತಾ ? "

" ಒಮ್ಮೆ ಅಡುಗೆಮನೆ ಬಾಗಿಲು ಹಾಕಿ ಮಲಕೊಂಡೆ ಅಂದ್ರೆ ನನಗೆ ಈ ಲೋಕದ ಗ್ಯಾನಾನೆ ಇರೋದಿಲ್ಲ, ಅಮ್ಮಾವ್ರೆ. . ."ಎಂದ ನಂಜಪ್ಪ. ಅದು ನಿಜವಾದ ಸಂಗತಿ.

ಸ್ವಹಿತ ರಕ್ಷಣೆಗಾಗಿ ಮುಂದೆ ತಾನಿಡಬೇಕಾದ ಹೆಜ್ಜೆ ಯಾವ ದಿಕ್ಕಿನಲ್ಲೆಂಬುದನ್ನು ಆ ಸಂಜೆಯೊಳಗಾಗಿ ನಾಗಪ್ಪ ನಿರ್ಧರಿಸಿದ.

ಅಮಾವಾಸ್ಯೆಯನ್ನು ಇದಿರುನೋಡುತ್ತ ಚಂದ್ರ ಆಗಲೇ ಒಂದು ವಾರ ಕಳೆದಿದ್ದ. ನಡು ಇರುಳಿನವರೆಗೂ ಕಗ್ಗತ್ತಲು. ನಾಗಪ್ಪನ ಯೋಜನೆಗೆ ಇದು ಅನುಕೂಲವೇ ಆಗಿತ್ತು.

ಆ ರಾತ್ರಿ ವಿಕಾರ ಧ್ವನಿಗಳು ವೀಣಾಗೆ ಕೇಳಿಸಿದುವು. ಛಾವಣಿಯ ಮೇಲೆ ಕಲ್ಲುಗಳು ಬಿದ್ದುವು. ಅವರು ಕಿರಿಚಿಕೊಂಡೆದ್ದು ದೀಪ ಹಾಕಿದರು. ಗಾಢನಿದ್ರೆಯಲ್ಲಿದ್ದಂತೆ ನಟಿಸುತ್ತಿದ್ದ ಮಲ್ಲಿಯನ್ನೆಬ್ಬಿಸಿದರು. ನಾಗಪ್ಪ ಓಡಿ ಬಂದ. ಅಮ್ಮಾವ್ರು ಕೊಟ್ಟ ಟಾರ್ಚು ಹಿಡಿದು ಮನೆಯ ಸುತ್ತಲೆಲ್ಲ ಹೋಗಿ ನೋಡಿದ.

" ಏನೂ ಇಲ್ಲ, ಅಮ್ಮಾವ್ರೆ. . . "

ವೀಣಾ ಒರಗು ಕುರ್ಚಿಯ ಮೇಲೆ ಕುಸಿದು ಕುಳಿತರು.

" ಅಯ್ಯೋ ! ನನ್ನ ಕಿವಿಯಾರೆ ಕೇಳಿದೆನಲ್ಲ ! "

" ಎದರ್ಬೇಡಿ, ಅಮ್ಮಾವ್ರೆ. ನಾನಿದೀನಿ. ಮನಿಕೊಳ್ಳಿ. "

ಮಲ್ಲಿಯೂ ಒಡತಿಗೆ ಧೈರ್ಯ ಹೇಳಿದಳು.

ಹೊರಗಿನ ದೀಪಗಳೆಲ್ಲ ಮತ್ತೆ ಆರಿದುವಾದರೂ ವೀಣಾ ತಮ್ಮ ಮಲಗುವ ಕೊಠಡಿಯ ಬೆಳಕನ್ನು ಹಾಗೆಯೇ ಇರಗೊಟ್ಟರು. ಭದ್ರವಾಗಿ ಕಣ್ಣು ಮುಚ್ಚಿ ಮಲಗಿದರು. ಅವರ ಶರೀರ ಒಂದೇ ಸಮನೆ ಕಂಪಿಸಿತು. ಸೀರೆ, ಹಾಸಿಗೆಯ ಮೇಲುಹೊದಿಕೆ ಎಲ್ಲವೂ ಬೆವರಿನಿಂದ ತೊಯ್ದುಹೋದವು.

ಈ ಸಲ ಹತ್ತಿರದಿಂದಲ್ಲ, ದೂರದಿಂದ ಕರ್ಕಶ ಕೂಗುಗಳು ಕೇಳಿಸಿದುವು. ಬಹಳ ದೂರದಿಂದ ಕಲ್ಲುಗಳೂ ಸದ್ದು ಮಾಡಿದುವು.

ಬೆಳಗಿನವರೆಗೂ ವೀಣಾ ನಿದ್ರಿಸಲಿಲ್ಲ. ಬೆಳಗಾದ ಮೇಲೂ ಅವರಿಗೆ ನಿದ್ದೆ ಬರಲಿಲ್ಲ.

ಹಿತ್ತಲಮೂಲೆಯ ಗುಡಿಸಲಲ್ಲಿ ಮಲಗುತ್ತಿದ್ದ ಸಿದ್ಧನಿಗೂ ಏನೋ ಸದ್ದು ಕೇಳಿಸಿತ್ತಂತೆ. ತನಗೂ ಒಮ್ಮೆ ಎಚ್ಚರವಾಯಿತು-ಎಂದ ನಂಜಪ್ಪ.

ನಾಗಪ್ಪ, ಮೊದಲು ನಂಜಪ್ಪನೆದುರು, ಬಳಿಕ ಅಮ್ಮಾವರೆದುರು, ತನ್ನ ಸಂದೇಹಗಳನ್ನು ತೋಡಿಕೊಂಡ. ಇದೆಲ್ಲಾ ಭೂತ ಚೇಷ್ಟೆಯೇ ಇರಬೇಕೆಂಬ ಶಂಕೆ ಅವನನ್ನು ಬಾಧಿಸಿತ್ತು.

ಸಾಹೇಬರಿಗೆ ಸುದ್ದಿ ಮುಟ್ಟಿಸಬೇಕೆಂದು ವೀಣಾ ಕಾತರಗೊಂಡರು.

"ಅವರು ಯಾವ ಹಳ್ಳೀಲವರೋ ಏನೋ! ಅಲ್ದೆ, ಇನ್ನೊ ಒಂದು ವಿಸ್ಯ—" ಎಂದು ನಾಗಪ್ಪ ರಾಗವೆಳೆದ.

ಭೂತಚೇಷ್ಟೆಯೇ ನಿಜವೆಂದಾದರೆ, ಹಾಗೆ ಹೇಳಿ ಕಳುಹಿಸುವುದರಿಂದ ಅನಿಷ್ಟವೇ ಹೆಚ್ಚು. ಭೂತಕ್ಕೆ ಸಿಟ್ಟು ಬರಬಹುದು. ಕಚೇರಿಗೆ ಈ ಸಂಗತಿ ತಿಳಿಸುವುದೂ ಸರಿಯಲ್ಲ.

"ಇವತ್ತೊಂದು ರಾತ್ರಿ ನೋಡಾನ ಅಮ್ಮಾವ್ರೆ. ಭೂತೆದ್ರೇ ನಿಜಾಂತಾದರೆ ನಾಳೆ ಶಾಂತಿ ಮಾಡಾನ. ಭೂತಕ್ಕೇನು?—ಅದರಪ್ಪನಿಗೆ ನಾನು ಬುದ್ಧಿ ಕಲಿಸ್ತೀನಿ."

ಎಲ್ಲರೂ ಎಚ್ಚರವಿದ್ದು ಕಳೆದ ರಾತ್ರಿ ಅದು. ನಾಗಪ್ಪ ಟಾರ್ಚನ್ನು ಹಿಡಿದು ಗಸ್ತಿ ನಡಸಿಯೇ ಇದ್ದ. ಹನ್ನೊಂದು ದಾಟಿದ ಮೇಲೆ ಹಿಂದಿನ ಇರುಳಿನ ಘಟನೆಗಳ ಪುನರಾವರ್ತನೆಯಾಯಿತು.

ವೀಣಾ ಚೀರಿಕೊಳ್ಳತೊಡಗಿದಂತೆ ನಾಗಪ್ಪ ಧಾವಿಸಿ ಬಂದ. ನಂಜಪ್ಪನೂ ಧೈರ್ಯಮಾಡಿ ಅಡುಗೆ ಮನೆಯ ಬಾಗಿಲು ತೆರೆದು ಓಡಿಬಂದ.

ಅಮ್ಮಾವ್ರು ಮೂರ್ಛೆ ಹೋದರು. ಮಲ್ಲಿ ಅವರ ಮುಖಕ್ಕೆ ನೀರು ಹನಿಸಿ ಪ್ರಜ್ಞೆ ಮರಳುವಂತೆ ಮಾಡಿದಳು.

ನಂಜಪ್ಪನೊಡನೆ ನಾಗಪ್ಪನೆಂದ:

"ಭೂತಚೇಷ್ಟೆಯೇ, ಸಂಶಯ ಇಲ್ಲ. ನನ್ನ ಗುರುತಿನ ಒಬ್ಬ ಮಂತ್ರವಾದಿ ಅವ್ನೆ. ನಾಳೆಯೇ ಕರಸ್ತೀನಿ. ಭೂತ ಇನ್ನು ಯಾವತ್ತೂ ಈ ಕಡೆಗೆ ಹಾಯದ ಹಾಗೆ ಮಾಡ್ತೀನಿ."

"ಅಷ್ಟು ಮಾಡಪ್ಪ," ಎಂದ ಅಡುಗೆಯವನು.

ತಗ್ಗಿದ ಸ್ವರದಲ್ಲಿ ನಾಗಪ್ಪನೆಂದ:

"ಆದರೆ ಒಸಿ ಖರ್ಚಾಗ್ತದೆ."

"ಎಷ್ಟು?"

"ನೂರು ರೂಪಾಯಿ ಆಗ್ಬೋದು."

"ನಾಗಪ್ಪ, ಏನಾದರೂ ಮಾಡಿ ನನ್ನ ಉಳ್ಸು, ಅವರು ಬರೋತನಕ ನಾನು ಬದುಕಿರ್ತೀನೋ ಇಲ್ವೋ . . . ಖರ್ಚಿನ ಯೋಚ್ನೆ ನೀನು ಮಾಡ್ಬೇಡ."

"ಇಲ್ಲಾ ಅಮ್ಮಾವ್ರೆ. ಇವತ್ತೇ ಕಡೇ ರಾತ್ರೆ. ಭೂತದ ಆಟ ಆಯ್ತೂಂತ ಇಟ್ಕೊಳ್ಳಿ. ನಾಳೆ ಬೆಳಿಗ್ಗೇನೇ ಎಲ್ಲಾ ಮಾಡಿಸ್ತೀನಿ. ಇನ್ನು ನೀವು ಮನಿಕೊಳ್ಳಿ. ನಾನು ಕಾವಲು ಕುಂತಿರ್ತೀನಿ."

ವೀಣಾ ಮಲಗಲಿಲ್ಲ. ಕಂಬಳಿ ಹೊದೆದು ನಡುಗುತ್ತ ಕುಳಿತು ಕೊಂಡೇ ಉಳಿದ ಇರುಳನ್ನು ಕಳೆದರು.

ನಸುಕು ಹರಿಯುತ್ತಲೇ ನಾಗಪ್ಪ ಚಟುವಟಿಕೆ ತೋರಿದ. ಭೂತಕ್ಕೆ ಶಾಂತಿ ಮಾಡುವ ಸಡಗರ. ಅಂದೇ ಆಗಲೇ ಅದಾಗಬೇಕು. ಮಾರನೆಯ ದಿನಕ್ಕೆ ಮುಂದೂಡುವಂತಿರಲಿಲ್ಲ.

ಮಂತ್ರವಾದಿ ಬಂದು ಬಂಗಲೆಯ ಹಿಂಬದಿಯಲ್ಲಿ ಅಕ್ಕಿ, ತೆಂಗಿನ ಕಾಯಿ, ಕುಂಬಳಕಾಯಿಗಳನ್ನಿರಿಸಿಕೊಂಡು ಹೋಮ ಧೂಮಗಳನ್ನು ಪ್ರಾರಂಭಿಸಿದ.

"ಅಮ್ಮಾವ್ರೆ, ನೀವು ಸ್ನಾನಮಾಡಿ ಒಳಗೆ ಕುಂತ್ಬಿಡಿ. ಎಲ್ಲಾ ಮುಗಿದ್ಮ್ಯಾಕೆ ಬಸ್ಮ ಈಟು ಕೊಡ್ತವ್ನೆ. ಅದನ್ನು ಅಚ್ಕೊಂಡು ಊಟ ಮಾಡಿ ಮನಿಕ್ಕೊಂಡ್ಬಿಡಿ—" ಎಂದ ನಾಗಪ್ಪ ಒಡತಿಯೊಡನೆ.

"ನನಗೆ ಭಯವಾಗುತ್ತಪ್ಪ. ಹಣ ಈಗಲೇ ಕೊಟ್ಟರ್ತೀನಿ," ಎಂದರು ವೀಣಾ.

"ಬ್ಯಾಡಿ, ಬಾಡಿ. ಅಮ್ಯಾಕೆ ಕೊಡೀರಂತೆ."

ಹೊರಗಿನಿಂದ ಹ್ರೀಂ ಹ್ರಾಂ ಮಂತ್ರಘೋಷ ಬಿರುಸಾಯಿತು.

* * * *

ಉಮಾಪತಿಯವರ ಮೊದಲ ಜಮಾಬಂದಿ ತೃಪ್ತಿಕರವಾಗಿ ನಡೆಯಿತಷ್ಟೇ ಅಲ್ಲ, ಒಂದೂವರೆ ದಿನ ಮುಂಚಿತವಾಗಿಯೇ ಮುಗಿಯಿತು.

ಬಿಡುವಿದ್ದಾಗಲೆಲ್ಲಾ ಮನೆಯ ಯೋಚನೆಯೇ ಕಾಡುತ್ತಿದ್ದ ಉಮಾಪತಿ, ಮುಂಚಿತವಾಗಿ ಹಿಂದಿರುಗುವುದು ಸರಿಯೋ ತಪ್ಪೋ ಎಂದು ವಿವೇಚಿಸತೊಡಗಿದರು.

ಆ ದಿನ ತೊಡಲೆಂದು ಕೋಟು ತೆಗೆದಿರಿಸಿದಾಗ, ಅದರ ಒಳಜೇಬಿನಲ್ಲಿದ್ದ ಚೀಟಿಯೊಂದು ಅವರ ಕೈಗೆ ತಾಕಿತು. ಅದನ್ನು ಹೊರತೆಗೆದರು.

'ವೀ' ಬರೆದುದು.

ಕೊನೆಯಲ್ಲಿತ್ತು:

". . . ನನಗೆ ಯಾಕೋ ಭಯ. ತಕ್ಷಣ ಬನ್ನಿ."

ಉಮಾಪತಿ ಅಳುಕಿದರು . . .

ಅ್ಹ! ಹಳೆಯ ಚೀಟಿ. 'ಆ' ದಿನದ್ದು.

ಗಾಬರಿಗೊಂಡೆನಲ್ಲಾ ಎಂದು ನಸು ನಕ್ಕರು. ನಾಜೂಕಾಗಿ ಒಮ್ಮೆ—ಎರಡು ಸಾರೆ—ಮಡಚಿ, ಚೀಟಿಯನ್ನು ಮೊದಲಿದ್ದಲ್ಲೇ ಇರಿಸಿದರು.

ಆದರೂ ಚಿಂತೆ ಅವರ ಮನಸ್ಸನ್ನು ಕವಿಯಿತು.

ತನ್ನ ಮುಖ್ಯ ಗುಮಾಸ್ತೆಯನ್ನು ಕರೆದರು.

"ಆಯ್ತಲ್ಲ, ಇನ್ನು ಯಾಕಿರೋಣ ಇಲ್ಲಿ?"

ಸಾಹೇಬರಿಗೆ ಅಮ್ಮಾವ್ರ ನೆನಪಾಗಿರಬೇಕೆಂದುಕೊಂಡ ಗುಮಾಸ್ತೆ ಅಂದ:

"ಹೊರಡ್ಬಹುದು, ಸರ್. ನಾಲ್ವಂತ್ತೈಟೇ ಮೈಲಿ. ಮಧ್ಯಾಹ್ನ ಹನ್ನೆರಡರ ಹೊತ್ತಿಗೆ ಬಂಗ್ಲೆ ಮುಟ್ಟಬಹುದು."

"ಸರಿ. ಡ್ರೈವರನ್ನು ಕರೀರಿ."

* * * *

ಜೀಪಿನ ಸದ್ದು ಕೇಳಿ ನಾಗಪ್ಪ ಕಂಗಾಲಾದ. ಮಂತ್ರವಾದಿಯ ಕೆಲಸ ಮುಗಿಯುತ್ತ ಬಂದಿತ್ತು. ಇವತ್ತೇ ಬಂದುಬಿಡಬೇಕೆ ಸಾಹೇಬರು ? ಇದೆಂಥ ಕ್ರೂರ ಆಟ ದೈವದ್ದು !

“ ನಿನ್ನ ಕಥೆ ಮುಗೀತು ನಾಗಪ್ಪ,” ಎಂದಿತು ಅವನ ಒಳಮನಸ್ಸು.

“ ಛೆ ! ” ಎಂದ ಆತ, ಕೆಟ್ಟ ಯೋಚನೆಗಳನ್ನೆಲ್ಲ ಝಾಡಿಸಿ.

ಭಯಭಕ್ತಿಗಳನ್ನು ಪ್ರದರ್ಶಿಸುತ್ತ ಸಾಹೇಬರನ್ನು ಅವನು ಇದಿರ್ಗೊಂಡ.

ಪತ್ನಿ ಕಾಣಿಸಲಿಲ್ಲವೆಂದು ಉಮಾಪತಿ ಕೇಳಿದರು :

“ ಎಲ್ಲಿ ಅಮ್ಮಾವ್ರು ? ”

“ ಅವರಿಗೆ—ಅಮ್ಮಾವ್ರಿಗೆ . . .”

“ ಏನೋ ಅದು ? ”

“ ರೂಮ್ನಾಗವ್ರೆ . . . ಇಂಗಾಯ್ತು ಬುದ್ದಿ . . . ಅದು—”

ನಾಗಪ್ಪನ ಎದೆಗುಂಡಿಗೆ ತೀವ್ರವಾಗಿ ಹೊಡೆದುಕೊಂಡಿತು. ಉಮಾಪತಿಯೂ ಗಾಬರಿಯಾದರು. ಜವಾನನ ವಿವರಣೆಗೆ ಕಾಯದೆ ಒಳಕ್ಕೆ ಧಾವಿಸಿದರು. ಗಂಡ ಬಂದುದು ಅಮ್ಮಾವರಿಗೆ ಮಲ್ಲಿಯಿಂದ ತಿಳಿದಿತ್ತು.

ಒಳಬಂದ ಪ್ರಾಣಪ್ರಿಯನನ್ನು ಇದಿರ್ಗೊಳ್ಳಲೆಂದು ಏಳುವುದಕ್ಕೂ ವೀಣಾ ಅಸಮರ್ಥರಾದರು. ಗಂಟಲೊಣಗಿ ಮಾತು ಹೊರಬರಲಿಲ್ಲ. ಕಂಬನಿ ಮಿಡಿಯುವ ಶಕ್ತಿಯೂ ಅವರಿಗಿರಲಿಲ್ಲ. ನಿದ್ದೆ ಕೆಟ್ಟಿದ್ದ ಮೂರು ಹಗಲು ಮೂರು ಇರುಳುಗಳ ಬಳಿಕ ಅವರು ಪ್ರೇತವಾಗಿದ್ದರು.

ದೀನ ನೋಟದಿಂದ ಗಂಡನನ್ನು ಅವರು ದಿಟ್ಟಿಸಿದರು.

ಉಮಾಪತಿ, ಕೊಠಡಿಯ ಬಾಗಿಲನ್ನು ಮುಚ್ಚಿದರು.

ಅವರ ತೋಳತೆಕ್ಕೆಯಲ್ಲಿ ವೀಣಾ ನಿಧಾನವಾಗಿ ಚೇತರಿಸಿಕೊಂಡರು. ಬಿಕ್ಕುತ್ತ ಬಿಕ್ಕುತ್ತ ನಡೆದುದೆಲ್ಲವನ್ನೂ ಗಂಡನಿಗೆ ಅವರು ತಿಳಿಸಿದರು.

“ ನಾನು ಸತ್ತೇಹೋಗ್ತಿದ್ದೆ . . . ಅಂತೂ ಬಂದಿರಿ . . . ನಾಗಪ್ಪ ಇಲ್ದಿದ್ರೆ ನನ್ನ ಅವಸಾನ ಆಗ್ತಿತ್ತು . . . ಅಯ್ಯೋ . . .”

ದಿಙ್ಮೂಢರಾಗಿ ಕುಳಿತ ಉಮಾಪತಿ ಅನೇಕ ಸಾರಿ ನಿಟ್ಟುಸಿರು ಬಿಟ್ಟು ಬಳಿಕ, ಮೆಲ್ಲನೆದ್ದು, ಬಾಗಿಲಿನ ಅಗಣಿಯನ್ನು ತೆಗೆದು, ಬಂಗಲೆಯ ಹಿಂಭಾಗಕ್ಕೆ ನಡೆದರು.

ಶಾಂತಿ ಹೋಮದ ಅವಶೇಷಗಳು ಅಲ್ಲಿದ್ದುವು.

ನಾಗಪ್ಪ ಕೈಜೋಡಿಸಿ ನಿಂತಿದ್ದ.

" ಎಲ್ಲಾ ಮುಗಿಯಿತೇ ? " ಎಂದು ಉಮಾಪತಿ ಶಾಂತವಾಗಿ ಕೇಳಿದರು.

" ಹೂಂ ಬುದ್ಧಿ."

[' ಗೆದ್ದೆ '—]

" ಅಮ್ಮಾವ್ರಿಗೆ ಪ್ರಸಾದ ಕೊಡಿಸು."

ಮರೆಯಲ್ಲಿದ್ದ ಮಂತ್ರವಾದಿಯನ್ನು ಉಮಾಪತಿ ದಿಟ್ಟಿಸಿದರು.

ನಾಗಪ್ಪ ಸಾಹೇಬರನ್ನು ಹಿಂಬಾಲಿಸಿ ಭಸ್ಮದೊಡನೆ ಬಂದ.

" ತಗೋ, ವೀಣಾ," ಎಂದರು ಉಮಾಪತಿ.

ವೀಣಾ ನಡುಗುವ ಬೆರಳುಗಳಿಂದ ಚಿಟಿಕೆ ಭಸ್ಮ ತೆಗೆದುಕೊಂಡು ಹಣೆಗೆ ಮುಟ್ಟಿಸಿದರು.

ಉಮಾಪತಿ, ಒಂದು ಚೆಕ್ ಬರೆದುಕೊಟ್ಟು ಡ್ರೈವರನ್ನು ಬ್ಯಾಂಕಿಗೆ ಕಳುಹಿಸಿ ಹಣ ತರಿಸಿದರು.

ನೂರು ರೂಪಾಯಿಗಳನ್ನೆಣಿಸಿ ನೋಟುಗಳನ್ನು ನಾಗಪ್ಪನಿಗೆ ಕೊಡ ಬಂದರು.

" ಬ್ಯಾಡಿ ಬುದ್ದೀ. ಮಂತ್ರವಾದಿ ನನ್ನ ಪರಿಚಿತ. ಅವನಿಗೆ ಯೋಳ್ತೀನಿ," ಎಂದ ನಾಗಪ್ಪ.

" ಛೆ—ಛೆ! ತಗೋ. ಕೊಟ್ಬಿಡು."

ನಾಗಪ್ಪ ಹಣ ಪಡೆದಮೇಲೆ ಸಾಹೇಬರೆಂದರು:

" ನಾಲ್ಕು ದಿವಸ ಬಹಳ ಕಷ್ಟಪಟ್ಟೆ. ನೀನಿನ್ನು ಮನೆಗೆ ಹೋಗು. ನಾಳೆ ಕಚೇರಿಗೆ ಬಾ."

ಸಾಹೇಬರ ಸ್ನಾನವಾದ ಮೇಲೆ ದಂಪತಿಗಳು ಊಟಮಾಡಿದರು. ಊಟವಾದೊಡನೆಯೇ ಪವಡಿಸಿದ ವೀಣಾ ಘಂಟೆಗಟ್ಟಲೆ ಎಳೆಯ ಮಗುವಿ ನಂತೆ ನಿದ್ರಿಸಿದರು. ಉಮಾಪತಿಗೆ ಮಾತ್ರ ಮಂಪರು ಬಾಧೆಯೂ ಇರಲಿಲ್ಲ.

* * * *

ಮೂರನೆಯ ದಿನ ವಿಜಯೀವೀರನಂತೆ ಹೆಜ್ಜೆ ಇಡುತ್ತ ನಾಗಪ್ಪ ಕಚೇರಿಗೆ ಹೋದ.

ಅಲ್ಲಿ ಅವನಿಗಾಗಿ ಸಾಹೇಬರ ಆರ್ಡರು ಕಾದಿತ್ತು.

" ಇದೇನು ? " ಎಂದು ಕೇಳಿದ ನಾಗಪ್ಪ.

ಗುಮಾಸ್ತೆಯೊಬ್ಬ ವಿವರಿಸಿದ :

" ನಿನ್ನ ಡಿಸ್ಮಿಸ್ ಮಾಡವ್ರೆ. "

## ಕಥೆ: ಐದು

# ಸ್ವಸ್ತಿಪಾನ

ಎದುರುಬದುರಾಗಿ ಕುಳಿತ ಗೆಳೆಯರಿಬ್ಬರು ಬೀರ್ ತುಂಬಿದ ಮಗ್ಗು ಗಳನ್ನು ಹಿಡಿದೆತ್ತಿದರು. 'ಸರಮುನಿ'ಯ ಮೊದಲ ಹೆಜ್ಜೆಯಾಗಿ ಅವರ ತಲೆಗಳು ಪರಸ್ಪರ ಸಮೀಪಕ್ಕೆ ಬಾಗಿದುವು.

ಇಬ್ಬರೂ ಒಟ್ಟಾಗಿ ಅಂದರು :

"ಮೊದಲ ಭೇಟಿಯ ಸವಿ ನೆನಪಿಗೆ!"

ಸ್ವಸ್ತಿಪಾನ.

ಬದರಿಯ ದಪ್ಪ ಗಂಟಲಿನಿಂದ ಹೊರಟ ನಗೆಯೊಡನೆ ಚಿಕ್ಕಣ್ಣಯ್ಯನ ನಗು ಲೀನವಾಯಿತು.

[ಆ ಮೊದಲ ಭೇಟಿ ಹತ್ತು ಹದಿನಾರು ವರುಷಗಳಿಗೆ ಹಿಂದಿನ ಮಾತು. ಯುದ್ಧದ ಕಾಲ. ಬದರಿಯೂ-ಚಿಕ್ಕಣ್ಣಯ್ಯನೂ ವಿಮಾನ ಕಾರಖಾನೆಯಲ್ಲಿ ಆಗ ದುಡಿಯುತ್ತಿದ್ದರು. ಬಿಳಿಯ ಕೊರಳ ಪಟ್ಟಿಯ ಕಾರ್ಮಿಕರು. ಹಲವು ಸಹಸ್ರ ದುಡಿಮೆಗಾರರಲ್ಲಿ ಇವರು ಒಬ್ಬರು. ವಿಚಿತ್ರ ವೆಂದರೆ ಮೊದಲ ಬಾರಿ ಪರಸ್ಪರರನ್ನು ಅವರು ಕಂಡುದು, ಪರಿಚಿತ ರಾದುದು, ಕಾರಖಾನೆಯಲ್ಲಲ್ಲ-ಪಾನಮಂದಿರದಲ್ಲಿ. ಆಗ, ಎಲ್ಲಿಯೂ ಜಾಗ ದೊರೆಯದೆ ವಿಪರೀತ ಗದ್ದಲ. ಒಂಟಿಯಾಗಿ ಬರುವುದೇ ರೂಢಿ ಯಾಗಿದ್ದ ಚಿಕ್ಕಣ್ಣಯ್ಯ ಮೂಲೆಯ ಒಂದು ಮೇಜನ್ನು ಆಕ್ರಮಿಸಿದ್ದ. ಆಗಂತುಕನೊಬ್ಬ-ತನ್ನದೇ ವಯಸ್ಸಿನ ಯುವಕ- ಆ ವಿಶಾಲಭವನವನ್ನು ಹೊಕ್ಕು, ಆತ್ಮವಿಶ್ವಾಸದ ಠೀವಿಯಿಂದ ಸುತ್ತಲೂ ನೋಡುತ್ತಲಿದ್ದುದು ಅವನಿಗೆ ಕಂಡಿತು. ಆ ವ್ಯಕ್ತಿಯ ದೃಷ್ಟಿ ಚಿಕ್ಕಣ್ಣಯ್ಯನ ಮೂಲೆಯತ್ತ ಹರಿಯಿತು. ಅಲ್ಲಿಗೆ ಅವನು ನಡೆದು ಬಂದ. ವಿನಯದಿಂದ, "ಇಲ್ಲಿ ಕೂತ್ಕೊಬಹುದೆ? ನಾನೊಬ್ಬನೇ ಇದೇನೆ" ಎಂದ. "ಧಾರಾಳವಾಗಿ, ನಾನೂ ಒಬ್ಬನೇ ಇದೇನೆ" ಎಂದು ಉತ್ತರವಿತ್ತ ಚಿಕ್ಕಣ್ಣಯ್ಯ. ಆರಂಭ

ಸ್ನೇಹಪರವಾಗಿತ್ತಾದರೂ, ಮುಂದಿನ ಮಾತುಗಳನ್ನು ಅವರು ಆಡಿದುದು ಅರ್ಧ ಗಂಟೆಯ ಬಳಿಕ. ಮುಂದೆ ಮಂದಿರದಿಂದ ಅವರು ಹೊರಬಿದ್ದುದು, ಗಾಢ ಸ್ನೇಹಿತರಾಗಿ.

ಅಂದಿನಿಂದ ಬದರಿ, ಪಾನಯಾತ್ರೆಗೆ ಸಂಬಂಧಿಸಿ ಇತರ ಗೆಳೆಯರನ್ನು ಬಿಟ್ಟುಕೊಟ್ಟ. ಒಂಟಿ ಚಿಕ್ಕಣ್ಣಯ್ಯ ಬದರಿಗೆ ಅಂಟಿಕೊಂಡ. ಇಬ್ಬರೂ ಜೊತೆಯಾಗಿಯೇ ಚಿಕ್ಕಣ್ಣಯ್ಯನ ಪ್ರೀತಿಪಾತ್ರ ಮಂದಿರಕ್ಕೆ ಬರುತ್ತಿದ್ದರು, ತಿಂಗಳ ಪೂರ್ವಾರ್ಧದಲ್ಲಿ. ಒಟ್ಟು ಎರಡು ಮೂರು ಸಾರಿ.

ಯುದ್ಧ ಮುಕ್ತಾಯವಾದಾಗ ಕೆಲವು ಸಹಸ್ರ ಜನರೊಡನೆ ಬದರಿಗೂ ಬರ್ತರ್ಫ್ ಆಯಿತು. ವೇತನ ತುಸು ಕಡಮೆಯಾಯಿತಾದರೂ ಚಿಕ್ಕಣ್ಣಯ್ಯ ಉದ್ಯೋಗವನ್ನು ಉಳಿಸಿಕೊಂಡ. ಇದ್ದಕ್ಕಿದ್ದಂತೆ ಬದರಿ ಮಾಯವಾದುದನ್ನು ಕಂಡು ಅವನ ಮಿತ್ರನಿಗಾದ ವ್ಯಥೆ ಅಷ್ಟಿಷ್ಟಲ್ಲ. ಬೇಗನೆ ಚಿಕ್ಕಣ್ಣಯ್ಯನಿಗೆ ಮದುವೆಯಾಯಿತು. ಆರತ್ಯಕ್ಷತೆಯ ವೇಳೆಯಲ್ಲಿ ಬದರಿ ಕಾಣಿಸಿಕೊಳ್ಳಬೇಕೆ !

ಮದುವೆಯ ಅನಂತರ ಚಿಕ್ಕಣ್ಣಯ್ಯನ ಪಾನಯಾತ್ರೆ ಕಡಮೆಯಾಯಿತು. ತಿಂಗಳಿಗೊಮ್ಮೆಯಷ್ಟೇ ತಪ್ಪದೆ–ಮೊದಲ ವಾರ–ಆತ 'ಸರಮನಿ'ಗೆ ಬರುತ್ತಿದ್ದ. ನಿರುದ್ಯೋಗಿಯಾದ ಮೇಲೆ ಬದರಿ, ಸಣ್ಣಪುಟ್ಟ ನೌಕರಿಗಳ ದೀರ್ಘ ಸರಪಣಿಯನ್ನೇ ಹೆಣೆದ. ಆ ಸಂಸ್ಥೆಯ ಸೇಲ್ಸ್‌ಮನ್, ಈ ಸಂಸ್ಥೆಯ ಪ್ರತಿನಿಧಿ–ಹೀಗೆ . . . ಯಾವ ದಿಕ್ಕಿಗೆ ಪ್ರವಾಸ ಹೋಗಿದ್ದರೂ ತಿಂಗಳ ಕೊನೆಯಲ್ಲಿ ಬದರಿ ಊರು ಸೇರುತ್ತಿದ್ದ. ಮೊದಲ ವಾರದ ಒಂದು ಸಂಜೆ ಗೆಳೆಯರು ಜೊತೆಯಾಗಿರುತ್ತಿದ್ದರು.

. . . ಚಿಕ್ಕಣ್ಣಯ್ಯನೀಗ ಐದು ಮಕ್ಕಳ ತಂದೆ. ವಾಸೆಕ್ಟಮಿ ಮಾಡಿಸಿಕೊಂಡಿರುವ, ಯೋಜಿತ ಕುಟುಂಬದ ಮುಖ್ಯಸ್ಥ. ಉದರ ಪ್ರದೇಶ ಸ್ವಲ್ಪ ಅಭಿವೃದ್ಧಿ ಹೊಂದಿದೆ; ಮೈ ಕೈಗಳು ತುಂಬಿಕೊಂಡಿವೆ. ಆದರೂ ತಲೆಗೂದಲ ಬಣ್ಣ ಅಚ್ಚಗಪ್ಪು. ಬದರಿ ಮಾತ್ರ ಇನ್ನೂ ಒಬ್ಬಂಟಿಗ. ವರ್ಷಗಳು ದಾಟಿದ್ದರೂ ಪಂದ್ಯಾಟದ ಪಟುವಿನ ಅಂಗಸೌಷ್ಠವವೇ ಈಗಲೂ. ತಲೆಯ ತುಂಬ ಬೆಳ್ಳಿ ಕೂದಲ ಪೊದೆ. ಅವನೀಗ ಯಾವ ಸಂಸ್ಥೆಯ ಪ್ರತಿನಿಧಿಯೋ ಹೇಳುವುದು ಕಷ್ಟ. ಟ್ರಾನ್‌ಸಿಸ್ಟರ್ ರೇಡಿಯೋಗಳು ; ಬೆಲೆ

ಬಾಳುವ ಕೈ ಗಡಿಯಾರಗಳು, ಅಮೂಲ್ಯ ಪೆನ್ನುಗಳು–ಏನು ಬೇಕಾದರೂ ಆತನಲ್ಲಿ ಸಿಗುತ್ತವೆ. 'ಕೈ ತುಂಬ ಸಂಪಾದನೆ ಇರುವ ಮನುಷ್ಯ'. . .]

ಕಹಿ ಗುಟುಕನ್ನು ನುಂಗಿ, ತುಟಿಗಳನ್ನು ಬಿಗಿದು, ಮಿತ್ರನನ್ನು ಕಂಡು ಯುಗಗಳೇ ಕಳೆದುವೇನೋ ಎನ್ನುವಂತೆ ಚಿಕ್ಕಣ್ಣಯ್ಯ, ಬದರಿಯನ್ನು ದಿಟ್ಟಿಸಿದ.

"ಮನೆಯಿಲ್ಲ, ಸಂಸಾರವಿಲ್ಲ–ಆದರೂ ಊರಿಗೆ ವಾಪಸು ಬರೋದು ಅಂದರೆ ಎಂಥ ಸುಖ ಅಂತೀಯಾ!" ಎಂದ ಬದರಿ.

"ಹೂಂ."

ಚಿಕ್ಕಣ್ಣಯ್ಯ ಅಪ್ರತಿಮ ಶ್ರೋತೃ. ಬದರಿಯೇ ಮಾತುಗಾರ, ಯಾವಾಗಲೂ.

"ಈ ಸಲ ಕಾರವಾರದ ಕಡೆಗೆ ಪ್ರವಾಸ ಹೋಗಿದ್ದೆ. ಒಣ ನೆಲದಿಂದ ವಾಪಸಾದವರಿಗೆಲ್ಲಾ ಈ ಊರು ನಂದನವೇ ಅಂತೀಯೇನೋ?"

"ಹಹ್ಹ."

"ಹೆಸರಿಗೆ ಒಣ ನೆಲ. ಅಲ್ಲಿ ಸಿಗದ ವಸ್ತುವಿಲ್ಲ. ಬೆಲೆ ವಿಷಯದಲ್ಲಿ ಚೌಕಾಶಿ ಮಾಡದೇ ಇದ್ದರಾಯ್ತು!"

"ಹುಂ."

"ಈ ಟ್ರಿಪ್ನಲ್ಲಿ ಒಬ್ಬ ಅದ್ಭುತ ಮನುಷ್ಯನನ್ನು ಕಂಡೆ."

ಕಣ್ಣುಗಳನ್ನು ಕಿರಿದುಗೊಳಿಸಿ ಚಿಕ್ಕಣ್ಣಯ್ಯ ಒಂದು ಮಾತು ಅಂದ.

"ಕಳ್ಳಭಟ್ಟಿ ಉದ್ಯಮಗಳ ಅರಸನೋ?"

"ಛೆ! ಇಂಥವರನ್ನ ನೋಡೋಕೆ ಅಲ್ಲಿಗೆ ಹೋಗ್ಬೇಕೆ? ನಾನು ಸಂಧಿಸಿದ್ದು ಅಸಾಧಾರಣ ಮನುಷ್ಯನನ್ನು!" ಎಂದ ಬದರಿ, ಬಟಾಟೆ ಚಿಪ್‌ಗಳನ್ನು ಬಾಯಿಗಿಟ್ಟು ಕುರುಕುತ್ತ.

ಕಥನವನ್ನು ಎಲ್ಲಿ ಹೇಗೆ ಆರಂಭಿಸಬೇಕು ಎಂದು ಆತ ಯೋಚಿಸುವಂತಿತ್ತು.

ಇನ್ನೊಂದು ಗುಟುಕು ಹೀರಿ ಚಿಕ್ಕಣ್ಣಯ್ಯನೆಂದ:

"ನಾನು ಸಿದ್ಧವಾಗಿದೀನಿ."

* * * *

ಅದ್ಭುತ ಮನುಷ್ಯನನ್ನು ಬದರಿ ಸಂಧಿಸಿದ್ದು ಕಡಲ ದಂಡೆಯಲ್ಲಲ್ಲ,– ಮೂವತ್ತು ನಾಲ್ವತ್ತು ಮೈಲಿಗಳ ಒಳಭಾಗದಲ್ಲಿ, ಅಡವಿಯ ನಡುವೆ.

ಅಲ್ಲಿಗೆ ಬದರಿ ಹೋಗಲು ಕಾರಣವಿತ್ತು. ಅವನ ಪರಿಚಿತರೊಬ್ಬರು, "ಡೈನಿಂಗ್ ಟೇಬಲು ಮಾಡಿಸೋಕೆ ಮೂರಡಿ ಅಗಲ ಆರಡಿ ಉದ್ದದ ಒಂದು ಅಖಂಡ ಹಲಿಗೆ ಬೇಕು. ಎಲ್ಲಾದರೂ ಇದ್ದರೆ ಕೊಡಿಸಿ," ಎಂದಿದ್ದರು.

ಕಾರವಾರದ ವ್ಯಾಪಾರಿ ಮಿತ್ರನೊಬ್ಬನನ್ನು ಬದರಿ ಕೇಳಿದ.

"ಎಲ್ಲಿ ಸಿಗಬಹುದು?"

ಆತ ಕೊಟ್ಟುದು ದಯಾನಂದ ಸಾವ್ಕಾರರ ವಿಳಾಸವನ್ನು.

"ನೀವು ಹೋಗೋದಿದ್ದರೆ ಬೆಳಗ್ಗಿನ ಆರು ಘಂಟೆ ಬಸ್ನಲ್ಲೇ ಹೊರಡ್ಬೇಕು. ಮಧ್ಯಾಹ್ನ ಹನ್ನೆರಡು ಘಂಟೆ ಆದ್ಮೇಲೆ ಸಾವ್ಕಾರ್ರು ವ್ಯಾಪಾರ ಮಾಡೋದಿಲ್ಲ!"

"ಅಂದರೆ?"

"ಅವರ ಪದ್ಧತಿ ಹಾಗೆ! ನೀವು ಹೋಗಿ ಬನ್ನಿ. ಸಾಯಂಕಾಲ ವಾಪಸಾಗ್ಬಹುದು."

ಮಾರನೆಯ ಬೆಳಗ್ಗೆ ನಸುಕಿನಲ್ಲೆದ್ದು ಬದರಿ, ಧೂಳೆಬ್ಬಿಸುವ ಕೆಂಪು ಬಸ್ಸಿನಲ್ಲಿ ಕುಳಿತು ಅಡವಿಯ ಮಾರ್ಗವಾಗಿ ಪ್ರಯಾಣ ಬೆಳಸಿದ.

ಅವನು ಆ ಊರನ್ನು ತಲಪಿದ್ದು ಹತ್ತು ಘಂಟೆಯ ಹೊತ್ತಿಗೆ. ಬಸ್ಸಿನಿಂದಿಳಿದವನಿಗೆ ವಿಳಾಸದಾರರನ್ನು ಹುಡುಕುವ ಕಷ್ಟವೇನೂ ಒದಗಲಿಲ್ಲ. ಅಲ್ಲಿದ್ದುದು ಒಂದೇ ರಸ್ತೆ. ರಸ್ತೆಯ ಮೇಲಿದ್ದವರು ಸಾಗುತ್ತಿದ್ದುದೆಲ್ಲ ಒಂದೇ ದಿಕ್ಕಿಗೆ–ಸಾಹುಕಾರರ ಅಡ್ಡೆಗೆ. ಕಾಡು ಕಡಿದು ಮಾಡಿದ ನಾಲ್ಕೆಕರೆ ಬಯಲು ಸ್ಥಳದಲ್ಲಿ ಮರದ ತೊಲೆಗಳು ಅಸಂಖ್ಯವಾಗಿ, ಸಾಲಾಗಿ, ಕೊನೆಯೆ ಇಲ್ಲ ಎಂಬಂತೆ ಪಿರಮಿಡ್ಡುಗಳಾಗಿ ವಿರಮಿಸುತ್ತಿದ್ದುವು. ಬಲಶಾಲಿ ಟ್ರಕ್ಕುಗಳು ಓಡಾಡುತ್ತಿದ್ದುವು. ಎರಡು ಆನೆಗಳು ದಿಮ್ಮಿಗಳನ್ನು ಒಟ್ಟುವ ಕೆಲಸ ನಡೆಸಿದ್ದುವು. ದೇಶದ ವಿವಿಧ ಭಾಗಗಳಿಂದ ಬಂದ ಗಿರಾಕಿಗಳು, ಧೂಳುಮುಚ್ಚಿದ ದುಡಿಯುವರ ನಡುವೆ ಎದ್ದು ಕಾಣಿಸುತ್ತಿದ್ದರು. ಇದು ಆಫೀಸು, ಇದು ಡಿಪೋ ಎಂದು ತೋರಿಸುವ ಯಾವ ಬೋರ್ಡೂ ಅಲ್ಲಿರಲಿಲ್ಲ. ಸ್ವತಃ ಸಾಹುಕಾರರೇ ಆ ಊರಿಗೆ ಒಂದು ಬೋರ್ಡು. ಅವರಿಂದ

ಊರಿಗೊಂದು ಪ್ರಸಿದ್ಧಿ. ಆ ಊರು ನಿರ್ಮಾಣವಾದುದೂ ಅವರ ಉದ್ಯಮದ ಫಲವಾಗಿ.

ಬದರಿ ಕಾರ್ಯಾಗಾರವನ್ನು ಸಮೀಪಿಸಿದಂತೆ, ಕಟ್ಟಿಗೆ ಕೊರೆಯುವ ಮರಕುಯ್ಯುವ-ಯಂತ್ರಗಳ ಸಪ್ಪಳ ಬಲಗೊಂಡಿತು.

ಮೂಲೆಯಲ್ಲಿ, ಮರದ ಹಲಗೆಗಳನ್ನಷ್ಟೆ ಜೋಡಿಸಿ ಕಟ್ಟಿದ ಒಂದಂತಸ್ತಿನ ಪುಟ್ಟ ಮನೆಯೊಂದಿತ್ತು. ಛಾವಣಿಗೂ ಹಲಗೆಗಳು. ಇಡಿಯ ಮನೆಗೇ ಅಂಟಿಕೊಂಡಿತ್ತು, ಹಲವು ಟಿನ್ನುಗಳನ್ನು ಒಡೆದು ಹೊರಬಂದ ಹಸುರು ವಾರ್ನಿಷ್ ಬಣ್ಣ. ಕಿಟಕಿ ಬಾಗಿಲುಗಳ ಚೌಕಟ್ಟುಗಳಿಗೆ ಮಾತ್ರ ಕಂದು ವರ್ಣವಿತ್ತು. ಹಸುರು ಕಾಡಿನ ಸಾರಸರ್ವಸ್ವ, ಆ ಗೃಹದ ಕುಶಲ ಕಲೆಗಾರಿಕೆಯಲ್ಲಿ ಘನೀಭವಿಸಿದಂತಿತ್ತು. ಸಾ ಮಿಲ್ಲುಗಳಿಗೆ ತುಸುದೂರದಲ್ಲಿ, ಕಟ್ಟಿಗೆಯಿಂದಲೇ ಕಟ್ಟಿದ ಚಪ್ಪರದಂತಹ ಒಂದು ಭವನ. ಅಲ್ಲಿ ಹತ್ತಾರು ಕುರ್ಚಿಗಳಲ್ಲಿ ಜನರು ಕುಳಿತಿದ್ದರು. ಚಪ್ಪರದಲ್ಲಿ ಒಂದು ಕೊನೆಯಲ್ಲಿ ವೇದಿಕೆ. ಆ ವೇದಿಕೆಯ ಮೇಲೆ ಒರಗುದಿಂಬುಗಳು. ಅತಿ ದೊಡ್ಡದಾದ ದಿಂಬಿಗೊರಗಿ ಭವ್ಯಾಕೃತಿಯ ಅರವತ್ತು ದಾಟಿರಬಹುದಾದ ವೃದ್ಧರೊಬ್ಬರು ಕುಳಿತಿದ್ದರು. ಅವರ ಮಗ್ಗುಲಲ್ಲಿ ಫೋನಿತ್ತು. ಆ ಕಾಡಿನಲ್ಲಿ ಫೋನ್! ವೇದಿಕೆಯ ಕೆಳಗೆ ಆ ಗೃಹಸ್ಥರ ಬಲ ಮಗ್ಗುಲಲ್ಲಿ ನಾಲ್ಕಾರು ಜನ ಕಾರಕೂನರು ಸಾಲಾಗಿ ಕುಳಿತಿದ್ದರು, ಮಸಿ ಕುಡಿಕೆಗಳಿಗೆ ಅದ್ದಿ ಅದ್ದಿ ದೊಡ್ಡ ಪುಸ್ತಕಗಳಲ್ಲಿ ಬರೆಯುತ್ತ. ಆಳುಗಳು ಬರುತ್ತಲಿದ್ದರು, ಹೋಗುತ್ತಲಿದ್ದರು. ಟ್ರಕ್ ಡ್ರೈವರುಗಳು ಲೆಕ್ಕ ಒಪ್ಪಿಸುತ್ತಿದ್ದರು. ಸಲಾಂ ಮಾಡುತ್ತಿದ್ದರು.

ಬದರಿ ಮೂಕವಿಸ್ಮಿತನಾಗಿ ಆ ಚಪ್ಪರವನ್ನು ಪ್ರವೇಶಿಸಿದ. ಅಂತಹ ಜಗತ್ತೊಂದು ಅಲ್ಲಿತ್ತೆಂಬುದೇ ಅವನಿಗೆ ಅಚ್ಚರಿಯ ವಿಷಯವಾಗಿತ್ತು.

ತಾನು ಹೋದೊಡನೆಯೇ ಸಂಭಾಷಣೆ ಈ ರೀತಿಯಾಗಿ ನಡೆಯಬಹುದೆಂದು ಬದರಿ ತರ್ಕಿಸಿದ್ದ.

"ನಮಸ್ಕಾರ. ಬರಬೇಕು."

"ನಮಸ್ಕಾರ. ದಯಾನಂದ ಸಾವ್ಕಾರ್ರನ್ನು ನೋಡಬೇಕಿತ್ತು."

"ನಾನೇ ದಯಾನಂದ ಸಾವ್ಕಾರ. ಹೇಳೋಣಾಗಲಿ."

ಊಹೂಂ. ತರ್ಕ ತಪ್ಪಾಗಿತ್ತು. ಬದರಿಯನ್ನು ಯಾರೂ ಸ್ವಾಗತಿಸ ಲಿಲ್ಲ, ಯಾರೂ ಮಾತನಾಡಿಸಲಿಲ್ಲ.

ಅಲ್ಲಿ ನೆರೆದ ಸಭೆಯ ಕೇಂದ್ರಬಿಂದುವಾಗಿದ್ದ ವ್ಯಕ್ತಿ ಮಾತ್ರ ರಾಜ ಶೀವಿಯಿಂದ ಹೊಸಬನನ್ನು ನೋಡಿತು. ಬದರಿ ತನಗರಿವಿಲ್ಲದಂತೆಯೇ ತುಸು ತಲೆಬಾಗಿದ. ಈತ ಈ ಪ್ರದೇಶದ ಅರಸು; ಇದು ದರಬಾರು; ಕುಳಿತಿದ್ದವರು ಸುತ್ತಮುತ್ತಲಿನ ಪಾಳೆಯಗಾರರು; ತಾನೊಬ್ಬನೇ ದೂರ ದೇಶದಿಂದ ಬಂದಿರುವ ಯಾತ್ರಿಕ–ಎಂದೆಲ್ಲ ಬದರಿಗೆ ಅನಿಸಿತು. ಪ್ರವೇಶ ದ್ವಾರದ ಬಳಿಯಲ್ಲೊಂದು ಕುರ್ಚಿ ಖಾಲಿ ಇತ್ತು. ಅತಿಥಿ ಸತ್ಕಾರದ ಹಾದಿನೋಡದೆ ಬದರಿ ಅದರಲ್ಲಿ ಕುಳಿತುಕೊಂಡ.

ವೇದಿಕೆಯ ಮಧ್ಯದಲ್ಲಿ ವಿರಾಜಮಾನರಾಗಿದ್ದವರೇ ಸಾಹುಕಾರ ರೆಂಬುದು ಸ್ಪಷ್ಟವಾಗಿತ್ತು. ಸ್ವಲ್ಪ ಕಾಲ, ತಾನು ಬಂದುದರ ಉದ್ದೇಶ ವನ್ನೇ ಮರೆತು, ಬದರಿ ಬರಿಯ ಪ್ರೇಕ್ಷಕನಾಗಿ ಅಲ್ಲಿ ನಡೆಯುತ್ತಿದ್ದುದನ್ನು ದಿಟ್ಟಿಸಿದ.

ಸಂಭಾಷಣೆಗಳು–ನಗೆ. ಹಿಂದಿಯಲ್ಲಿ, ಮರಾಠಿಯಲ್ಲಿ, ಕೊಂಕಣಿ ಯಲ್ಲಿ, ತಮಿಳಿನಲ್ಲಿ, ಕನ್ನಡದಲ್ಲಿ, ಟ್ರಂಕ್‌ಕಾಲುಗಳು–ಮುಂಬಯಿಯಿಂದ, ಮದರಾಸಿನಿಂದ, ವಿಲಾಯಿತಿಗೆ ಹೊರಡಲು ಹಡಗು ಸಿದ್ಧವಾಗಿ ನಿಂತಿದ್ದ ಧಕ್ಕೆಯಿಂದ.

ಜನಸಂದಣಿ ಕರಗತೊಡಗಿತು. ಸಾಹುಕಾರರೂ ಕೈ ಗಡಿಯಾರ ವನ್ನು ನೋಡಿದರು. ಅದನ್ನು ದಿಟ್ಟಿಸಿದ ಬದರಿ, ತಾನೂ ತನ್ನ ವಾಚಿನತ್ತ ದೃಷ್ಟಿ ಹರಿಸಿದ. ಹನ್ನೊಂದೂವರೆ. ಇದ್ದಕ್ಕಿದ್ದಂತೆ ಅವನಿಗೆ ನೆನಪಾಯಿತು. "ಮಧ್ಯಾಹ್ನ ಹನ್ನೆರಡು ಘಂಟೆ ದಾಟಿದ್ಮೇಲೆ ಸಾವ್ಕಾರ್ರು ವ್ಯಾಪಾರ ಮಾಡೋದಿಲ್ಲ."

ಕಾತರಗೊಂಡ ಬದರಿ ಕುಳಿತಲ್ಲೆ ಮಿಸುಕಿದ.

ಅಷ್ಟರಲ್ಲಿ ಒಬ್ಬ ಆಳು ಅವನೆಡೆಗೆ ಬಂದ.

"ಸಾವ್ಕಾರ್ರು ಕರೀತಾರೆ. ಮೇಲೆ ಬರಬೇಕಂತೆ."

ಹಿಂದೂಸ್ಥಾನಿಯಲ್ಲಿ ಹೇಳಿದ ಮಾತು. ಮೇಲೆ ಅಂದರೆ ವೇದಿಕೆಗೇ ಇರಬೇಕು–ಎಂದುಕೊಂಡ ಬದರಿ.

ಆತ ಎದ್ದು ತನ್ನ ಬ್ರೀಫ್‌ಕೇಸಿನೊಡನೆ ಸಾಹುಕಾರರತ್ತ ಸಾಗಿದ.

ಅಪರಿಚಿತ ಬಾಲಕನ ಬಗೆಗೆ ಪ್ರೀತಿ ತೋರುವ ಹಿರಿಯನಂತೆ ಸಾಹುಕಾರರು ಮುಗುಳುನಕ್ಕು, ಹತ್ತಿರ ಬರಲು ಸನ್ನೆ ಮಾಡಿದರು. ಬದರಿ ತನ್ನ ವ್ಯಕ್ತಿತ್ವವನ್ನು ರಕ್ಷಿಸಲೆತ್ನಿಸುತ್ತ, ಸಾಕಷ್ಟು ಠೀವಿಯಿಂದಲೆ ಅವರ ಬಳಿ ಕುಳಿತ.

ಏನು ಬೇಕಿತ್ತು ?—ಎನ್ನುವ ಪ್ರಶ್ನೆಯನ್ನು ಅವರ ಮುಖಭಾವ ಪ್ರಕಟಿಸಿತು.

ಬೆಳಗ್ಗಿನಿಂದ ಮೌನಾಚರಣೆಯಲ್ಲಿದ್ದ ಗಂಟಲನ್ನು ಸರಿಪಡಿಸುತ್ತ ಬದರಿಯೆಂದ :

" ಮೂರಡಿ ಅಗಲ, ಆರಡಿ ಉದ್ದದ ಹಲಗೆ . . . "

" ಎಷ್ಟು ?"

ಮುದುಕನಿಗೆ ಕಿವಿ ದೂರವೇನೋ ಎಂಬ ಶಂಕೆಯಿಂದ ಬದರಿ ತುಸು ಧ್ವನಿ ಏರಿಸಿ ನುಡಿದ :

" ಮೂರಡಿ ಅಗಲ, ಆರಡಿ ಉದ್ದ . . . "

ಬದರಿಗೇ ಕಿವಿ ಮಂದವಿರಬಹುದೆಂದು ಸಾಹುಕಾರರು ಭಾವಿಸಿದರೇನೋ ಎನ್ನುವಂತೆ ಅವರು ಗಟ್ಟಿಯಾಗಿ ಅಂದರು :

" ಅದೇ–ಎಷ್ಟು ಬೇಕು ?"

ಬದರಿ ಕಕ್ಕಾವಿಕ್ಕಿಯಾಗಿ ಪಿಳಿಪಿಳಿ ಕಣ್ಣುಬಿಟ್ಟ. ತಾನೆಂತಹ ಆಭಾಸಕರ ಸನ್ನಿವೇಶಕ್ಕೆ ತುತ್ತಾದೆನೆಂಬುದರ ಪೂರ್ಣ ಅರಿವು ಅವನಿಗಾಯಿತು. ಮುದುಕ ಉತ್ತರಕ್ಕಾಗಿ ಕಾದು ಅದೆಷ್ಟೋ ವರ್ಷಗಳಾದುವೆಂಬಂತೆ ಆತನಿಗೆ ಭಯವಾಯಿತು. ಥಟ್ಟನೆ ಅವನೆಂದ :

" ಹತ್ತು."

ಕಬ್ಬಿಣ ಉಕ್ಕುಗಳ ರಖಂ ವ್ಯಾಪಾರಿಯ ಬಳಿಗೆ ಹೋಗಿ ಒಂದು ಬಿಡಿ ಸೂಜಿಯನ್ನು ಕೊಡಿರೆನ್ನುವುದೇ ?

ಸಾಹುಕಾರರು ತಮ್ಮ ನೀಳವಾದ ತೋಳನ್ನು ಮುಂದಕ್ಕೆ ಚಾಚಿ, ತೋರು ಬೆರಳಿನಿಂದ ಏನನ್ನೊ ಬೊಟ್ಟುಮಾಡಿ ತೋರಿಸಿದರು. ಅವರ ಬೆರಳಿನ ಗುರಿಯತ್ತ ಬದರಿ ನೋಡಿದ. ಏಳೆಂಟು ಜನ ಕೈ ಕೈ ಹಿಡಿದು ಸುತ್ತುವರಿದು ತಬ್ಬಬೇಕಾದಂತಹ ದೈತ್ಯಾಕೃತಿಯ ಮರದ ಕಾಂಡಗಳು ಹತ್ತಾರು ಅಲ್ಲಿ ಬಿದ್ದಿದ್ದುವು.

ಬದರಿ ಬೇಗನೆ ಅರ್ಥಮಾಡಿಕೊಂಡ–ಆ ಕಾಂಡಗಳಲ್ಲೊಂದನ್ನು ಸೀಳಿ ತನಗೆ ಬೇಕಾದ ಹತ್ತು ಹಲಗೆಗಳನ್ನು ಸಿದ್ಧಗೊಳಿಸಲಾಗುವುದೆಂದು.

" ಒಂದೊಂದಕ್ಕೆ ಎಂಬತ್ತೈದು ರೂಪಾಯಿ."

ಅಷ್ಟು ದೊಡ್ಡ ಮರದ ಕಾಂಡಕ್ಕೆ ಎಂಬತ್ತೈದು ರೂಪಾಯಿ ?

ಬದರಿ ತನ್ನ ಕಿವಿಗಳನ್ನು ತಾನು ನಂಬದಾದ. [ಕೊಡಗಿನಲ್ಲಿ ಮಾತ್ರ ಕಾಫಿ ಅಗ್ಗವಲ್ಲ !] ಆದರೂ, ತನ್ನ ತಿಳಿವಳಿಕೆ ಖಚಿತವಾಗಲೆಂದು—" ಒಂದೊಂದಕ್ಕೇ?" ಎಂದು ಕೇಳಿದ.

"ಹ್ನ್ಞ, ಹತ್ತು ಹಲಿಗೆಗೆ ಒಟ್ಟು ಎಂಟು ನೂರಾ ಐವತ್ತು ರೂಪಾಯಿ."

ಹುಡುಗನಿಗೆ ಲೆಕ್ಕ ತಪ್ಪದಿರಲೆಂದು ಅವರು ಬಿಡಿಸಿ ಹೇಳಿದ್ದರು.

ಬದರಿ ಉಗುಳು ನುಂಗಿದ. ತನ್ನ ಸಂಕಟವನ್ನು ತೋರ್ಪಡಿಸದೆ ಬ್ರೀಫ್‌ಕೇಸಿನಿಂದ ಚೆಕ್ ಪುಸ್ತಕ ತೆರೆದು ೮೫೦ ರೂ.ಗೆ ಚೆಕ್‌ಬರೆದ.

" ಇದು ಕ್ಯಾಷ್ ಆದ್ಮೇಲೆ ಹಲಗೆಗಳನ್ನು ತಾವು ಕಳಿಸಿಕೊಡ ಬಹುದು," ಎಂದ.

ಬ್ಯಾಂಕಿನ ಹೆಸರನ್ನೂ ಊರು ಯಾವುದೆಂಬುದನ್ನೂ ನೋಡಿದ ಸಾಹುಕಾರರು ಅಂದರು :

" ಅಂಥಾದ್ದೇನೂ ಇಲ್ಲ. ಇವತ್ತೇ ಕುಯ್ಸ್ತೇವೆ. ನಾಳೆ ನಮ್ಮ ಟ್ರಕ್ಕು ಹುಬ್ಬಳ್ಳಿಗೆ ಒಯ್ತದೆ. ಇಷ್ಟು ಫ್ರೀ ಡೆಲಿವರಿ. ಮುಂದೆ ನಿಮ್ಮೂರಿಗೆ ಟುಪೇ ಗೂಡ್ಸ್ ಪಾರ್ಸಲ್ ಮಾಡ್ತೇವೆ. ಅಡ್ರಸ್ ಕೊಟ್ಟು ಹೋಗ್ರಿ."

ಯೋಚಿಸುವುದಕ್ಕೆ ಒಂದೆರಡು ನಿಮಿಷಗಳ ಅವಧಿಯೂ ಇರಲಿಲ್ಲ ಬದರಿಗೆ. ಕಾರಕೂನ ಬಂದು ಆರ್ಡರು ಪುಸ್ತಕವನ್ನು ಮುಂದಿರಿಸಿದ. ವಿಳಾಸ ಹಾಗೂ ಸಹಿಗೆ. ಬದರಿ ಧೈರ್ಯವಾಗಿ ಆ ಸಾಲುಗಳನ್ನು ತುಂಬಿದ.

ಸಾಹುಕಾರರು ತನ್ನ ಕೈ ಗಡಿಯಾರವನ್ನು ನೋಡಿದರು.

" ಈಗ ಯಾವ ಕಡೆಗೆ ಹೋಗ್ತೀರಿ ?"

" ಕಾರವಾರಕ್ಕೆ."

" ದಾಂಡೇಲಿಯಿಂದ ಹನ್ನೆರಡಕ್ಕೊಂಡು ಬಸ್ ಬರ್ತದೆ. ನಶೀಬ ಇದ್ರೆ ಸೀಟು ಸಿಗಬಹುದು."

" ನೋಡ್ತೀನಿ."

" ಸಿಗದೇ ಇದ್ದರೆ ಬರ್ರಿ. ಊಟಕ್ಕೆ ವ್ಯವಸ್ಥೆ ಮಾಡುವಾ."

" ಆಗಲಿ. ನಮಸ್ಕಾರ. "

" ಹ್ಞ-ಹ್ಞ- " ಜೀವಮಾನದಲ್ಲೆಂದೂ ಯಾರಿಗೂ ಆತ ನಮಿಸಿಯೇ ಇಲ್ಲವೇನೋ ಎನ್ನುವ ಹಾಗೆ.

ನಿರೂಪ ಪಡೆದ ಬದರಿ ಬಸ್ ನಿಲ್ದಾಣಕ್ಕೆ ಧಾವಿಸಿದ. ಆ ದಿನದ ಮಟ್ಟಿಗೆ ಅವನಿಗಿದ್ದುದು ' ಖೊಟ್ಟಿ ನಸೀಬ.' ಹೊಟ್ಟೆ ಚುರ್ ಚುರ್ ಎನ್ನುತ್ತಿತ್ತು. ಎಂಟು ನೂರ ಐವತ್ತು ತೆತ್ತಾಯಿತು. ಒಂದು ಊಟ ಪ್ರತಿಯಾಗಿ ಪಡೆದರೆ ತಪ್ಪಲ್ಲ-ಅದೂ ಆ ಕಾಡಿನಲ್ಲಿ. ಬೇರೆ ಅಂಗಡಿಗಳಾಗಲೀ ಮನೆಗಳಾಗಲೀ ಕಾಣಿಸದೇ ಇರುವಾಗ, ಎನ್ನುತ್ತ ಬದರಿ ನಿಧಾನವಾಗಿ ಅಡ್ಡೆಗೆ ಹಿಂತಿರುಗಿದ.

ಮಧ್ಯಾಹ್ನದ ವಿರಾಮವೆಂದು ಕಾರ್ಯಾಗಾರವೀಗ ನಿರ್ಜನವಾಗಿತ್ತು.

ಚಪ್ಪರದಲ್ಲಿದ್ದುದು ಕಾವಲುಗಾರನೊಬ್ಬನೇ.

ಅವನೆಂದ :

" ಹನ್ನೆರಡಾಯ್ತು, ಇನ್ನು ಮಾರಾಟವಿಲ್ಲ. "

ಕೊಳ್ಳುವ ಕೆಲಸವನ್ನು ತಾನಾಗಲೇ ಮುಗಿಸಿರುವೆನೆಂದು ಬದರಿ ವಿವರಿಸಿದ. ಕುರ್ಚಿಯಲ್ಲಿ ಕುಳಿತಿರಲು ಸಮ್ಮತಿ ದೊರೆಯಿತು.

" ಇನ್ನು ಮೋಟಾರು ನಾಲ್ಕಾವರೆಗೆ, " ಎಂದ ಕಾವಲುಗಾರ.

ಬದರಿ ಕೇಳಿದ :

" ಇಲ್ಲಿ ಊಟ ಎಲ್ಲಿ ಸಿಗುತ್ತಪ್ಪ ? "

" ಈ ಊರಲ್ಲಿ ಖಾನಾವಳಿ ಇಲ್ರೀ. ಹ್ವಾರೆ ಮಂದಿ ಬುತ್ತಿ ತರ್‍ತಾರೆ."

ಹತ್ತಿರದಲ್ಲಿದ್ದ ಹಸುರು ಮನೆಯೊಳಗೆ ಜನರಿದ್ದಂತೆಯೇ ತೋರಲಿಲ್ಲ.

ಸಾಹುಕಾರರು ಊಟದ ವ್ಯವಸ್ಥೆ ಮಾಡುವಾ ಎಂದಿದ್ದರೆಂದು ತಿಳಿಸಲು, ಬದರಿಯ ಸ್ವಾಭಿಮಾನ ಅಡ್ಡಿಯಾಯಿತು. ಕಪ್ಪಿಟ್ಟ ಮುಖದೊಡನೆ ಆತ ಕುಳಿತ.

ಅಷ್ಟರಲ್ಲಿ ಹಸುರು ಮನೆಯ ಮೇಲಣ ಅಂತಸ್ತಿನಲ್ಲಿ ಸಾಹುಕಾರರು ಕಾಣಿಸಿಕೊಂಡರು. ಅವರೀಗ ತೊಟ್ಟಿದ್ದುದು ಅಡ್ಡಪಂಚೆ ಮತ್ತು ಬರಿಯ ಬನೀನು. ಅವರ ಕೈಯಲ್ಲೊಂದು ನೀಳವಾದ ಲೋಟವಿತ್ತು. ಅದರಿಂದ ತುಸು ತುಸುವಾಗಿ ದ್ರಾವಕವನ್ನೇನೋ ಕುಡಿಯುತ್ತ, ದೃಷ್ಟಿ ಹರಿಯುವವರೆಗೂ ತಮ್ಮ ರಾಜ್ಯವನ್ನು ದಿಟ್ಟಿಸಿ ನೋಡುತ್ತ, ಅವರು ನಿಂತರು.

ಮಹಡಿಯ ಜಗಲಿಯಲ್ಲೊಂದು ಕುರ್ಚಿಯಿತ್ತು. ಅದನ್ನೆಳೆದು ಕುಳಿತರು. ಲೋಟದಲ್ಲಿದ್ದುದನ್ನು ಕುಡಿಯುತ್ತಲಿದ್ದಂತೆ ಒಬ್ಬರೇ ಮಾತನಾಡುವುದಕ್ಕೂ ಅವರು ಆರಂಭಿಸಿದರು. ಎಂಥ ಮಾತುಗಳು! ಅಶ್ಲೀಲವೆನಿಸುವ ಭೀಭತ್ಸವೆನಿಸುವ ಬೈಗಳು. ಎದ್ದು ನಿಂತು ಕಣ್ಣಿಗೆ ಬಿದ್ದ ಆಳುಗಳನ್ನು ಅವರು ಹತ್ತಿರಕ್ಕೆ ಕರೆದರು. ಹೀನಾಯವಾಗಿ ಅವರನ್ನು ಜರೆದರು. ಬಳಸಿದ ಪದಗಳೋ ತುಚ್ಛತಮ!

ನೋಡುತ್ತಲಿದ್ದ ಕೇಳುತ್ತಲಿದ್ದ ಬದರಿ ದಂಗಾಗಿ ಹೋದ. ಸ್ವಲ್ಪವೇ ಹೊತ್ತಿಗೆ ಮುಂಚೆ ತಾನು ಸಂಧಿಸಿದ ಭವ್ಯ ವ್ಯಕ್ತಿ ಈತನೇ ಏನು? ಇದೆಂತಹ ಹೊಸ ಅವತಾರ? ಯಾವ ಬಗೆಯ ನಾಟಕ ಇದು?

ಪೆಚ್ಚಾಗಿ ಯೋಚಿಸುತ್ತಿದ್ದ ಬದರಿ ಸಾಹುಕಾರರ ಕಣ್ಣಿಗೆ ಬಿದ್ದ. ಬರಿದಾಗಿದ್ದ ಲೋಟವನ್ನು ಅವರು ಅಂಗಳಕ್ಕೆ ಎಸೆದರು. ಕಂಪಿಸುವ ಕೀರಲು ಧ್ವನಿಯಲ್ಲಿ ಸುತ್ತಮುತ್ತಲ ಪ್ರದೇಶಕ್ಕೆಲ್ಲ ಕೇಳಿಸುವಂತೆ ಕಾವಲುಗಾರನನ್ನುದ್ದೇಶಿಸಿ ಅವರೆಂದರು:

"ಲೋ ನಾಯಿ ಮಗನೆ! ಯಾರನ್ನು ಒಳಗೆ ಬಿಟ್ಟಿದೀಯೋ! ಕಳಿಸೋ ಅವನನ್ನು! ಕತ್ತು ಹಿಡಿದು ದಬ್ಬೋ ಹೊರಗೆ!"

ಬದರಿ ಧಿಗ್ಗನೆದ್ದು ನಿಂತ. ಕಾವಲುಗಾರ ಮಾತ್ರ ನಿಶ್ಚಲನಾಗಿದ್ದ. ಶಾಂತ ಸ್ವರದಲ್ಲಿ ಮೆಲ್ಲನೆ ಅವನೆಂದ:

"ನೀವು ಹೋಗಿಬಿಡಿ. ಹನ್ನೆರಡು ಆದ ಮೇಲೆ ಸಾಹುಕಾರ್ರು ಯಾವಾಗಲೂ ಹೀಗೆಯೇ. ಮೋಟಾರ್ ಸ್ಟಾಂಡಿನ ಹತ್ತಿರ ರುಕ್ಮಾಬಾಯಿದು ಚಾದುಕಾನ ಉಂಟು. ಅಲ್ಲಿ ನಿಮಗೆ ಚಾ ಸಿಕ್ಕಾತು..."

ಬದರಿ, ಉರಿಯತೊಡಗಿದ ಅರಗಿನ ಮನೆಯಿಂದ ಓಡುವವನಂತೆ ಬೇಗ ಬೇಗನೆ ಹೆಜ್ಜೆ ಇಡುತ್ತ ಅಲ್ಲಿಂದ ನಡೆದ. ಸಾಹುಕಾರರ ಮಾತು ಕೇಳಿಸದಷ್ಟು ದೂರ ಆತ ಹೋದ ಮೇಲೂ ಆ ಪದಗಳು ಮಾತ್ರ ಆತನ ಕಿವಿಯಲ್ಲಿ ಮೊರೆಯುತ್ತಲೇ ಇದ್ದುವು.

ರುಕ್ಮಾಬಾಯಿಯ ಚಾ ಕಷಾಯವನ್ನು ಕುಡಿಯುವ ಧೈರ್ಯ ಬದರಿಗಾಗಲಿಲ್ಲ. ಬದಲು ಒಂದು ಡಜನ್ ಮಿಟ್ಲಿ ಬಾಳೆಹಣ್ಣು ತಿಂದು, ಒಂದು ಪ್ಯಾಕೆಟ್ ಹನಿಡ್ಯೂವನ್ನು [ಅದೇ ಅಲ್ಲಿ ದೊರೆಯುತ್ತಿದ್ದ ಅತ್ಯುತ್ತಮ ಸಿಗರೇಟು] ಒಂದರ ಮೇಲೊಂದಾಗಿ ಸೇದಿದ.

ಮೂರು ಘಂಟೆಯ ಸುಮಾರಿಗೆ ಕಾರವಾರಕ್ಕೆ ಹೊರಟದ್ದ ಒಂದು ಟ್ರಕ್ ದಾಂಡೇಲಿಯಿಂದ ಬಂತು. ಅದರಲ್ಲಿ ಡ್ರೈವರನ ಎಡಕ್ಕೆ ನಾಲ್ಕನೆ ಯವನಾಗಿ ಬದರಿ ಆ ಊರು ಬಿಟ್ಟ.

ಕಾರವಾರವನ್ನು ತಲುಪಿದ ಮೇಲೆ ಆತ ಮಾಡಿದ ಮೊದಲ ಕೆಲಸ ವೆಂದರೆ ಮೈಗಂಟಿದ ಕೊಳೆಯನ್ನು ತೊಳೆಯುವ ಸ್ನಾನ. ಅದಾದೊಡನೆ ಹೊಟ್ಟೆ ತುಂಬ ತಿಂಡಿ. ಅನಂತರ ತನ್ನೂರಿನ ಪರಿಚಯದ ಫರ್ನೀಚರ್ ಮಾರ್ಟಿನವರಿಗೆ ಒಂದು ಕಾಗದ. "ಆಶ್ಚರ್ಯಕರವಾದ ಹತ್ತು ಹಲಗೆ ಗಳನ್ನು [೩'×೬'] ಕೊಂಡು ರವಾನಿಸಿದ್ದೇನೆ. ರೈಲ್ವೆಫ್ರೇಯಿಟ್ ಕೊಟ್ಟು ಪಾರ್ಸೆಲ್ ಬಿಡಿಸಿಕೊಳ್ಳಿ. ನಾನು ಬಂದ ಮೇಲೆ ಅದರ ವಿಲೇವಾರಿ."

ಆ ಸಂಜೆಯೇ ಬದರಿ ತನ್ನ ವ್ಯಾಪಾರೀ ಮಿತ್ರನನ್ನು ಕಂಡ.

"ಹಲಗೆ ಚೆನ್ನಾಗಿತ್ತು. ಹತ್ತು ತಗೊಂಡ್ಬಿಟ್ಟೆ. ಗಿರಾಕಿಗಳಿದ್ದಾರೆ. ಇಮ್ಮಡಿ ಬೆಲೆಗೆ ಮಾರಬಹುದು."

ಬದರಿಯ ಈ ಮಾತನ್ನು ನಂಬಲು ಮನಸ್ಸಾಗಲಿಲ್ಲವಾದರೂ, ಇದ್ದರೂ ಇರಬಹುದೆಂದು ಆತ ಸುಮ್ಮನಾದ.

ಬದರಿಯ ಒಳಗಿನ ಬೇಗುದಿ ಹಾಗೆಯೇ ಇತ್ತು. ಅವನೆಂದ:

"ಹನ್ನೆರಡಕ್ಕೆ ಮುಂಚೆಯೇ ವ್ಯಾಪಾರ ಮುಗೀಬೇಕೂಂತ ನೀವು ಹೇಳಿದ್ದು ಅರ್ಥವಾಯ್ತು. ಅಲ್ರೀ, ಸಾಹುಕಾರ್ರು ಕುಡುಕರೇನ್ರಿ?"

"ಯಾತರ ಮೇಲಿಂದ ಹೇಳ್ತೀರಿ?"

"ಕಣ್ಣಾರೆ ಕಂಡದ್ದರ ಮೇಲಿಂದ. ಇಷ್ಟುದ್ದದ ಲೋಟ ಕೈಲಿ ಹಿಡಕೊಂಡಿದ್ರು."

"ಅದರಲ್ಲೇನಿತ್ತು ಅಂದ್ಕೊಂಡ್ರಿ?"

"ಏನು?"

"ನೀವು ಹೇಳಿ."

"ರಮ್ಮಾ?'

"ಅಲ್ಲ!"

"ಮೆಶಿರಾ?"

"ಊಹೂಂ, ಸೋತಿರಿ. ಬನ್ನಿ, ಹೊರಗೆ ಹೋಗೋಣ. ನಿಧಾನ ವಾಗಿ ಹೇಳ್ತೀನಿ."

ಅಂಗಡಿಯನ್ನು ಮಗನ ಉಸ್ತುವಾರಿಗೊಪ್ಪಿಸಿ, ಬೆಳುದಿಂಗಳು ಹರಡ ತೊಡಗಿದ್ದ ಸಮುದ್ರ ತೀರಕ್ಕೆ ಬದರಿಯೊಡನೆ ಬಂದು, ದಯಾನಂದ ಸಾಹುಕಾರರ ಕತೆಯನ್ನು ಆ ವ್ಯಾಪಾರೀ ಮಿತ್ರ ಹೇಳಲಾರಂಭಿಸಿದ.

ಕಡು ಬಡವನಾಗಿ ಬದುಕು ಆರಂಭಿಸಿ ಕೋಟ್ಯಧೀಶನಾಗಿರುವ ವ್ಯಕ್ತಿ, ದಯಾನಂದ ಸಾಹುಕಾರರು. ಇಪ್ಪತ್ತನೆಯ ವಯಸ್ಸಿನಲ್ಲಿ ಅವರು, ಕಾರವಾರದಲ್ಲೇ ತಮ್ಮ ಅಣ್ಣನ ಅಂಗಡಿಯಲ್ಲಿ ದುಡಿಯುತ್ತಿದ್ದರು. ಆಗ ಅವರ ಪತ್ನಿ, ಚೊಚ್ಚಲ ಹೆರಿಗೆಯ ಅವಾಂತರದಲ್ಲಿ ಸತ್ತ ಶಿಶುವಿಗೆ ಜನ್ಮ ವಿತ್ತು, ತಾನೂ ಅಸು ನೀಗಿದಳು. ಅಂದಿನಿಂದ ದಯಾನಂದರು ಮನೋ ರೋಗಕ್ಕೊಳಗಾದರು, ಕುಡಿದರು. ಆ ಕುಡಿತ, ಸಂತೋಷ ಪಡುವುದ ಕ್ಕಲ್ಲ—ದುಃಖವನ್ನು ಮರೆಯುವುದಕ್ಕೆ. ಅಣ್ಣ, ತಮ್ಮನನ್ನು ಮನೆಯಿಂದ ಹೊರ ಹಾಕಿದ. ದಯಾನಂದ, ಹಳ್ಳಿ ಗುಡ್ಡಗಳಲ್ಲಿ ಅಲೆದು ಅಡವಿಯಲ್ಲಿ ನೆಲಸಿದರು. ಮುಂದೆ ಅವರ ಹೊಸ ಜೀವನ ಶುರುವಾಯಿತು. ಸಣ್ಣ ಪ್ರಮಾಣದಲ್ಲಿ ಆರಂಭಿಸಿ, ಮರಮುಟ್ಟುಗಳ ವಾಣಿಜ್ಯ ಲೋಕದಲ್ಲಿ ಅಂತರ ರಾಷ್ಟ್ರೀಯ ಖ್ಯಾತಿಯುಳ್ಳ ಉದ್ಯಮ ಕಟ್ಟಿದರು.

ಹೆಂಡತಿ ಸತ್ತಂದಿನಿಂದ ಮೊದಲ್ಗೊಂಡು ಅವರು ಮದ್ಯ ಸೇವಿಸದ ದಿನವಿಲ್ಲ. ವ್ಯವಹಾರವನ್ನೆಲ್ಲ ಮಧ್ಯಾಹ್ನದೊಳಗಾಗಿ ಮುಗಿಸಿ, ಆಮೇಲೆ ಕುಡಿಯತೊಡಗುತ್ತಿದ್ದರು. ಅವರಿಗೆ ಮತ್ತೊಂದು ಮದುವೆ ಮಾಡಿಸ ಬೇಕೆಂದು ಎಷ್ಟೊಂದು ಜನ ಪ್ರಯತ್ನ ಪಟ್ಟರು! ಊಹೂಂ. ಯಾವ ಬಂಧನವೂ ಇಲ್ಲದ ಹೆಮ್ಮರವಾಗಿ ಅವರು ಬೆಳೆದರು. ಹೀಗೆ ನಾಲ್ವತ್ತು ವರ್ಷಗಳ ಕಾಲ ಅವರು ದುಡಿದರು, ಕುಡಿದರು. ಮೊದಲಿನ ಕೆಲ ವರ್ಷ ಗಳನ್ನು ಬಿಟ್ಟರೆ ಮುಂದೆ ಅವರು ಕುಡಿದದ್ದೆಲ್ಲಾ ರಾಜಯೋಗ್ಯ ವಾದ ಪೇಯ. ಅಪ್ಪಟ ವಿದೇಶೀ. ಮಧ್ಯಾಹ್ನದವರೆಗೆ ಅವರ ಜತೆಯಲ್ಲಿರು ತ್ತಿದ್ದವರು, ಹನ್ನೆರಡು ದಾಟಿದ ಬಳಿಕ ಅವರ ಹತ್ತಿರ ಸಾರುತ್ತಿರಲಿಲ್ಲ. ಅವರೆದುರು ನಿಲ್ಲುವ ಧೈರ್ಯವೇ ಯಾರಿಗೂ ಇರಲಿಲ್ಲ.

ಅಂಥಾದ್ದರಲ್ಲಿ ಮದ್ಯಪಾನ ನಿಷೇಧದ ಮಸೂದೆ ಬಂತು. ಅದು ಶಾಸನವಾದಮೇಲೆ ದಯಾನಂದರ ಗತಿ ಏನು? ಎಂದು ಅವರ ಆತ್ಮೀಯ ರೆಷ್ಟೋ ಜನ ಗಾಬರಿಗೊಂಡರು. ಆರೋಗ್ಯದ ಕಾರಣದಿಂದ ಪರ್ಮಿಟ್ ದೊರಕಿಸಿಕೊಳ್ಳುವುದೇನೂ ಕಷ್ಟವಿರಲಿಲ್ಲ. ಒಂದು ಅರ್ಜಿಗೆ ಸಹಿ ಮಾಡಿ

ದ್ದರೆ ಸಾಕು, ಪರ್ಮಿಟ್ ದೊರೆಯುತ್ತಿತ್ತು. ಆದರೆ ದಯಾನಂದರು ಒಪ್ಪಲಿಲ್ಲ. ಅವರಂತಹ ಪ್ರಬಲ ಶ್ರೀಮಂತರಿಗೆ ಕಳ್ಳತನದಲ್ಲಿ ಮದ್ಯ ದೊರಕಿಸಿಕೊಳ್ಳುವುದೂ ಪ್ರಯಾಸದ ಮಾತಾಗಿರಲಿಲ್ಲ. ಪ್ರಾಯಶಃ ಅವರು ಹಾಗೆ ಮಾಡುವರೆಂದು ಎಲ್ಲರೂ ನಂಬಿದ್ದರು. ಆದರೆ ಆ ಗೊಡವೆಗೂ ದಯಾನಂದರು ಹೋಗಲಿಲ್ಲ. ಮಸೂದೆ ಶಾಸನವಾಗಿ ಅದು ಜಾರಿಗೊಳ್ಳುವ ದಿನ ಬಂತು. ದಯಾನಂದರ ಬದುಕು ಯಥಾಪ್ರಕಾರವಾಗಿ ಸಾಗಿತ್ತೇ ಹೊರತು, ಯಾವುದೇ ಬಗೆಯ ಕಳವಳವೂ ಅವರಲ್ಲಿ ತೋರಿ ಬರಲಿಲ್ಲ.

ಕೊನೆಯ ದಿನವೂ ಬಂತು. ತಮ್ಮಲ್ಲಿ ಉಳಿದಿದ್ದ ಬಾಟ್ಲಿಯೊಂದನ್ನು ಬರಿದುಗೊಳಿಸಿದರಲ್ಲದೆ ನಿತ್ಯಕ್ಕಿಂತ ಒಂದು ತೊಟ್ಟನ್ನೂ ಅವರು ಹೆಚ್ಚು ಸೇವಿಸಲಿಲ್ಲ.

ಮಾರನೆಯ–ಮದ್ಯಪಾನ ನಿಷೇಧದ ಮೊದಲ–ದಿನ !

ಪೂರ್ವಾಹ್ನ ಎಂದಿನಂತೆ ವ್ಯವಹಾರಗಳು ನಡೆದುವು. ದಯಾನಂದರ ಮನಸ್ಸು ಒಂದಿಷ್ಟೂ ಅಸ್ತವ್ಯಸ್ತವಾಗಿರಲಿಲ್ಲ. ಅವರನ್ನು ಬಲ್ಲವರು ಮಾತ್ರ ಆತಂಕಕ್ಕೊಳಗಾಗಿದ್ದರು. ಸಾಹುಕಾರರಿಗೆ ಮತಿಭ್ರಮಣೆಯಾಗಬಹುದೆಂಬ ಭಯ ಅವರಿಗಿತ್ತು.

ಹನ್ನೆರಡು ದಾಟಿತು !

ದಯಾನಂದರು ಮನೆಗೆ ಹೋದರು.

" ಅಡುಗೆಯಾಯ್ತೆ ? " ಎಂದು ಚಾಕರನನ್ನು ಕೇಳಿದರು.

" ಮಹಡಿಗೆ ಒಂದು ಸ್ಟವ್ ತಾ, " ಎಂದರು.

ಸ್ಟವ್‌ಹಚ್ಚಿ, ಅದರ ಮೇಲೆ ನೀರನ್ನು ಕುದಿಯಲಿಟ್ಟು, ತಾವು ಕುರ್ಚಿಯ ಮೇಲೆ ಕುಳಿತರು.

ನೀರು ಮರಳತೊಡಗಿದಂತೆ ಅವರ ಮನಸ್ಸು ಹತೋಟಿ ತಪ್ಪಿತು. ಕೊತ ಕೊತ ಕುದಿದು ನೀರು ಸಿಡಿಯಲಾರಂಭಿಸಿದಂತೆ ಅವರ ಮೌನದ ಕಟ್ಟೆಯೊಡೆಯಿತು. ಸುಡುನೀರನ್ನು ಒಂದು ಲೋಟಕ್ಕೆ ಸುರುವಿ ಅವರು ತುಟಿಗಿಟ್ಟರು. ಒಂದು ಚೂರು ಕುಡಿದರು. ನಾಲಗೆ ಗಂಟಲು ಸುಟ್ಟು ಹೋದುವು. ಮತ್ತಿಷ್ಟು ಸ್ವಲ್ಪ ಸ್ವಲ್ಪವಾಗಿ ಇಷ್ಟಿಷ್ಟೇ–ಕುಡಿಯುತ್ತ

ಹೋದರು. ಒಳಬಾಯಿಯೆಲ್ಲ ಚುರ್ ಚುರ್ ಎಂದಂತೆ, ಅವಾಚ್ಯ ಪದಗಳು ನಿತ್ಯದಂತೆ ಉರುಳುತ್ತ ಬಂದುವು. ಅವರಿಗೆ ಮತ್ತೇರಿತು.

ಅಂದಿನಿಂದ ಇಂದಿನವರೆಗೂ ಅವರದು ಆ ಬಗೆಯ ಕುಡಿತ ಪ್ರತಿದಿನವೂ. ಒಂದು ನೀಳಲೋಟದ ತುಂಬ ಬಿಸಿ ನೀರು :

" ಎಂಥ ಬದುಕು ! " ಎಂದು ಬದರಿ, ವ್ಯಾಪಾರೀ ಮಿತ್ರ ಮಾತು ಮುಗಿಸಿದಾಗ.

ಆ ರಾತ್ರಿ ಹೋಟೆಲಿಗೆ ಮರಳಿದ ಬದರಿಗೆ ಬೇಗನೆ ನಿದ್ದೆ ಹತ್ತಲಿಲ್ಲ. ನಿದ್ರೆ ಬಂದಾಗಲೂ ದಯಾನಂದರದೇ ಕನಸು. ಒಮ್ಮೆ " ಅದೇ – ಎಷ್ಟು ಬೇಕು ? " ಎಂಬ ಅವರ ಗುಡುಗು ಧ್ವನಿ ಕೇಳಿ, ಅವನು ಬೆಚ್ಚಿ ಎಚ್ಚೆತ್ತ. ಪುನಃ ನಿದ್ದೆ ಹತ್ತಿದಾಗ, ದಯಾನಂದರು ಕೈಯಲ್ಲಿ ಲೋಟ ಹಿಡಿದು ಶಬ್ದ ಬ್ರಹ್ಮನಾಗಿ ಪದ ಸೃಷ್ಟಿಯಲ್ಲಿ ತೊಡಗಿದ್ದ ಚಿತ್ರಮಾಲೆ ಅವನ ಕಣ್ಣಿಗೆ ಕಟ್ಟಿತು.

* * * *

" ಅದ್ಭುತ ! " ಎಂದ ಚಿಕ್ಕಣ್ಣಯ್ಯ.

ಇಬ್ಬರ ಬಾಟಲಿಗಳೂ ಮಗ್ಗುಗಳೂ ಬರಿದಾಗಿದ್ದುವು.

ಬರವಣಿಗೆಯ ಮುಖ್ಯ ಅಂಶಗಳ ಕೆಳಗೆ ಗೆರೆ ಎಳೆಯುವವನಂತೆ ಬದರಿಯೆಂದ.

" ನಾಲ್ವತ್ತು ವರ್ಷ ಆ ಸಾಹುಕಾರ ಒಂದೇ ಸಮನೆ ಕುಡೀತಾ ಇದ್ದ. ಇದನ್ನ ಮರೀಬೇಡ."

" ನಮ್ಮದೂ ಇಪ್ಪತ್ತು ವರ್ಷ ಆಗ್ತಾ ಬಂತು ಅಂತೀನಿ."

ಬದರಿ ತನ್ನ ಕೋಟಿನ ಕಿಸೆಯೊಳಗಿಂದ ಗೋಲ್ಡ್‌ಫ್ಲೇಕ್ ಸಿಗರೇಟ್ ಪ್ಯಾಕೆಟನ್ನೂ ಲೈಟರನ್ನೂ ಹೊರತೆಗೆದ. ಪ್ಯಾಕೆಟ್ ಒಡೆದು ಒಂದನ್ನು ಹಚ್ಚಿ ತೆರೆದ ಪ್ಯಾಕಟ್ಟನ್ನೂ ಆರಿಸಿದ ಲೈಟರನ್ನೂ ಗೆಳೆಯನೆಡೆಗೆ ತಳ್ಳಿದ.

ಹೊಗೆ ಬಿಡುತ್ತ ಬದರಿಯೆಂದ :

" ಅಂದ್ಹಾಗೆ ಚಿಕ್ಕಣ್ಣಯ್ಯ, ನೀನ್ಯಾಕೊಂದು ಡೈನಿಂಗ್ ಟೇಬಲ್ ಯಾಕೆ ಮಾಡಿಸಬಾರದು ? "

ಗೆಳೆಯ ಕಣ್ಣಂಚಿನಲ್ಲೇ ನಕ್ಕು ಅಂದ :

"ಮೂರಡಿ, ಆರಡಿ ಮಂಚ ಕೂಡಾ ಮಾಡಿಸ್ಬಹುದು. ಆದರೆ ಬದರಿ, ವ್ಯವಹಾರದ ಮಾತೆಲ್ಲ ಹಗಲು ಹನ್ನೆರಡು ಘಂಟೆಗೆ ಮುಂಚೆ!"

"ಹಹ್ಹ!"

"ಆ ದಿವ್ಯಾತ್ಮ ದಯಾನಂದನ ಮಹಿಮಾಗಾನ ಕೇಳಿದ್ಮೇಲೆ ಅವನ ಆರೋಗ್ಯಕ್ಕೆ ಸ್ವಸ್ತಿಪಾನ ಮಾಡಬೇಕಾದ್ದು ನಮ್ಮಂಥ ಭಕ್ತರ ಕರ್ತವ್ಯ."

ಬದರಿ ಕತ್ತು ತಿರುಗಿಸಿ ಅತ್ತಿತ್ತ ನೋಡಿದ. ಹತ್ತಿರದಲ್ಲೇ ಸುಳಿದಾಡಿದಂತೆ ಕಂಡ ಮಂದಿರದ ಸೇವಕನನ್ನುದ್ದೇಶಿಸಿ, ಉಚ್ಚ ಕಂಠದಲ್ಲಿ ಅವನೆಂದ:

"ಬೇರರ್! ಇನ್ನೆರಡು ಬೀಯರ್ ಮತ್ತು ಒಂದು ಪ್ಲೇಟ್ ನಟ್ಸ್."

## ಕಥೆ: ಆರು

# ಯಾವ ಜನ್ಮದ ಶಾಪ?

"ಏಳೀಂದ್ರೆ..."

"ಊ...."

"ಕಾಫಿ ಆರೋಯ್ತು..."

"ಆಂ?"

—ಎಂಟೂಕಾಲು ಘಂಟೆಗೆ ನಾವು ಮತ್ತು ನಮ್ಮವರು, ಶ್ರೋತೃಗಳ ಪತ್ರಗಳಿಗೆ ನಮ್ಮ ಉತ್ತರ; ಎಂಟೂವರೆ ಘಂಟೆಗೆ ದೆಹಲಿ ಕೇಂದ್ರದಿಂದ ಪುನಃ ಪ್ರಸಾರ; ಎಂಟೂ ಐವತ್ತೈದಕ್ಕೆ To-day in Parliament... ಪಾರ್ಲಿಮೆಂಟಿನ...

ಏಳು ಘಂಟೆ ಆಗಿಹೋಯಿತು ಹಾಗಾದರೆ. ಬೆಳಕು ಹರಿಯುವುದಕ್ಕೆ ಮುನ್ನವೇ, ಮೂವತ್ತು ವರ್ಷಗಳ ಕಾಲ ಪ್ರತಿದಿನವೂ ಏಳುತ್ತಲಿದ್ದ ಮನುಷ್ಯ ತಾನು. ಈಗ ಈ ಆರೆಂಟು ದಿನಗಳಿಂದ ಹೀಗೆ... ಅಲ್ಲ,—ಎದ್ದು ತಾನು ಮಾಡಬೇಕಾದುದಾದರೂ ಏನು? ತಡವಾಯಿತು, ತಡವಾಯಿತು ಅಂತ ಚಡಪಡಿಸುತ್ತ, ಹೊಗೆ ತುಂಬಿದ ಸ್ನಾನದ ಮನೆಯಲ್ಲಿ ಮೈಗೆ ತಣ್ಣೀರು ಸುರಿದುಕೊಳ್ಳಬೇಕೆ? ಹೆಂಡತಿಯ ಮೇಲೆ ರೇಗಾಡಿ ಚೀರಾಡಿ, ಆವಿ ಏಳುವ ಬಿಸಿ ಅನ್ನ ಗಂಟಲಿನೊಳಕ್ಕೆ ತುರುಕಬೇಕೆ? ಸೈಕಲು ಹತ್ತಿ ತುಳಿದು ತುಳಿದು, ಬೆವರು ಸುರಿಸಿಕೊಂಡು ಆಠಾರಾ ಕಚೇರಿ ತಲುಪಿ, ಅಲ್ಲಿ ಏದುಸಿರು ಬಿಡಬೇಕೆ? ಯಾವುದೂ ಇಲ್ಲ. ಅಂದಮೇಲೆ, ಏಳಲು ಅವಸರವಾದರೂ ಯಾಕೆ? ಕತ್ತಿನವರೆಗೂ ಕಂಬಳಿ ಹೊದೆದು, ನೀಳವಾಗಿ ಮೈಚಾಚಿ ಮಲಗಿರುವುದೇ ಹಿತಕರ...

ತಾರಸಿ ಛಾವಣಿಯಿಂದ ಕೆಳಮೊಗವಾಗಿದ್ದ ತೊಟ್ಟಿಲು ತೂಗುವ ಕೊಂಡಿಗಳು, ಮಲಗಿದ್ದ ವಿಶ್ವನಾಥಯ್ಯನವರನ್ನೇ ದಿಟ್ಟಿಸಿದುವು. ಬರಿದು

ಕೊಂಡಿಗಳು. ತುಕ್ಕು ಹಿಡಿದ ಕಬ್ಬಿಣ. ವಿಶ್ವನಾಥಯ್ಯ ಆ ಪುಟ್ಟ ಮನೆಯನ್ನು ಕಟ್ಟಿಸಿ ಹತ್ತು ವರ್ಷಗಳಾಗಿದ್ದುವು.

ಹಣ ಎಲ್ಲಿಂದ ಬಂತು? ಹೇಗೆ ಬಂತು? ಎಂದು ತನಿಖೆ ನಡೆಸಿರಲಿಲ್ಲ ಸದ್ಯಃ. ಆ ಹತ್ತು ವರ್ಷಗಳಲ್ಲಿ ಒಮ್ಮೆಯೂ ಕೊಂಡಿಗೆ ಸುತ್ತಿಕೊಂಡಿರಲಿಲ್ಲ ತೊಟ್ಟಿಲು ಹಗ್ಗ.

ಮುಗುಳು ನಗೆ ಮೂಡಿಸಿತು ಆ ನೆನಪು. ಮುಖದ ಸುಕ್ಕುಗಳು ತುಸು ಮಿಸುಕಿದುವು. ಹಿಂದೆ, ಸಹೋದ್ಯೋಗಿಗಳ ಮಧ್ಯೆ, ನಗೆ ಮಾತಿನ ರೂಪುತಳೆದು ಆ ಪ್ರಸ್ತಾಪ ಬಂದಿತ್ತು.

"ನೀವು ಪುಣ್ಯವಂತರು ಕಣ್ರೀ . . . ಚಿಕ್ಕದಾದ ಚೊಕ್ಕ ಸಂಸಾರ."

"ನಮಗೂ ಸ್ವಲ್ಪ ಹೇಳ್ಕೊಡ್ರಿ ವಿಶ್ವನಾಥಯ್ಯನವರೇ!"

ತಮಗೆ ತಿಳಿದಿದ್ದರೆ! ಅಜ್ಞಾನದ ಕತ್ತಲಲ್ಲಿ ಪರದಾಟ. ಸತ್ತು ಹುಟ್ಟಿದ ಮೊದಲ ಕೂಸು. ವರ್ಷ ವರ್ಷಗಳ ಕಾಹಿಲೆ. ದೇವರ ಪ್ರಸಾದವಾಗಿ ದೊರೆತ ಗಂಡು—'ಪ್ರಸಾದ.' ಮತ್ತೆ ಕಣ್ಣು ಮುಚ್ಚಾಲೆ. ಐದು ವರ್ಷಗಳ ಅನಂತರ ಹುಟ್ಟಿದ ಹೆಣ್ಣು. ಅಲ್ಲಿಗೆ ಬತ್ತಿ ಹೋಗಿತ್ತು. . . ಕುಟುಂಬ ಯೋಜನೆಯ ಮಾತೆಲ್ಲ ಈಚಿನದು, ಹೊಸದು. ಸಂಸಾರವಂದಿಗರಲ್ಲದ ಯುವಕರಿಗೇ ಅದರಲ್ಲಿ ಆಸಕ್ತಿ. ಅವರ ಮಾತು ಕಿವಿಗೆ ಬಿದ್ದರೆ ಲಜ್ಜೆಯಿಂದ ತಲೆತಗ್ಗಿಸಬೇಕು, ತನ್ನಂಥವರು. ಮೂರ್ಖರು. ನಮ್ಮ ಇಚ್ಛೆಯೆ ಅದೆಲ್ಲ? ಆತ ಕೊಟ್ಟರೆ ಉಂಟು, ಇಲ್ಲದಿದ್ದರೆ ಇಲ್ಲ.

ಆ ಯೋಚನೆಯನ್ನು ಅಲ್ಲಿಗೇ ನಿಲ್ಲಿಸಿದರು, ವಿಶ್ವನಾಥಯ್ಯ. ಕೊಠಡಿಯಲ್ಲಿದ್ದ ಪರಿಚಿತ ವಸ್ತುಗಳ ಮೇಲೆಲ್ಲ ಅವರ ದೃಷ್ಟಿ ಸೋಮಾರಿಯಂತೆ ಅಲೆಯಿತು. ಗೋಡೆಗೆ ಒರಗಿತ್ತು ಹೆಂಡತಿಯ ಸುರುಳಿ ಸುತ್ತಿದ ಹಾಸಿಗೆ. ಮಲೆಯಾಳಿ ಬಡಗಿಯೊಬ್ಬನನ್ನು ಹಿಡಿದು ಇಬ್ಬರಿಗೆಂದೇ ಮಂಚ ಮಾಡಿಸಿದ್ದರೂ, ಆಕೆ ಮಲಗುತ್ತಿದ್ದುದು ಕೆಳಗೇ. ಹಿಂಬದಿಯಲ್ಲಿದ್ದ ಮರದ ಬೀರು. ಹರಾಜಿನಲ್ಲಿ ಕಡಮೆ ಬೆಲೆಗೆ ತಂದದ್ದು. [ಒಂದು ಭಾನುವಾರವಿಡೀ ವ್ಯಯವಾಗಿತ್ತು ಅದಕ್ಕೋಸ್ಕರ? ಅದರ ಮಗ್ಗುಲಲ್ಲಿ ಟ್ರಂಕುಗಳು, ಒಂದು ಹಳೆಯದು, ಒಂದು ಹೊಸದು. ಗೋಡೆಗೆ ಬಡಿದಿದ್ದ ಕತ್ತರಿಗೂಟ. ಇನ್ನು ಆ ರುಮಾಲನ್ನು ಕಪಾಟದೊಳಗೆ ಇರಿಸುವುದೇ ಮೇಲು. ಧಾರವಾಡ

ಕಡೆಯ ಟೋಪಿ ಕೊಳ್ಳಬೇಕು. ಹೇಗೂ...ಎಲ್ಲರೂ ಒಂದೇ ಆದೆ ವಲ್ಲ....

"ಸಬ್ಬಸಿ ಸೊಪ್ಪು...ಕೊತ್ತಮಿರಿ ಸೊಪ್ಪೊ...ಟೊಮಾಟೋ ಹಣ್ಣೊ...."

ಮೂರು ಕಾಸಿನ ವ್ಯಾಪಾರ. ಮುಂದೆ ಒಂದು ನಯೆಪೈಸೆಗೆ ಒಂದು ಕಟ್ಟು ಕೊಡುತ್ತಾರೋ ಇಲ್ಲವೋ. ಒಂದಾದರೆ ನಯಾ ಪೈಸಾ ಅನ್ನ ಬೇಕು. ಹೆಚ್ಚಿದ್ದರೆ ನಯೇ. ಹಿಂದೀ ಪರೀಕ್ಷೆ ಕಡ್ಡಾಯವಾಗುವುದಕ್ಕೆ ಮುಂಚೆಯೇ ಪಾರಾದೆ ತಾನು!

"ಅವರೇಕಾಯಿಯಾ!"

"ಕರೀಲೇನಮ್ಮ?"

"ಬೇಡ್ವೇ. ಮಾರ್ಕೆಟ್ನಲ್ಲಿ ಕಡಿಮೆಗೆ ಸಿಗುತ್ತೆ. ಇವರಿಗೆ ಇನ್ನೇನು ಕೆಲಸ – ಹೋಗಿ ತರ್ತಾರೆ."

ಓಹೋ! ಇನ್ನೇನು ಕೆಲಸ? ಚೀಲ ಎತ್ತಿಕೊಂಡು ಮಾರ್ಕೆಟ್ಟಿಗೆ ಯಾತ್ರೆ!

ಡರ್ ಡರ್ ಡರ್—

ಈ ರೇಡಿಯೋ ಕೆಟ್ಟಿದೆ. ಒಂದು ತಿಂಗಳಿನಿಂದಲೂ ಹೀಗೆಯೇ. ರಿಪೇರಿ ಮಾಡಿಸಿಕೊಂಡು ಬರಬೇಕು.

ಸರಿ. ಇದೀನಲ್ಲ. ಹೇಗೂ ನನಗೆ ಇನ್ನೇನು ಕೆಲಸ?

'ಓ, ನನ್ನ ಚೇತನಾ, ಆಗು ಅನಿಕೇತನಾ...'

ಒಳ್ಳೆಯ ಕಂಠ, ಓ ನನ್ನ ಚೇತನಾ...

"ಗಿರಿಜಾ, ನಿಮ್ಮ ಅಣ್ಣಯ್ಯ ಎದ್ದರೇನೋ ನೋಡು."

"ಮಲಕೊಳ್ಲಿ ಬಿಡಮ್ಮ. ಅವರಿಗೆ—"

"ನೀನೂ ಸರಿ, ಹೋಗಿ ಎಬ್ಬಿಸು!"

ಅಂಬೆಗಾಲಿಡುತ್ತ ಮಗಳು ತನ್ನಡೆಗೆ ಹರಿದಾಡುತ್ತಿದ್ದ ಆ ದಿನದಿಂದ, ಆಕೆ ಇಪ್ಪತ್ತರ ಯುವತಿಯಾಗಿರುವ ಇಂದಿನವರೆಗೆ, ಚಿರಪರಿಚಿತವಾದ ಹೆಜ್ಜೆಯ ಸಪ್ಪಳ.

"ಅಣ್ಣಯ್ಯ, ಎದ್ದಿದೀಯಾ?"

"ಹೂಂ."

" ಕಾಫಿ—"

" ಬಂದೆ."

ವಿಶ್ವನಾಥಯ್ಯ ಎದ್ದರು. ಹಿತ್ತಿಲ ಬಾಗಿಲ ಕಡೆ ನಡೆದವರು, ದಿನಚರಿ ಬದಲಾಗಲೆಂದು, ತಡೆದು ನಿಂತು, ಮುಖಮಾರ್ಜನವನ್ನಷ್ಟೆ ಮಾಡಿ ಅಡುಗೆ ಮನೆಯತ್ತ ಕಾಲಿರಿಸಿದರು.

ಕಾಫಿ ತಿಂಡಿ ಮುಗಿಸಿ ಬಂದ ವಿಶ್ವನಾಥಯ್ಯ, ಬೆತ್ತದ ಒರಗು ಕುರ್ಚಿಯಲ್ಲಿ ಆಸೀನರಾದರು.

ವಾರ್ತೆ ಬರತೊಡಗಿತೆಂದು ರೇಡಿಯೋಗೆ ವಿಶ್ರಾಂತಿ ಕೊಟ್ಟಿದ್ದಳು ಮಗಳು. ತಾವು ಇನ್ನು ವಾರ್ತೆ ಕೇಳುವ ಅಭ್ಯಾಸ ಮಾಡಬೇಕು. ಸಂಜೆಯ ವರೆಗೂ ಹೊತ್ತು ಕಳೆಯಬೇಕಲ್ಲ ಇನ್ನು? ಹೇಗೆ? ಹೇಗೆ?

" ಗಿರಿಜಾ, ಅದು ಯಾವ ಪುಸ್ತಕ ನಿನ್ನ ಕೈಲಿರೋದು?"

" ಯಾವುದೋ ಕಾದಂಬರಿ ಅಣ್ಣಯ್ಯ."

" ಓದ್ತಿದೀಯೇನು?"

" ಹೂಂ."

" ಚೆನ್ನಾಗಿದೆಯೊ?"

" ಹೂಂ."

" ನೀನು ಓದಿ ಮುಗಿಸಿದ್ಮೇಲೆ ನನಗೂ ಸ್ವಲ್ಪ ಕೊಟ್ಟಿರು."

ಆ ಮಾತು ಕೇಳಿಸಿದ ಅವರಾಕೆ ಪರಿಹಾಸ್ಯದ ಧ್ವನಿಯಲ್ಲಿ ಅಂದರು:

" ನೀವೂ ಕಥೆ ಪುಸ್ತಕ ಹಿಡಿಕೊಂಡು ಕೂತ್ಬಿಡಿ. ಸರಿಹೋಗುತ್ತೆ ಅಲ್ಲಿಗೆ! ಏಳಿ, ಸ್ನಾನ - ಪೂಜೆ ಯೋಚ್ನೆ ಮಾಡಿ. ಎಲ್ಲಿಗೋ ಹೋಗ್ಬೇಕು ಅಂದಿದ್ರಲ್ಲ?"

ಪ್ರಶ್ನಾರ್ಥಕ ನೋಟದಿಂದ ಗಿರಿಜಾ ನೋಡಿದಳು. ಆ ನೋಟವನ್ನು ಇದಿರಿಸದೆ ವಿಶ್ವನಾಥಯ್ಯ ಅಂದರು:

" ಇವತ್ತು ಬೇಡ, ಭಾನುವಾರ ಹೋಗ್ತಿನಿ. ಸಿಕ್ಕಿಯೇ ಸಿಗ್ತಾರೆ."

ಭಾನುವಾರ. ಅಂತಹ ಅಲೆದಾಟಕ್ಕೆಲ್ಲ ಹಿಂದೆ ಇದ್ದುದು ಅದೊಂದೇ ದಿನ. ಈಗ ವಾರದ ಏಳು ದಿನಗಳೂ ಭಾನುವಾರಗಳೇ. ಆದರೂ ಹಿಂದಿನ ರೂಢಿಗೆ ಅಂಟಿಕೊಳ್ಳುವ ಆಸೆ.

ಅಲ್ಲದೆ, ಅವರಾದರೂ ಸಿಗಬೇಕಲ್ಲ? ಸಿಕ್ಕಿದರೂ ಕಾರ್ಯ ಗಂಡಾಗುತ್ತದೆನ್ನುವ ಭರವಸೆ ಏನು? ಹೆಣ್ಣು ಹೆತ್ತಮೇಲೆ ತಪ್ಪಿದ್ದಲ್ಲ ಈ ಸಂಕಟ—

ಕತ್ತು ತುರಿಸಲೆಂದು ಕೈ ಎತ್ತಿದ ವಿಶ್ವನಾಥಯ್ಯ ಗಲ್ಲವನ್ನು ಮುಟ್ಟಿ ನೋಡಿದರು. ಕೆನ್ನೆಗಳ ಮೇಲೂ ಕೈಯಾಡಿಸಿದರು. ಮುಖಕ್ಷೌರ ಮಾಡಿ ಕೊಂಡರಾದೀತೆನಿಸಿತು.

ಇನ್ನು ಬ್ಲೇಡ್ ಎಲ್ಲಿಯದು?— ಕ್ಷೌರಿಕನ ಕತ್ತಿಯೊಂದನ್ನು ಮಾಡಿಸಿ ಇಟ್ಟು ಕೊಳ್ಳುವುದೇ ಯೋಗ್ಯ.

ಮೆಲ್ಲನೆದ್ದು, ಕನ್ನಡಿಯಲ್ಲಿ ಇಣಿಕಿನೋಡಿದಾಗ, ನರೆಗಡ್ಡ ಆವರಿಸಿದ್ದ ಮುಖ ಸೊರಗಿದ್ದಂತೆ ಕಂಡಿತು.

ಒಂದು ವಾರದೊಳಗೇ ಇಷ್ಟೊಂದು ಮುದಿತನ ಆಡರಿತೋ ಹೇಗೆ?

ಬಿಸಿ ನೀರು ತಂದು, ಸೋಪು ಹಚ್ಚಿ, ಗಾಜಿನ ಸಾಣೆಗಲ್ಲಿನ ಮೇಲೆ ಬ್ಲೇಡು ತೀಡಿದ ಬಳಿಕ, ಬಲು ನಿಧಾನವಾಗಿ ಮುಖ ಕ್ಷೌರ. ಅದು ಮುಗಿದಾಗ, ಯೌವನದ ಹುರುಪು ಮರುಕಳಿಸಿದಂತೆ ಅವರಿಗೆ ತೋರಿತು. ಆದರೆ, ತಲೆಗೂದಲ ತುಂಬಾ ನೂರಾರು ಬೆಳ್ಳಿ ಗೆರೆಗಳು, ಬಲು ತೆಳು. ಈ ಕೆಲ ವರ್ಷಗಳಿಂದ ಒಂದೇ ಸಮನೆ ಉದುರುತ್ತ ಬಂದಿವೆ. ಇನ್ನು ಹಲ್ಲುಗಳೂ ಉದುರಬಹುದು ಒಂದೊಂದಾಗಿ . . .

ಬಿಸಿಲೇರಿದ ಬಳಿಕ ಪ್ರಾತರ್ವಿಧಿಗಳು.

"ಎಣ್ಣೆ ಹಚ್ಚಲೇನು?"

"ಬೇಡ ಮಹಾರಾಯಿತಿ."

ಬಿಸಿನೀರಿನ ಸ್ನಾನ.

ಸ್ನಾನದ ಬಳಿಕ ಪೂಜೆ . . . ನಿತ್ಯದ ಗಡಿಬಿಡಿಯಲ್ಲಿ ದೇವರಿಗೆ ಎಷ್ಟೊಂದು ಅನ್ಯಾಯ ಮಾಡಿಲ್ಲ! ಇನ್ನು ಸಾವಕಾಶವಾಗಿ-ಬಲು ಸಾವ ಕಾಶವಾಗಿ - ಮಂತ್ರ ಜಪಿಸಬಹುದು.

ಪ್ರಸಾದನಿಂದ ಪತ್ರಬಂದು ಹತ್ತು ದಿನಗಳಾದುವು. ಆಗಾಗ್ಗೆ ಬರೆಯ ಬಾರದೆ ಇವನು? ತಂದೆಗೆ ಬರೆದರೆ ನಾಲ್ಕೇ ಸಾಲು. ಬರಿಯ ಒಣ ಕ್ಷೇಮ ಸಮಾಚಾರ. ತಂಗಿಗೆ ಬರೆದರೆ ನಾಲ್ಕಾರು ಪುಟಗಳು. ರೂ ರ್ ಕೆ ಲಾ ಕಾರಖಾನೆ ಯೋಜನೆ ಕಾರ್ಯಗತವಾಗುತ್ತಿರುವುದು

ತನ್ನೊಬ್ಬನಿಂದಲೇ ಎನ್ನುವ ಹಾಗೆ. ಯೌವನದ ಹುಚ್ಚುಚ್ಚಾರ. ತಾನೂ ಒಮ್ಮೆ ಯುವಕನಾಗಿದ್ದೆ. ಗುಮಾಸ್ತೆಯಾಗಿ ಕೆಲಸಕ್ಕೆ ಸೇರಿ ಶಿರಸ್ತೇದಾರನಾಗಿ ನಿವೃತ್ತನಾದೆ. ಆದರೆ, ಮೈಸೂರು ಸರಕಾರ ನಡೆಯುತ್ತಿರುವುದು ತನ್ನಿಂದಲೇ ಅಂತ ಯಾವತ್ತಾದರೂ ಭ್ರಮಿಸಿದ್ದೆನೇನು? ಹುಡುಗು ಬುದ್ಧಿ . . .

ಛೆ, ಇದೇನು? ಪೂಜೆಗೆಂದು ಕುಳಿತರೆ, ಈ ಯೋಚನೆ?

"ಲೇ ಅಡುಗೆ ಆಯ್ತೇನು?"

ತಾಯಿ ಮತ್ತು ಮಗಳು ನಕ್ಕರು. ಅಭ್ಯಾಸ ಬಲದಿಂದ ತಾನು ಆ ಪ್ರಶ್ನೆ ಕೇಳಿದೆನೆಂದು ಮೋಜೆನಿಸಿತ್ತು ಆವರಿಗೆ.

* * * *

"ಇನ್ನಾದರೂ ಮಧ್ಯಾಹ್ನದ ಹೊತ್ತು ಊಟಮಾಡಬಾರದೆ?"

"ಆಗಲಿ ಆಗಲಿ . . ."

ಟ್ರಿಣ್, ಟ್ರಿಣ್ . . . ಸೈಕಲ್ ಬೆಲ್. ಪೂಜೆ ಮುಗಿಸಿ ಹೊರಬಂದ ವಿಶ್ವನಾಥಯ್ಯನವರ ಕೈಗೆ ಪೇಪರ್ ಸಿಕ್ಕಿತು. ಪ್ರಸಾದ ಬಿ. ಇ. ಮುಗಿಸಿ ಉದ್ಯೋಗ ದೊರೆತು ಉತ್ತರ ಭಾರತಕ್ಕೆ ಹೋಗಿ, ಹಣ ಕಳುಹತೊಡಗಿದಂದಿನಿಂದ ಈ ಪತ್ರಿಕೆ ಬರುತ್ತಿತ್ತು. ಸಾಹೇಬರು ತರಿಸುತ್ತಿದ್ದುದು ಮದರಾಸಿನ ಆ ಪತ್ರಿಕೆಯನ್ನೇ. ಹೀಗಾಗಿ ವಿಶ್ವನಾಥಯ್ಯನವರೂ "ಅದೇ ಸರಿ" ಎಂದಿದ್ದರು . . .

"ಅಣ್ಣಯ್ಯ, ನರಸಿಂಗರಾಯರ ಮೊಮ್ಮಗ ಬಂದಿದ್ದಾನೆ. ಪೇಪರ್ ಬೇಕಂತೆ."

ಸಾಕಷ್ಟು ಹಿರಿಯ ಹುದ್ದೆಯಲ್ಲಿದ್ದು ನಿವೃತ್ತನಾದ ಮನುಷ್ಯ ಆತ. ಅದೇ ಬೀದಿಯಲ್ಲಿ ಮನೆ ಕೊಂಡುಕೊಂಡು ತಳವೂರಿದ್ದರು. ಬೇಕಷ್ಟು ದುಡ್ಡಿದ್ದ, ದುಡ್ಡು ಮಾಡಿದ್ದ, ವ್ಯಕ್ತಿ. ಆದರೆ ಪರಮ ಲೋಭಿ.

"ಈಗ ನಾನೂ ಮನೇಲೇ ಇದೀನಿ ಅಂತ ಹೇಳಿ ಕಳಿಸು!"

ಪಕ್ಕದ ಮನೆಯ ಪತ್ರಿಕೆಯಿಂದಲೇ ಇವರ ಪ್ರಪಂಚಜ್ಞಾನ ವೃದ್ಧಿಯಾಗಬೇಕು, ಹುಂ!

ವಿಶ್ವನಾಥಯ್ಯ ಪತ್ರಿಕೆ ಓದತೊಡಗಿದರು. ಅರ್ಧ ಓದಿ ಊಟಕ್ಕೆದ್ದರು. ಊಟದ ಬಳಿಕ ಓದಿ ಮುಗಿಸಿದರು. ನರಸಿಂಗರಾಯರ ಮೊಮ್ಮಗ ಮತ್ತೆ ಬಂದಾಗ, ಪತ್ರಿಕೆಯನ್ನು ರಭಸದಿಂದಲೆ ಮಡಚಿ ಹುಡುಗನೆಡೆಗೆ ತಳ್ಳಿದರು.

ಮನಸ್ಸು ಎಲ್ಲಿಗೋ ಹಾರಾಡಿ ಅಠಾರಾ ಕಚೇರಿಯ ಸುತ್ತುಸುತ್ತು ಸುಳಿಯುತ್ತಿತ್ತು. ಕೆಂಪು ಕಟ್ಟಡದಿಂದ ವಿಧಾನಸೌಧಕ್ಕೆ ಅವರು ಸ್ಥಳಾಂತರ ಹೊಂದಿರಲಿಲ್ಲ. ವೇತನ ಹೆಚ್ಚುವುದಕ್ಕೆ ಮುನ್ನವೇ ನಿವೃತ್ತರಾಗಿದ್ದರು. ತಾನು ಕೈ ಓಡಿಸಿದ್ದ ತನ್ನ ಹಸ್ತಾಕ್ಷರವಿದ್ದ, ಆ ಫೈಲುಗಳೆಲ್ಲ ಎಲ್ಲಿವೆಯೊ ಈಗ? ಹತ್ತಾರು ಕಡೆಗಳಿಂದ ಹೊಸಬರು ಬಂದು ಅಠಾರಾ ಕಚೇರಿಯ ವಾತಾವರಣವೇ ಬದಲಾಗಿತ್ತು-ಬದಲಾಗಿತ್ತು . . .

ಪ್ರಸಾದ ಬರೆಯುತಿದ್ದುದೂ ಅದನ್ನೇ. "ಊರುಬಿಟ್ಟು ಇಷ್ಟು ದೂರ ಬಂದೆನೆಂದು ನನಗೆ ಸಂತೋಷವಾಗಿದೆ. ನಾಳೆ ಇಲ್ಲೇ ನನಗೆ ಕೆಲಸ ಖಾಯಂ ಆಗಬಹುದು. ವಿದೇಶ ವ್ಯಾಸಂಗಕ್ಕೂ ಅವಕಾಶವಿರಬಹುದು. ದೇಶಕ್ಕೆ ಉಪಯುಕ್ತನಾದ ಮನುಷ್ಯನಾಗಿದೇನೆ ಎಂದು ನನಗೆ ಸಮಾಧಾನ . . ."

ಸಮಾಧಾನವೇ! ತಾನು ಕೂಗಿದರೆ ಸಾಕು ಲೋಕಕ್ಕೆಲ್ಲ ಬೆಳಕು.

"ನೀನೂ ಯಾವುದಾದರೂ ಕೆಲಸಕ್ಕೆ ಸೇರಿಕೊ ಗಿರಿಜಾ."

ತನ್ನದು ಸಾಲದೆಂದು ತಂಗಿಗೂ ಹಿತಬೋಧೆ ಬೇರೆ!

ಪ್ರಸಾದನಿಗೆ ಮದುವೆ ಬೇಡವಂತೆ—ಈಗಲೇ ಬೇಡವಂತೆ. ಸರಿ. ನಾಳೆ ಯಾರನ್ನೋ ಕಟ್ಟಿಕೊಂಡ ಅಂದರೆ ಅಲ್ಲಿಗಾಯಿತು. ಹೇಗೂ ಕಟ್ಟುತ್ತಿರುವುದು ಜಾತ್ಯತೀತ ರಾಷ್ಟ್ರತಾನೆ? ಹಿಂದಿನವರು ಉಚ್ಚ ಶಿಕ್ಷಣಕ್ಕೆಂದು ವಿಲಾಯತಿಗೆ ಹೋಗಿ ದೊರೆಸಾನಿಗಳ ಜೊತೆ ಬರುತ್ತಿದ್ದರು. ಈಗಿನವರು ಅಮೆರಿಕದಿಂದಲೋ ರಷ್ಯದಿಂದಲೋ ತಂದರಾಯಿತು. ಹುಚ್ಚಶಿಕ್ಷಣ, ಹುಂ. ಎದುರು ನಿಂತಾಗ ಪ್ರಸಾದ ಮಿತಭಾಷಿ. ತಂದೆ ಎನ್ನುವ ಪ್ರಾಣಿ ದೂರದ ಸಂಬಂಧವೇನೋ ಎನ್ನುವ ಹಾಗೆ. ಪರವೂರು ಸೇರಿದ್ದೇ ತಡ, ಹೇಗೆ ಬಲಿತುಕೊಂಡುವು ರೆಕ್ಕೆಗಳು!

ಮಗಳ ವಿಷಯದಲ್ಲಂತೂ ತಾನು ತೋರಿಸಿದ ಔದಾರ್ಯ ಹೆಚ್ಚಾಯಿತು. ಐದಾರು ವರ್ಷ ಹಿಂದೆಯೇ ಯಾರಿಗಾದರೂ ಕೊಟ್ಟುಬಿಟ್ಟಿದ್ದರೆ

ಇಂತಹ ಪರಿಸ್ಥಿತಿ ಒದಗುತ್ತಿತ್ತೆ? ಮದುವೆಯ ಮಾರುಕಟ್ಟೆಗೆ ಇಂಟರ್ ಮೀಡಿಯೆಟ್ ಕನಿಷ್ಠ ವಿದ್ಯೆ ಅಂತ ಓದಿಸಿದ್ದಾಯ್ತು. ಗಿರಾಕಿ ಕುದುರಲಿಲ್ಲ. ಮನೆಯಲ್ಲಿದ್ದು ಮಾಡುವುದೇನು ಅಂತ ಮುಂದೆಯೂ ವಿದ್ಯಾಭ್ಯಾಸ. ಪದವೀಧರೆ ಹೆಣ್ಣು. ಪದವೀಧರನಾದ ಗಂಡೇ ಬೇಕು ತಾನೇ?

ಎಂಥ ವಿಚಾರಗಳು ಈಗೆಲ್ಲ! ವಿವಾಹ ವಿಚ್ಛೇದನಕ್ಕೆ ಅವಕಾಶವಿದೆ ನಮ್ಮಲ್ಲಿ. ಆದರೆ ವಿವಾಹಕ್ಕೆ ಅವಕಾಶವಿಲ್ಲ. ಆಸ್ತಿಯಲ್ಲಿ ಗಂಡುಮಕ್ಕಳು ಹೆಣ್ಣುಮಕ್ಕಳು ಇಬ್ಬರಿಗೂ ಸಮಪಾಲು. ಹಂಚುವುದಕ್ಕೆ ಆಸ್ತಿ ಮಾತ್ರ ನಾಸ್ತಿಯೆ!

ಮಗಳನ್ನೊಮ್ಮೆ ಸಾಗಹಾಕಿ ಕನ್ಯಾಸೆರೆ ಬಿಡಿಸಿಕೊಂಡು, ಸೊಸೆಯೊಬ್ಬಳನ್ನು ಮನೆಗೆ ತರುವಂತಾದರೆ—

ಸುತ್ತಮುತ್ತೆಲ್ಲ ಸಾಗರ. ನಡುಗಡ್ಡೆಯ ಮೇಲೆ ನಿಂತು ವಿಶ್ವನಾಥಯ್ಯ ಯೋಚಿಸಿದ್ದರು: ಈ ಜಲರಾಶಿಯನ್ನು ದಾಟಿ ದಂಡೆಯನ್ನು ಹೇಗೆ ಸೇರಲಿ? ಹೇಗೆ ಸೇರಲಿ?

ಒಳಬಾಗಿಲಲ್ಲಿ ನಿಂತು ಗಂಡನನ್ನು ಉದ್ದೇಶಿಸಿ ಅವರಾಕೆ ಅಂದರು:

"ಸ್ವಲ್ಪ ಹೊತ್ತು ಮಲಗಿ ವಿಶ್ರಾಂತಿನಾದರೂ ತಗೋಬಾರದೆ?"

ಹಗಲು ಹೊತ್ತು ನಿದ್ದೆ. ಎಂದೂ ಮಾಡದಿದ್ದವರು ಇನ್ನು ಈ ಕಡೆಗಾಲದಲ್ಲಿ . . .

"ಥೆ! ಥೆ!" ಎಂದರು ವಿಶ್ವನಾಥಯ್ಯ, ಮೈಮೇಲೆ ಎರಗಬಯಸಿದ ನೊಣವನ್ನು ಝಾಡಿಸುವವರಂತೆ.

ಅವರು ಎದ್ದು ಶತಪಥ ತುಳಿದರು. ಕೋಟು ಅವರನ್ನು ಅಣಕಿಸಿತು. ಬಡ ಸೈಕಲು ಅವರೆಡೆಗೆ ಕಾತರದ ನೋಟ ಬೀರಿತು.

ಕಪಾಟದ ಬಳಿ ನಿಂತು ಗೊತ್ತುಗುರಿ ಇಲ್ಲದೆ ಕದ ತೆರೆದಾಗ 'ಗೀತಾರಹಸ್ಯ'ದ ಒಂದು ಪ್ರತಿ ವಿಶ್ವನಾಥಯ್ಯನವರ ಕಣ್ಣಿಗೆ ಬಿತ್ತು. ಒಂದು ವರ್ಷದ ಹಿಂದೆ ಕೊಂಡು ತಂದಿದ್ದರೂ ಓದಲು ಬಿಡುವು ದೊರೆತಿರಲಿಲ್ಲ. ಈಗ ಓದೋಣವೆಂದು ಕೈಗೆತ್ತಿಕೊಂಡು ಮಂಚದ ಮೇಲೆ ಪವಡಿಸಿದರು. ಅಲ್ಲಿಯೇ ಅವರಿಗೆ ಜೊಂಪುಹತ್ತಿತು.

* * * *

ಅವರು ಎಚ್ಚೆತ್ತಾಗ ಸಂಜೆಯಾಗಿತ್ತು. ಎದ್ದ ಗಂಡನನ್ನು ನೋಡಿ ಮುಗುಳು ನಕ್ಕು, ಹೆಂಡತಿ ಕಾಫಿ ತಂದುಕೊಟ್ಟರು.

" ಗಿರಿಜಾ ಎಲ್ಲಿ ? "

" ಸಮಾಜಕ್ಕೆ ಹೋಗಿದಾಳೆ. "

" ಸರಿ ! "

ಚೀಲ ತಂದು ಕೊಡ್ತೀನಿ. ಮಾರ್ಕೆಟ್ ಕಡೆ ಹೋಗಿ ಬರ್ತೀರಾ ? "

" ಓಹೋ ! "

ಪೋಷಾಕು ಧರಿಸಿ ಸೈಕಲಿನ ಗೊಡವೆಗೆ ಹೋಗದೆ ಕಾಲ್ನಡಿಗೆಯಲ್ಲೇ ವಿಶ್ವನಾಥಯ್ಯ ಹೊರಟರು. ಎಂತಹ ಜನಜಂಗುಳಿ ಬೀದಿಯಲ್ಲಿ ! ಅಲ್ಲ ! ಹೇಗಿದ್ದ ಬೆಂಗಳೂರು ಹೇಗಾಗಿ ಹೋಯಿತು ಅಂತ ! ಇಷ್ಟೊಂದು ಕಾರುಗಳು ಮೊದಲು ಇದ್ದುವೆಲ್ಲಿ ? ನಾನಾ ತರಹೆ ಜೀವನ ವೈಖರಿ . . . ಇಪ್ಪತ್ತನೆಯ ಶತಮಾನ. ಎಲ್ಲರೂ ನಾಗರಿಕರೇ. ಮೊನ್ನೆ ಯಾವನೋ ತತ್ವಜ್ಞಾನಿ ಹೇಳಿದನಲ್ಲವೆ ? 'ಚಂದ್ರಲೋಕ ವಾಸಯೋಗ್ಯವೆ ಅಂತ ಸಂಶೋಧನೆ ನಡಸಿದಾರೆ; ಭೂಲೋಕದಲ್ಲಿ ವಾಸ ಸಾಧ್ಯವೆ ಅಂತ ಅವರು ಮೊದಲು ಹೇಳಬೇಕು.' ಮುತ್ತಿನಂತಹ ಮಾತು.

" ನಮಸ್ಕಾರ ವಿಶ್ವನಾಥಯ್ಯ. "

" ನಮಸ್ಕಾರ ಸಾರ್. "

[ ಈ ಸಾರ್ ಬಿಡಲೊಲ್ಲದು. ಯಾರಪ್ಪಾ ? ನರಸಿಂಗರಾಯರು ! ]

" ಯಾವ ಕಡೆ ಹೊರಟಿದೀರಿ ? "

" ಮಾರ್ಕೆಟ್ಟಿಗೆ. "

" ನಾನೂ ಅಲ್ಲಿಗೇನೇ. ನಡೀರಿ, ಹೋಗೋಣ. "

[ ಸಿಕ್ಕಿಬಿದ್ದೆ. ಸುಳ್ಳು ಹೇಳಿ ತಪ್ಪಿಸಿಕೊಳ್ಳಬೇಕಾಗಿತ್ತು. ]

ನಿವೃತ್ತ ಮನುಷ್ಯನಿಗೆ ನಿವೃತ್ತ ಮನುಷ್ಯನೇ ಜತೆ ಎಂದುಕೊಂಡು ವಿಶ್ವನಾಥಯ್ಯ ಅಸಹಾಯರಾಗಿ ಅನಿವಾರ್ಯವಾಗಿ ನರಸಿಂಗರಾಯರೊಂದಿಗೆ ಹಾದಿ ನಡೆದರು.

* * * *

ಲೋಕಾಭಿರಾಮ ಮಾತುಗಳನ್ನಾಡುತ್ತ ಸಂಜೆಯನ್ನು ಕಳೆದು ಮನೆಗೆ ಮರಳಿದರು ವಿಶ್ವನಾಥಯ್ಯ.

ಮಗಳನ್ನು ಅವರು ಕೇಳಿದರು :

" ಎಷ್ಟು ಹೊತ್ತಾಯ್ತು ಬಂದು ?"

" ಆಗಲೆ ಬಂದೆ, ಅಣ್ಣಾಯ್ಯ."

ಊಟಕ್ಕೆ ಕುಳಿತಾಗ ವಸ್ತುಸ್ಥಿತಿಯ ಚಿಂತೆ ಮತ್ತೆ ವಿಶ್ವನಾಥಯ್ಯನವರನ್ನು ಕಾಡಿತು.

ಕೈ ತೊಳೆಯುವಾಗ ಅವರೆಂದುಕೊಂಡರು : ಯೋಚಿಸುತ್ತಾ ಕಾಲ ಕಳೆಯುವುದರಲ್ಲಿ ಅರ್ಥವಿಲ್ಲ. ಏನನ್ನಾದರೂ ತಾನು ಮಾಡಲೇ ಬೇಕು. ಗಿರಿಜೆಯ ವಿವಾಹ ತಡವಾಗಬಾರದು. ಹುಟ್ಟಿ ಬೆಳೆದ ಊರು ಬಿಟ್ಟು ಸಾವಿರ ಮೈಲು ಆಚೆ ಮಗನ ಜೊತೆ ತಾವು ವಾಸಮಾಡುವುದು, ಆಗದ ಮಾತು. ಪ್ರಸಾದ ತಮ್ಮ ಬಳಿಯಲ್ಲೇ ಇರಬೇಕು. ಇಲ್ಲೇ ಆತನಿಗೆ ಕೆಲಸ ದೊರಕಿಸಿ ಕೊಡಬೇಕು. ಸೊಸೆ ಮನೆಗೆ ಬರಬೇಕು. ಅಷ್ಟು ಮಾಡುವುದು ತನ್ನಿಂದ ಆಗಲಾರದೇನು ?

ರಾತ್ರಿ ದಿಂಬಿಗೆ ತಲೆ ಸೋಂಕಿದಾಗ, ಮಗನನ್ನು ಬೇಗನೆ ಕಂಡು ಮಾತನಾಡಬೇಕೆಂಬ ಬಯಕೆ ಅವರಿಗೆ ಬಲವಾಯಿತು. ಭಾನುವಾರಕ್ಕೆಂದು ತಾನು ಮುಂದೆ ತಳ್ಳಿದ್ದ ಮಾತುಕತೆಯ ನೆನಪಾಗಿ, ತಮ್ಮ ಆಸೆ ಈಡೇರುವುದೆಂಬ ನಂಬಿಕೆ ಮೊಳೆಯಿತು.

ಮಾರನೆಯ ದಿನ ಮಗನಿಗೆ ಕಳುಹಬೇಕಾದ ತಂತಿಯನ್ನು ವಿಶ್ವನಾಥಯ್ಯ ಮನಸ್ಸಿನಲ್ಲೆ ರೂಪಿಸಿದರು.

" ತಂದೆಗೆ ಸಕತ್ ಕಾಹಿಲೆ ತಕ್ಷಣ ಹೊರಟು ಬಾ, ಗಿರಿಜಾ."

[ಹೌದು, ಗಿರಿಜೆಯ ಹೆಸರು ಕೊನೆಯಲ್ಲಿ.]

ವಿಶ್ವನಾಥಯ್ಯನವರ ದೃಷ್ಟಿ ತಾರಸಿ ಛಾವಣಿಯತ್ತ ಹೊರಳಿತು. ತೊಟ್ಟಿಲುತೂಗುವ ಕರಿದುಕೊಂಡಿಗಳು ಕೆಳಮೊಗವಾಗಿ ಅವರನ್ನೇ ನೋಡುತ್ತಿದ್ದುವು.

## ೨

ಪ್ರಸಾದ ಊರಿಗೆ ಬಂದ. ಆತ ಬೆಂಗಳೂರನ್ನು ತಲಪಿದುದು ಬೆಳಗಿನ ಜಾವ.

ಆ ಹಿಂದಿನ ರಾತ್ರಿ ವಿಶ್ವನಾಥಯ್ಯನವರಿಗೆ ಚೆನ್ನಾಗಿ ನಿದ್ರೆ ಬಂದಿರ ಲಿಲ್ಲ. ಅಸ್ವಾಸ್ಥ್ಯದಿಂದಲ್ಲ, ಯೋಚನೆಯಿಂದ. ಮೂರು ಘಂಟೆಗೆ ಎಚ್ಚರ ವಾಗಿತ್ತು. ದೀಪ ಹಾಕಿಕೊಂಡು, ಚಾದರ ಹೊದೆದು, ಜಗಲಿಯಲ್ಲಿ ಆರಾಮು ಕುರ್ಚಿಯ ಮೇಲೆ ಕುಳಿತು ಹೊತ್ತು ಕಳೆದಿದ್ದರು.

ಅವರಾಕೆಗೂ ಬೇಗನೆ ಎಚ್ಚರವಾಯಿತು.

"ಯಾಕೇಂದ್ರೆ ಹೀಗೆ ಕೂತ್ಬಿಟ್ಟೆದೀರಿ ?"—ಎಂದರು.

"ಯಾಕಿಲ್ಲ–ಸುಮ್ನೆ," ಎಂದರು ವಿಶ್ವನಾಥಯ್ಯ ಚುಟುಕಾಗಿ.

"ಇವತ್ತು ಪ್ರಸಾದು ಬರಬೌದು, ಅಲ್ವೆ ?"

"ಹೂಂ."

ನಸುಕಿನಲ್ಲಿ ಟ್ಯಾಕ್ಸಿ ಮನೆ ಮುಂದೆ ನಿಂತಿತು. ಬಂದವನು ಪ್ರಸಾದ ಎಂಬುದನ್ನು ವಿಶ್ವನಾಥಯ್ಯ ಊಹಿಸಿಕೊಂಡರು.

ಅವರಾಕೆ ಬಾಗಿಲನ್ನು ತೆರೆದು, "ಬಾಪ್ಪಾ," ಎಂದು ಮಗನನ್ನು ಸ್ವಾಗತಿಸುತ್ತಿದ್ದಂತೆ, ವಿಶ್ವನಾಥಯ್ಯ ಮನಸ್ಸಿನಲ್ಲೆ ಅಂದುಕೊಂಡರು :

"ದುಂದು ವೆಚ್ಚ. ನನ್ನ ಕಾಲದಲ್ಲಿ ರೈಲ್ವೆ ಸ್ಟೇಶನಿಂದ ನಡಕೊಂಡು ಬರ್ತಿದ್ದೆ. ಈತನ ಕೈಯಲ್ಲಿ ಆದಾಗದಿದ್ದರೆ ಜಟಕಾದಲ್ಲಾರೂ ಬರಬಹು ದಿತ್ತಲ್ಲ. ಟ್ಯಾಕ್ಸಿಗೆ ದುಡ್ಡು ಸುರೀತಾನಲ್ಲಾ."

ಒಳಗೆ ಬಂದ ಪ್ರಸಾದ ನುಡಿದ :

"ಈಗ ಹ್ಯಾಗಿದೆ ಅಣ್ಣಯ್ಯ ?"

ಇವನ ದೃಷ್ಟಿಯಲ್ಲಿ ತಾವು ರೋಗಿ ಎಂಬುದು ವಿಶ್ವನಾಥಯ್ಯನಿಗೆ ಥಟ್ಟನೆ ಮನವರಿಕೆಯಾಗಿ, ಒಳಗಿಂದೊಳಗೆ ನಕ್ಕು, ಬಾಹ್ಯವಾಗಿ ಸಪ್ಪೆ ಮುಖದಿಂದಿದ್ದು, "ಊಂ . . . ಹೂಂ . . ." ಎಂದು ರಾಗಹೊರಡಿಸಿ, ಅಸ್ಪಷ್ಟವಾಗಿ ಏನನ್ನೋ ಗೊಣಗಿದರು.

ಧರ್ಮಪತ್ನಿ ಕೈಕೊಡಬೇಕೆ ?

ಕೊಟ್ಟ ತಂತಿಯ ಒಕ್ಕಣೆಯನ್ನು ಗಿರಿಜೆಯಿಂದ ತಿಳಿದಿದ್ದರೂ ಆಕೆ ಅಂದರು :

" ಅವರಿಗೇನಾಗಿದೆ? "

ಪ್ರಸಾದ ತಿವಿಯುವ ನೋಟದಿಂದ ತಂದೆಯನ್ನು ನೋಡಿದ.

ವಿಶ್ವನಾಥಯ್ಯ ಪತ್ನಿಯನ್ನು ದುರದುರನೆ ದಿಟ್ಟಿಸಿ, " ಪೂರ್ತಿಮಾಡು-ಧಾಡಿ–ಅಂತ," ಎಂದು ಗುಡುಗಿದರು.

ಪ್ರಸಾದ ದಡದಡನೆ, ಹಿಂದೆ ತನ್ನದಾಗಿದ್ದ ಈಗ ಗಿರಿಜೆ ಬಳಸುತ್ತಿದ್ದ ಕೊಠಡಿಗೆ ಸೂಟ್‌ಕೇಸ್–ಕಿಟ್‌ಗಳೊಡನೆ ಹೊರಟು ಹೋದ.

ಘಂಟೆಗಳು ಕಳೆದರೂ ಪ್ರಸಾದನ ಸಿಟ್ಟು ಇಳಿಯುವ ಲಕ್ಷಣ ಕಾಣಿಸಲಿಲ್ಲ.

ವಿಶ್ವನಾಥಯ್ಯನವರು ಸ್ನಾನ ಪೂಜೆ ಪತ್ರಿಕೆಗಳಲ್ಲಿ ನಿರತರಾಗಿದ್ದರು. ಊಟಕ್ಕೆ ಮುನ್ನ ಪ್ರಸಾದ ಮನೆಯಿಂದ ಹೊರಬೀಳುವ ಸಿದ್ಧತೆಯಲ್ಲಿದ್ದು ದನ್ನು ಕಂಡ ಅವರು, ಕನ್ನಡಕವನ್ನು ಮೂಗಿನ ತುದಿಗಿಳಿಸಿ ಕತ್ತು ಬಾಗಿಸಿ ಬರಿಯ ಕಣ್ಣುಗಳಿಂದ ಮಗನನ್ನು ನೋಡಿ ಅಂದರು :

" ಎಲ್ಲಿಗೆ ಇಷ್ಟೊತ್ನಲ್ಲಿ ?"

ಹೊಸ್ತಿಲ ಮೇಲೆ ನಿಂತು ಪ್ರಸಾದ ನುಡಿದ :

" ಟಿಕೆಟು ಕೊಳ್ಳೋಕೆ ! ವಾಪಸು ಹೋಗ್ಬೇಕಲ್ಲ? ಸುಳ್ಳು ತಂತಿ ಕೊಟ್ಟು ಕರೆಸಿದಿರಿ. ಸಂತೋಷವಾಯ್ತು ತಾನೆ? ನನಗೆ ರಜಾ ಇಲ್ಲ. ನಾನು ಹೊರಡ್ಬೇಕು."

ವಿಶ್ವನಾಥಯ್ಯನವರ ಸುಕ್ಕುಗಟ್ಟಿದ ಮುಖದ ಸ್ನಾಯುಗಳು ಮಿಸುಕಿ ದುವು.

" ಸಾಕು ತಲೆಹರಟೆ !" ಎಂದು ಅವರು ಗದರಿದರು.

ತಂದೆ ಮಕ್ಕಳ ಧ್ವನಿ ಕೇಳಿ ಪ್ರಸಾದನ ತಾಯಿ ಹೊರಬಂದರು.

" ಊಟಕ್ಕಾಯ್ತು ಅಂದ್ರೆ . . . "

ಹೊರಬೀಳಲೋ ಬೇಡವೋ ಎಂದು ಪ್ರಸಾದ ಅನಿಶ್ಚತೆಯಿಂದ ಕ್ಷಣಕಾಲ ಹೊಯ್ದಾಡಿದ.

ನಿರೀಕ್ಷಿಸುತ್ತಲಿದ್ದ ಮಾತುಕತೆ ಮುಗಿದುಹೋಗಲೆಂದು ಆತ ಮತ್ತೆ ಮನೆಯೊಳಗೆ ಬಂದ.

ಮಾತಿಲ್ಲದ ಗಂಭೀರ ವಾತಾವರಣದಲ್ಲಿ ಊಟ ಮುಗಿಯಿತು.

ಕೈ ಮುಖ ತೊಳೆದುಕೊಂಡು ವಿಶ್ವನಾಥಯ್ಯ ನೇರವಾಗಿ ಜಗಲಿಗೆ ಬಂದು,

"ಪ್ರಸಾದ್, ಇಲ್ಲಿ ಬಾ,"

—ಎಂದು ಕರೆದರು.

ಪ್ರಸಾದ ಕೊಠಡಿಯ ಬಾಗಿಲ ಚೌಕಟ್ಟಿನಲ್ಲೊಂದು ಪ್ರತಿಮೆಯಾಗಿ ನಿಂತ.

ಮಗನನ್ನು ನೋಡುತ್ತ ವಿಶ್ವನಾಥಯ್ಯನಿಗೆ ಅನಿಸಿತು:

"ಗಿಡವಾಗಿತ್ತು ಮೊನ್ನೆವರೆಗೆ, ಈಗ ಮರವಾಗಿದೆಯಲ್ಲ . . . "

ಪ್ರಕಾಶವಾಗಿ ಅವರೆಂದರು:

"ನನಗೆ ರಿಟೈರಾಯ್ತು."

ಬಿಗಿಗೊಂಡಿದ್ದ ಮುಖಭಾವವನ್ನು ಶಿಥಿಲಗೊಳಿಸದೆಯೇ ಪ್ರಸಾದನೆಂದ:

"ಆಗುತ್ತೇಂತ ಆವತ್ತೇ ಬರೆದಿದ್ದಿರಲ್ಲ?"

"ಹ್ಞ. ಇನ್ನು ಮನೆಯ ಜವಾಬ್ದಾರಿ ನೀನು ಹೊತ್ಕೋಬೇಕು."

" . . . "

"ಸುಮ್ಮನಿದೀಯಲ್ಲ?"

"ನೀವು ಏನು ಕೇಳ್ತಿದೀರೀಂತ ಸ್ಪಷ್ಟವಾಗಿಲ್ಲ. ತಿಂಗಳಿಗೆ ಈಗ ನೂರು ರೂಪಾಯಿ ನಾನು ಕಳಿಸ್ತಾ ಇಲ್ವೆ?"

"ದುಡ್ಡು–ದುಡ್ಡು! ಸಂಸಾರ ಬಂಧನ ಅಂದರೆ ಆರ್ಥಿಕ ವ್ಯವಹಾರ ಅಂತ ತಿಳಿಕೊಂಡೆಯೇನಯ್ಯ?"

ಅಷ್ಟು ಹೇಳಿ ವಿಶ್ವನಾಥಯ್ಯ ಹುಬ್ಬು ಹಾರಿಸಿದರು, ಹಿರಿತನದ ಹೆಮ್ಮೆಯಿಂದ.

ತಂದೆಯ ಮಾತು ವಾತಾವರಣದಲ್ಲಿ ಲೀನವಾದ ಮೇಲೂ ಸ್ವಲ್ಪ ಹೊತ್ತು ಸುಮ್ಮನಿದ್ದು, ಪ್ರಸಾದನೆಂದ:

"ಒಂದು ಮಾತು ಹೇಳ್ತೀನಿ. ಕೋಪಿಸ್ಕೋಬೇಡಿ, ಅಣ್ಣಯ್ಯ. ಐವತ್ತೈದು ಆದರಾಯ್ತು; ಇನ್ನು ಮಾಡುವಂಥಾದ್ದು ಏನೂ ಇಲ್ಲ ಅಂತ ನಮ್ಮ ಜನ ತಿಳಕೋತಾರೆ. ಇದು ಈ ದೇಶದ ದೌರ್ಭಾಗ್ಯ. ಇಲ್ಲದ ಚಿಂತೆ ಕಲ್ಪಿಸಿಕೊಂಡು ನೀವು ಸುಮ್ನೆ ಕೊರಗ್ತೀರಿ. ಎಪ್ಪತ್ತು ದಾಟಿದರೂ ನಿತ್ಯ ದುಡಿಯುವ ವಿದೇಶಿಯರನ್ನ ನಾನು ಕಂಡಿದೇನೆ."

ವಿಶ್ವನಾಥಯ್ಯನ ಮೂಗು ಕುಣಿಯಿತು. ಸಹನೆಯ ಕಟ್ಟೆಯೊಡೆದು ತಾವಿನ್ನು ಕನಲಿ ರುದ್ರನಾಗುವುದು ಖಂಡಿತ ಎಂದು ಅವರಿಗೆ ಭಾಸ ವಾಯಿತು. ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು, ಸಿಟ್ಟಿನ ಬತ್ತಳಿಕೆ ಯಿಂದ ವ್ಯಂಗ್ಯ ಮಾತುಗಳನ್ನು ಆರಿಸಿಕೊಳ್ಳುತ್ತ ಅವರೆಂದರು:

"ವಿದೇಶದಿಂದ ಯಾವತ್ತು ಬಂದೆಯಪ್ಪ?"

ಪ್ರಸಾದನ ಪಾಲಿಗೆ ಇದು ಗೆಲುವಿನ ಘಳಿಗೆ.

"ಮುಂದಿನ ತಿಂಗಳು ಹೋಗ್ತೀನಿ, ಜರ್ಮನಿಗೆ."

ಅಡಿ ತಪ್ಪಿ ಜೋಲಿ ಹೊಡೆದಂತಾಯಿತು ವಿಶ್ವನಾಥಯ್ಯನವರಿಗೆ.

"ಏನಂದೆ?"

"ನಮ್ಮ ಸಂಸ್ಥೆಯವರು ಉಚ್ಚ ಶಿಕ್ಷಣಕ್ಕೆ ನನ್ನನ್ನು ಕಳಿಸಬೇಕೂಂತ ತೀರ್ಮಾನಿಸಿದಾರೆ."

"ಅವರೇ ತೀರ್ಮಾನಿಸಿದರೊ? ಹೆತ್ತ ಹಿರಿಯರು ಮಾಡಬೇಕಾದ ನಿರ್ಧಾರ ಇನ್ನು ಏನೂ ಇಲ್ಲ ಅನ್ನು."

"ಸುದ್ದಿ ಕೇಳಿ ಸಂತೋಷಪಡ್ತೀರಾಂತಿದ್ದೆ."

"ಸಂತೋಷವೇ ಕಣಯ್ಯ. ಎರಡು ವರ್ಷ ಯಾತಕ್ಕೆ? ಇಪ್ಪತ್ತು ವರ್ಷ ಜರ್ಮನೀಲೇ ಇರು."

ತಬ್ಬಿಬ್ಬಾಗದೆ ಪ್ರಸಾದನೆಂದ:

"ಪ್ರಯಾಣದ ದಿನ ಗೊತ್ತಾದ್ಮೇಲೆ ಒಮ್ಮೆ ಬಂದು ಹೋಗೋಣಾಂತಿದ್ದೆ. ಸರಿ. ತಂತಿಕೊಟ್ಟಿರಿ. ಈಗಲೇ ಬಂದೆ. ಆಶೀರ್ವಾದ ಮಾಡಿ ಕಳಿಸ್ಕೊಡಿ. ಇನ್ನು ಭೇಟಿ ಎರಡು ವರ್ಷ ಆದ್ಮೇಲೆ."

ಒರಗುವ ಕುರ್ಚಿಯಲ್ಲಿ ವಿಶ್ವನಾಥಯ್ಯನವರ ಮೈ ಮುದುಡಿತು. ಗಂಟಲೊಣಗಿದಂತೆ, ಉಸಿರು ಕಟ್ಟಿದಂತೆ, ಬವಳಿ ಬಂದಂತೆ ಅವರಿಗೆ ಅನಿಸಿತು.

ತಂದೆ ಏನಾದರೂ ಹೇಳಬಹುದೆಂದು ಪ್ರಸಾದ ಎರಡು ನಿಮಿಷ ಕಾದು ನೋಡಿದ. ಅವರ ಮೌನ ಈತನನ್ನು ವಿವಂಚನೆಗೆ ಗುರಿಮಾಡಿತು. ತಂದೆಯ ಕುಗ್ಗಿದ ಜೀವವನ್ನು ಕಂಡು ಒಂದು ಕ್ಷಣ ಕನಿಕರವೆನಿಸಿತು. ತಾನು ಹೇಳಿದುದನ್ನು ಜೀರ್ಣಿಸಿಕೊಳ್ಳಲು ಅವರಿಗೆ ಕಾಲಾವಕಾಶಬೇಕು ಎಂದು ತೋರಿ, ಆತ ಒಳಕ್ಕೆ ಸರಿದ.

ಸಂಭಾಷಣೆಯನ್ನು ಕೇಳಿಸಿಕೊಂಡಿದ್ದ ಗಿರಿಜೆಯ ಮುಖ ಅಲ್ಲಿ ಬೆಳಗುತ್ತಿತ್ತು.

ಅವಳೆಂದಳು :

" ಜರ್ಮನಿಗೆ ನೀನು ಹೋಗೋದು ನಿಜವೆ ಪ್ರಸಾದು ? ಓ! ಎಷ್ಟು ಚೆನ್ನಾಗಿರುತ್ತೆ !"

ಪ್ರಸಾದ, ತಂಗಿ ವ್ಯಕ್ತಪಡಿಸಿದ ಪ್ರತಿಕ್ರಿಯೆಗಾಗಿ ತಾನು ಕೃತಜ್ಞ ಎನ್ನುವಂತೆ ನಸುನಕ್ಕ.

ಸಂತಸವನ್ನು ತಾಯಿಗೆ ತಿಳಿಸಲು ಗಿರಿಜೆ ಒಳಕ್ಕೋಡಿದಳು. ಉಣ್ಣುತ್ತ ಕುಳಿತಿದ್ದ ತಾಯಿಯ ಮುಂದೆ ನಿಂತು, " ಅಮ್ಮಾ! ಪ್ರಸಾದು ಜರ್ಮನಿಗೆ ಹೋಗ್ತಾನಂತೆ," ಎಂದಳು.

ಮಗಳು ಆಡುತ್ತಿದ್ದ ಮಾತು ವಿಶ್ವನಾಥಯ್ಯನವರಿಗೆ ಕೇಳಿಸುತ್ತಿತ್ತು. ಹುಚ್ಚು ಹುಡುಗಿ–ಎಂದುಕೊಂಡರು ಅವರು.

ಮಗ ವಿದೇಶಕ್ಕೆ ಹೋಗುವನೆಂಬ ವಾರ್ತೆ ಸಿಹಿ ಭಕ್ಷ್ಯವಲ್ಲ–ಎಂದು ತಾಯಿ ಕಾತರಗೊಂಡು, ಬೇಗ ಬೇಗನೆ ಊಟ ಮುಗಿಸಿ ಎದ್ದರು.

ಪರಿಸ್ಥಿತಿ ತನ್ನ ಹಿಡಿತದಲ್ಲಿಲ್ಲ ಎಂದು ವಿಶ್ವನಾಥಯ್ಯನವರಿಗೆ ಸಂಕಟ ವಾಯಿತು. ಗಿಡವಾಗಿ ಬಗ್ಗಿತ್ತೆ? ಅವರಿಗೆ ನೆನಪಿಲ್ಲ. ಜೀವನದ ದಿನನಿತ್ಯದ ಜಂಜಾಟದಲ್ಲಿ ಮಕ್ಕಳನ್ನು ಕುರಿತು ಅವರು ಹೆಚ್ಚಿನ ಯೋಚನೆಯನ್ನೇ ಮಾಡಿರಲಿಲ್ಲ. ಈಗ ಬಿಡುವಿದೆಯೆಂದು ಮರವನ್ನು ಬಗ್ಗಿಸಲು ಹೊರಟಿದ್ದರು.

ಗಂಟಲು ಗೊಗ್ಗರ ಧ್ವನಿ ಹೊರಡಿಸಿ, " ಪ್ರಸಾದ್," ಎಂದಿತು.

" ಬಂದೆ ಅಣ್ಣಯ್ಯ."

ಮಗನ ಮಾತಿನಲ್ಲಿ ಮಾರ್ದವತೆಯಿತ್ತು. ತಾನು ಗೆದ್ದುದು ಖಚಿತ ವಾದಾಗ ಆತ ಉದಾರಿಯಾಗಿದ್ದ.

ಆ ಕಾರಣದಿಂದ, ಬಾಗಿಲ ಚೌಕಟ್ಟಿನೊಳಗೆ ತುಸು ಭಿನ್ನವಾದ ಚಿತ್ರ ಈಗ ಕಂಡಿತು.

ದೈನ್ಯ ನೋಟದಿಂದ ಮಗನನ್ನು ದಿಟ್ಟಿಸಿ ವಿಶ್ವನಾಥಯ್ಯ ಅಂದರು :

" ನೀನು ಹೇಳಿದ್ದೆಲ್ಲ ನಿಜ ಅನ್ನು."

" ಹುಂ."

" ನಿನ್ನ ತಂಗಿಯ ಮದುವೆಯೊಂದು ಆಗಬೇಕಲ್ಲಪ್ಪ."

"ವರ ಗೊತ್ತಾಗಿದೆಯೆ?"

"ಇಲ್ಲ ಪ್ರಯತ್ನ ಮಾಡ್ತಿದೀನಿ."

"ಆಗಲಂತೆ, ಏನವಸರ?"

"ಹುಟ್ಟಿಸಿ ದೊಡ್ಡದು ಮಾಡಿದವರಿಗೆ ಒಂದು ಜವಾಬ್ದಾರಿ ಇರುತ್ತೆ ನೋಡು."

ಮಾತಿನ ಬದಲು ಹುಬ್ಬುಗಳ ಪ್ರಶ್ನಾರ್ಥಕ ಚಿಹ್ನೆ.

"ನಿನಗೂ ಹೆಣ್ಣು ನೋಡ್ತಿದೀನಿ."

"ಈಗ್ಲೇ ನಾನು ಮಾಡ್ಕೊಳ್ಳೊಲ್ಲ."

"ಪೂರ್ತಿ ಕೇಳಯ್ಯ. ಗಿರಿಜೆ ಮದುವೆ ಅಂದರೆ ಖರ್ಚು. ವರದಕ್ಷಿಣೆ ಕೊಡಬೇಕಾಗುತ್ತೆ. ನಿನಗೆ ಹೆಣ್ಣು ಕೊಡುವವರು ವರದಕ್ಷಿಣೆ ಕೊಡ್ತಾರೆ. ಆ ಹಣವನ್ನ–"

"ಅಣ್ಣಯ್ಯ! ಸಂಸಾರ ಸಂಬಂಧವನ್ನ ಆರ್ಥಿಕ ವ್ಯವಹಾರದ ಮಟ್ಟಕ್ಕೆ ಇಳಿಸ್ತಿದೀರಲ್ಲ!"

ತಾನು ಹಿಂದೆ ಬಳಸಿದ್ದು ತಿರುಗುಬಾಣವಾಗಿ ಬಂತೆಂದು ತಿಳಿಯಲು ವಿಶ್ವನಾಥಯ್ಯನವರಿಗೆ ಒಂದು ನಿಮಿಷ ಹಿಡಿಯಿತು. ಚೇಳು ಕುಟುಕಿತೆಂದು ಅವರು ಚಡಪಡಿಸಿದರು. ಉಗುಳು ನುಂಗಿ ಅವರೆಂದರು:

"ನೀನು ಜರ್ಮನಿಗೆ ಹೋಗಿ ಬರೋ ಖರ್ಚನ್ನೂ ನಿನಗೆ ಹೆಣ್ಣು ಕೊಡುವವರು–"

ಪ್ರಸಾದ ಧ್ವನಿ ಏರಿಸಿ ಅಂದ:

"ಆ ತೊಂದರೆ ಬೇಡಿ, ಅಣ್ಣಯ್ಯ. ನನ್ನನ್ನು ಕಳಿಸ್ತಿರೋದು ಸಂಸ್ಥೆಯವರು. ಖರ್ಚೆಲ್ಲಾ ಅವರದೇ."

"ಅಂದರೆ? ವಾಪಸಾದ್ಮೇಲೆ ಇಂತಿಷ್ಟು ವರ್ಷ ಅಲ್ಲೇ ಕೆಲಸ ಮಾಡ್ತೀನಿ ಅಂತ ಬರಕೊಡ್ತೀಯೋ?"

"ಹತ್ತು ವರ್ಷ. ಕರಾರು ಪತ್ರಕ್ಕೆ ಆಗಲೇ ಸಹಿ ಹಾಕಿದೀನಿ. ಎಲ್ಲಾ ಸರಿ ಹೋದರೆ ಸದಾಕಾಲವೂ ಆ ಸಂಸ್ಥೇಲೇ ಇರ್ತೀನಿ."

ಮುಂಡಮೋಚ್ತು ಎಂದು ಅಸ್ಪಷ್ಟವಾಗಿ ವಿಶ್ವನಾಥಯ್ಯ ಗೊಣಗಿದರು. ಗಡಸು ಕಂಠದಲ್ಲಿ ಅವರೆಂದರು:

"ನಾನು ಹೇಳೋದನ್ನು ಇಷ್ಟು ಕೇಳ್ತೀಯೇನಯ್ಯ? ನೀನು ಬೆಂಗಳೂರಿಗೆ ವಾಪಸು ಬಂದು ಇಲ್ಲೇ ನೆಲೆಸಬೇಕೂಂತ ನನ್ನ ಅಪೇಕ್ಷೆ. ಇರೋದಕ್ಕೆ ಸ್ವಂತದ ಮನೆ ಇದೆ. ಇಂಜಿನಿಯರ್ ಕೆಲಸ ಇಲ್ಲಿಯೇ ಸಿಕ್ಕುತ್ತೆ. ಇನ್ನೇನಪ್ಪ? ಬೇಕಿದ್ದರೆ ವಿದೇಶಕ್ಕೂ ಹೋಗಿ ಬರಬಹುದು, ನಿಧಾನವಾಗಿ."

ಉತ್ತರ ರೂಪವಾಗಿ ಪ್ರಸಾದ ಸಣ್ಣನೆ ನಕ್ಕ.

"ಎಲಾ! ನಗ್ತೀಯಲ್ಲ ನೀನು? ನಾನೇನು ಡೊಂಬರಾಟ ಆಡ್ತಿದೀನಾ?"

"ಇಲ್ಲ, ಅಣ್ಣಯ್ಯ. ನನ್ನನ್ನು ನೀವು ಅರ್ಥ ಮಾಡ್ಕೊಂಡಿಲ್ಲ."

"ನೀನು ನನ್ನನ್ನು ಅರ್ಥಮಾಡ್ಕೊಂಡ್ಬಿಟ್ಟಿದೀಯೋ?"

"ಹಾಗೇಂತ ತಿಳಕೊಂಡಿದೀನಿ."

ಮೌನದ ಕಂದಕ. ತಮ್ಮೊಳಗೇ ನರಳುತ್ತ ವಿಶ್ವನಾಥಯ್ಯ ಅನ್ನುದದಾಟಿದರು.

ಜಗಲಿಯ ಗೋಡೆಯಲ್ಲಿ ಗಾರೆ ಕಿತ್ತು ಬಂದಿದ್ದ ಕಡೆಗೆ ಬಿರುನೋಟ ಬೀರಿ ಅವರೆಂದರು:

"ಇನ್ನೊಂದು ವಾರದೊಳಗೆ ಹೆಣ್ಣು ಗೊತ್ಮಾಡ್ತೀನಿ. ನಾಲ್ಕೈದು ಜನ ಕೇಳ್ಕೊಂಡು ಹೋಗಿದಾರೆ. ಹುಡುಗಿಯರನ್ನ ನೀನೂ ನೋಡು. ಮದುವೆ ಮಾಡ್ಕೊಂಡು ಜರ್ಮನಿಗೋ ವಿಲಾಯತಿಗೋ ಎಲ್ಲಿಗೆ ಬೇಕಾದರೂ ಹೋಗು."

ಪ್ರಸಾದನ ಮುಖ ಗಂಭೀರವಾಯಿತು.

"ಅದು ಸಾಧ್ಯವಿಲ್ಲ ಅಣ್ಣಯ್ಯ," ಎಂಬ ಪದಗಳನ್ನು ಹೊರಹಾಕಿ, ಅವನ ತುಟಿಗಳು ಒಂದನ್ನೊಂದು ಬಲವಾಗಿ ಅತುಕೊಂಡುವು.

ದೃಷ್ಟಿಯನ್ನು ಪ್ರಯತ್ನಪೂರ್ವಕವಾಗಿ ಕಿತ್ತು ವಿಶ್ವನಾಥಯ್ಯ ಮಗನತ್ತ ಹೊರಳಿದರು.

ಅವರ ನೋಟದೆದುರು ಪ್ರಸಾದ ತುಸು ಬಾಗಿದ.

ಅವನೆಂದ:

"ನಿಮ್ಮ ಮನಸ್ಸು ನೋಯಿಸ್ತಿರೋದಕ್ಕೆ ವ್ಯಥೆಯಾಗ್ತಿದೆ, ಅಣ್ಣಯ್ಯ. ಆದರೆ ನಾನೇನೂ ಮಾಡುವಂತಿಲ್ಲ."

"ಸತ್ತಾಗ ಗಂಗೋದಕ?"

ವಿಶ್ವನಾಥಯ್ಯನವರ ಗಂಟಲು ಬಿರುಕು ಬಿಟ್ಟಿತ್ತು.

ಅವರಾಕೆ ಬಂದು ಹಜಾರದ ಬಾಗಿಲ ಮರೆಯಲ್ಲಿ ನಿಂತಿದ್ದರು. ಗಂಡನ ಆ ಪ್ರಶ್ನೆ ಕೇಳಿದೊಡನೆ ಅವರು ಗೋಳಾಡಿದರು :

" ಅಯ್ಯೋ ! ಎಂಥಾ ಮಾತು ಆಡ್ತೀರಿ ಅಂದ್ರೆ . . . "

ವಿಶ್ವನಾಥಯ್ಯ ಕೂಗಾಡಿದರು :

" ಸತ್ತಾಗ ಅನ್ನದೆ, ಇನ್ನೇನು-ಹುಟ್ಟಿದಾಗ ಅನ್ಬೇಕೆ ?"

ತಾಯಿ ಮಗನತ್ತ ತಿರುಗಿದರು :

" ಪ್ರಸಾದು-ಏನೋ ಇದೆಲ್ಲಾ ?"

ಪ್ರಸಾದನ ಗಂಟಲೊಣಗಿತು.

ಕಂಪಿಸುವ ಸ್ವರದಲ್ಲಿ ಅವನೆಂದ :

" ಅಮ್ಮ ನಾನು ನಾಳೆಯ ಯೋಚ್ನೆ ಮಾಡ್ತಿದೀನಿ. ಆದರೆ ಅಣ್ಣಯ್ಯ ನನ್ನ ದಾರಿಗೆ ಕಲ್ಲು ಹಾಕ್ತಿದಾರೆ, ಅಮ್ಮ."

"ಹೂಂ-ಕಣೋ. ಕಲ್ಲು ಹಾಕ್ತಿದೀನಿ-ಕಲ್ಲು ! ನಾನು-"

ಮಾತನ್ನು ವಿಶ್ವನಾಥಯ್ಯ ಅಷ್ಟಕ್ಕೆ ನಿಲ್ಲಿಸಿದರು. ರಸ್ತೆಯಿಂದ ಹಿತ್ತಿಲಿನೊಳಕ್ಕೆ ಬರತೊಡಗಿದ್ದ ಹಳೆಯ ಪಾದರಕ್ಷೆಗಳನ್ನೂ ಮಾಸಿದ ಧೋತರವನ್ನೂ ಅವರು ಕಂಡರು.

ಈ ಘಳಿಗೆಯಲ್ಲಿ ಬರಬೇಕೆ ಈತ ?

ತಮ್ಮ ಎಲ್ಲ ಭಾವನೆಗಳನ್ನೂ ಹತ್ತಿಕ್ಕಿ, ಮುಗುಳು ನಗೆಯ ಮುಖವಾಡ ಧರಿಸಿ, ಬಂದ ಮನುಷ್ಯನನ್ನು ತಾವು ಸ್ವಾಗತಿಸಬೇಕು.

ವಿಶ್ವನಾಥಯ್ಯ ಮುಖಭಾವವನ್ನು ಮಾರ್ಪಾಟುಗೊಳಿಸುವುದಕ್ಕೆ ಮುನ್ನವೇ, ಅಂಗಳ ದಾಟಿ ಮನೆಯ ಮೆಟ್ಟಲುಗಳ ಮೇಲೆ ನಿಂತ ವ್ಯಕ್ತಿ ಅಂದಿತು :

" ನಮಸ್ಕಾರ. ಸಾಯಂಕಾಲ ಬರೋಣಾಂತಿದ್ದೆ. ಆದರೆ ರಾಹು ಕಾಲ. ಈಗ಼್ಲೇ ಹೋಗೋದು ಮೇಲು ಅನಿಸ್ತು. ನನಗೇನೋ ಇವತ್ತು ರಜಾ. ಆದರೂ ನೀವು ಮಲಗಿರ್ತೀರೇನೋ ಅಂತ . . . "

ಮಲಗುವುದರ ಹೊರತು ಬೇರೆ ಕೆಲಸವೇನಿದೆ ತನಗೆ ? ಎಂದು ವಿಶ್ವನಾಥಯ್ಯ ಮನಸಿನೊಳಗೇ ಕಹಿಯಾಗಿ ಅಂದುಕೊಂಡರು. ಬಹಿರಂಗ

ವಾಗಿ ಶಿಷ್ಟಾಚಾರವನ್ನು ಪಾಲಿಸಲು ಪ್ರಯತ್ನಿಸುತ್ತ, ಕುಳಿತಲ್ಲೆ ತುಸು ಮಿಸುಕಿದಂತೆ ಮಾಡಿ,

"ಬನ್ನಿ ಚಂದ್ರಶೇಖರಯ್ಯನವರೆ," ಎಂದರು.

[ಹೆಣ್ಣು ಹೆತ್ತವರಿಗೆ 'ಬನ್ನಿ' ಸಾಕು. ಗಂಡಿನ ತಂದೆಗಾದರೆ 'ದಯಮಾಡಿಸಿ.']

ಮಧ್ಯವಯಸ್ಕ ಚಂದ್ರಶೇಖರಯ್ಯನವರ ದೃಷ್ಟಿ ಪ್ರಸಾದನ ಮೇಲೆ ತಂಗಿತು. ಪ್ರೀತಿ ತುಂಬಿದ್ದ ನೋಟ.

ಅವರ ದಪ್ಪಗಂಟಲು ನಿಧಾನವಾಗಿ ಪದಗಳನ್ನು ಹೊರಕ್ಕೆ ಉರುಳಿಸಿತು:

"ಚಿರಂಜೀವಿಯವರು ಈ ಬೆಳಗ್ಗೆ ಬಂದ್ರು, ಅಲ್ವೆ? ನಿಮ್ಮದೆಲ್ಲಾ ಅಚ್ಚುಕಟ್ಟು ವಿಶ್ವನಾಥಯ್ಯನವರೆ! ಹೇಳಿದ ದಿವಸ ಹೇಳಿದ ಟೈಮಿಗೆ ನೀವು ಹೇಳಿದ್ದು ಆಗಿಯೇ ಆಗುತ್ತೆ. ಅಷ್ಟು ಶಿಸ್ತು!"

[ಶಿಸ್ತನ್ನು ಸುಟ್ಟಿತು.]

ಸ್ಟೂಲಿನತ್ತ ಬೊಟ್ಟು ಮಾಡಿ,

"ಕೂತ್ಕೊಳ್ಳಿ," ಎಂದರು ವಿಶ್ವನಾಥಯ್ಯ.

ಪ್ರಸಾದ ಏನನ್ನೋ ಊಹಿಸಿ, ತನ್ನ ಊಹೆ ಸರಿ ಇರಬಹುದೆಂದು ಭಾವಿಸಿ, ಕೊಠಡಿಯೊಳಕ್ಕೆ ತೆರಳಿದ. ಮಂದಹಾಸ ಸೂಸಲು ಅವನ ತುಟಿಗಳು ಸಿದ್ಧವಾದುವು. ಆದರೆ ಹುಬ್ಬುಗಳಾಗಲೇ ಮೇಲಕ್ಕೆ ಸರಿದು ಗಂಟಿಕ್ಕಿಕೊಂಡಿದ್ದುವು.

ಸ್ಟೂಲಿನ ಮೇಲೆ ಕುಳಿತುಕೊಳ್ಳುತ್ತಿದ್ದಾಗಲೇ ಚಂದ್ರಶೇಖರಯ್ಯನ ದೃಷ್ಟಿ ನಿರ್ಗಮಿಸುತ್ತಿದ್ದ ಪ್ರಸಾದನ ಮೇಲೆ ನೆಟ್ಟಿತ್ತು.

ಅವರೆಂದರು:

"ಪ್ರಸಾದ್ ಎಷ್ಟೊಂದು ಬೆಳೆದ್ಬಿಟ್ಟಿದಾರೆ. ನಿಮ್ಮ ಮಗ ಎಸ್.ಎಸ್.ಎಲ್.ಸಿ.ಗೆ ಕಟ್ಟಿದ್ದ ವರ್ಷ ನಾನು ಇವರ ಸ್ಕೂಲು ಸೇರ್ಕೊಂಡೆ. ಹಹ್ಹ–ನಾನು ಇವರಿಗೆ ಮೇಷ್ಟ್ರಾಗಿರಲಿಲ್ಲ ಅನ್ನೋಣ. ಆದರೂ–ನಿಮ್ಮ ಮಗ ನಮ್ಮ ಸ್ಕೂಲಿನ ಹಳೇ ವಿದ್ಯಾರ್ಥಿ ಅಂತ ಹೆಮ್ಮೆ ಪಟ್ಕೋಬಹುದು."

"ಓಹೋ–ಧಾರಾಳವಾಗಿ..."

"ನಿಮ್ಮ ಮಗಳೂ ನಮ್ಮ ಲೀಲಾನೂ ಒಂದೇ ವರ್ಷ—"

"ಹೌದು ಹಾಗೇಂತ ಅವತ್ತೇ ಹೇಳಿದಿರಿ."

"ಹೇಳಿದೆನೆ? ಪ್ರಿಯವಾದ ವಿಷಯ ಆಗಾಗ್ಗೆ ಬಾಯಿಂದ ಬರ್ತಿರುತ್ತೆ. ಮರೆವು ಅಂತಲ್ಲ . . ."

ಚಂದ್ರಶೇಖರಯ್ಯನವರ ಮಾತನ್ನು ಕೇಳಿಸಿಕೊಳ್ಳದವರಂತೆ ವಿಶ್ವನಾಥಯ್ಯ, ಹೊರಗೆ ರಸ್ತೆಯಂಚಿನಲ್ಲಿದ್ದ ವಿದ್ಯುತ್ ಕಂಬದತ್ತ ದೃಷ್ಟಿ ಹರಿಸಿದರು.

ಉಪಾಧ್ಯಾಯರ ಧ್ವನಿಯೇ ಝೇಂಕರಿಸುತ್ತ ಸಾಗಿತು:

"ನಿಮ್ಮ ಮಗ ಇವತ್ತು ತಾನೇ ಬಂದಿದಾರೆ. ನಾನು ನಾಳೆಯೋ ನಾಡದ್ದೋ ಬರಬಹುದಾಗಿತ್ತು. ಆದರೂ ಶುಭ ಪ್ರಸ್ತಾಪಕ್ಕೆ ವಿಳಂಬ ಸಲ್ಲದು ಅಂತ–"

ಕೊನೆಯ ವಾಕ್ಯ ಪ್ರತಿಸಾರೆಯೂ ಅರ್ಧಕ್ಕೇ ನಿಂತುಹೋಗುತ್ತಿತ್ತು. ಈತ ಪೂರ್ತಿ ಆಡಿ ಮುಗಿಸಬಾರದೆ–ಎನಿಸುತ್ತಿತ್ತು ವಿಶ್ವನಾಥಯ್ಯನವರಿಗೆ.

ಅವರ ಪತ್ನಿಗೆ ಒಂದೇ ಸಮಾಧಾನ. ಚಂದ್ರಶೇಖರಯ್ಯ ಬಂದುದರಿಂದ ತಂದೆ–ಮಗನ ಕಹಿ ಮಾತುಗಳ ವಿನಿಮಯ ಅಷ್ಟಕ್ಕೇ ತಡೆಯಿತಲ್ಲ! ಯಾರಿಗೆ ಗೊತ್ತು? ಚಂದ್ರಶೇಖರಯ್ಯ ಬಂದುದರಿಂದ ಒಳಿತೇ ಆದರೂ ಆಗಬಹುದು! ಪ್ರಸಾದ ಮನಸ್ಸು ಬದಲಾಯಿಸಲೂ ಬಹುದು. ಇದೆಲ್ಲ ಹೆತ್ತವಳ ಯೋಚನೆ.

ಒಳಗೆ ಗಿರಿಜೆ ಅಣ್ಣನಿಗೆ ಹೇಳಿದಳು:

"ಇವರು ನನಗೆ ಮೇಷ್ಟ್ರಾಗಿದ್ರು, ಪ್ರಸಾದು. ನನ್ನ ಕ್ಲಾಸಿನಲ್ಲಿ ಲೀಲಾ ಅಂತ ಇರ್ಲಿಲ್ವೆ? ನಾವಿದ್ದ ಹಿಂದಿ ನಮನೆಗೆ ಒಮ್ಮೆ ಬಂದಿದ್ಲು. ಇವರು ಆಕೆಯ ತಂದೆ."

ಪ್ರಸಾದ ಪದಗಳನ್ನು ಬಿಗಿಗಿಗೊಳಿಸುತ್ತ ಅಂದ:

"ಅಣ್ಣಯ್ಯನ ಸ್ನೇಹಿತರೊ?"

ಗಿರಿಜೆ ಅರ್ಥಪೂರ್ಣವಾಗಿ ನಕ್ಕಳು.

"ಅಂಥದೇನಿಲ್ಲಪ್ಪ. ಒಂದೆರಡ್ಸಲ ಬಂದಿದ್ರು."

"ಯಾಕೆ?"

"ನೀನೊಮ್ಮೆ ಅವರ ಮನೆಗೆ ಹೋಗ್ಬೇಕಂತೆ."

"ಹೆಣ್ಣು ನೋಡೋದಕ್ಕೊ?"

"ಬುದ್ಧಿವಂತ! ತಿಳಕೊಂಡ್ಬಿಟ್ಟೆಯಲ್ಲ . . ."

ಪ್ರಸಾದ ನಿಟ್ಟುಸಿರುಬಿಟ್ಟ. ಬಟ್ಟೆ ಬದಲಿಸಿ, ಬೂಟುಗಳೊಳಕ್ಕೆ ಕಾಲು ಚೀಲ ಧರಿಸಿದ—ಪಾದಗಳನ್ನು ತುರುಕಿ, ಲೇಸ್‌ಕಟ್ಟಿ, ಸೂಟ್‌ಕೇಸಿನಿಂದ ಪಾಕೆಟನ್ನೆತ್ತಿಕೊಂಡ. ಹೊರಗೆ ಚಂದ್ರಶೇಖರಯ್ಯನವರ ಧ್ವನಿ ತನ್ನ ವಿಹಾರವನ್ನು ನಡೆಸಿಯೇ ಇತ್ತು.

"ನೀವು ಮಗನನ್ನು ಇಂಜಿನಿಯರಿಂಗ್ ಓದಿಸಿ ಒಳ್ಳೇ ಕೆಲಸ ಮಾಡಿದ್ರಿ, ವಿಶ್ವನಾಥಯ್ಯನವರೆ. ನನ್ನ ಮೂರನೆಯವನಿಗೆ ಸೀಟು ಸಿಗುತ್ತೇನೋಂತ ಈ ವರ್ಷ ನೋಡಿದೆ. ಸಿಗಲಿಲ್ಲ. ಯಾವುದಕ್ಕೂ ಅದೃಷ್ಟ ಬೇಕು. ಘಳಿಗೆ ಕೂಡಿಬರಬೇಕು."

ಮಾತಿನ ಪ್ರವಾಹದ ನಡುವೆ ಕಲ್ಲುಬಂಡೆಯಾಗಿ ಕುಳಿತಿದ್ದರು ವಿಶ್ವನಾಥಯ್ಯ.

ಬೂಟುಗಳ ಸಪ್ಪಳ ಕೇಳಿಸಿತು. ಪ್ರಸಾದ ಹೊರಗೆ ಬಂದ.

ಈತ ಹೊರಟೇಬಿಟ್ಟನಲ್ಲ-ಎಂದು ಚಂದ್ರಶೇಖರಯ್ಯ ವಿವಂಚನೆಗೆ ಗುರಿಯಾದರು. ಉಗುಳು ನುಂಗಿ ಹಲ್ಲುಗಳನ್ನೆಲ್ಲ ತೋರಿಸುತ್ತ ಅವರೆಂದರು:

"ನಮಸ್ಕಾರ ಪ್ರಸಾದು. ನನ್ನ ನೆನಪಿದೆಯೇನಪ್ಪ?"

"ನಮಸ್ಕಾರ ಸರ್," ಎಂದ ಪ್ರಸಾದ.

ತಂದೆಯತ್ತ ತಿರುಗಿ, "ರೈಲ್ವೆ ಸ್ಟೇಷನಿಗೆ ಹೋಗ್ಬರ್‍ತೀನಿ," ಎಂದು ನುಡಿದು, ಮೆಟ್ಟಿಲಿಳಿದುನಡೆದೇಬಿಟ್ಟ.

ಚಂದ್ರಶೇಖರಯ್ಯ ತಡವರಿಸುತ್ತ ಅಂದರು :

"ಇದೇನು ಈಗ ಸ್ಟೇಷನಿಗೆ?"

ವಿಶ್ವನಾಥಯ್ಯ ತುಟಿತೆರೆದು ಅಂದರು :

"ಟಿಕೆಟು ಕೊಳ್ಳೋದಕ್ಕೆ."

"ಟಿಕೆಟು? ಎಲ್ಲಿಗೆ?"

"ಜರ್ಮನಿಗೆ."

"ಜರ್ಮನಿಗೆ?"

"ಹ, ಜರ್ಮನಿಗೆ! ಪ್ರಸಾದ ಉಚ್ಚಶಿಕ್ಷಣಕ್ಕೆ ಹೋಗ್ತಾನೆ."

". . . ಹೌದೆ?—ಸರಿ . . . ಮದುವೆ ಮಾಡ್ಕೊಂಡೇನೇ . . ."

"ಚಂದ್ರಶೇಖರಯ್ಯ, ಆ ಮಾತು ಬಿಟ್ಬಿಡಿ. ಪ್ರಸಾದ ಈಗ ಮದುವೆ

ಯಾಗೋದಿಲ್ವಂತೆ. ನಿಮ್ಮ ಮಗಳಿಗೆ ನೀವು ವರ ಹುಡುಕ್ತಿದೀರಿ. ನನ್ನ ಮಗಳಿಗೆ ನಾನು ವರ ಹುಡುಕ್ತಿದೇನೆ, ಅಷ್ಟೆ . . . "

" ಛೆ ! ಅದು ಬೇರೆ ವಿಷಯ. ನೀವು ಯಾಕೋ ನಿರಾಶರಾಗಿದೀರಿ. . . . ನಾನು–ನಾನು ಪ್ರಸಾದನ ಕೂಡೆ ಮಾತಾಡ಼್್ಲೆ ?"

" ತಂದೆಯ ಮಾತು ಕೇಳದವನು ಇನ್ನೊಬ್ಬರ ಮಾತಿಗೆ ಕಿವಿ ಕೊಡ್ತಾನ ಚಂದ್ರಶೇಖರಯ್ಯ ? ಈ ವಿಷಯ ಸದ್ಯಕ್ಕೆ ಮರೆತ್ಬಿಡಿ."

" ನಾನು–ನಾನು ಪ್ರಸಾದನ ಜತೆ ಮಾತಾಡೋದು ಬೇಡ– ಅಂತೀರಾ ?"

" ನೀವು ದಯವಿಟ್ಟು ಮನೆಗೆ ಹೋಗಿ."

ವಿಶ್ವನಾಥಯ್ಯ ಎಷ್ಟೇ ಮೃದುವಾಗಿ ಆಡಲು ಯತ್ನಿಸಿದರೂ ಪದಗಳು ನಿಷ್ಠುರವಾಗಿದ್ದುವು.

ಚಂದ್ರಶೇಖರಯ್ಯ ನೀಳವಾಗಿ ಉಸಿರು ಬಿಟ್ಟರು. ಅವರ ಹೃದಯ ಅತ್ತಿತು.

## ೩

ರಾತ್ರಿಯ ಗಾಡಿಗೆ ಪ್ರಸಾದ ಹೊರಡುವನೆಂಬುದು ಖಚಿತವಾದಾಗ ವಿಶ್ವನಾಥಯ್ಯನವರ ಮಾನಸಿಕ ಯಾತನೆ ತೀವ್ರಗೊಂಡಿತು.

ಕೋಟು ಟೋಪಿಗಳನ್ನು ಧರಿಸಿ, ಚಪ್ಪಲಿ ಮೆಟ್ಟಿಕೊಂಡು, ರಸ್ತೆಗಿಳಿದು, ಗೊತ್ತು ಗುರಿ ಇಲ್ಲದೆ ಉದ್ದಕ್ಕೂ ಅವರು ಸಾಗಿದರು.

ಫುಟ್‌ಪಾತಿನ ಮೇಲೆ ನಡೆದಾಗ ಕೊರಕಲು ಕಲ್ಲುಗಳೊಳಗೆ ಪಾದ ಸಿಲುಕಿ ತಾವು ಬಿದ್ದು ಕಾಲು ಮುರಿದರೊ ? ರಸ್ತೆ ದಾಟುವಾಗ ಬಿ.ಟಿ.ಎಸ್. ಬಸ್ಸು ತಮ್ಮನ್ನು ಅಪ್ಪಳಿಸಿದರೊ ? ಅಥವಾ ನಡೆಯುತ್ತಲಿದ್ದಂತೆ ಕುಸಿದು ಬಿದ್ದು ತಮಗೆ ಹೃದಯಸ್ತಂಭನವಾದರೊ ?

ಹಾಗೆ ಆಗುವುದು ಒಂದು ರೀತಿಯಲ್ಲಿ ಒಳ್ಳೆಯದೇ ಅಲ್ಲವೇ ? ತಾವಿನ್ನು ಬದುಕಿ ಯಾವ ಸುಖ ಕಾಣಬೇಕು ? ತಾವು ಹಾಲೆರೆದು ಬೆಳೆಸಿದ ಒಬ್ಬನೇ ಮಗ ಹೆಡೆ ಎತ್ತಿದ ಅಂದ ಮೇಲೆ ?

ಗಿರಿಜೆಯ ಮದುವೆಯನ್ನಾದರೂ ಮಾಡಿಬಿಡೋಣ ಎಂದರೆ ಅಡಚಣೆಗಳು ಹತ್ತಾರು. ಪ್ರಸಾದನಿಗೆ ಸರಿಯಾದ ಕಡೆ ಹೆಣ್ಣು ಗೊತ್ತಾದರೆ ಬರುವ ಹಣದಿಂದ ಮಗಳ ಮದುವೆಯನ್ನು ಮಾಡಿ ಮುಗಿಸಬಹುದು. ಆದರೆ, ತನ್ನ ಹೊರತಾಗಿ ಇತರರ ಪರಿವೆಯೇ ಇಲ್ಲವಲ್ಲ ಪ್ರಸಾದನಿಗೆ!...

ನಾಲ್ಕು ರಸ್ತೆಗಳು ಕೂಡುವೆಡೆ ಒಂದು ವೃತ್ತ ರಚಿಸಿದ್ದರು. ಅದರೊಳಗೆ ಹೂವಿನ ಗಿಡಗಳು. ಮಧ್ಯದಲ್ಲೊಂದು ಕಾರಂಜಿ. ಸಿಮೆಂಟಿನ ಬೆಂಚುಗಳು ಕೆಲವು.

ಅವನ್ನು ಕಂಡಾಗ, ತಮ್ಮ ಕಾಲುಗಳು ಸೋತಿವೆ, ತುಸು ವಿಶ್ರಾಂತಿ ಬೇಕು–ಎನಿಸಿತು ವಿಶ್ವನಾಥಯ್ಯನವರಿಗೆ.

ಅವರು ಕಲ್ಲುಗೂಟಗಳ ನಡುವಣ ಸಂದಿಯಿಂದ ಸುಲಭವಾಗಿ ತಮ್ಮ ತೆಳು ಶರೀರವನ್ನು ಒಳಕ್ಕೆ ದಾಟಿಸಿ, ತೆರವಾಗಿದ್ದ ಬೆಂಚೊಂದನ್ನು ದಿಟ್ಟಿಸಿ ಅದರತ್ತ ನಡೆದರು.

ಆಟವಾಡುತ್ತಿದ್ದ ಹುಡುಗರು. ಹುಲ್ಲಿನ ಮೇಲೆ ಕುಳಿತಿದ್ದ ಒಂದು ಸಂಸಾರ. [" ನೀರಿನ ಹತ್ರಕ್ಕೆ ಹೋಗ್ಬೇಡ, ಮರಿ" " ಲೇ ಹೂ ಕೀಳ್ಬೇಡ್ವೇ. ಮಾಲಿ ಹಿಡಕೊಂಡು ಹೋಗ್ತಾನೆ."] ನಡೆಗೋಲುಗಳನ್ನು ಹಿಡಿದು ವಾಯುಸೇವನೆಗೆ ಹೊರಟ ವೃದ್ಧರು ಮೂವರು [' ನಿವೃತ್ತರಿರಬೇಕು '....]

ಸುತ್ತಲಿನ ವ್ಯಾಪಾರವನ್ನು ಜಡವಾದ ಕಣ್ಣುಗಳಿಂದ ದಿಟ್ಟಿಸುತ್ತ ವಿಶ್ವನಾಥಯ್ಯ ಕುಳಿತರು.

ರಾತ್ರಿಯ ರೈಲು ಹೊರಡುವುದು ಹತ್ತೂಕಾಲಿಗೆ. ಟ್ಯಾಕ್ಸಿ [ಇನ್ನೇನು ಜಟಕವೆ?] ಒಂಭತ್ತೂವರೆಗೆ ಮನೆಗೆ ಬರಬಹುದು . . .

ವಿಶ್ವನಾಥಯ್ಯ ಅಂದುಕೊಂಡರು :

ಮನೆಗೆ ತಾವು ಹೋಗದೇ ಇದ್ದರೇನಾದೀತು? ಇವತ್ತು ಈ ಬೆಂಚಿನ ಮೇಲೆಯೇ ಮಲಗಿಬಿಡಬೇಕು. ಮಗ ಸತ್ತ ಅಂತ ಸೂತಕ. ಬೆಳಗಾಗುವದರೊಳಗೆ ಚಳಿಯಿಂದ ಹೆಪ್ಪುಗಟ್ಟಿ ತಾವು ಕೊರಡಾದರೆ? ಅದೂ ಒಳ್ಳೆಯದೇ. ಯಾಕಾಗಬಾರದು? ಅನಾಥ ಶವವನ್ನು ಎಳೆದೊಯ್ಯಲು ಪುರಸಭೆ ಇಲ್ಲವೆ? ಅವರು ಸುಮ್ಮನಿದ್ದರೆ ಜನ ಬಿಡುತ್ತಾರೆಯೆ?.ಶವದಿಂದ ದುರ್ನಾತ ಹೊರಟಾಗ ಸಹಿಸುವುದುಂಟೆ ಸಾರ್ವಜನಿಕರು?

' ಉದ್ಯಾನದಲ್ಲಿ ಅನಾಥ ಶವ '

—ಪತ್ರಿಕೆಯಲ್ಲಿ ಒಂದು ಶಿರೋನಾಮೆ.

ಹಹ್ಹ!

ಕೊನೆಯಲ್ಲಿ ಹುಚ್ಚು ಹುಡುಗಿ ಗಿರಿಜೆ ಓಡಿ ಬಂದು ಗುರುತು ಹಿಡಿಯುತ್ತಾಳೆ ಎಂದಿಟ್ಟುಕೊಳ್ಳೋಣ. ಆಗ ವಿಶ್ವನಾಥಯ್ಯ ಯಾಕೆ ಸತ್ರು ಅಂತ ಊಹಾಪೋಹ ನಡೆದೀತು. ದೀರ್ಘಕಾಲದ ಹೊಟ್ಟೆ ನೋವಿನಿಂದ ಪಾರಾಗುವುದಕ್ಕೋಸ್ಕರ ವಿಷಪ್ರಾಶನ? ವಿಷ ಕುಡಿದುದಕ್ಕೆ ಪುರಾವೆ ಇಲ್ಲವಲ್ಲ? [' ಹೊಟ್ಟೆ ನೋವಲ್ಲ–ಇದು ಹೃದಯದ ನೋವು, ಹೃದಯದ ನೋವು!] ಆತ್ಮಹತ್ಯೆ? ಉರುಲು ಹಾಕಿಕೊಂಡುದಕ್ಕೆ ಗುರುತೇ ಇಲ್ಲವಲ್ಲ . . . ವೃದ್ಧಾಪ್ಯದ ನಿಶ್ಶಕ್ತಿಯಿಂದ ಏಳಲಾಗದೆ ಉದ್ಯಾನದ ಕಲ್ಲುಬೆಂಚಿನ ಮೇಲೆ ರಾತ್ರಿಯನ್ನು ಕಳೆದುದರಿಂದ, ಹಿಮಪೀಡಿತರಾಗಿ ಹೆಪ್ಪುಗಟ್ಟಿ ಕಾಲವಾದರು! ಭೇಷ್!

ಆಡುತ್ತಿದ್ದ ಎಳೆಯ ಹುಡುಗನೊಬ್ಬ ಕಾರಂಜಿಯ ಬಳಿ ಹೋಗಿ ಅಂಗೈಯಿಂದ ನೀರನ್ನು ಬಡೆದ. ಕೊಳಕು ನೀರು ಉಡುಪಿನ ಮೇಲೆ ಬಿದ್ದು, ಬಟ್ಟೆ ಹಾಳಾಯಿತು. ಗಂಡನೊಡನೆ ಮಾತನಾಡುತ್ತ ಕುಳಿತಿದ್ದ ತಾಯಿ ಬಂದು, ಆ ಹುಡುಗನ ಕಿವಿ ಹಿಂಡಿದಳು. ಹುಡುಗ ' ಅಯ್ಯೋ!' ಎಂದು ಚೀರಿದ.

ಆ ದೃಶ್ಯವನ್ನು ಕಂಡ ವಿಶ್ವನಾಥಯ್ಯನಿಗೆನ್ನಿಸಿತು :

' ಪ್ರಸಾದ ಚಿಕ್ಕವನಾಗಿದ್ದರೆ ಕಿವಿ ಹಿಂಡಿ ಬುದ್ಧಿ ಕಲಿಸುತ್ತಿದ್ದೆ.'

. . . ಕತ್ತಲಾಯಿತು. ರಸ್ತೆಯಂಚಿನ ನಿಯೊನ್ ಲೈಟುಗಳ ಮಂದ ಬೆಳಕು ಉದ್ಯಾನವೃತ್ತದ ಮೇಲೆ ಬಿದ್ದಿತು.

ಮೆಲ್ಲಮೆಲ್ಲನೆ ಜನ ಕರಗಿದರು.

ವಿಶ್ವನಾಥಯ್ಯ ಕುಳಿತಲ್ಲಿಂದ ಕದಲದೆ ಹೊತ್ತು ಕಳೆದರು. ಮೆದುಳು ಯೋಚನೆಯ ತಂತಿಗಳ ಮೇಲೆ ಕಸರತ್ತು ನಡೆಸಿತ್ತು. ಆಯಾಸವಾದಾಗ ಒರಗುಬೆಂಚೇ ತಲೆಗೆ ದಿಂಬು. ಅದಕ್ಕೆ ಆತು ಮೆದುಳಿಗೆ ವಿಶ್ರಾಂತಿ . . .

. . . ಮನೆಯಲ್ಲಿ ಪ್ರಸಾದನ ತಾಯಿ, ' ಕತ್ತಲಾಯಿತು. ಇವರ ಸುಳಿವಿಲ್ಲವಲ್ಲ ' ಎಂದು ಚಡಪಡಿಸಿದರು. ಬಂದುದನ್ನು ಅನುಭವಿಸಬೇಕು; ಸುಮ್ಮನೆ ರೋದಿಸಿ ಏನು ಫಲ?–ಎನ್ನುವುದು ಅವರ ವಿಚಾರ ಸರಣಿ.

ದೂರ ದೇಶಕ್ಕೆ ಹೋಗುತ್ತೇನೆ-ಎನ್ನುತ್ತಿದ್ದಾನೆ ಮಗ. ಹೊರಡುವುದಕ್ಕೆ ಮುನ್ನ ತಂದೆ-ಮಕ್ಕಳ ನಡುವೆ ವಿರಸ ಬೇಡ, ಎಂಬುದು ಆಕೆಯ ಆಸೆ. ಅವರು ಬಂದರೆ, ಮಕ್ಕಳಿಗೂ ಅವರಿಗೂ ಜತೆಯಾಗಿ ಬಡಿಸಬಹುದು.

ಆ ಸೌಹಾರ್ದ ಭೋಜನ ಸಾಧ್ಯವಾಗದು-ಎಂಬ ಶಂಕೆ ಪ್ರಸಾದನಿಗೆ. ವಿವೇಕವಿದ್ದವರಿಗೆ ತಿಳಿಯಹೇಳಬಹುದು. ಹಟಮಾರಿಗಳನ್ನು ಹಾದಿಗೆ ತರುವುದಕ್ಕಾದೀತೆ? ವಯಸ್ಸಾದಂತೆ ಬುದ್ಧಿ ಕಡಮೆಯಾಗುತ್ತ ಹೋಗುತ್ತದಲ್ಲ! ಇದು ಭಾರತೀಯ ಗುಣವಿಶೇಷವಿರಬೇಕು.

ಗಿರಿಜೆಗೂ ಒಂದು ಬಗೆಯ ಆತಂಕ. ಎರಡು ಮೂರು ಮಾತುಕತೆಗಳು ಮುರಿದ ಮೇಲೆ ಮದುವೆಯ ಯೋಚನೆಯನ್ನು ಅವಳು ಬಿಟ್ಟುಕೊಟ್ಟಿದ್ದಳು. ಆದರೆ, ತಂದೆ ಅಣ್ಣನಿಗೆ ಕಳುಹಿಸಿದ ತಂತಿ, ಪ್ರಸಾದನ ಆಗಮನ, ಪೆಟ್ಟಿಗೆಯಲ್ಲಿರಿಸಿದ್ದ ಪುಸ್ತಕ ಮತ್ತೆ ಹೊರಗೆ ಬರಲು ಕಾರಣವಾಗಿದ್ದುವು. ಅದನ್ನು ತೆರೆದು ಓದು ಮುಂದುವರಿಸಲು ಮಾತ್ರ ಅವಕಾಶವಾಗಿರಲಿಲ್ಲ, ಕ್ಷಿಪ್ರಗತಿಯಿಂದ ನಡೆದ ಘಟನೆಗಳಿಂದ. ಈಗ ತನ್ನ ಬಳಿಯಲ್ಲಿದ್ದ ಸೋದರ ಇನ್ನು ಕೆಲವೇ ದಿನಗಳ ಬಳಿಕ ಜರ್ಮನಿಯಲ್ಲಿ! ಆ ಯೋಚನೆ ಸುಂದರವಾಗಿತ್ತು. ಗೆಳತಿಯರೆದುರು ಹೇಳಿಕೊಳ್ಳಬಹುದು. ಮಾತುಕತೆಗೆ ಅದಕ್ಕಿಂತ ಹೆಚ್ಚು ಅಭಿಮಾನದ ವಸ್ತುವುಂಟೆ? ಆದರೆ, ಹೆಂಗಸರ ನಾಲಗೆಗಳ ಚಲನ ಕೌಶಲ ತನಗೆ ತಿಳಿಯದೆ? ತನ್ನ ಬೆನ್ನ ಹಿಂದೆ ಕೆಲವೊಮ್ಮೆ ತನಗೆ ಕೇಳಿಸುವಂತೆಯೂ ಕೂಡಾ, ಮಾತು ಬಂದೇ ಬರುತ್ತದೆ: 'ಇನ್ನೂ ಮದುವೆಯಿಲ್ಲ. . .'

. . . ಪ್ರಸಾದ ಸೂಟ್‌ಕೇಸನ್ನು ಮತ್ತೊಮ್ಮೆ ಅಣಿಗೊಳಿಸಿದ. ಗಾಡಿಯಲ್ಲಿ ಉಪಯೋಗಕ್ಕೆ ಬೇಕಾದ ಬಟ್ಟೆಗಳನ್ನೂ ಮುಖಮಾರ್ಜನದ ಸಾಧನಗಳನ್ನೂ ತೆಗೆದಿರಿಸಿದ, ಕಿಟ್‌ನಲ್ಲಿ.

ಜಗಲಿಯಲ್ಲಿ ತಂದೆ ಕುಳಿತುಕೊಳ್ಳುವ ಆರಾಮ ಕುರ್ಚಿಯ ಮೇಲೆ ವೈಚೆಲ್ಲಿ ತಂಗಿಯತ್ತ ನೋಡಿ ಅವನೆಂದ:

"ಅಣ್ಣಯ್ಯನ ಸಿಟ್ಟು ಇಳಿದ ಹಾಗಿಲ್ಲ, ಅಲ್ವೇನೆ ಗಿರಿಜಾ?"

ಪ್ರಸಾದ ನಿಂತಿರುತ್ತಿದ್ದ ಬಾಗಿಲ ಚೌಕಟ್ಟಿನಲ್ಲಿ ಗಿರಿಜಾ ಈಗ ಪ್ರತಿಮೆಯಾಗಿದ್ದಳು. ಸೋದರನ ಮಾತು ಕೇಳಿ ಅವಳು ಸಣ್ಣನೆ ನಕ್ಕಳು. ಮೆಲ್ಲನೆ ಚಲಿಸಿ ಮುಂದುವರಿದು, ಬರಿದಾಗಿದ್ದ ಸ್ಟೂಲಿನ ಮೇಲೆ ಕುಳಿತಳು.

ತಂಗಿಯನ್ನು ದಿಟ್ಟಿಸಿ ನೋಡಿ ಪ್ರಸಾದನೆಂದ:

" ಅಣ್ಣಯ್ಯನ ಮದುವೆ ಏರ್ಪಾಟಿಗೆ ನಾನು ಒಪ್ಪಲಿಲ್ಲ ಅಂತ ನಿನಗೆ ಬೇಸರವಿಲ್ಲ ತಾನೆ ?"

ತಡಮಾಡದೆ ಗಿರಿಜಾ ಅಂದಳು :

" ಖಂಡಿತ ಇಲ್ಲ, ಪ್ರಸಾದು."

ಹಾಗೆ ಅಂದಳಾದರೂ ಅವಳ ಒಳದನಿ ಕುಟುಕಿತು :

' ಇವನ ಬದುಕಿನ ತಿರುಗಣಿಗೆ ನಿನ್ನ ಬದುಕಿನ ತಿರುಗಣಿ ಆತು ಕೊಂಡಿದೆ. ಅದು ಚಲಿಸಿದಾಗ ನಿನ್ನದರ ಚಲನೆ.'

ಒಳಗಿನ ಕಡಿತದಿಂದ ನೋವಾಗಿ, ಮುಖಬಾಡಿಸಿ, ಗಿರಿಜಾ ನೆಲ ನೋಡಿದಳು.

" ಹುಡುಗ ನಿನಗೆ ಇಷ್ಟವಾಗದೇ ಇದ್ದರೆ ನೀನು ಒಪ್ಕೊಬೇಡ, ಗಿರಿಜಾ."

ವಸ್ತುಸ್ಥಿತಿಯನ್ನು ಮರೆತು ಉತ್ತರ ನೀಡುವುದು ಎಷ್ಟು ಸುಲಭ!

" ಇಲ್ಲ, ಪ್ರಸಾದು."

" ಅಣ್ಣಯ್ಯನಿಗಾಗಲೀ ಅಮ್ಮನಿಗಾಗಲೀ ಗೊತ್ತಾಗೋದಿಲ್ಲ. ಅವರದು ಹಳೇ ಕಾಲದ ಯೋಚನೆ. ಒಂದು ಗಂಡನ್ನೂ ಒಂದು ಹೆಣ್ಣನ್ನೂ ಅಂತೂ ಇಂತೂ ಗಂಟುಹಾಕೋದು. ಇವರು ಸಂಸಾರ ಹೂಡಿ ಮಕ್ಕಳನ್ನ ಪಡೆಯೋದು. ಆ ಮೊಮ್ಮಕ್ಕಳನ್ನ ಎತ್ತಿ ಆಡಿಸಿ ವೃದ್ಧ ತಾಯಿತಂದೆ ಕಣ್ಣುಮುಚ್ಕೋದು. ಅವರ ದೃಷ್ಟೀಲಿ ಅದು ಸಾರ್ಥಕ ಜೀವನ."

" ಇದೆಲ್ಲಾ ನನ್ನ ತಿಳಿವಳಿಕೆಗೆ ಮೀರಿದ್ದು."

" ಮೀರಿದ್ದಲ್ಲವೇ ಅಲ್ಲ. ನೀನು ವಿದ್ಯಾವಂತೆ. ನನ್ನ ಅಭಿಪ್ರಾಯ ಏನು ಗೊತ್ತೆ? ಮನೇಲಿ ಕೂತು ವ್ಯರ್ಥವಾಗಿ ಕಾಲ ಕಳೆಯೋ ಬದಲು ನೀನು ಕೆಲಸಕ್ಕೆ ಸೇರಿಕೋಬೇಕು. ನಿನಗೆ ಇಷ್ಟವಾಗೋ ವರ ದೊರೆತಾಗ ಮದುವೆಯಾಗ್ಬೇಕು. ಏನಂತೀಯಾ?"

" ಅಣ್ಣಯ್ಯ ಒಪ್ತಾರಾ, ಪ್ರಸಾದು ?"

" ಒಪ್ಪಿಸ್ಬೇಕು. ಯಾವುದು ಸರೀಂತ ನಮಗೆ ತೋರುತ್ತೋ ಅದನ್ನು ನಾವು ಮಾಡಿಯೇ ತೀರ್ಬೇಕು. ನಾಲ್ಕು ದಿವಸ ಬಡಕೋತಾರೆ. ಆಮೇಲೆ ಸುಮ್ಮನಾಗ್ತಾರೆ."

"ನಿಜ ಅನ್ನು. ಆದರೂ, ಅವರ ಮನಸ್ಸು ನೋಯಿಸೋದು ಅಂದರೆ ಯಾಕೋ ಸಂಕಟವಾಗುತ್ತಪ್ಪ."

"ಅದಕ್ಕೇ ಅನ್ನೋದು ಹೆಂಗರುಳು ಅಂತ."

ಮಕ್ಕಳಿಬ್ಬರೇ ಮಾತನಾಡಿಕೊಳ್ಳುತ್ತಿದ್ದುದು ಕಿವಿಗೆ ಬಿದ್ದ ಅವರ ತಾಯಿ ಹೊರಗೆ ಬಂದರು. ಕೆಂಪಡರಿ ಊದಿಕೊಂಡಿದ್ದ ಕಣ್ಣುಗಳು ಆಕೆ ಒಳಗೆ ಅಳುತ್ತಿದ್ದರೆಂದು ಸಾಕ್ಷ್ಯ ನುಡಿದುವು.

ಪ್ರಸಾದ ಕೇಳಿದ:

"ಅಳ್ತಿದ್ದೆಯೇನಮ್ಮ?"

ಅವರು ಸೆರಗಿನ ಅಂಚಿನಿಂದ ಮತ್ತೊಮ್ಮೆ ಕಣ್ಣುಗಳನ್ನು ಒತ್ತಿ ಕೊಂಡರು.

"ಇಲ್ವಲ್ಲ . . . ಕೆಟ್ಟ ಹೊಗೆ."

ಪ್ರಸಾದ ನಕ್ಕ.

"ನಿಜ, ಅಮ್ಮ. ಇದು ಹೊಗೆ ತುಂಬಿದ ಮನೆ. ಕಿಟಕಿಗಳು ಮುಚ್ಚೇ ಇರುತ್ವೆ. ಕಿಟಕಿಗಳ್ನ ಸ್ವಲ್ಪ ತೆರೀಬೇಕು. ಅಲ್ವಾ ಅಮ್ಮ?"

"ಚಳಿಗಾಲ ಅಲ್ವೇನೋ?"

ಗಿರಿಜೆಯ ಕಡೆ ನೋಡಿ, ಇಂಥವರಿಗೆ ಏನಾದರೂ ಮನವರಿಕೆ ಯಾಗೋದು ಸಾಧ್ಯವೆ? ಎಂಬರ್ಥದಲ್ಲಿ ಪ್ರಸಾದ ತಲೆಯಾಡಿಸಿದ.

ಆತನ ತಾಯಿ ಅಂದರು:

"ಇವರು ಬಂದಿಲ್ವಲ್ಲಾ ಇನ್ನೂ."

ಪ್ರಸಾದ ಕೈಗಡಿಯಾರದತ್ತ ದೃಷ್ಟಿಹರಿಸಿದ.

"ಇನ್ನು ಹತ್ತು ನಿಮಿಷ ನೋಡಿ, ಆಮೇಲೆ ಊಟಕ್ಕೇಳ್ತೀನಿ."

"ಹಾಗೇ ಮಾಡಪ್ಪ. ನೀನು ಇವತ್ತೇ ಹೋಗ್ಬೇಕು, ಅಲ್ವೆ?"

"ಹೂನಮ್ಮ. ಇನ್ನು ಹದಿನೈದು ನಿಮಿಷಗಳಲ್ಲಿ ಟ್ಯಾಕ್ಸಿ ಬರುತ್ತೆ."

"ಸ್ಟೇಷನಿಗೆ ಇವರೂ ಬರ್ತಾರೋ ಏನೋ!"

ಗಿರಿಜಾ ಅಂದಳು:

"ಅಣ್ಣಯ್ಯನ ಜತೆ ನಾನೂ ಹೋಗಿಬರಬೌದು."

ಪ್ರಸಾದನೆಂದ:

"ಸುಮ್ಮನೆ ಯಾಕೆ ಶ್ರಮ?"

ತಾಯಿ ಅಂದರು :

" ಕಾಗದ ಬರೀತಿರು, ಪ್ರಸಾದು. ಅಲ್ಲಿ ನಿನಗೆ ಊಟ ಉಪಚಾರ ಸರಿಹೋಗುತ್ತೋ ಇಲ್ವೊ ! "

" ಅದರದೇನೂ ಯೋಚ್ನೆ ಇಲ್ಲಮ್ಮ. ನಮ್ಮೂರಿನವರು ಅಲ್ಲಿ ಬಹಳ ಜನ ಇದಾರೆ."

ತಾಯಿಯ ಸೆರಗಿನ ಅಂಚು ಮತ್ತೆ ಕಣ್ಣುಗಳನ್ನು ಸಮಿಾಪಿಸಿತು.

ಗಿರಿಜಾ ಅಂಗಳಕ್ಕಿಳಿದಳು. ರಸ್ತೆಯುದ್ದಕ್ಕೂ ಆ ಕಡೆಗೊಮ್ಮೆ ಈ ಕಡೆಗೊಮ್ಮೆ ನೋಡಿದಳು. ಎಷ್ಟೋ ಜನ ಬರುತ್ತಿದ್ದರು, ಹೋಗುತ್ತಿದ್ದರು. ವಿಶ್ವನಾಥಯ್ಯನವರು ಮಾತ್ರ ಕಾಣಿಸಲಿಲ್ಲ.

. . . ಮತ್ತೊಮ್ಮೆ ಕೈಗಡಿಯಾರ ನೋಡಿ, ಪ್ರಸಾದ ಊಟಕ್ಕೆದ್ದ.

" ಮಗೂ ಒಬ್ನೇ ಉಣ್ಣೋದೇ ? ನೀನೂ ಕೂತ್ಕೋ ಗಿರಿಜಾ," ಎಂದರು ತಾಯಿ.

ಉಣ್ಣುತ್ತಲಿದ್ದಾಗ ತಾಯಿಯ ಮುಖವನ್ನು ದಿಟ್ಟಿಸಿ, ಬಂದೀಖಾನೆ ಯಂತಿದ್ದ ಆ ಕೊಠಡಿಯನ್ನು ನೋಡಿ, ಪ್ರಸಾದನ ಗಂಟಲು ಒತ್ತರಿಸಿತು. ಮನಸ್ಸಿಲ್ಲದ ಮನಸ್ಸಿನಿಂದ ಆತ ನಾಲ್ಕು ತುತ್ತು ಉಂಡ. ಉಂಡುದರ ಎರಡು ಪಾಲು ನೀರು ಕುಡಿದ.

ಪ್ರಸಾದ ಎದ್ದು ಕೈ ಬಾಯಿ ತೊಳೆದುಕೊಳ್ಳುತ್ತಿದ್ದಾಗ ಗಿರಿಜಾ ಕೂಗಿ ನುಡಿದಳು :

" ಅಣ್ಣಯ್ಯ ಬಂದ್ರು ! "

[ ಬಹಳ ಹೊತ್ತು ಒರಗುಬೆಂಚಿನಮೇಲೆ ಕುಳಿತ ಬಳಿಕ, ಇದ್ದಕ್ಕಿದ್ದಂತೆ ವಿಶ್ವನಾಥಯ್ಯ ಎದ್ದು ನಿಂತಿದ್ದರು. ಮನೆಗೆ ಹೋಗಬೇಕು-ಎಂದು ತೋರಿತ್ತು. ನಿಧಾನವಾಗಿ ನಡೆದರಾಯ್ತು, ಮನೆ ತಲಪುವ ವೇಳೆಗೆ ಪ್ರಸಾದ ಹೊರಟು ಹೋಗಿದ್ದರೆ ತೊಂದರೆಯೇ ಇರುವುದಿಲ್ಲ-ಎಂದು ಕೊಂಡರು. ಆದರೆ ನಡೆಯ ತೊಡಗಿದಮೇಲೆ ಪಾದಗಳು ಬೇಗಬೇಗನೆ ಮುಂದುವರಿದಿದ್ದುವು. ]

ತಂದೆ ಬಂದರೆಂದು ಸಾರಿ ಹೇಳಿದ ಗಿರಿಜಾ, " ಟ್ಯಾಕ್ಸಿ ಬಂತು, " ಎಂದು ನುಡಿದಳು.

ಮನೆ ಹುಡುಕುತ್ತ ಆ ದಾರಿಯಲ್ಲಿ ಮೆಲ್ಲಗೆ ಬಂದಿದ್ದ ಟ್ಯಾಕ್ಸಿಯ ಚಾಲಕ ನಂಬರನ್ನು ಗುರುತಿಸಿ ಬ್ರೇಕು ಹಾಕಿದ್ದ. ಬಸವಳಿದಿದ್ದ ಟ್ಯಾಕ್ಸಿ ಹುಶ್ಶೆಂದಿತು.

ನಡೆದು ದಣಿದು ಮೃದುವಾಗತೊಡಗಿದ್ದ ಮೆದುಳಿಗೆ ವಿಶ್ವನಾಥಯ್ಯ ನವರೂ ಬ್ರೇಕುಹಾಕಿ, ಉಸ್ಸೆಂದು ಆರಾಮುಕುರ್ಚಿಯ ಮೇಲೆ ಕುಳಿತರು.

ಒಳಗೆ ಪ್ರಸಾದ ತಾಯಿಯ ಪಾದಗಳಿಗೆ ನಮಿಸಿದ.

ಬಿಕ್ಕುತ್ತ ಆಕೆ, "ನಿಮ್ತಂದೆಯ ಆಶೀರ್ವಾದ ಕೇಳ್ಕೊ," ಎಂದರು.

ಪ್ರಸಾದ ಹೊರಕ್ಕೆ ಬಂದು ಯಾಂತ್ರಿಕವಾಗಿ ತಂದೆಯ ಅಡಿಗಳಿಗೆ ನಮಿಸಿದ.

ಯಾವ ಭಾವವನ್ನೂ ವ್ಯಕ್ತಪಡಿಸದೆ ಗೊಗ್ಗರ ಗಂಟಲಲ್ಲಿ ಅವರೆಂದರು :

"ಏಳು."

ಅವರಾಕೆ ನುಡಿದರು :

"ಟೈಮಾಯ್ತಂತೆ, ಊಟಕ್ಕೆದ್ಬಿಡಿ. ಸ್ಟೇಷನಿಗೆ ಹೋಗೋದಿಲ್ವೆ?"

ಗೋಡೆಯತ್ತ, ಕಿತ್ತುಬಂದಿದ್ದ ಜಾಗವನ್ನು ದಿಟ್ಟಿಸಿ, ವಿಶ್ವನಾಥಯ್ಯ ಅಂದರು :

"ಅವನೇನು ಚಿಕ್ಕ ಮಗುವೆ? ದಾರಿ ತಿಳೀದೆ ಅವನಿಗೆ?"

ಮುಖ ಗಂಟಿಕ್ಕಿ ಪ್ರಸಾದನೆಂದ :

"ಬೇಡಿ. ಯಾರೂ ಬರಬೇಕಾದ್ದಿಲ್ಲ."

ಟ್ಯಾಕ್ಸಿಯವನು ಸೂಟ್‌ಕೇಸನ್ನೊಯ್ದ.

ಪ್ರಸಾದ ಕಿಟ್ಬನ್ನೆತ್ತಿಕೊಂಡು ಹೊಸ್ತಿಲ ಮೇಲೆ ನಿಂತು, "ಬರ್‍ತೀನಿ ಅಮ್ಮ. ಬರ್‍ತೀನಿ ಅಣ್ಣಯ್ಯ. ಗಿರಿಜಾ, ಬರ್‍ತೀನಿ," ಎಂದ. "ಹೋಗ್ಬರ್‍ತೀನಿ ಅನ್ನೋ," ಎಂದು ತಾಯಿ ಗೋಗರೆದರು.

"ಹ್ಞೂ. ಹೋಗ್ಬರ್‍ತೀನಿ."

"ಹುಷಾರಿ, ಪ್ರಸಾದು."

"ಹೂನಮ್ಮಾ."

ಟ್ಯಾಕ್ಸಿಯೊಳಕ್ಕೆ ಪ್ರಸಾದ ಕುಳಿತ. ಗೇಟಿನ ಬಳಿ ಗಿರಿಜೆ ನಿಂತಳು. ಆಕೆಯ ಹಿಂದೆ ತಾಯಿ.

ಪ್ರಸಾದನೆಂದ :

" ಗಿರಿಜಾ ಬೈ ಬೈ. "

ನಾಲಗೆಯ ತುದಿಗೆ ಬಂದರೂ ಪದಗಳನ್ನು ಉಚ್ಚರಿಸಲಾಗದೆ ಗಿರಿಜಾ ಅಂಗೈಯನ್ನು ಆಡಿಸಿದಳು.

ಟ್ಯಾಕ್ಸಿ ಹೊರಟಿತು.

೪

ರೂರ್‌ಕೆಲಾ ತಲಪಿ ಕೆಲ ದಿನಗಳಾದ ಬಳಿಕ ಪ್ರಸಾದನಿಂದ ಒಂದು ಕಾಗದ ಬಂತು. ಇನ್ನೊಂದು, ಜರ್ಮನಿಯನ್ನು ಆತ ಮುಟ್ಟಿದಮೇಲೆ.

ಎರಡೂ ಗಿರಿಜೆಗೆ.

ವಿಶ್ವನಾಥಯ್ಯ ನಂಬಲಾರರು, ನಂಬದೆ ಇರಲಾರರು.

ಸುಳ್ಳಲ್ಲ, ನಿಜ. ಪ್ರಸಾದ ಜರ್ಮನಿಗೆ ಹೋದುದು ನಿಜವೇ.

ದಾರಿಯಲ್ಲೊಂದು ಸಂಜೆ ನರಸಿಂಗರಾಯರು ಅವರನ್ನು ತಡೆದು ನಿಲ್ಲಿಸಿ ಕೇಳಿದರು :

" ವಿಶ್ವನಾಥಯ್ಯ, . ನಿಮ್ಮನ್ನ ಒಂದು ವಿಷಯ ಕೇಳ್ಬೇಕೂಂತ ಅವತ್ನಿಂದ ಅಂದ್ಕೊಂಡಿದೀನಿ. ನೀವು ಕೈಗೇ ಸಿಗ್ತಾ ಇಲ್ಲ. "

ನಗಲು ಪ್ರಯತ್ನಿಸಿ ವಿಶ್ವನಾಥಯ್ಯ ಕೇಳಿದರು :

" ಹೆಹ್ಹೆ. ಏನು ವಿಷಯ ? "

" ನಿಮ್ಮ ಮಗ ಜರ್ಮನಿಗೆ ಹೋದ್ನಂತೆ, ಹೌದೆ ? "

" ಹ್ಞ. "

" ಚಂದ್ರಶೇಖರಯ್ಯ ಇಲ್ವೆ ?–ಮೇಷ್ಟ್ರು. ಆತನಿಂದ ತಿಳೀತು. "

" . . . . "

ಮಾತಿಗೆ ಬರಗಾಲವೆ ? ವಿಶ್ವನಾಥಯ್ಯ ಮೌನ ತಳೆದರೆಂದು ಬಿಡುವವರೆ ನರಸಿಂಗರಾಯರು ?

" ಒಳ್ಳೇದೇ ಆಯ್ತು, ಅನ್ನಿ. ಆದರೂ, ಮದುವೆ ಮುಗಿಸ್ಕೊಂಡು ಹೋಗಿದ್ದರೆ ಚೆನ್ನಾಗಿತ್ತು. ಅಲ್ದೆ ನಿಮ್ಮ ಮಗಳದೂನೂ . . . "

ನಿನಗೆ ಯಾತಕ್ಕೆ ಇದರ ಉಸಾಬರಿ? – ಮುಚ್ಕೊಂಡು ಹೋಗಯ್ಯ ತೆಪ್ಪಗೆ! ಎಂದು ಆಕ್ರೋಶದ ನುಡಿ ಒಳಗೆ ರೂಪುಗೊಂಡರೂ, ಅದನ್ನು ಹೊರಗೆಡವದೆ ವಿಶ್ವನಾಥಯ್ಯ ನಿಟ್ಟುಸಿರು ಬಿಟ್ಟು, ನರಸಿಂಗರಾಯರ ಮಗ್ಗುಲಲ್ಲಿ ನಡೆದರು.

ಹೃದಯ ತೋಡಿಕೊಳ್ಳಲು ಯಾರಾದರೇನು? ಎಂಬ ತೀರ್ಮಾನಕ್ಕೆ ಬಂದು, ಉಸಿರು ಕಟ್ಟಿದೆಯಲ್ಲಾ ಎಂದು, ಕೋಟಿನ ಗುಂಡಿಯನ್ನು ಬಿಚ್ಚಿದರು. ದಣಿದು ಒಳಗೆ ಕುಳಿತಿದ್ದ ಪದಗಳು ಕುಂಟುತ್ತ ಒಂದರ ಹಿಂದೆ ಒಂದಾಗಿ ಹೊರಬಂದುವು:

" ಏನು ಹೇಳ್ಲಿ ಸಾರ್? ಪ್ರಾರಬ್ಧ . . . "

೫

ರೇಗುತ್ತ ಆ ಮಾತು ಈ ಮಾತು ಆಡುತ್ತ ಇದ್ದರೆ ಚೆನ್ನು. ಮನೆಗೆ ಶೋಭೆ. ಬದಲು, ಅಂತರ್ಮುಖಿಯಾಗಿ ಮೌನ ತಳೆದರೆ?

—ಗಂಡನ ಹೊಸ ನಡತೆಯಿಂದ ಹೆಂಡತಿಗೆ ದಿಗಿಲು.

ಸಮಯ ನೋಡಿ ವಿಶ್ವನಾಥಯ್ಯನನ್ನು ಅವರಾಕೆ ಮಾತನಾಡಿಸಿದರು:

" ಕೇಳಿಸ್ತೆ?"

ಹೇಳುವುದಕ್ಕೆ ಮುನ್ನವೇ ಆ ಪ್ರಶ್ನೆಯ ಪೀಠಿಕೆ.

ವಿಶ್ವನಾಥಯ್ಯ ತಲೆ ಎತ್ತಿ ಪತ್ನಿಯನ್ನು ನೋಡಿದರು.

"ಮಗೂ ಮದುವೆಯ ವಿಷಯ ಏನು ತೀರ್ಮಾನ ಮಾಡಿದಿರೀಂದ್ರೆ..."

" ಯಾವ ಮಗು?"

" ಗಿರಿಜಾದು."

ಕಡತದ ಮೇಲೆ ಷರಾ ಬರೆದುದನ್ನು ನಿರ್ವಿಕಾರವಾಗಿ ಓದುವವರಂತೆ ವಿಶ್ವನಾಥಯ್ಯ ಅಂದರು:

" ಮೂರು ತಿಂಗಳ ಕೆಳಗೆ ಸಕಲೇಶಪುರದವರು ಒಬ್ಬರು ಬಂದಿದ್ದರಲ್ಲ ಪತ್ನೀಪುತ್ರ ಸಮೇತರಾಗಿ? ಅವರ ಮಗನಿಗೆ– ಡಾಕ್ಟ್ರು ಜ್ಞಾಪಕ ಇದೇ ತಾನೆ? – ಗಿರಿಜಾ ಒಪ್ಪಿಗೆಯಂತೆ. ಒಂದು ಫಿಯೆಟ್ ಕಾರು, ಒಂದು ಸೇರು ಬಂಗಾರ, ಮೇಲೆ ಆರು ಸಾವಿರ ರೂಪಾಯಿ ಕೊಟ್ಟರೆ ಮಾಡ್ಕೋತಾನಂತೆ."

" ಕಾರಿಗೆ ಎಷ್ಟಾಗುತ್ತೆ ? "

" ಹಳೇದಲ್ಲ, ಹೊಸದು. ಹದಿಮೂರು ಸಾವಿರ ರೂಪಾಯಿ ಚಿಲ್ಲರೆ..."

" ಅಯ್ಯೋ ದೇವರೇ ! "

" ಈ ಅರಮನೆ ಮಾರಿದರೆ ಹದಿನೈದು ಸಾವಿರ ರೂಪಾಯಿ ಬರ ಬಹುದು. ಉಳಿದದ್ದಕ್ಕೆ ಏನು ಮಾಡೋಣ ? "

ಕಾಸಿಗೆ ಕಾಸು ಕೂಡಿಟ್ಟು ಕಟ್ಟಿಸಿದ ಮನೆಯನ್ನು, ಅದು ತಮಗೆ ಸೇರಿದ್ದಲ್ಲ ಎನ್ನುವಂತೆ, ಮಾರುವ ಮಾತನ್ನು ವಿಶ್ವನಾಥಯ್ಯ ಆಡಿದ್ದರು.

ಆದರೆ, ಅದನ್ನು ಆಲಿಸಿದ ಮನೆಯೊಡತಿಯು ಗಂಟಲೊಣಗಿತು.

" ಮನೆ ಮಾರಿ ನಾವೇನು ಮಾಡೋಣ ಅಂದ್ರೆ ? "

" ಕೈಲಿ ಕಪ್ಪರ ಹಿಡಿದು ಹೊರಡೋದು . . . ಕಾಶಿಗೆ ಯಾಕೆ ಹೋಗಬಾರದೂಂತೀನಿ . . . "

" ಅಣ್ಣಯ್ಯ ! "

ಕಾತರದ ಧ್ವನಿ. ಗಿರಿಜೆಯದು.

"ಇಲ್ಲೇ ಇದೀಯಾ? ಸಮಾಜಕ್ಕೆ ಹೋಗಿದಾಳೆ ಅಂದ್ಕೊಂಡಿದ್ನಲ್ಲೇ..."

" ಇಲ್ಲೇ ಇದ್ದೆ ಅಮ್ಮ. ಎಲ್ಲಾ ಕೇಳಿಸ್ಕೊಂಡೆ."

" ಸರಿ ! ಸರಿ ! "

ಗಿರಿಜಾ ಬಹಳ ದಿನಗಳಿಂದ ಕಂಠಪಾಠ ಮಾಡಿಕೊಂಡಿದ್ದ ಮಾತು ಗಳನ್ನು ಉಸಿರು ಬಿಗಿಹಿಡಿದು ಅಂದಳು :

" ನನಗೆ ಈಗ್ಲೇ ಮದುವೆ ಬೇಡ. ನಾನು ಕೆಲಸಕ್ಕೆ ಸೇರ್ಕೋತೀನಿ, ಅಣ್ಣಯ್ಯ. ನೀವು ಒಪ್ಪಬೇಕು, ಅಣ್ಣಯ್ಯ."

ನೀರವತೆ. ಗಿರಿಜೆ ಆಡಿದುದಕ್ಕೆ ಪ್ರತಿಕ್ರಿಯೆಯಾಗಿ ಯಾವ ಮಾತೂ ಬರಲಿಲ್ಲ.

ನಿರಾಕರಣೆಯ ನುಡಿಗಿಂತಲೂ ಕಠಿನತರವಾಗಿತ್ತು ಆ ಮೌನ.

ಅದು ಸಹ್ಯವಾಗದೆ ಗಿರಿಜೆ ಅತ್ತಳು.

ಆ ಸದವಕಾಶವನ್ನು ಬಳಸಿಕೊಂಡು ಆಕೆಯ ತಾಯಿಯೂ ಕಂಬನಿ ಮಿಡಿದರು.

ವಿಶ್ವನಾಥಯ್ಯ ಎದ್ದು, ಮನೆಯಿಂದ ಹೊರಬೀಳಲು ಅಣಿಯಾದರು. ಕೊಠಡಿಯ ಬಾಗಿಲಿಗೊರಗಿ ರೋದಿಸುತ್ತಿದ್ದ ಮಗಳಿಗೆ ಅವರೆಂದರು :

"ಗಿರಿಜಾ! ನಾನು ಸಾಯುವವರೆಗೆ ನಿನ್ನನ್ನ ಚಾಕರಿಗೆ ಕಳಿಸೋದಿಲ್ಲ. ಕೆಲಸಕ್ಕೆ ನಾನು ಸೇರ್ಕ್ಕೋತೀನಿ. ದೇವರು ಕಣ್ಣು ತೆರೆದರೆ, ಯಾವನಿಗಾದರೂ ಕೊಟ್ಟು ನಿನ್ನನ್ನು ಮದುವೆ ಮಾಡೇನು. ಸಮಾಜ ಗಿಮಾಜ ಅಂತ ಹೋಗ್ಬೇಡ. ಬಾಗಿಲು ಹಾಕ್ಕೋ . . ."

A. B. Channabasappa,
B. A., (Hons)
91/3, CORONATION ROAD,
BANGARAPET.

"ಏಳೀಂದ್ರೆ . . ."

"ಹಾಂ ಹಾಂ–"

ಗಡಬಡಿಸಿ ವಿಶ್ವನಾಥಯ್ಯ ಎದ್ದರು.

"ಇವತ್ನಿಂದ ಕೆಲಸಕ್ಕೆ ಹೋಗ್ಬೇಕು ಅಂದಿದ್ರಿ, ಅಲ್ವೆ?"

"ಹೌದು. ಎದ್ದೆ."

ರೇಡಿಯೋನಿಂದ ವೆಂಕಟೇಶಸ್ತುತಿ ಕೇಳಿಬರುತ್ತಿತ್ತು.

[ಈ ದಿನ ಈ ಸ್ತೋತ್ರ, ನಾಳೆ ಮಲ್ಲಿಕಾರ್ಜುನ ಸ್ತೋತ್ರ]

ಅವಸರದ ಮುಖಮಾರ್ಜನ, ಗುಟುಕು ಕಾಫಿ, ಸ್ನಾನ. ಬಿಸಿಬಿಸಿ ಅನ್ನದ ತುತ್ತು.

ಹಿಂದಿನ ದಿನ ಉದ್ಯೋಗ ದೊರಕಿಸಿಕೊಂಡಿದ್ದರು ವಿಶ್ವನಾಥಯ್ಯ. ನೂರು ರೂಪಾಯಿ ಮಾಸಿಕ ತಲಬಿನ ಆಫೀಸು ಮ್ಯಾನೇಜರು. ಏಕ ಕಾಲದಲ್ಲೇ ಹತ್ತಾರು ಕಟ್ಟಡಗಳ ನಿರ್ಮಾಣಕಾರ್ಯವನ್ನು ಕೈಗೊಳ್ಳುವುದರಲ್ಲಿ ಹೆಸರು ಪಡೆದಿದ್ದ ಕಂಟ್ರಾಕ್ಟರು ಮಹಾದೇವಯ್ಯ – ಸ್ವತಃ ನಿರಕ್ಷರ ಕುಕ್ಷಿ– ತಮ್ಮ ವ್ಯವಹಾರ ಸುಗಮವಾಗುವುದಕ್ಕೋಸ್ಕರ ಆಫೀಸು ತೆರೆದಿದ್ದರು.

"ನೂರು ರೂಪಾಯಿ ಕೊಡುತೀನಪ್ಪ. ಇಷ್ಟವಿದ್ದರೆ ಬನ್ನಿ," ಎಂದಿದ್ದರು ಮಹಾದೇವಯ್ಯ.

ಕತ್ತೆ ದುಡಿಮೆಯಲ್ಲಿ ಈ ವಿಶ್ವನಾಥಯ್ಯನನ್ನು ಮೀರಿಸುವವರಿಲ್ಲ ಎಂದು ತಿಳಿದಿದ್ದರೂ ಮಾತು ಸೇರಿಸಿದ್ದರು :

"ಸರಕಾರೀ ಕೆಲಸದ ಹಾಗಲ್ಲ. ಹೇರು ಜಾಸ್ತಿ !"

"ಅದೇನೂ ದೊಡ್ಡದಲ್ಲ. ಬರ್ತೀನಿ, ಒಪ್ಪಿಗೆ" ಎಂದಿದ್ದರು ವಿಶ್ವನಾಥಯ್ಯ.

"ನಾಳೆ ದಿವಸ ಚೆನ್ನಾಗಿದೆ. ಹತ್ತು ಘಂಟೆಗೆ ಆಫೀಸು ಶುರು. ಬಂದ್ಬುಡಿ," ಎಂದು ಹುಬ್ಬು ಹಾರಿಸಿದ್ದರು ಮಹಾದೇವಯ್ಯ.

ಏಳುತ್ತಲಿದ್ದ ವಿಶ್ವನಾಥಯ್ಯನವರ ದೃಷ್ಟಿ ತಾರಸಿಯಲ್ಲಿದ್ದ ತೂಗು ಕೊಂಡಿಗಳನ್ನು ನೋಡಿತು.

ಪ್ರಸಾದನ ಮಗುವಿಗಾಗಿ ತೊಟ್ಟಿಲು? ಗಿರಿಜೆಯ ಹೆರಿಗೆಗಾಗಿ ತೊಟ್ಟಿಲು?

—ವಿಚಾರ ಸರಣಿ ಕಹಿಯಾಗಿ ಹರಿಯಬೇಕಾಗಿತ್ತು. ಆದರೆ ವಿಶ್ವನಾಥಯ್ಯನವರಿಗೆ ಬಿಡುವಿರಲಿಲ್ಲ.

ನಿವೃತ್ತಿಯ ಅನಂತರದ ವಿಶ್ರಾಂತಿಯ ಕನಸನ್ನು ಹಿಂದೆ ಕಂಡಿದ್ದರಲ್ಲ?

ಆ ವಿಶ್ರಾಂತಿ ಮುಗಿದೇಹೋಗಿತ್ತು. ಒಂದು ತಿಂಗಳಲ್ಲಿ ಮುಗಿದಿತ್ತು.

ಪೂಜೆಗೆ ಕುಳಿತಾಗ ವಿಶ್ವನಾಥಯ್ಯನವರ ಕಣ್ಣುಗಳಿಂದ ಕಂಬನಿ ತೊಟ್ಟಿಕ್ಕಿತು.

ಹೀಗೂ ಆಯಿತಲ್ಲ ಅವಸ್ಥೆ; ಯಾವ ಜನ್ಮದ ಶಾಪ ತಮ್ಮ ಈ ದುಸ್ಥಿತಿ – ಎಂದು ಅವರು ಕೊರಗಿದರು.

. . . ಕೋಟು ತುಸು ಹರಿದಿತ್ತು. ಅದನ್ನೇ ಅವರು ತೊಟ್ಟರು. ಸೈಕಲಿನ ಮೇಲಣ ಧೂಳನ್ನು ಝಾಡಿಸಿ ಅದನ್ನು ಅಂಗಳಕ್ಕಿಳಿಸಿದರು. ಗಾಲಿಗಳಲ್ಲಿ ಗಾಳಿ ಇರಲಿಲ್ಲ.

ಹತ್ತು ಮಾರುಗಳಾಚೆ ಸೈಕಲ್ ಶಾಪು. ವಾಹನವನ್ನು ತಳ್ಳಿಕೊಂಡು ಆ ಅಂಗಡಿಯುತ್ತ ವಿಶ್ವನಾಥಯ್ಯ ಹೋದರು.

## ಕಥೆ: ಏಳು

# ಅನ್ನಪೂರ್ಣಾ

"ಢಣ್ ಢಣ್" ಎಂದು ದೇಗುಲದ ಘಂಟೆಯ ಸ್ವರ ಕೇಳಿಸಿತು.

ಅರ್ಚಕರು ಗರ್ಭಗುಡಿಯ ಹೊರ ದ್ವಾರದಲ್ಲಿ ನಿಂತು ಕೂಗಿ ಹೇಳಿದರು: "ಉಣ್ಣಲಿಕ್ಕಿದ್ದಾರೆಯೇ? ಇನ್ನೂ ಉಣ್ಣಲಿಕ್ಕಿದ್ದಾರೆಯೇ?"

ಪ್ರಾತಃಕಾಲದ ಶಾಂತತೆಯ ಆ ವಾತಾವರಣದಲ್ಲಿ ಅರ್ಚಕರ ಮಧುರ ಕಂಠ ಮಾರ್ದನಿಗೊಂಡಿತು.

ನಡುಹಗಲಲ್ಲಿಯೂ ಅದೇ ಕರೆ; ಸಂಜೆ ಪುನಃ ಅದೇ ಕರೆ; ನಡು ಇರುಳಲ್ಲಿಯೂ ಆ ಕರೆಯೇ.

* * * *

ಅನ್ನಪೂರ್ಣಾ ಆ ನಾಡಿನ ದೇವಿ. ಆಕೆ ವಾಸ್ತವಿಕವಾಗಿಯೂ ಅನ್ನಪೂರ್ಣೆ. ತನ್ನ ನಾಡಿನ ನಿವಾಸಿಗಳಲ್ಲಿ ಯಾರೂ ಬರಿಯ ಹೊಟ್ಟೆಯಲ್ಲಿರಬಾರದೆಂದು ದೇವಿಯ ಆಶಯ. ಅದಕ್ಕಾಗಿಯೇ "ಉಣ್ಣಲಿಕ್ಕಿದ್ದಾರೆಯೇ? ಇನ್ನೂ ಉಣ್ಣಲಿಕ್ಕಿದ್ದಾರೆಯೇ? ಎಂದು ಅರ್ಚಕರು ಮೂರು ಹೊತ್ತೂ ಕರೆಕೊಡುತ್ತಿದ್ದುದು. ದೇಗುಲದಲ್ಲಿ ದೊಡ್ಡ ಗಂಟೆ ಬಾರಿಸಿದಾಗಲೇ ಜನರಿಗೆ ಗೊತ್ತು,-ಹಸಿದವರನ್ನು ಅನ್ನಪೂರ್ಣೆ ಕರೆಯುತ್ತಿದ್ದಾಳೆ- ಎಂದು.

"ಹಸಿದವರಿಲ್ಲ ದೇವಿ!" ಎಂದು ಉತ್ತರವೀಯುವುದು ಆಗಿನ ರೂಢಿಯಾಗಿತ್ತು. ತಾವೆಲ್ಲರೂ ಉಂಡು ಸುಖವಾಗಿದ್ದರೆ ದೇವಿಗೆ ಸಂತೋಷವೆಂದು ಊರಜನರು ಬಗೆದಿದ್ದರು. ಹಾಗಾಗಿ ಯಾರೂ ಒಪ್ಪೊತ್ತೂ ಊಟ ಮಾಡದೆ ಕುಳಿತುಕೊಳ್ಳುತ್ತಿರಲಿಲ್ಲ. ದಿನವೂ ಕೂಳನ್ನು ಸಂಪಾದಿಸುವುದು ಸುಲಭದ ಕೆಲಸವಾಗಿತ್ತು ಆಗ. ವ್ರತ ಉಪವಾಸಗಳಿದ್ದರೂ ಸರಿಯೆ, ಯಾರಿಗೂ ಹಸಿವಾಗುತ್ತಿರಲಿಲ್ಲ. ಅನ್ನಪೂರ್ಣೆಗೆ ತೃಪ್ತಿಯಾಗಬೇಕು,— ಅದಕ್ಕಾಗಿ ಬರಿ ಹೊಟ್ಟೆಯವರಾರೂ ಇರಲಿಲ್ಲ.

ಕರೆ ಕೊಟ್ಟ ಸ್ವಲ್ಪ ಹೊತ್ತಿನ ತನಕ ಅರ್ಚಕರು ನಿಯಮದಂತೆ ಕಾದು ಕುಳಿತುಕೊಳ್ಳುವರು. ಯಾರೂ ಬರುತ್ತಿರಲಿಲ್ಲ. ದೇವಿಗೆ ಸಮರ್ಪಿಸಿದ ನೈವೇದ್ಯವನ್ನೆತ್ತಿಕೊಂಡು ಆಮೇಲೆ ಅವರು ಗೃಹಾಭಿಮುಖವಾಗಿ ತೆರಳುವರು.

ಊರ ಮುಖಂಡರಿಗೆ ಸಂತೋಷವಾಯಿತು. ಅನ್ನದಾನಕ್ಕಾಗಿ ದೇವಿಯ ಭಂಡಾರದಿಂದ ಏನೇನೂ ವೆಚ್ಚವಾಗುವುದಿಲ್ಲವಲ್ಲ ಎಂದು.

* * * *

ಮೊದಲು ಬಂದುದು ಪರದೇಶಿಯರ ಆಕ್ರಮಣ; ಕೊಳ್ಳೆ. ಅದನ್ನು ಅನುಸರಿಸಿ ಬಂದುದು ಕ್ಷಾಮ; ಬರಗಾಲ. ದಾರಿದ್ರ್ಯದೇವಿ ಅಲ್ಲಿ ತೋರಿಕೊಂಡು ಕೆಲಕಾಲ ನರ್ತಿಸಿ ಹೊರಟು ಹೋಗಿದ್ದಳು.

ಆಗ ಹಸಿದವರಿಗಾಗಿ ಅನ್ನಪೂರ್ಣೆಯ ಕರೆ ಬಂದಾಗ ಜನರು ತಂಡ ತಂಡವಾಗಿ, ಇಳಿಮೊಗದವರಾಗಿ, ಅವನತಶಿರರಾಗಿ ದೇಗುಲದ ಮುಂದೆ ಬಂದು ನಿಂತರು. ಅನ್ನದಾನದ ಕಾರ್ಯ ಉತ್ಸಾಹದಿಂದ ನಡೆಯತೊಡಗಿತು.

ಅಂದಿನಿಂದ ಹಸಿದವರ ಹೊಟ್ಟೆ ತಣಿಯಲಿಲ್ಲ. ನಿರುದ್ಯೋಗಿಗಳು, ದಿನಗೂಲಿ ದೊರಕದವರು, ಅರೆಹೊಟ್ಟೆಯವರು, ಭಿಕ್ಷುಕರು, ಬಡವರು–ಇವರ ಸ್ತೋಮಗಳಿಗೆ ಕಡಮೆ ಇರಲಿಲ್ಲ.

ಈ ವ್ಯವಹಾರ ಹೀಗೆಯೇ ಮುಂದೆ ಸಾಗಿತು. ಊರ ಮುಖಂಡರು ಪರಸ್ಪರ ಮಿಕಿ ಮಿಕಿ ನೋಡಿಕೊಂಡರು. ಅರ್ಚಕರು ಬೇಸತ್ತು ಗೊಣಗುಟ್ಟ ತೊಡಗಿದರು. ಹಸಿದು ಬಂದವರು ಅರೆ ಹೊಟ್ಟೆಯಲ್ಲೇ ಹಲವೊಮ್ಮೆ ಹಿಂದಿರುಗಿದರು. ಮನೆಗೆ ನೈವೇದ್ಯ ಕೊಂಡೊಯ್ಯುವುದಕ್ಕೆ ತಡವಾಗುತ್ತದೆಂದು ಅರ್ಚಕರು ಚಡಪಡಿಸಿದರು.

* * * *

ಆಗಲೇ ಒಮ್ಮಿಂದೊಮ್ಮೆಲೆ ಜನರು ಮಾತನಾಡಿಕೊಳ್ಳತೊಡಗಿದ್ದು.

“ ಹೀಗೆ ಅನುದಿನವೂ ಉಪದ್ರವವಿತ್ತರೆ ಹೇಗೆ?”

“ ಅನ್ನಪೂರ್ಣಾ ದೇವಿಗೆ ಅತೃಪ್ತಿಯಾಗಿದೆ!”

ಒಂದು ತೆರನಾದ ಭಯಭೀತಿ ಜನರಲ್ಲಿ ಸಂಚಾರ ಮಾಡುವುದಕ್ಕೆ ಮೊದಲಾಯಿತು. ಹೀಗೆ ಸುದ್ದಿಗಳನ್ನು ಯಾರು ಹಬ್ಬಿಸಿದರೆಂದು ವಿಚಾರಿಸುವ ಗೋಜಿಗೆ ಒಬ್ಬನೂ ಹೋಗಲಿಲ್ಲ.

ದಿನೇ ದಿನೇ ಅರ್ಚಕರ ಕರೆಗೆ ಮರು ನುಡಿ ಕೊಡುತ್ತಿದ್ದ ಪಾಪಿಗಳ ಸಂಖ್ಯೆ ಕಡಮೆಯಾಗುತ್ತಾ ಬಂತು. ಕ್ರಮಶಃ ಜನರು ಬರುವುದು ನಿಂತೇ ಹೋಯಿತು . . .

ಆದರೂ ಅನ್ನಪೂರ್ಣಾ ಕರೆಯುತ್ತಿದ್ದಳು–" ಉಣ್ಣಲಿಕ್ಕಿದ್ದಾರೆಯೇ? ಇನ್ನೂ ಉಣ್ಣಲಿಕ್ಕಿದ್ದಾರೆಯೇ?"

* * * *

ಎಷ್ಟೋ ವರ್ಷಗಳು ಸಂದುವು. ಒಂದು ದಿನ ಬರಗಾಲದ ಪರವೂರಿನ ಕೆಲವು ಬಡಕಲು ಜೀವಿಗಳು ಅನ್ನಪೂರ್ಣಮ್ಮನ ನಾಡಿಗೆ ಬಂದರು.

ರಾತ್ರಿಯ ಮಹಾಪೂಜೆಯಾಗಿ ಆರತಿ ಬೆಳಗಿದ್ದ ಹೊತ್ತು. ಅಧಿಕಾರಿಗಳು ದೇಗುಲದ ಬಳಿಗೆ ಬರುತ್ತಿದ್ದರು. ಅನ್ನಪೂರ್ಣೆಯ ಮಹತ್ವವನ್ನು ಅವರು ಕೇಳಿಯರಿಯದ ಜನರಾಗಿರಲಿಲ್ಲ.

ಅರ್ಚಕರು ಘಂಟೆ ಬಾರಿಸಿ, " ಉಣ್ಣಲಿಕ್ಕಿದ್ದಾರೆಯೇ? ಇನ್ನೂ ಉಣ್ಣಲಿಕ್ಕಿದ್ದಾರೆಯೇ?" ಎಂದರು.

ಆ ದರಿದ್ರರು ತಮ್ಮ ಆಗಮನದ ಸೂಚಕ ಧ್ವನಿಯಿಂದ "ಇದ್ದೇವೆ!" ಎಂದರು.

ಅರ್ಚಕ ಹುಬ್ಬು ಗಂಟಿಕ್ಕಿದ. ಊರವರೇನೂ ಕಾಟಕೊಡುತ್ತಿರಲಿಲ್ಲ. ಎಂದಾದರೂ ಬರುತ್ತಿದ್ದವರು ಪರದೇಶಿಗಳು, ಭಿಕಾರಿಗಳು. ಎಷ್ಟೋ ಬಾರಿ ಆ ಹೊಸ ಅರ್ಚಕ ಅವರನ್ನು ಗದರಿಸಿ ಕಳುಹಿಸಿದ್ದ.

" ಪಾಪಿಗಳು!" ಎಂದು ಆತ ಗೊಣಗುಟ್ಟಿದ. ತನ್ನ ಮನೆಯವರಿಗೆ ಬೇಕಾಗುವಷ್ಟೇ ನೈವೇದ್ಯ ದೇವಿಗೆ ಸಮರ್ಪಿತವಾಗಿತ್ತು. ಅರ್ಚಕ ಅತ್ತಿತ್ತ ನೋಡದೆ ನೈವೇದ್ಯದ ಪಾತ್ರೆಯನ್ನೆತ್ತಿ ಗರ್ಭಗುಡಿಗೆ ಬೀಗವನ್ನೊತ್ತಿ ಹೊರ ನಡೆದು ಹೆಬ್ಬಾಗಿಲನ್ನು ಎಳೆದುಕೊಂಡ. ಎದುರುಗಡೆಯ ಗೋಪುರದಲ್ಲಿ ಸಾಲಾಗಿ ನಿಂತಿದ್ದ ಬಡಜೀವಿಗಳಲ್ಲೊಬ್ಬ ಅರ್ಚಕ ಹೊರಡುತ್ತಿದ್ದುದನ್ನು ಕಂಡು, " ಪ್ರಸಾದವಿಲ್ಲವೇ? ಭಕ್ತರಿದ್ದಾರೆ!" ಎಂದ.

ಉತ್ತರ ಬರಲಿಲ್ಲ ಆ ಪ್ರಶ್ನೆಗೆ.

* * * *

ಮರುದಿನ ಮುಂಜಾನೆ ಪೂಜೆಯ ಹೊತ್ತಿಗೂ ಆ ಭಿಕ್ಷುಕರು ಅಲ್ಲೇ ಇದ್ದರು.

ಮುಂಜಾನೆಯ ಕರೆ ಬಂದಾಗ ಅವರಲ್ಲೊಬ್ಬ ಹಿರಿಯ ಮುಂದೆ ಹೋಗಿ ನಿಂತ.

ಅರ್ಚಕ ಸಿಟ್ಟುಗೊಂಡು "ಏನು?" ಎಂದ.

"ಕರೆದಿರಿ. ಬಂದಿದ್ದೇವೆ."

"ಹೂಂ, ಈಗ ಆ ಪದ್ಧತಿ ಇಲ್ಲ-ಗೊತ್ತಿಲ್ಲವೆ?"

"ಏನು? ಅನ್ನಪೂರ್ಣೆ ಈಗ ಅನ್ನದಾನ ಮಾಡುವುದಿಲ್ಲವೆ?"

ಅರ್ಚಕನು ಔಡುಗಚ್ಚಿದ, ಅಷ್ಟೆ!

ಆ ಬಡಪಾಯಿ ಸ್ವರವೇರಿಸಿ ನುಡಿದ: "ಯಾಕೆ ಮತ್ತೆ ಈ ಸೋಗು?"

ಅನ್ನಪೂರ್ಣೆ ಒಳಗಣ್ಣಿನಿಂದ ತನ್ನ ಆ ಮಕ್ಕಳನ್ನೂ ನೋಡಿ ನಗುತ್ತಿದ್ದಂತೆ ತೋರಿತು.

ಅರ್ಚಕ ಅರಚಿಕೊಂಡ.

"ಷಂಡ! ನಾಸ್ತಿಕ! ದೇವಿಯನ್ನು ಅವಮಾನಿಸಿ ನರಕಕ್ಕೆ ಹೋಗುತ್ತಿದ್ದೀಯೋ."

* * * *

"ಢಣ್ ಢಣ್" ಎಂದು ದೇಗುಲದ ಘಂಟೆಯ ಸ್ವರ ಕೇಳಿಸಿತು.

ಅರ್ಚಕ ಮಹಾಶಯ ಗರ್ಭಗುಡಿಯ ಹೊರದ್ವಾರದಲ್ಲಿ ನಿಂತು ಕೂಗಿ ಹೇಳಿದ: "ಉಣ್ಣಲಿಕ್ಕಿದಾರೆಯೇ? ಇನ್ನೂ ಉಣ್ಣಲಿಕ್ಕಿದ್ದಾರೆಯೇ?"

ಪ್ರಾತಃಕಾಲದ ಅಶಾಂತತೆಯ ಆ ವಾತಾವರಣದಲ್ಲೂ ಅರ್ಚಕನ ಕರ್ಣ ಕಠೋರ ಕರೆ ಕೇಳಿಸಿತು.

ನಡು ಹಗಲಿನಲ್ಲಿಯೂ ಅದೇ ಕರೆ; ಸಂಜೆ ಪುನಃ ಅದೇ ಕರ್ಕಶ ಕರೆ; ನಡುವಿರುಳಲ್ಲಿಯೂ ಆ ಕರೆಯೇ.

## ಕಥೆ: ಎಂಟು

# ಅನ್ನದೇವರ ರೈಲು ಪ್ರಯಾಣ

ಕಿಷ್ಕಿಂಧೆಯ ರಾಜಧಾನಿಯಲ್ಲಿ ಆ ದಿನ ಎಲ್ಲಿಲ್ಲದ ಸಡಗರ. ಆ ಸಮಾರಂಭಕ್ಕೆಂದು ರಜಾ ದಿನವಾದ ಭಾನುವಾರವನ್ನೆ ಆಳುವವರು ಆರಿಸಿದ್ದರು. ಐತಿಹಾಸಿಕ ಮಹತ್ವದ ಆ ಘಟನೆಗೆ ಪ್ರೇಕ್ಷಕರಾಗುವ ಅವಕಾಶ ಭಾಗ್ಯನಗರದ ಪೌರರಿಗೆ ಲಭಿಸಿತ್ತು. ಬೆಳಗ್ಗೆ ಬೇಗನೆದ್ದು ಜನ, ಮನೆಗಳಿಂದಲೂ ಹೊರಬಿದ್ದರು. ಹತ್ತು ಮೂಲೆಗಳಿಂದಲೂ ಹರಿದು ಬಂದುವು ಜನನದಿಗಳು. ಆ ಪ್ರವಾಹಗಳ ಸಂಗಮ, ನಗರದ ರೈಲು ನಿಲ್ದಾಣದಲ್ಲಿ. ವಿಶೇಷ ಆಸ್ಥೆಯಿಂದ ಅಲಂಕರಿಸಿದ್ದ ಭವ್ಯ ಕಟ್ಟಡ. ತಳಿರು ತೋರಣ, ಹೂ ಹಸಿರು, ಮೊಳಗುತ್ತಿದ್ದ ಮಂಗಳ ವಾದ್ಯಗಳು. ಭೂಮಿಯ ಮೈ ಮೇಲೆ ಕಾದ ಕಬ್ಬಿಣದಿಂದ ಎಳೆದ ಬರೆಗಳ ಕರಿಯ ಗೆರೆಗಳಂತೆ, ರೈಲು ಕಂಬಿಗಳು ಕಟ್ಟಡದೆದುರು ಮಲಗಿದ್ದುವು. ಉತ್ತರ ದಕ್ಷಿಣ ಪೂರ್ವ ಪಶ್ಚಿಮಗಳತ್ತ ಪ್ರವಾಸ ಹೊರಟಿದ್ದ ಪ್ರಯಾಣಿಕರಿದ್ದರು, ಪ್ಲಾಟ್ ಫಾರ್ಮಿನ ಮೇಲೆ. ಊರ ಜನರ ಗುಂಪು ಗುಂಪಾಗಿ ಬರತೊಡಗಿದಂತೆ ಕೆಲ ಪ್ರಯಾಣಿಕರು ಹಿಂದೀ ಭಾಷೆಯಲ್ಲಿ ಕೇಳಿದರು :

"ಏನು ವಿಶೇಷ ?"

ಕನ್ನಡ ಬಾಂಧವನೊಬ್ಬ ತನಗೆ ಬರುತಿದ್ದ ಹರುಕು ಮುರುಕು ಹಿಂದಿಯಲ್ಲಿ ಉತ್ತರವಿತ್ತ :

"ರೂಪಾಯಿಗೆ ಎರಡು ಸೇರು."

ಅರ್ಥವಾಗದೆ ಆ ಮಹಾನುಭಾವ ಕೇಳಿದ :

"ಏನು ?"

ಆ ಪರಿಸ್ಥಿತಿಯಲ್ಲಿ ಇಂತಹ ಪ್ರಶ್ನೆ ಬಂದುದನ್ನು ಕಂಡು ಕನ್ನಡಿಗನಿಗೆ ಆಶ್ಚರ್ಯವೆನಿಸಿತು.

"ಅಕ್ಕಿ !"

ಕನ್ನಡ ಬರುತ್ತಿದ್ದರೂ ಹಿಂದಿ ಅರ್ಥವಾಗುತ್ತಿದ್ದರೂ ಹತ್ತಿರದಲ್ಲೇ ಇದ್ದೊಬ್ಬ ತಮಿಳ ತನ್ನ ಭಾಷೆಯಲ್ಲಿ ಕೇಳಿದ:

"ಏನು ಸಮಾಚಾರ?"

ತನಗೆ ಬರುತ್ತಿದ್ದಹರುಕು ಮುರುಕು ತಮಿಳಿನಲ್ಲಿ ಕನ್ನಡಿಗ ಸಂತೋಷ ದಿಂದ ಸಮರ್ಪಕವಾಗಿ ಉತ್ತರಿಸಿದ.

ಗುಜು ಗುಜು ಸದ್ದಾಯಿತು. "ದಾರಿ ಬಿಡಿ! ದಾರಿ ಬಿಡಿ!" ಎಂದರು ಯಾರೋ. ಕಿಷ್ಕಿಂಧೆಯ ಮುಖ್ಯಮಂತ್ರಿ ಆಗಮಿಸಿದರು.

ಜುಕು ಜುಕು ಸದ್ದಾಯಿತು. ಅಗೋ ಬಂತು! ಅಗೋ ಬಂತು! ಎಂದರು ಜನ. ಅಲಂಕರಿಸಿದ್ದ ರೈಲುಗಾಡಿ, ಷೆಡ್ಡಿನಿಂದ ಹೊರಬಂದು ಜನರಿಗೆ ಸಮೀಪವಾಗಿ ನಿಂತಿತು.

'ಗೂಡ್ಸ್ ಗಾಡಿಗೆ ಅಲಂಕಾರ,' ಎಂದು ಮೂಲೆಯಲ್ಲಿ ನಿಂತಿದ್ದ ಒಬ್ಬರು ಗೊಣಗಿದರು.

ಆದರೆ ಅನ್ನ ದೇವರು ಪ್ರಯಾಣ ಮಾಡಲು ಬಯಸಿದ್ದುದು ಆ ಗಾಡಿಯಲ್ಲೇ.

ಪ್ರವಾಸದ ರೈಲುಗಳು ಸಿದ್ಧವಾಗಿ ನಿಂತಿದ್ದುವು. ಆದರೆ ಪ್ರಯಾಣಿಕರು ಯಾರೂ ಅತ್ತ ಸುಳಿಯಲಿಲ್ಲ. ಕಿಷ್ಕಿಂಧೆಯ ಸುಂದರ ಸ್ಥಳಗಳನ್ನು ನೋಡಲು ಬಂದಿದ್ದ ಆ 'ಪರಊರಿನ' ಜನರು, ಧರ್ಮಪುರದವರ ಉತ್ಸಾಹ ಕಂಡು ತಾವೂ ಉತ್ಸುಕರಾಗಿ ಅಲ್ಲೇ ನಿಂತರು.

ಸಂದೇಹಗ್ರಸ್ತ ಮನುಷ್ಯನಿಲ್ಲದ ಪ್ರಪಂಚ ಸಾಧ್ಯವೇ?

ಒಬ್ಬ ಕೇಳಿದ:

"ಆ ಗಾಡೀಲಿದೆಯಾ ಅಕ್ಕಿ?"

"ಹೂಂ," ಎಂದ. ಎಲ್ಲವನ್ನೂ ತಿಳಿದಿದ್ದ ಇನ್ನೊಬ್ಬ.

"ಈವರೆಗೆ ಎಲ್ಲಿತ್ತು?"

"ಉತ್ತರ ದೇಶದಿಂದ ನಿನ್ನೆಯೇ ಬಂತು ಕಣ್ರೀ. ದಿಲ್ಲಿಯ ರಾಜರು ಕೊಟ್ಟ ಉಡುಗೊರೆ."

"ಓ!"

"ಇವತ್ತು ಇಲ್ಲಿಂದ ಹೊರಡುತ್ತೆ ನಮ್ಮ ರೈಲಿನಲ್ಲಿ."

"ಯಾವ ಊರಿಗೆ?"

'ಎಲ್ಲಾ ಊರಿಗೂ. ಕಿಷ್ಕಿಂಧೆಯ ಮೂಲೆ ಮೂಲೆಗೂ.'

ಅಕ್ಕಿಯ ಅಭಾವ ಉಂಟಾಗಿತ್ತು, ಕಿಷ್ಕಿಂಧೆಯಲ್ಲಿ. ಜನ, ಒಂದು ಊರಿನಿಂದ ಇನ್ನೊಂದು ಊರಿಗೆ, 'ಕ್ಷಾಮ ಸಮಾಚಾರ'ದ ವಿಷಯ ಕಾಗದ ಬರೆಯ ತೊಡಗಿದ್ದರು. ಹಾಹಾಕಾರವೆದ್ದಿತು ಬಡಬಗ್ಗರಿಂದ. [ಅಂಥವರ ಸಂಖ್ಯೆಯೇ ಹೆಚ್ಚು ಎಲ್ಲ ಕಡೆಗಳಲ್ಲೂ.] ಅಕ್ಕಿ ಪಲ್ಲಕ್ಕೆ ಅರವತ್ತು ರೂಪಾಯಿ, ಎಪ್ಪತ್ತು, ಎಂಬತ್ತು . . . ನೂರಾದರೆ ಗತಿ? ರೂಪಾಯಿಗೆ ಒಂದೂ ಮುಕ್ಕಾಲು ಸೇರು ಚಟಾಕು, ಚಟಾಕು ಕಡಮೆ ಒಂದೂ ಮುಕ್ಕಾಲು ಸೇರು, ಒಂದೂವರೆ, ಒಂದೂಕಾಲು . . . ಒಂದಾದರೆ ಗತಿ? ಅಷ್ಟರಲ್ಲೇ ಅನ್ನ ದೇವರ ಅಭಯ ದೊರೆತಿತ್ತು: 'ಹೆದರಬೇಡಿ!' ಆ ಅಭಯವಾಣಿಯನ್ನು ದೇವರ ಪೂಜಾರಿಗಳಾಗಿ ಮಂತ್ರಿವರ್ಯರು ಜನತೆಗೆ ಮುಟ್ಟಿಸಿದರು.

ಜನ ಹರ್ಷಧ್ವನಿ ಮಾಡಿದರು, ಆ ಸಂದೇಶ ತಲುಪಿದಾಗ. ಕಿಷ್ಕಿಂಧೆಯ ಜನರ ಅನ್ನ ಸಂಕಟ ನೀಗುವ ಸನ್ನಿವೇಶ ಸ್ವಾಗತಾರ್ಹವಾಗಿತ್ತು.

ಸರಕಾರದ ವಕ್ತಾರರು ಖಾಸಗಿಯಾಗಿ ಹೇಳಿದ ಮಾತು ಪತ್ರಿಕೆಗಳಲ್ಲಿ ಪ್ರಕಟವಾಯಿತು:

'ಇನ್ನು ಯಾವ ಯೋಚನೆಯೂ ಇಲ್ಲ. ಒಮ್ಮೆ ಫುಡ್ ಸ್ಪೆಷಲ್ಲು ಹೋಗಿ ಬರಲಿ. ಅನ್ನದೇವರು ಎಲ್ಲ ಕಡೆಗಳಲ್ಲೂ ಪ್ರತ್ಯಕ್ಷವಾಗಲಿ. ಆ ಮೇಲೆ ನೋಡುವಿರಂತೆ. ಅಕ್ಕಿ ತಾನೇ ತಾನಾಗಿ ಹೊರ ಬರುತ್ತೆ . . . !'

ರಾಹು ಕಾಲ ಕಳೆದಿತ್ತು. ಅರ್ಚಕರು ಮಂತ್ರಗಳನ್ನು ಪಠಿಸಿದರು. ಶಂಖಧ್ವನಿಯಾಯಿತು. ಅದನ್ನು ಮೀರಿಸಿ ಧ್ವನಿವರ್ಧಕದ ಮೂಲಕ ಮಂತ್ರಿವರ್ಯರ ಮಾತು ಕೇಳಿಬಂತು:

'ನಾವು ಕೊಟ್ಟ ಮಾತನ್ನು ನಡೆಸುವವರಲ್ಲ ಎಂತ ಯಾರು ಹೇಳುತ್ತಾರೆ? ಇಗೋ, ಜನರ ಸಹಾಯಕ್ಕೆ ಬಂದಿದ್ದೇವೆ. ಕಳೆದ ಚುನಾವಣೆಯಲ್ಲೇ ನಾವು ಜನಸೇವಕರೂಂತ ಹೇಳಿಕೊಂಡಿದ್ವಿ–ಮುಂದಿನ ಚುನಾವಣೆಯಲ್ಲಿ ಅದೇ ಮಾತನ್ನ ಹೇಳ್ತೀವಿ. ಮಾತಿಗೆ ತಪ್ಪುವವರು ನಾವಲ್ಲ. ದುರ್ಭಿಕ್ಷದಿಂದ ಜನ ಸಾಯ್ತಿದಾರೇಂತ ಪತ್ರಿಕೆಗಳಲ್ಲಿ ಪ್ರಕಟವಾದರೆ ನಂಬಬೇಡಿ. ನಮ್ಮ ರಾಮರಾಜ್ಯದಲ್ಲಿ ಯಾರೂ ಹೊಟ್ಟೆಗಿಲ್ಲದೆ

ಸಾಯುವುದಿಲ್ಲ! ಸಾಯಲು ನಾವು ಸಮ್ಮತಿ ಕೊಡುವುದಿಲ್ಲ! ಉತ್ತರ ದೇಶದ ರಾಜರು ನಮ್ಮ ಸಹಾಯಕ್ಕೆ ಬಂದಿದ್ದಾರೆ. ನೋಡಿದಿರಾ ರೈಲು? ಇದರಲ್ಲಿ ಅಕ್ಕಿ ಇದೆ. ರೂಪಾಯಿಗೆ ಎರಡು ಸೇರು! ಎಲ್ಲಿ, ಜಯಘೋಷ ಮಾಡಿ! ನನ್ನ ಜತೆಯಲ್ಲಿ ಗಟ್ಟಿಯಾಗಿ ಹೇಳಬೇಕು. ನಾನು 'ರೂಪಾಯಿಗೆ' ಅಂದಾಗ ನೀವು ' ಎರಡು ಸೇರು ' ಎನ್ನಬೇಕು. ಹೇಳಿ, ರೂಪಾಯಿಗೆ—!'

ಜನಸ್ತೋಮದ ಕಟ್ಟಿಟ್ಟ ಭಾವನೆಗಳ ಕಟ್ಟೆಯೊಡೆದು ಧ್ವನಿ ಕೇಳಿಸಿತು :

' ಎರಡು ಸೇರು !'

ಮಂತ್ರಿವರ್ಯರೆಂದರು :

' ಇನ್ನೊಮ್ಮೆ-ರೂಪಾಯಿಗೆ—!'

ಉತ್ತರ.

ಮತ್ತೂ ಒಮ್ಮೆ,

ಖಾದಿಯಂತೆ ನುಣುಪಾಗಿದ್ದ ಸಣಬಿನ ಚೀಲದಲ್ಲಿ ಹತ್ತು ಸೇರು ಅಕ್ಕಿಯನ್ನು ಥಾಂಡಿಗ ಜವಾನನೊಬ್ಬ ಮಂತ್ರಿವರ್ಯರ ಮುಂದೆ ಹಿಡಿದ. ಮಂತ್ರಿವರ್ಯರು ಆ ಭಾರವನ್ನು ಎತ್ತಲಿಲ್ಲ. ಬೆರಳಲ್ಲೇ ಮುಟ್ಟಿ ಆಹಾರ ಸಚಿವರ ಕಡೆಗೆ ದಾಟಿಸಿದರು. ಆಹಾರ ಸಚಿವರ ಹಸ್ತಸ್ಪರ್ಶದ ಬಳಿಕ ಚೀಲ ಅವರ ಜವಾನನ ಬಳಿ ಸೇರಿತು.

ಅರ್ಚಕರು ರೈಲುಗಾಡಿಯ ಎಂಜಿನಿನ ಕರಿಯ ಮುಖವನ್ನು ಆರತಿಯಿಂದ ಬೆಳಗಿದರು. ಅದರ ಹಣೆಗೆ ಕುಂಕುಮವಿಟ್ಟರು.

ಜಯಘೋಷ ಮೊರೆಯಿತು.

ಭಾವಚಿತ್ರಗಳನ್ನು ತೆಗೆದುಕೊಳ್ಳುವವರು ತಾಮುಂದು ನಾಮುಂದು ಎಂದು ಸೆಣಸಾಡಿದರು. ಮಂತ್ರಿವರ್ಯರು ಬಹಳ ಹೊತ್ತು ಮುಗುಳು ನಗುತ್ತಲೇ ಇರಬೇಕಾಯಿತು.

ಗಾರ್ಡ್ ಶೀಟಿಯೂದಿದ, ಹಸುರು ಬಾವುಟ ಬೀಸುತ್ತಾ. ಗಾಡಿ ಶಿಳ್ಳು ಹಾಕಿತು, ಗಗನಕ್ಕೆ ಗುರಿ ಇಟ್ಟು.

ಜುಕು ಜುಕು-ಜೂ . . . ವೈಲೂರಿನ ಕಡೆಗೆ ರೈಲು, ಎಂಜಿನ್ನು. ಸಂಗ್ರಹ ಸಾಲದೆ ಹೋಗಬಹುದೆಂದು ಒಂದು ಡಬ್ಬಿ ತುಂಬ ಕಲ್ಲಿದ್ದಲು. ಇನ್ನೊಂದು ಡಬ್ಬಿಯಲ್ಲಿ ತಳಿರುತೋರಣದ ಸಾಮಗ್ರಿ-ಬಾಡಿದ ಹಸುರನ್ನು

ಬದಲಾಯಿಸುವುದಕ್ಕೋಸ್ಕರ. ತಿಂಡಿತೀರ್ಥಗಳಿಗೆ ಏರ್ಪಾಟು ಇನ್ನೊಂದ ರಲ್ಲಿ. ಚಿಲ್ಲರೆ ಅಕ್ಕಿ ತುಂಬಿದ್ದ ಡಬ್ಬಿಯೊಂದು. ಉಳಿದ ಹಲವಾರು ಡಬ್ಬಿಗಳು–ಗುಡು ಗುಡು ಗುಡು ಗೂಡ್ಸ್ ಗಾಡಿ–ಅನ್ನ ದೇವರಿಗೆ ಅವು ಮೀಸಲು. ಕೊನೆಯಲ್ಲಿ ಗಾರ್ಡು. ಬಳಿಯಲ್ಲೇ ಸುರುಳಿ ಸುತ್ತಿದ ಬಾವುಟಗಳು. ಕೈಯಲ್ಲಿ ಸುರುಳಿ ಹೊಗೆ ಬಿಡುತ್ತಿದ್ದ ಸಿಗರೇಟು . . .

ಯಾವುದೋ ಹಳೆಯ ಹಾಡಿನ ನೆನಪು ಅವನಿಗೆ :

'ದುನಿಯಾ ರಂಗ್ ರಂಗೇಲಿ ಬಾಬಾ ದುನಿಯಾ ರಂಗ್ ರಂಗೇಲಿ.'

* * * *

ಜುಕು ಜುಕು ಜುಕು . . .

ಸೇತುವೆಗಳ ಮೇಲಿಂದ, ಕಣಿವೆಯ ಮಾರ್ಗವಾಗಿ, ಬಯಲುಗಳನ್ನು ಹಾದು, ಬೆಟ್ಟಗಳನ್ನು ಕೊರೆದು ಧಾವಿಸುತ್ತಿತ್ತು. ಲೋಹದೈತ್ಯ, ಹತ್ತಿರದಿಂದ; ದೂರದ ನೋಟಕ್ಕೆ, ಸಾವಿರ ಕಾಲಿನ ಹುಳು.

ಗಾಡಿಗಿಂತ ಮುಂಚೆಯೇ ಸುದ್ದಿ ಹೋಗಿತ್ತು. ಸ್ವಾಗತಕ್ಕೆ ಸಿದ್ಧತೆಯಾಗಿತ್ತು. ಎಲ್ಲ ಊರುಗಳಲ್ಲೂ—ಬಾವುಟ—ಘೋಷಣೆ ಜಯಕಾರ. ರೈಲು ಎಲ್ಲಿಯೂ ನಿಲ್ಲದೆಯೇ ಸಾಗಿತು ! ಒಂದು ಊರಿನಿಂದ ಇನ್ನೊಂದು ಊರಿಗೆ. ಅಲ್ಲಿಂದ ಬೇರೊಂದು ಊರಿಗೆ. ಎದುರು ಬದಿಯಿಂದ ಬರುತಿದ್ದ ರೈಲುಗಾಡಿಗಳು ಸರಿದು ನಿಂತು 'ಫುಡ್ ಸ್ಪೆಷಲ್ಲಿಗೆ' ಹಾದಿಮಾಡಿ ಕೊಟ್ಟುವು. ಅಲ್ಲಲ್ಲಿ ಕಂಬಿ ಸರಿಪಡಿಸುತಿದ್ದ ಕೆಲಸಗಾರರು ದೂರ ಸರಿದು ನಿಂತರು. ಎಮ್ಮೆ ದನಗಳು ಕಂಬಿಯನ್ನು ದಾಟಲಿಲ್ಲ. ಜನ ಗಾಡಿಯನ್ನು ಕಂಡಲ್ಲೆಲ್ಲ ಕೈಬೀಸಿದರು, ಹರ್ಷಧ್ವನಿ ಮಾಡಿದರು, ಸಂತೋಷದಿಂದ ಕುಣಿದರು.

ಆ ಸಂತೋಷದಲ್ಲಿ ಭಾಗಿಗಳಾದ ಮೇಲೂ ಸಂದೇಹಗ್ರಸ್ತರು ಅಲ್ಲಲ್ಲಿ ಕೇಳುವುದಿತ್ತು :

'ಅನ್ನದೇವರು ಯಾವ ಊರಿಗೆ ಹೊರಟಿದ್ದಾರೆ ?'

ಉತ್ತರ ಸಿದ್ಧವಾಗಿರುತಿತ್ತು :

'ಯಾವ ಊರಿಗೆ ? ಅಯ್ಯೋ ಬೆಪ್ಪೆ ! ಕಾಣಿಸೋದಿಲ್ವೆ ? ಮುಂದಿನ ಊರಿಗೆ !'

ಅಲ್ಲಿಯೂ ಬಲ್ಲವರಿಂದ ಉತ್ತರ ಬಂತು :

'ಅಯ್ಯೋ ಬೆಪ್ಪೇ ! ಮುಂದಿನ ಊರಿಗೆ.'

ಹಾಗೆಯೇ ಮುಂದಕ್ಕೂ . . .

ಆ ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ. ಅಲ್ಲಿಂದ ಇನ್ನೊಂದಕ್ಕೆ-ಬಳಸಿಕೊಂಡು.

ಮೈಲೂರು, ಚಿತ್ರಾವತಿ, ಭದ್ರಾನಗರ, ಬಹಮನಿಪುರ . . .

ಎಲ್ಲೆಡೆಗಳಲ್ಲೂ ಅದೇ ವೈಭವಯುತ ಸ್ವಾಗತ.

ಜನ ಮಾತನಾಡಿಕೊಂಡರು :

'ಕುರುಡನಿಗೆ ದೃಷ್ಟಿ ಬಂದಂತಾಯ್ತು.'

'ಕತ್ತಲೇಲಿ ಬೆಳಕು ಕಂಡ ಹಾಗಾಯ್ತು.'

'ಇನ್ನು ಅಕ್ಕಿಯ ಅಭಾವ ಇಲ್ಲವಲ್ಲ!'

* * * *

ಅಂತೂ ಕೊನೆಗೊಮ್ಮೆ ರೈಲುಗಾಡಿ—ಹಗಲು ಇರುಳುಗಳ ಬಳಿಕ—ಒಂದೆಡೆ ತಂಗಬೇಕಾಯಿತು. ಅದಕ್ಕೆ ಕಾರಣವಿಷ್ಟೆ. ಅಲ್ಲಿಂದ ಮುಂದೆ ಹಾದಿ ಇರಲಿಲ್ಲ. ಅದೇ ಕೊನೆಯ ನಿಲ್ದಾಣ. ಭಾಗ್ಯನಗರದ ಕಾರ್ಯಕ್ರಮವನ್ನು ಮೀರಿಸಲೆತ್ನಿಸುವಂತಹ ಸಮಾರಂಭ ಏರ್ಪಟ್ಟಿತ್ತು ಆ ಊರಲ್ಲಿ. ಮಂತ್ರಿವರ್ಯರು ಮಾತ್ರ ಇರಲಿಲ್ಲ, ಅಷ್ಟೆ.

ಆಯಾಸಗೊಂಡು ಬಸವಳಿದಿದ್ದ ಗಾರ್ಡು, ಚಾಲಕರು ಕೆಳಗಿಳಿದರು. ತಮ್ಮ ಕೆಲಸ ಮುಗಿಯಿತೆಂದು ಅವರಿಗೆ ಸಮಾಧಾನವಾಗಿತ್ತು. ಅವರು ಮುಗುಳು ನಗಲಿಲ್ಲ. ಮಂತ್ರಿಗಳಂತೆ ಮುಗುಳು ನಕ್ಕು ಅವರಿಗೆ ಅಭ್ಯಾಸವಿರಲಿಲ್ಲ.

ಅಲ್ಲಿಯೂ ಒಬ್ಬಿಬ್ಬರು ಕೇಳಿದರು :

'ಎಲ್ಲಿದ್ದಾರೆ? ಎಲ್ಲಿದೆ?'

ಉತ್ತರವಿದ್ದೇ ಇತ್ತು :

'ಎಷ್ಟೊಂದು ಊರು ದಾಟಿ ಬಂದಿರೋದು! ಏನ್ಕಥೆ! ರೈಲುಗಾಡಿಯಾದರೂ ಇಲ್ಲೀತನಕ ಬಂತಲ್ಲಾ ಅಂತ ನಾವು ಸಂತೋಷಪಡ್ಬೇಕು.'

ಕೆಲವರಿಗೆ ಸಮಾಧಾನವಾಯಿತಾದರೂ ಅಲ್ಲೊಂದು ಇಲ್ಲೊಂದು ಸ್ವರ ಮತ್ತೂ ಕೇಳಿಸಿತು :

'ಎಲ್ಲಿ ದೇವರು? ಅನ್ನದೇವರು?'

ಉತ್ತರವಿರಲಿಲ್ಲ, ಆಕ್ಷೀಣ ಧ್ವನಿಯ ಪ್ರಶ್ನೆಗೆ.

ಚಿಲ್ಲರೆ ಅಕ್ಕಿಯನ್ನಿರಿಸಿದ್ದ ಡಬ್ಬಿಯಿಂದ ಬಲಿತ ಹೆಗ್ಗಣಗಳೆರಡು ಎದುರು ಮಗ್ಗುಲಿನಿಂದ ಕೆಳಕ್ಕೆ ಹಾರಿ ಊರು ಸೇರಿದುವು.

* * * *

'ಫುಡ್ ಸ್ಪೆಷಲ್ಲು' ಕಿಷ್ಕಿಂಧೆಯನ್ನು ಸುತ್ತಿ ದಿನಗಳು ಕಳೆದುವು.

ಶೆಟ್ಟರು ಎಂದಿನಂತೆ ಹೇಳಿದರು :

'ಅಕ್ಕಿ ಇದೆ. ಒಳ್ಳೇ ಅಕ್ಕಿ. ರೂಪಾಯಿಗೆ ಒಂದೂ ಕಾಲು ಸೇರು. ಇಡೀ ಪಲ್ಲ ತಗೊಳ್ಳೋದಾದರೆ—'

ಗಿರಾಕಿಗಳು ಮೆಲು ದನಿಯಲ್ಲಿ ಅಂದರು :

—'ಪತ್ರಿಕೆಗಳಲ್ಲಿ ಬಂದಿದೇ' . . .

—'ರೂಪಾಯಿಗೆ ಎರಡು ಸೇರಂತೇ.'

—'ಮಂತ್ರಿಗಳು ಹೇಳಿದಾರಂತೆ ಕಣ್ರೀ.'

ಶೆಟ್ಟರು ಆಗಲೂ ಶಾಂತ ಚಿತ್ತರಾಗಿಯೇ ಇದ್ದರು :

'ನಾವೇನ್ರಿ ಮಾಡೋದು? ಮಂಡಿಯಿಂದ ಇಷ್ಟಕ್ಕೆ ತಂದಿದೀವಿ. ಗಾಡಿ ಖರ್ಚು ಇಷ್ಟು. ನಮಗೆ ಮಾರ್ಜಿನು ಎಷ್ಟಪ್ಪಾ? ನೀವೇ ಲೆಕ್ಕ ಹಾಕಿ ನೋಡಿ.'

'ಏನಾಯಿತ್ರೀ ಹಾಗಾದ್ರೆ ರೈಲ್ನಲ್ಲಿ ಬಂದಿದ್ದು?'

'ಬಂದಿತ್ತೆ?'

'ಏನು ಹಾಗಂದ್ರೆ? ನಾನು ಕಣ್ಣಾರೆ ನೋಡಿದೀನಿ.'

'ಏನನ್ನ?'

'ರೈಲನ್ನ.'

'ಸರಿ ಮತ್ತೆ! ರೈಲಿದೆ!'

'ಅನ್ನ ದೇವರು?'

ಶೆಟ್ಟರ ಬದಲು ಗಿರಾಕಿಗಳಲ್ಲೇ ಒಬ್ಬ ಉತ್ತರವಿತ್ತ :

'ಅನ್ನ ದೇವರೆ? ಎಲ್ಲಾ ದೇವರ ಹಾಗೆಯೇ. ಎಲ್ಲಾ ಕಡೇಲೂ ಇರೋದು ನಿಜ. ಎಲ್ಲಿಯೂ ಕಾಣಿಸೋದಿಲ್ಲ, ಅದೂ ನಿಜ!'

## ಕಥೆ: ಒಂಭತ್ತು

# ಆ ಕಾಳ ರಾತ್ರಿ

ಅನಂತಯ್ಯ, ರುಕ್ಮಿಣಮ್ಮ, ಕಮಲ, ನಾಣಿ ಮತ್ತು ಬಾಲೂ ಈ ಐವರ ಕುಟುಂಬದ ಕತೆ ಇದು. ಮೊದಲು ನಾಲ್ವರು ಕತೆಯ ಹೆಚ್ಚಿನಂಶ ಹೇಳಿದ್ದಾರೆ. ಡಾಕ್ಟರ್ ಮಾಧವರಾವ್ ಆ ಕಾಳರಾತ್ರಿಯ ಬಗೆಗೆ ಹೇಳಿದ್ದಾರೆ. ಕೊನೆಯ ಮಾತು ನನ್ನದು.

### ಅನಂತಯ್ಯ

ಬನ್ನಿ, ಸಮೀಪ ಬನ್ನಿ... ರುಕ್ಕೂ, ರಾಯರಿಗೆ ಒಂದಿಷ್ಟು ಕಾಫಿ... ಯಾಕೆ ಬೇಡ? ಯಾವಾಗಲೂ ಹಾಗೇನೇ ನೀವು... ಏನು? ಕಿಟಿಕಿ ಕೊಂಚ ತೆರೆಯೋಣ ಎಂದಿರಾ? ಕಮ್ಲೂ ಕೊಂಚ ತೆರೆಯಮ್ಮಾ.

ಎನೀಮಿಯಾ ರಾಯರೇ... ಮೂವತ್ತೈದನೆ ವಯಸ್ಸಿನಿಂದ ಬೆಳೆಸ್ಕೊಂಡು ಬಂದಿದೇನೆ... ನಿಧಾನವಾಗಿ, ಕ್ರಮ ಪ್ರಕಾರ... ಈ ಹತ್ತು ವರ್ಷ ಕಾಲ. ಈ ರೆಕಾರ್ಡ್ ಕೀಪ‌ರ್ ಜೀವನ... ಎಷ್ಟು ಸಹಸ್ರ ಕುಟುಂಬಗಳ ಎಷ್ಟು ಸಹಸ್ರ ರೆಕಾರ್ಡ್‌ಗಳು... ಎಷ್ಟು ಮನೆಮುರಿದು ಹೋದುದನ್ನು ಈ ಕಣ್ಣಲ್ಲೇ ಕಂಡೆನೋ! ಆತ್ಮಹತ್ಯೆ ಮಾಡಿಕೊಂಡಿರುವವರು ಎಷ್ಟು ಜನವೋ...

ಬಾಲೂ ಹುಟ್ಟಿದಾಗ ನನಗೆ, ಇಪ್ಪತ್ತೈದು-ರುಕ್ಕೂಗೆ ಹದಿನೆಂಟು.... ಈಗ ನಮ್ಮ ಕಮ್ಲೂ ಇಲ್ವೇ... ಹಾಗೇನೆ ಅಷ್ಟೇ ಎತ್ತರ, ಅಷ್ಟೇ ಪ್ರಾಯ, ತದ್ರೂಪ... ಆಂ! ಆಯಾಸಾನಪ್ಪಾ... ಎಲ್ಲಿ, ಒಂದು ಚಮಚ ಬಾರ್ಲಿ ನೀರು...

ಸುಮ್ಮನಿರಿ ಅಂತೀರಾ? ಹೋಗಿ ಇವರೆ. ಎಷ್ಟೋ ದಿನ ಆದ್ಮೇಲೆ ಬಂದಿದೀರಾ. ಮಾತಾಡದೆ ಇರಲೆ? ಇಪ್ಪತ್ತೆರಡನೇ ದಿನ ಈ ಹೊತ್ತು. ನೆನ್ನೆ ತಾನೇ ಮುಖಕ್ಷೌರ ಮಾಡಿಸ್ಕೊಂಡೆ... ಸುಸ್ತಾಗಿದ್ದ ಜೀವ

ಹಾಸಿಗೆ ಹಿಡೀತು. ಏನೋ ನಿಶ್ಯಕ್ತಿ ವಾಸಿಯಾಗುತ್ತೆ ಅಂತ ಇದ್ದರೆ, ಹಾಳು ಶನಿ ಹೀಗೂ ವಕ್ರಿಸಬೇಕೇ... ಏನೇನು ಔಷಧಿ ಕುಡಿದ್ನೋ ಈ ಜನ್ಮದಲ್ಲಿ ... ಏನೇನು ಔಷಧೀನೋ... ಆ ಭಗವಂತನಿಗೇ ಗೊತ್ತು...

...ಕ್ಯಾಷುವಲ್ ಲೀವ್, ಪ್ರಿವಿಲೇಜ್ ಲೀವ್ ಎಲ್ಲ ಮುಗಿದ್ಹೋಗಿತ್ತು... ಈಗ ಲೀವ್ ವಿತೌಟ್ ಪೇ... ಸಾಲದ್ದಕ್ಕೆ ನಮ್ಮ ಬಾಲೂ ಎಸ್. ಎಸ್. ಎಲ್. ಸಿ. ಪರೀಕ್ಷೆ ಕಟ್ಟಿದ್ದ... ತುಂಬ ದಿಗಿಲು... ನೆನ್ನೆ ತಾನೇ ಮೈಸೂರಿಗೆ ಹೋದ... ಅವನ ಚಿಕ್ಕಪ್ಪ ಬಾಂತ ಬರೆದಿದ್ದ. ಏನಾದರೂ ಕೆಲಸ ನೋಡಬಹುದೂಂತ... ಕಮಲಿ ಮದುವೆ... ಈ ವರ್ಷಾನಾದರೂ ಮಾಡಬೇಡ್ವೆ? ವಿದ್ಯಾಭ್ಯಾಸಾನೋ ನಾಲ್ಕನೇ ಫಾರಂ ನಲ್ಲೇ ನಿಂತುಬಿಡ್ತು. ಬಾಲೂಗೆ ತಾನೆ ವಿದ್ಯೆ ಬೇಕಾದ್ದು?... ಆದರೆ ಈಗನ ಹುಡುಗರಿಗೆ ಇಂಟರ್ ಮೀಡಿಯೆಟ್ ಓದಿರೋ ಹುಡುಗೀರೇ ಬೇಕಂತೆ...

...ಎಲ್ಲೀ ಕಮಲೂ? ಕೊಂಚ ಬೀದಿಗೆ ಹೋಗ್ಬಿಟ್ಟು ಬಾರಮ್ಮಾ, ಡಾಕ್ಟ್ರು ಬಂದ್ರೇನೋ...

...ಚಿನ್ನದಂಥ ಹುಡುಗಿ ರಾಯರೇ... ಒಬ್ಬಳೇನೇ ದೇವ್ರು ಕೊಟ್ಟಿರೋದು... ಆಕೇನ ಒಳ್ಳೇ ಗಂಡನ ಮನೇಗೆ ಕಳಿಸೋಕೆ ಆಗದೆ ಹೋಯಿತೇ...

...ಈ ವರ್ಷ ಹೇಗಾದರೂ ಮದುವೆ ಮುಗಿಸಿ ಬಿಡಬೇಕೂಂತಿದ್ದೆ. ವರದಕ್ಷಿಣೆಗೇಂತ ಒಂದು ಸಾವಿರ ಸಾಲಾನೂ ಮಾಡೋಣಾಂತಿದ್ದೆ ... ಮುಂದಿನ ವರ್ಷ ಬಾಲೂಗೆ ಎಲ್ಲಿಂದಾದರೂ ಹುಡುಗೀನ ತಂದು ಆ ಸಾಲ ತೀರಿಸೋದು... ಆದರೆ ಏರ್ಪಾಟುಮಾಡೋಣ ಅನ್ನೋದ್ರಲ್ಲೇ ಬಂತು ಈ ಕಾಯಿಲೇ...

...ನೀವು ಚೆನ್ನಾಗಿದ್ದೀರಾ? ಮನೇಲಿ ಎಲ್ಲರೂ... ಅಂತೂ ಸುಖವಾಗಿರೀಪ್ಪಾ... ಇಲ್ಲಿ ನಾನು ಹುಷಾರಾಗ್ತೀನಿ... ಇನ್ನೇನು ನಾಲ್ಕು ದಿನ ... ಎದ್ಬಿಡ್ತೀನಿ... ಯುಗಾದಿ ಹೊತ್ತಿಗೆ ಅನಂತಯ್ಯ ಓಡಾಡದೆ ಇರೋಕಾಗುತ್ಯೆ? ಯಾವ ವಾರಾನೋ ಯುಗಾದಿ... ಹೂಂ. ಶನಿವಾರ ವಂತೆ... ಬನ್ನೀಪ್ಪಾ... ಊಟಕ್ಕಲ್ವೆ ಹೋ ! ದ್ಮೂ ನೂ ... ಹಾಗೇ ಬಂದ್ಬಿಟ್ಟು ಹೋಗಿ...

...ಹೂಂ. ಹೋಗಿ...ಒಳಗೇನೆ ಕಾಫಿ ತಗೊಂಡರಾಯಿತು....

ಏ ರುಕ್ಕೂ...ರಾಯರು ಹೊರಡ್ತಾರಂತೆ...ಕಮ್ಲೂ—ನಾಣಿ ಬಸ್ ಸ್ಟ್ಯಾಂಡ್ ತನಕ ಹೋಗಿ ಇವರನ್ನು ಬಿಟ್ಬಿಟ್ಟು ಬನ್ನಿ...ಇಲ್ಲ. ನಾನು ಏಳೋಲ್ಲ...ಮಲಗೇ ಇರ್ತೀನಿ...ತುಂಬಾ ಆಯಾಸ...ಏ ಪರಮಾತ್ಮ...

## ರುಕ್ಮಿಣಮ್ಮ

ನೀವು ಅಳಬೇಡ ಅಂತೀರಿ...ಆದರೆ ನಾನೇನು ಕಲ್ಲೆ? ಮರವೆ? ಹೇಗೆ ಸಹಿಸೋದು? ಹಿರಿಯರ ಪುಣ್ಯದಿಂದ ಎಲ್ಲ ಸರಿಹೋಯಿತು... ಇವತ್ತು ಇಷ್ಟಾದ್ರೂ ಮಾತಾಡಿದ್ದಾರೆ. ನಿಮ್ಮನ್ನು ಗುರುತುಹಿಡಿದಿದ್ದಾರೆ...

ಆದರೆ ಮೊನ್ನೆ, ಮೊನ್ನೆ...ಅಯ್ಯೋ...ಅಷ್ಟು ದಿನ ಕಳೆದದ್ದೇ.. ಏನಾದರೂ ಆಗಿದ್ದರೆ-ಅನಾಹುತ ಆಗಿದ್ದರೆ-ಅಯ್ಯೋ-

ಇಲ್ಲಪ್ಪ ಅಳೋದಿಲ್ಲ; ಅಪ್ಪಾ, ನೀನು ನನ್ನ ತಮ್ಮ ಇದ್ದ ಹಾಗೆ... ನಿನ್ನಂಥವರು ನಾಲ್ಕು ಜನ ಈ ಪ್ರಪಂಚದಲ್ಲಿ ಇಲ್ಲದೇ ಇದ್ರೆ ಬದುಕೋದುಂಟೆ?

ಆ ಮನೆಯ ಯಜಮಾನನೋ...ಆ ಮಹರಾಯ ಕಟುಕ.. ಮೂರು ತಿಂಗಳ ಬಾಡಿಗೆ ಬಾಕೀಂತ ಹಿಂಸೆ ಕೊಡ್ತಿದಾನೆ...ಅವರು ಪ್ರಜ್ಞೆ ಇಲ್ದೆ ಮಲಗಿದ್ದಾಗ್ಲೂ ಬಂದು, ಮನೆ ಖಾಲಿ ಮಾಡೀಂತಂದ; ಯುಗಾದಿಗೆ ಬೇರೆಯವರಿಗೆ ಬಾಡ್ಗೆಗೆ ಕೊಡ್ತೀನೀಂತಂದ; ಆ ಒಂದೇ ಒಂದು ಹಳೇ ಧರ್ಮಾವರ ಸೀರೇನ ಮೂರು ಕಾಸಿಗೆ ಕೊಟ್ಟೆದ್ದಾಯಿತಪ್ಪಾ...ಅಂತೂ ಇನ್ನು ಎರಡು ತಿಂಗಳ ಬಾಡಿಗೆ ಬಾಕೀನೇ...

...ಸಂಪಾದ್ನೋದು ಇನ್ನು ಯಾವತ್ತೊ...ಬಾಲೂ...ಉ!... ನಾಣೀನೂ ಈ ವರ್ಷ ಲೋಯರ್ ಸೆಂಕೆಂಡರಿ...ಮುಂದೆ ಹೇಗಪ್ಪಾ ಓದ್ಸೋದು...

...ಮನಸ್ಸು ಕಠಿನವಾಗುತ್ತೆ ಒಮ್ಮೊಮ್ಮೆ...ಯಾತಕ್ಕೆ ಈ ಮಕ್ಕಳು ಹುಟ್ಟಿದುವೋ...ಸದ್ಯ ಕಮ್ಲೂ ಹುಟ್ಟಿದ್ಮೇಲೆ ಎರಡನ್ನೂ ಯಮರಾಯ ಕಣ್ಣು ತೆರೆಯೋಕೆ ಮುಂಚೇನೆ ತಗೊಂಡು ಹೋದ. ಇಲ್ದೇ ಹೋಗಿದ್ರೆ ಇವಿಷ್ಟೂ ಮಕ್ಕಳ ಬವಣೆ ನೋಡೋದಕ್ಕಾಗ್ತಿತ್ತೆ?

...ಯುಗಾದೀನಂತೆ, ನಾಡಿದ್ದು...ಏನು ಯುಗಾದೀನೋ! ಅಂತೂ ಮಕ್ಕಳ ಭಾಗ್ಯ-ಕಮಲೂ ಭಾಗ್ಯ-ಅವರು ಪಾರಾಗಿದ್ದಾರಲ್ಲಾ...

...ರಿಲಾಪ್ಸೆ? ಹಾಗೇಂತಂದ್ರೆ?...ಅಯ್ಯೋ, ಇಲ್ಲಪ್ಪ...ಸರಿಯಾಗಿ ನೋಡ್ಕೋತೀವಿ ನಮ್ಮಪ್ಪ...ಏನೂ ತಿನ್ನಿಸೋಲ್ಲ...ಹೋಗ್ಬಿಟ್ಟು ಬಾ... ಮರೀಬೇಡಾಣ್ಣಾ...ಯುಗಾದಿ ದಿನ ಬಂದ್ಬಿಡು...ಕಮ್ಲೂ, ನಾಣಿ, ಅಣ್ಣನ ಜೊತೇಲಿ ಅಷ್ಟು ದೂರ ಹೋಗ್ಬಿಟ್ಟು ಬನ್ನೀಪ್ಪಾ...

## ಕಮಲ

ಇನ್ನೂ ಒಂದಷ್ಟು ಪುಸ್ತಕ ತಗೊಂಡು ಬನ್ನಿ ಅಣ್ಣ...ಅದೊಂದೇನೆ ನನಗಿರೋ ಸುಖ...ಈ ಮೂರು ತಿಂಗಳು ಒಂದೇ ಒಂದು ಸಿನಿಮಾ ನೋಡಿಲ್ಲ...ಒಬ್ಬಳೇ ಒಬ್ಬ ಸ್ನೇಹಿತೆಯ ಮನೆಗೂ ಹೋಗಿಲ್ಲ...ಈ ಚಿಂದಿ ಉಟ್ಕೊಂಡು ಹೇಗೆ ಹೋಗಲಿ?...ಇರೋದು ಎರಡೇ ಸೀರೆ. ಒಂದನ್ನ ನೋಡಿ ಇನ್ನೊಂದು ಹಲ್ಕಿಸೀತಾ ಇದೆ... ಈ ಒಂದು ವರ್ಷವೆಲ್ಲಾ ಚಪ್ಪಲಿಕೊಂಡಿಲ್ಲ. ಅಪ್ಪನಿಗೆ ಬರೋ ಐವತ್ತನಾಲ್ಕರಲ್ಲಿ ಏನನ್ನ ಕೊಳ್ಳೋದು, ಏನನ್ನ ಬಿಡೋದು...

...ಓ, ಯಾವುದೊ ಬಸ್ಸು ಬರ್ತಾ ಇದೆ. ಈ ಬಸ್ನಲ್ಲಿ ಹೋಗ್ತೀರಾ? ಅದರಲ್ಲಿ ಐದಾಣೆ...ಸಿಟಿಮಾರ್ಕೆಟ್ ಬಸ್ನಲ್ಲಿಹೆ ೞೀಗಿ...ಮೂರಾಣೆ, ಅಲ್ಲಿಂದ ಚಾಮರಾಜಪೇಟೆಗೆ ನಡೆದರಾಯ್ತು...ಇಲ್ಲ ಈ ಬಸ್ಸಲ್ಲ... ಇನ್ನೊಂದು ಬರುತ್ತೆ...

ತಿಂಡೀನೇ? ಬೇಡಿ, ನಾವೇನೂ ತಿನ್ನೋಲ್ಲ...ಕೋಪಿಸ್ಕೋಬೇಡಿ... ಅಮ್ಮ ಗಲಾಟೆ ಮಾಡ್ತಾಳೆ... ಅಪ್ಪನೂ ಒಪ್ಪೋಲ್ಲ... ಹೋಟ್ಲಿನ ತಿಂಡಿ ತಿನ್ಬಾರ್ದು...ಬೇಡಿ...ಬೇಕಾದರೆ ಯಾವುದಾದ್ರೂ ಮಾಸಪತ್ರಿಕೆ ತೆಗಿಸ್ಕೊಡಿ...

## ನಾಣಿ

ನಾನು ಮುಟ್ಕೊಲ್ಲಮ್ಮ...ಒಂದು ರೂಪಾಯೀನೋ! ಓಹೋ ಬೇಡಿ...ಹಾಗೆ ದುಡ್ಡು ತಗೋಬಾರ್ದು...ಒಂದು ಪೆನ್ಸಿಲು ತೆಗಿಸಿಕೊಡಿ ಸಾಕು...

ಮುಂದಿನ ವರ್ಷ ಹೈಸ್ಕೂಲಿಗೆ ಹೋಗ್ಬೇಕು...ಆಮೇಲೆ ಕಾಲೇಜು... ಇಂಜನಿಯರಾಗ್ತೀನಿ. . .

ಅಂತೂ ಮೊದಲು ಕಮ್ಲೂ ಮದುವೆ. . ಅದು ಮುಖ್ಯ. ಹಾಗೇಂತ ಅಪ್ಪಯ್ಯ ಯಾವಾಗ್ಲೂ ಹೇಳ್ತಾನೆ ಇರ್ತಾನೆ. . .

ಬಸ್ಸು ಬಂದ್ಬಿಡ್ತು. . .ಅಣ್ಣ ಹೊರಡ್ತೀರಾ?. . .ಯುಗಾದಿ ದಿವಸ ಬನ್ನಿ. . .ನಮಸ್ತೆ. . .ನಮಸ್ತೆ. . .

## ಕತೆಗಾರ

ನಾನು ಶ್ರೀಮಂತನಲ್ಲ; ಕ್ಷುದ್ರಸಾಹಿತ್ಯ ನಿರ್ಮಾಣ ಮಾಡಿ ಆ ಮಸಾಲೆ ಮಾರಿದರೆ ಮಾತ್ರ ದುಡ್ಡು ಬರುವ ಕಾಲ ಇದು. ಆದರೂ ಬರೆದು ಬದುಕುವ ಸಾಹಸಿ ನಾನು. . .ಯುಗಾದಿ ಬಂದಾಗ ಆ ಖರ್ಚು, ಈ ಖರ್ಚು ಇಲ್ಲದಿರುವುದುಂಟೆ? ಹಬ್ಬ ಮೊಹರಂ ಇರಲಿ, ಕ್ರಿಸ್‌ಮಸ್ ಇರಲಿ, ಖರ್ಚು ಖರ್ಚೇ.

ಹಾಗಂತಲೇ ಯುಗಾದಿ ದಿನ ಅನಂತಯ್ಯನ ಮನೆ ಹುಡುಗರಿಗೆ ಉಡುಗೊರೆಯೆಂದು ಎರಡು ಮೂರು ಪೊಟ್ಟಣಗಳನ್ನು ಸಿದ್ಧಪಡಿಸಿದೆ. ಅದು ಏನೆಂದು ಹೇಳಿ ನನ್ನ ಬಂಡವಾಳ ತೋರಿಸಿಕೊಳ್ಳುವ ಇಷ್ಟವಿಲ್ಲ.

ಮಲ್ಲೇಶ್ವರದ ಹಾದಿ ಹಿಡಿದು ಅವರ ಮನೆಗೆ ಹೋದೆ, ಬೀಗ ಹಾಕಿತ್ತು. ಮನೆ ಮಾಲಿಕ ಅವರನ್ನು ಹೊರ ಹಾಕಿರಬಹುದೇ? ಎಂಬ ಶಂಕೆ ಮೂಡಿತು. ವಿಚಾರಿಸಿದೆ. ಅದೇ ಬೆಳಗ್ಗೆ ಅನಂತಯ್ಯನನ್ನು ಆಸ್ಪತ್ರೆ ಸೇರಿಸಿದರೆಂದೂ ಮನೆಯವರೆಲ್ಲ ಅಲ್ಲಿದ್ದಾರೆಂದೂ ತಿಳಿಯಿತು. ಮನಸ್ಸಿಗೆ ತುಂಬಾ ಕಸಿವಿಸಿಯಾಯಿತು. ಅಂತೂ ಯಾವುದರ ಬಗೆಗೆ ನಾನು ಭಯಪಟ್ಟಿದ್ದೆನೊ ಅದೇ ಸಂಭವಿಸಬೇಕೆ?

ಸಿಟಿ ಮಾರ್ಕೆಟ್ ಬಸ್ ಹಿಡಿದು, ಬಂದಿಳಿದು, ನಾನು ಆಸ್ಪತ್ರೆ ಸೇರಿದೆ. ಹುಡುಕುವುದು ಕಷ್ಟವಾಗಲಿಲ್ಲ. ಜನರಲ್ ವಾರ್ಡಿನಲ್ಲಿ ಒಂದು ಮೂಲೆಯಲ್ಲಿ ಒಂದು ಮಂಚದ ಮೇಲೆ ಅನಂತಯ್ಯನನ್ನು ಮಲಗಿಸಿದ್ದರು. ಅದೊಂದು ಎಲುಬುಗೂಡು.

ಬಲು ಕಠಿನವಾಗಿ ಶ್ವಾಸೋಛ್ವಾಸವಾಗುತಿತ್ತು. ಮೈ ಕೆಂಡದಂತೆ ಕಾದಿತ್ತು. ಆಂ-ಊಂ ಎಂದು ನರಳುತಿದ್ದರು. ಮಾತಾಡಲೆಂದು

ಬಾಯ್ತೆರೆಯುತಿದ್ದರು. ಸ್ವರ ಬರುತ್ತಿರಲಿಲ್ಲ. ಗಂಟಲಷ್ಟೇ ಗರಗರ ಎನ್ನುತ್ತಿತ್ತು.

ನನ್ನನ್ನು ನೋಡಿದ ತಾಯಿ ಮಕ್ಕಳು ಗೋಳೋ ಎಂದು ಅಳತೊಡಗಿದರು.

ಯುಗಾದಿ ಆ ದಿನ. ನನ್ನ ಉಡುಗೊರೆಗಳು ಯಾರಿಗೆ ಬೇಕಿದ್ದುವು? 'ಅಳಬೇಡಿ, ಅಳಬೇಡಿ ಏನೂ ಆಗೊಲ್ಲ' ಎಂದು ಸಂತೈಸಿದೆ. ಆದರೆ ನನ್ನ ಮನಸ್ಸು ಮಾತ್ರ ಗಾಬರಿಗೊಂಡಿತ್ತು.

ಹೊರಟು ಬರುವಂತೆ ಬಾಲೂಗೆ ಆಗಲೇ ತಂತಿ ಕಳಿಸುವುದಾಗಿ ಹೇಳಿದೆ. 'ನಾಣಿ, ಬಾ ನಮ್ಮಲ್ಲಿಗೆ ಹೊಗೋಣ' ಎಂದೆ. ರುಕ್ಮಿಣಮ್ಮನೂ 'ಅಣ್ಣನ ಜೊತೆಯಲ್ಲಿ ಹೋಗಪ್ಪ' ಎಂದರು. ಆತ ಕೊಟ್ಟ ಉತ್ತರ ಒಂದೇ: "ಊಹೂಂ. ಅಪ್ಪಯ್ಯನ್ನ ಬಿಟ್ಟು ಹೋಗೊಲ್ಲ."

ಆದರೆ ಅಪ್ಪಯ್ಯ ಅವರೆಲ್ಲರನ್ನೂ ಬಿಟ್ಟು—

ಮರುದಿನ ಮಧ್ಯಾಹ್ನ ಪುನಃ ಆಸ್ಪತ್ರೆಗೆ ಹೋದೆ. ಬೆಡ್ ಖಾಲಿಯಾಗಿತ್ತು. ಡಾಕ್ಟರ್ ಮಾಧೂರಾವ್ ಸಮೀಪ ಬಂದು ಹೆಗಲ ಮೇಲೆ ಕೈಯಿರಿಸಿ "ರಾವ್, ಅವರು ನಿಮ್ಮ ಸಂಬಂಧಿಕರೆ?" ಎಂದು ಕೇಳಿದರು.

"ಅಲ್ಲ, ಸ್ನೇಹಿತರು" ಎಂದೆ ನಾನು.

"ಓ..." ಎನ್ನುತ್ತ ಅವರು ವಿವರಿಸಿದರು.

## ಡಾಕ್ಟರ್ ಮಾಧೂರಾವ್

ಒಂದು ಗಂಟೆಯ ಹಿಂದೆ ಆ ಬಡಪಾಯಿ ಕಣ್ಣುಮುಚ್ಚಿಕೊಂಡ. ಕಳೆದ ರಾತ್ರಿಯೊಂದು ಭೀಕರ ರಾತ್ರಿ ಮಿಸ್ಟರ್ ಇವರೇ; ಭೀಕರ. ನನ್ನ ಕಣ್ಣು ನೋಡಿದಿರಾ? ಎಷ್ಟು ಕೆಂಪಾಗಿದೆ! ರೆಪ್ಪೆ ಮುಚ್ಚದೆ ರಾತ್ರಿ ಇಡೀ ಸೀನಿಯರ್ ಫಿಸಿಶಿಯನ್, ನಾನು ಮತ್ತು ಇನ್ನೊಬ್ಬರು, ಆ ರೋಗಿ, ಸಾವಿನೊಡನೆ ಹೋರಾಡಿದೆವು... ನ್ಯುಮೋನಿಯಾ ರಿ ಲಾ ಪ್ಸ್ ಆಗಿ, ಬಂದಿತ್ತು ಡಬ್ಬಲ್ ನ್ಯುಮೋನಿಯಾ... ಪ್ಲಾಸ್ಟರ್ ಹಾಕಿದೆವು; ಪೆನ್‌ಸಿಲಿನ್ ಇಂಜೆಕ್ಷನ್ ಕೊಟ್ಟೆವು. ಗ್ಲೂಕೋಸ್ ಇಂಜೆಕ್ಷನ್ ಕೂಡಾ... ಆಮೇಲೆ ಬ್ಲಡ್ ಟ್ರಾನ್ಸ್‌ಫ್ಯೂಷನ್. ಎಂಥ ಕೇಸು! ಎಂಥ ನೋವು! ವೇದನೆ... ಏನೇನು ಆಸೆಗಳಿದ್ದವೋ ಆ ಜೀವಕ್ಕೆ; ಎಷ್ಟು ಚಡಪಡಿಸ್ತು

ಗೊತ್ತೆ? ಆ ಉನ್ಮಾದವೊ! ಹಾ-ಹ ಎನ್ನುತ್ತ ಆ ಕೈ ಎಲುಬು, ಭೀಮ ಬಲ ಬಂದಂತೆ ಎತ್ತಿ ಎತ್ತಿ ಬೀಸುತಿತ್ತು; ಹತ್ತಿರ ಬರುತ್ತಿದ್ದ ಸಾವನ್ನು ದೂರಕ್ಕೆ ಓಡಿಸೋಹಾಗೆ.

ಏನಂದಿರಿ? ಏನು ಕಾರಣವೆಂದೆ?

ಏನು ಕಾರಣ! ಆ ರೋಗ ಎನೀಮಿಯಾ... ಮೊದಲೇ ನಿಶ್ಯಕ್ತಿ... ಮೂರು ನಾಲ್ಕು ವಾರಕ್ಕೆ ಹಿಂದೆ ಜ್ವರ ಬಂದಾಗಲೇ ಆಸ್ಪತ್ರೆ ಸೇರಿಸಬೇಕಾಗಿತ್ತು... ಗೊತ್ತು, ಖರ್ಚು-ಎನ್ನುತ್ತೀರಿ ನೀವು... ಎಲ್ಲ ಕೇಸುಗಳೂ ಹಾಗೇನೇ... ಕೊನೆ ಸ್ಥಿತೀಲೇ ಇಲ್ಲಿಗೆ ಬರೋದು... ಆದರೂ ನಾವು ವಿಶ್ವಯತ್ನ ಮಾಡಿದ್ದಾಯ್ತು.

ಹತ್ತು ವರ್ಷಗಳಿಂದ ಅಂಟಿಕೊಂಡಿದ್ದು, ಬಲಗೊಂಡದ್ದು. ಹತ್ತು ವರ್ಷ! ಯುದ್ಧದ ವರ್ಷಗಳು ಮಿಸ್ಟರ್ ಇವರೇ. ಮ್ಯಾಲ್ ನುಟ್ರಿಶನ್... ಪೌಷ್ಟಿಕದ ಅಭಾವ... ಚಿಂತೆ, ಭೀತಿ, ಸಂಕಷ್ಟ... ನಾನೂ ನೋಡಿ ನೋಡಿ ಸಾಕಾಯ್ತು... ಎಷ್ಟೊಂದು ಕೇಸುಗಳು! ಎಲ್ಲಾ ಒಂದೇ ಥರ... ಎಲ್ಲಾ ಈ ಯುದ್ಧ ವರ್ಷಗಳ ಹುತಾತ್ಮರು... ಇನ್ನು ಈ ತಲೆ ಮಾರಿನ ಮಕ್ಕಳೋ... ಮೈ ಗಾಡ್!

ಸಾರಿ ಮಿಸ್ಟರ್ ಇವರೇ... ನಿಮ್ಮ ಸ್ನೇಹಿತರ ವಿಷಯ ಶುರು ಮಾಡಿ ಇನ್ನೆಲ್ಲಿಗೋ ಬಂದೆ. ಒಮ್ಮೊಮ್ಮೆ ಮನಸ್ಸು ರೋಸಿಹೋಗುತ್ತೆ. ಸಹಿಸೊಕ್ಕಾಗೋದಿಲ್ಲ. ಪಾಪ! ಆ ಹೆಂಗಸು, ಆ ಮದುವೆಯಾಗದ ಮಗಳು, ಆ ಮಗು! ಆತ ಒಬ್ಬನೇನಂತೆ ಸಂಪಾದನೆ ಮಾಡ್ತಿದ್ದಾತ.

ಆ ತಾಯಿ ಮತ್ತು ಮಕ್ಕಳು ಬೆಳಗ್ಗಿನವರೆಗೂ ಎಚ್ಚತ್ತೇ ಇದ್ರು. ಎಂಥ ಭಯ—ಎಂಥ ಆಸೆ ಅವರಿಗೆ! ಆತನೂ ಅಷ್ಟೆ. ಖಂಡಿತ ಸಾಯೋಕೆ ಇಷ್ಟವಿರಲಿಲ್ಲ. ಆ ಕಣ್ಣುಗಳು ಹೊರಳಾಡುತ್ತಿದ್ದ ರೀತೀನೋ. ಈ ಜೀವನದಲ್ಲಿ ಎಷ್ಟೋ ಸಾವು ನೋವು ನೋಡಿದ್ದೇನೆ. ಆದರೆ ಸೋರೇ ಕಾಯಿ ಆಗಿದ್ದ ಆ ಹುಡುಗಿ ಮುಖ ನೋಡಿ ನನ್ನ ಕರುಳು ಕಿವಿಚಿಕೊಳ್ತಿತ್ತು.

ಈ ದಿನ ಬೆಳಗ್ಗೆ ರೋಗಿ ಕೊಂಚ ಶಾಂತವಾಗಿದ್ದ ಹಾಗೆ ಕಂಡಿತು. ಬಿರುಗಾಳಿಗೆ ಮೊದಲು ಬರುವ ಶಾಂತಿ ಗೊತ್ತೇ ಇದೆಯಲ್ಲ! ಆದರೆ

ತಾಯಿ, ಮಗಳು, ಆ ಹುಡುಗ ಗಂಡಾಂತರ ಕಳೀತು, ಕಾಳರಾತ್ರಿ ಕಳೆದು ಬೆಳಗಾಯಿತು.

ನಿಧಾನವಾಗಿ ಉಸಿರಾಡುವುದು ಕಡಮೆಯಾಗುತ್ತಾ ಬಂತು. ಆಕ್ಸಿಜನ್ ಕೊಟ್ಟೆವು . . . ಲಾಸ್ಟ್ ಛಾನ್ಸ್ . . . ಅಲ್ಲಿಗಾಯಿತು.

ತುಂಬ ದುಃಖವಾಗುತ್ತೆ ಮಿಸ್ಟರ್ ಇವರೇ. ನಿಮ್ಮ ಸ್ನೇಹಿತರು . . .

## ಕತೆಗಾರ

ಹೌದು ; ನನ್ನ ಸ್ನೇಹಿತರು. ಬಾಲೂ ಮೈಸೂರಿನಿಂದ ಬಂದಿದ್ದಾನೆ. ಯಾರೂ ಯಾರನ್ನೊ ಕೂಡಿಸಿದ್ದಾನೆ.

'ಮಾರ್ಗ್'ನಲ್ಲಿ ಶವವನ್ನಿರಿಸಿದ್ದಾರೆ. ಇನ್ನು ಬಾಡಿಗೆ ಕೊಡದೆ ಇರುವ ತಮ್ಮ ಮನೆಗೆ ಒಯ್ಯಬೇಕು. ಅಲ್ಲಿಂದ ಮಸಣಕ್ಕೆ.

ನಾನು ಅವರ ಜನವಲ್ಲ; ನನಗೆ 'ಜಾತಿ' ಇಲ್ಲ. ಆದರೆ ನಾನು ಅವರ ಸ್ನೇಹಿತ. ಮಸಣಕ್ಕೆ ಅವರ ಜೊತೆಯಲ್ಲಿ ನಾನೂ ನಡೆಯುವೆ.

ಆ ತಾಯಿಯೋ, ಅತ್ತು ಅತ್ತು ಆ ಕೊಡ ಬರಿದಾಗಿದೆ; ಆ ಮಗಳು—ತಂಗಿ, ನಿನ್ನ ಮುಖವನ್ನು ಏನೆಂದು ಹೇಗೆಂದು ನೋಡಲಿ?

ಇಂಜಿನಿಯರಾಗಲಿದ್ದ ಆ ಮಗು?

ಇದಕ್ಕೆಲ್ಲಕ್ಕೂ ನಾನೇ ಹೊಣೆಯೆಂಬ ಮಹಾಪರಾಧದ ಭಾವನೆ ನನ್ನನ್ನು ಬಾಧಿಸುತ್ತಿದೆ.

ಆ ಕುಟುಂಬದ ಪಾಲಿಗೆ ಕಳೆದ ಒಂದು ರಾತ್ರಿ ಕಾಳರಾತ್ರಿಯಾಯಿತು. ಆದರೆ ಆ ರಾತ್ರಿ ಬರೇ ಹನ್ನೆರಡು ಗಂಟೆಗಳ ಕಾಲಾವಧಿಯ ರಾತ್ರಿ ಖಂಡಿತವಾಗಿಯೂ ಅಲ್ಲ.

ಈ ದಿನ ಒಂದು ಕುಟುಂಬದ ಮೇಲೆ ಈ ಪ್ರೇತವಸ್ತ್ರ; ಒಂದು ಬೆಡ್ ಖಾಲಿ. ನಾಳೆ ಇನ್ನೊಂದು ಕುಟುಂಬದ ಮೇಲೆ ಈ ಪ್ರೇತವಸ್ತ್ರ; ಇನ್ನೊಂದು ಬೆಡ್ ಖಾಲಿ.

ಎಂದ ವಿಷಚಕ್ರ! ಕಾಳರಾತ್ರಿಯ, ಉರಿ ಹಗಲಿನ, ಮತ್ತೆ ಕಾಳ ರಾತ್ರಿಯ ಎಂಥ ವಿಷಚಕ್ರ!

. . . ಯುಗಾದಿಯ ಮರುದಿನ ಇದು. ನಾನು ದಿಙ್ಮೂಢನಾಗಿದ್ದೇನೆ. ಚಂದ್ರನದೊಂದು ಅರ್ಧವರ್ತುಲರೇಖೆ ಮುಚ್ಚಂಜೆಯಾದಾಗ ಕಾಣಿಸುತ್ತಿದೆ.

. . . ಯುದ್ಧವರ್ಷಗಳ ಆಹಾರಾಭಾವ, ರೋಗ, ರುಜಿನ, ನೋವು-ಸಾವು . . .

. . . ಮಸಣಕ್ಕೆ ಆ ದೀರ್ಘ ನಡಿಗೆ.

. . . ಚಿತೆಯುರಿಯಿತು. ಆ ಅಳುರೋದನ, ಹಾಹಾಕಾರ. ಆ ನಶ್ವರ ದೇಹದೊಡನೆ ಅಪೂರ್ಣ ಆಶೆಗಳೂ ಉರಿದುಹೋದುವು. ಎಲ್ಲ ಹಂಬಲಗಳೂ ಭಸ್ಮವಾದುವು.

ಅದು ಕಾಳರಾತ್ರಿ ಕೊಳ್ಳುವ ಬಲಿದಾನ. ಉಷೆಯ ಕಿರಣದ ವಜ್ರಾಘಾತವಾಗುವವರೆಗೂ ಕಾಳರಾತ್ರಿಯದೇ ದಮನರಾಜ್ಯ.

ಅನಂತಯ್ಯ, ರುಕ್ಮಿಣಮ್ಮ, ಕಮಲ, ನಾಣಿ ಮತ್ತು ಬಾಲೂ – ಈ ಐವರ ಕುಟುಂಬದ ಕಥೆ ಇದು. ಮಗುಚಿಕೊಂಡ ಸಣ್ಣ ಮನುಷ್ಯನ ದೊಡ್ಡ ಜೀವಕ್ಕೆ ಸಂಬಂಧಿಸಿದ ಅಧ್ಯಾಯ.

## ಕಥೆ: ಹತ್ತು

# ಒಂಟಿ ನಕ್ಷತ್ರ ನಕ್ಕಿತು

ಶುಭ ಮುಹೂರ್ತ ಸನ್ನಿಹಿತವಾಗಿತ್ತು.

ಅಡ್ಡಪಂಚೆಯ ಮೇಲೆ ರೇಶಿಮೆಯ ಅಂಗಿತೊಟ್ಟು, ರಾಮು ಗುಡಿಸಲಿನಿಂದ ಹೊರಬಂದ. ಮದುವೆಗೆಂದು ಹಿಂದೆ ಹೊಲಿಸಿದ್ದ ಆ ಅಂಗಿ, ಬೆಳೆದ ಮೈ ಮಾಂಸಖಂಡಗಳಿಗೆ ಹೊದಿಕೆಯಾಗಿ ಈಗ ಬಿರಿಯುತ್ತಿತ್ತು. ತುಂಬು ಮುಖಕ್ಕೆ ಶೋಭೆಯಾಗಿತ್ತು ಕುಡಿಮೀಸೆ. ನೀಳವಾಗಿತ್ತು ತಲೆಗೂದಲು.

ಅಲ್ಲಿಯೇ ಹಿತ್ತಿಲ ಬೇಲಿಗೊರಗಿ ನಿಂತಿದ್ದ ಲಚ್ಚಿ, ನೋವಿನ ಆಯಾಸದ ನಿಟ್ಟುಸಿರನ್ನು ಬಿಟ್ಟು, ಕಾತರ ತುಂಬಿದ ಧ್ವನಿಯಲ್ಲಿ ಕೇಳಿದಳು:

"ನೀವೂ ಓಗ್ತೀರಾ?"

"ಊಂ. ಬಿರ್ನೆ ಬಂದ್ಬಿಡ್ತೀವಿ," ಎನ್ನುತ್ತ ಆತ, ಗುಡಿಸಲ ಕಡೆಗೆ ನೋಡಿ, ಅಸಹನೆಯ ಸ್ವರದಲ್ಲಿ ಕರೆದ:

"ಅಪ್ಪಾ! ಒತ್ತಾಗೋಯ್ತು! ಒರಡಾನ!"

ಹೊರಬಂದವನು ಮನೆಯ ಹಿರಿಯ. ಮಾಸಿದ ಪಂಚೆ. ಹರಕಲು ಅಂಗಿಯ ಮೇಲಿದ್ದ ಹಳೆಯ ಕೋಟು. ಇಳಿಮುಖವಾಗಿದ್ದ ಬಿಳಿಮೀಸೆ. ಸುಕ್ಕುಗಳನ್ನು ಆವರಿಸಿದ್ದ ನರೆತ ಗಡ್ಡ. ತೆಳ್ಳಗಾಗಿದ್ದ ತಲೆಗೂದಲನ್ನು ಮುಚ್ಚಿದ್ದ ರುಮಾಲು. ಅಪನಂಬಿಕೆಯೆ ನೆಟ್ಟನೋಟವಾಗಿ ಹೆಪ್ಪುಗಟ್ಟಿದ್ದ ಕಣ್ಣುಗಳು. ಎಕ್ಕಡ ಮೆಟ್ಟಿ ಆತನೆಂದ:

"ನಡಿ."

ಸೊಸೆಯನ್ನು ಹುಡುಕಿಬಂದ ಮನೆಯೊಡತಿ, ಬಾಗಿಲಲ್ಲೆ ತಡೆದು ನಿಂತಳು. ಮನೆಬಿಟ್ಟು ಹೊರಟಿದ್ದ ಮಗನನ್ನೂ ತನ್ನವನನ್ನೂ ಕಂಡಳು:

ಅವಳನ್ನು ದಿಟ್ಟಿಸಿ ಹಿರಿಯನೆಂದ:

"ಅದೇನೈತೋ ನೋಡ್ಬರ್ತೀನಿ."

. . . ಬಿಸಿಲು. ಸೂರ್ಯ ನೆತ್ತಿಯಾಚೆಗೆ ಆಗಲೆ ಸರಿದಿದ್ದರೂ ಚುರುಕುಮುಟ್ಟಿಸುತ್ತಿದ್ದ ಖಾರಬಿಸಿಲು. ಬೇಸಗೆಯೇನೊ ಮುಗಿಯುತ್ತ ಬಂದಿತ್ತು. ಆದರೆ, ಮೋಡಗಳ ಸುಳಿವಿರಲಿಲ್ಲ. ಹಾದಿ ನಡೆಯುತ್ತಿದ್ದ ಹಿರಿಯನನ್ನು, ಎಂದಿನ ಸಂಕಟವೇ ಇಂದೂ ಬಾಧಿಸಿತು. ಮತ್ತೂ ಹತ್ತಾರು ದಿನ ಮಳೆ ಬರದೇ ಹೋದರೆ? ಈ ಸಲದ ಬಿತ್ತನೆಯ ಗತಿ? ವರ್ಷಕ್ಕೊಂದೇ ಆದ ಪೈರಿನ ಗತಿ? . . . ಗುಡ್ಡದ ಮರೆಯಲ್ಲಿ ಕ್ಷಾಮರಾಕ್ಷಸ ಹೊಂಚುಹಾಕುತ್ತ ಅಡಗಿ ಕುಳಿತಿದ್ದ. ತಾಯ್ನೆಲ ಛಣಗುಡುತ್ತಿತ್ತು. ಪರೆಕಳಚಿದ ಹಾವು, ಪ್ರಕೃತಿ. ಉದ್ದಕ್ಕೂ ಒರಗಿತ್ತು ಆ ಶ್ವೇತ ಕವಚ. ಪುಡಿಪುಡಿಯಾಗಿದ್ದ ಕಣಕಣವಾಗಿದ್ದ ಕಾಲುಹಾದಿ. ದಾರಿ ತುಳಿಯುತ್ತ ಆ ಬಿಳಿಯ ಗೆರೆಯನ್ನು ಹಿರಿಯ ನೋಡಿದ. ದೃಷ್ಟಿಯೊಡನೆ ನಡುಬಾಗಿತು. ಹೃದಯದ ಭಾರದಿಂದ ತಪ್ಪಿಸಿಕೊಂಡ ಬಿಸಿಯುಸಿರು ದೀರ್ಘವಾಗಿ ಹೊರ ಬಂತು.

ಹಿರಿಯನ ಸಂಕಟವನ್ನು ಗ್ರಹಿಸಿದ ರಾಮು, ಕನಸಿನ ಲೋಕದಿಂದ ಕೆಳಕ್ಕಿಳಿದು ಬಂದ. ಎಂದಿಗಿಂತ ಭಿನ್ನವಾದ ಆ ದಿನದಲ್ಲೂ ಆ ಹೊತ್ತಿನಲ್ಲೂ ಹಾಗಿರಬೇಕೆ ತನ್ನ ತಂದೆ?

" ಏನಪ್ಪಾ ಅದು ? "

" ಈ ದುರ್ಗತಿ ನಮಗೆ ಬಂತಲ್ಲಾ ಅಂತ್ಹ ಯೋಚಿಸ್ತಿದ್ದೆ, ಮಗಾ."

" ಸಾಕು, ಸಾಕು ! ನಿನ್ನದು ಯಾವಾಗಲೂ ಒಂದೇ ಹಾಡು ! "

ಬಿಸಿಲಿನಷ್ಟೇ ಬಿಸಿಯಾಗಿದ್ದ ಉಗುಳನ್ನು ಹಿರಿಯ ನುಂಗಿದ. ' ಉಚ್ಮಂಡೆ ! ' ಎಂದುಕೊಂಡ ಮನಸಿನಲ್ಲೆ. ' ಒಂದೇ ಹಾಡು ' . . . ಹೂಂ . . . ಹೀಗಾಗಬಹುದೂಂತ ಯಾರಿಗೆ ಗೊತ್ತಿತ್ತು? ತನ್ನ ಹಿರಿಯ ಮಗನಿಗೇ ಈ ರೀತಿ ಹುಚ್ಚು ಹಿಡಿಯುವುದೆಂದರೆ? ಸಾಲದುದಕ್ಕೆ, ಶಹರದಲ್ಲಿ ಓದುತ್ತಿದ್ದ ಎರಡನೆಯ ಮಗ ಕೃಷ್ಣನೂ ಕೂಡಾ . . .

' ಕಲಿಗಾಲ . . . '

## ೨

ಕೆಟ್ಟ ಸುದ್ದಿಯನ್ನು ಕೇಳಿದ ಆ ದಿನ, ತನ್ನ ಓರಗೆಯವರೆಷ್ಟೋ ಜನ ನಕ್ಕಿದ್ದರು.

—'ಆದರೆ ಹೋದರೆ, ಅಜ್ಜಿಗೆ ಮೀಸೆ ಬಂದರೆ . . . !'

—'ಐ—ಬಿಡಿ!'

ಗಾಳಿಯಲ್ಲಿ ಸುದ್ದಿ, ತೇಲಿ ಬಂದಿತ್ತು—ತೇಲಿ ಹೋಗಿತ್ತು.

ಸ್ವಲ್ಪ ಸಮಯದ ಅನಂತರ, ಅದನ್ನೆಲ್ಲರೂ ಮರೆತಿದ್ದ ಹೊತ್ತಿಗೆ, ಹೊಸ ಜನ ಅಲ್ಲಿಗೆ ಬಂದರು—ಹ್ಯಾಟು ಬೂಟು ತೊಟ್ಟ ಅಪರಿಚಿತರು. ಅವರ ಹಿಂದೂ ಮುಂದೂ ಓಡಾಡಿದರು ಗ್ರಾಮಾಧಿಕಾರಿಗಳು.

—'ಹಳ್ಳಿಯನ್ನು ಬಿಟ್ಟು ಹೋಗ್ಬೇಕು.'

—['ಆಹಾ! ಎಲ್ಲಿಗೆ? ಯಾರಪ್ಪನ ಮನೆಗೆ?']

—'ಏ ಗೌಡ! ನೀನೊಬ್ಬನೇ ಅಲ್ಲ ಕಣಯ್ಯ!'

—'ರೀ, ಗೌರವ ಕೊಟ್ಟು ಮಾತನಾಡಿ.'

—'Oh! I see!'

—'ಒಟ್ಟು ಹನ್ನೆರಡು ಹಳ್ಳಿ ಖಾಲಿಯಾಗ್ತವೆ.'

—'ಅನ್ನೆರಡು ಅಳ್ಳಿ?'

—'ಹೂ. ದೇಸಾಯರು, ಜೋಡೀದಾರ್ರು, ಇನಾಂದಾರ್ರು—ಎಲ್ರೂ ಒಪ್ಕೊಂಡಿದಾರೆ. ಸಣ್ಣ ಪುಟ್ಟ ಆಸ್ತಿ ಪಾಸ್ತಿ ಇರೋ ನಿಮ್ಮದೇನಪ್ಪ ಇನ್ನು?'

ಮಹಾ ಬುದ್ಧಿವಂತರೇ ಸರಿ. ಚತುರೋಪಾಯಗಳೂ ಗೊತ್ತಿದ್ದುವು ಅವರಿಗೆ. ಪರಿಹಾರ-ಹಣ. 'ಬೇರೆ ಕಡೆ ಭೂಮಿ ಕೊಂಡ್ಕೋಬಹುದು.' ಅಥವಾ ಹೊಲಕ್ಕೆ ಬದಲು ಹೊಲ. [ಬಂಜರು ಭೂಮಿಗೇನು ಬರಗಾಲ?] ಸಾವಿರಾರು ಜನರಿಗೆ ಕೆಲಸ ಬೇರೆ.

"ಕೆಲಸ? ಎಂಥ ಕೆಲಸ?"

"ಕೂಲಿ ಕೆಲಸ."

"ಕೂಲಿ—? ನಾವು ರೈತರು. ಕೂಲಿ-ನಾಲಿ ಮಾಡೋವರಲ್ಲ!"

"ಈ ರೈತರಿಗೆ ಒಂದೂ ಅರ್ಥವಾಗೋದಿಲ್ಲ."

"ಹುಂ!"

"ಈ ಹಳ್ಳಿಗಳೆಲ್ಲ ನೀರಿನ ಕೆಳಗೆ ಮುಳುಗುತ್ವೆ ಗೌಡರೆ!"

"ನೀರಿನ ಕೆಳಗೆ? ಮುಳುಗುತ್ವೆ?"

"ಹೌದು. ಸಾವಿರ ಎಕರೆ ಮುಳುಗಿದರೇನ್ರಿ? ಲಕ್ಷ ಎಕರೆ ಭೂಮಿಗೆ ನೀರು ಸಿಗುತ್ತೆ. ಅಷ್ಟೇ ಅಲ್ಲ—"

"ಸಾಕು! ಸಾಕು!"

ಸಿಡಿಮಿಡಿಗೊಂಡ ತಾನು ದಡದಡನೆ ಅಲ್ಲಿಂದ ಹೊರಟುಬಿಟ್ಟಿದ್ದ. ರಾಮು ಮಾತ್ರ, ಆ ಜನರ ಜತೆಯಲ್ಲೇ, ಮಾತುಗಳಿಗೆ ಕಿವಿಗೊಡುತ್ತ, ನಿಂತಿದ್ದ. ಹುಚ್ಮುಂಡೆ! ಕತ್ತಲಾಗುವ ಹೊತ್ತಿಗೆ ಮನೆಗೆ ಬಂದ.

"ಅಲ್ಲೇನೊ ಮಾಡ್ತಿದ್ದೆ ಇಷ್ಹೊತ್ತು?"

"ಇಕಾ, ಕಾಜಗ ಕೊಟ್ಟವ್ರೆ. ಇದರೊಳಗೆಲ್ಲಾ ಪಿರಿಂಟ್ ಮಾಡೈತೆ."

"ಪಿರಿಂಟ್ ಮಾಡೈತೆ—ಮಣ್ಣು!"

* * * *

ಮುಂದೆ ಆಗಬೇಕಾಗಿದ್ದುದು ಆಗಿಯೇಹೋಯಿತು. ರಾಮು ಪಲ್ಲವಿ ನುಡಿದ:

"ನಡಿ, ಓಗಾನ. ಎಲ್ಲಾರಿಗಾಗೋದು ನಮಗೂ ಆಗ್ತೇತೆ."

ಹೊಲವನ್ನು ಮಾರಲಿಲ್ಲ ನಾನು. ಬದಲಿ ಭೂಮಿಯನ್ನು ಕೊಟ್ಟರು. ಮೂರೆಕರೆಗೆ ಮೂರೆಕರೆ. ನದಿಯ ದಂಡೆಯಲ್ಲಿ ಅಲ್ಲ. ಕೆಳಕ್ಕೆ, ಒಳಕ್ಕೆ.

ಹುಟ್ಟಿ ಬೆಳೆದ ಹಳ್ಳಿಯ ಹನುಮಂತರಾಯನ ಗುಡಿಯ ಮುಂದೆ ನಿಂತು ನಾನೆಂದೆ:

"ಓಗ್ಬರ್ತೀವಪ್ಪಾ. ಅಳ್ಳಿ ಮುಣಿಗಿಸ್ತೌರಿದು. ನಿನ್ನನ್ನ ಮುಣಿಗಿಸೋಕಾತದಾ? ಮನಿಸ್ಯರು ತಿಳೀದೆ ತಪ್ಮಾಡ್ತಾ ಅವರೆ. ಕ್ಸಮ್ಸಪ್ಪಾ..."

ವಲಸೆ ಬಂದವರನ್ನು ಅಣಕಿಸಿತು ಬರಿದಾಗಿದ್ದ ಹೊಸ ಮಣ್ಣು. ಆ ನೆಲಕ್ಕೆ ಕೈ ಬಡೆದು, ಅಂಥ ಸ್ಥಿತಿಗೆ ನಮ್ಮನ್ನು ತಂದವರಿಗೆ ನಾನು ಶಾಪವಿತ್ತೆ; ಹಣೆ ಚಚ್ಚಿಕೊಂಡು ಮನದಣಿಯೆ ಅತ್ತೆ.

... ಆ ದಿವಸದಿಂದ ಇವತ್ತಿನವರೆಗೆ—ಈ ಮೂರು ವರ್ಷಗಳ ಕಾಲ—ಏನನ್ನೆಲ್ಲಾ ಕಂಡೆ ನಾನು!

ಮೊದಮೊದಲು, ಎಲ್ಲೋ ಕೇಳಿದ ಯಾವುದೋ ಸುದ್ದಿ ಎನ್ನುವ ಹಾಗೆ–ಬಳಿಕ ಉತ್ಸಾಹದಿಂದ–ನನ್ನ ಮಗ ರಾಮನೇ ಬಂದು ಹೇಳುತ್ತಿದ್ದ:

" ಎಲ್ರೂ ಬಂದ್ಬಿಟ್ಟವ್ರೆ. ನದೀಲಿ ತಳ ಎಷ್ಟು ಆಳಕ್ಕೈತೆ ಅಂತ ಭೈರಿಗೆ ಕೊರೆದು ನೋಡ್ತವ್ರೆ. ದೊಡ್ಡೊಡ್ಡ ಲಾರಿಗ್ಳು ಬಂದವೆ—ಅತ್ತಿಪ್ಪತ್ತು. ಮಿಸ್ನಗಳು ಯಂತ್ರಗಳೂ ಬಂದ್ಬಿಟ್ಟವೆ. ಅದೇನೋ ಕ್ರೇನೂಂತ ತಗೊಂಡ್ಬಂದವ್ರೆ ಅಪ್ಪಾ. ತೆಂಗಿನಮರದಂಗೆ ಎತ್ತರಕ್ಕೈತೆ. ಎಂಗ್ಬೇಕಾದರೂ ತಿರುಗ್ತೇತೆ. ಕೈಯಿಂದ ಕಡ್ಡೀನ ಇಂಗೆತ್ತಿ ಅಂಗ್ಮಡ್ಗಾಕಿಲ್ವಾ ನಾವು?—ಅಂಗೇನೆ, ಎಸ್ಟ್ ಬಾರದ್ದಾಸಮಾನಿದ್ರೂ ಒಂದ್ಕಡೆಯಿಂದ ಇನ್ನೊಂದ್ಕಡೆಗಿಡ್ತೇತೆ."

ನಮ್ಮ ನದಿ. ಬೇಸಗೆಯಲ್ಲಿ ಕಿರುಬೆರಳಿನಷ್ಟು ನೀರು. ಮಳೆ ಬಂದಾಗ ಕೆರಳಿದ ಮಹಾಕಾಳಿ. ಏನಾದರೇನು ? ಮನುಷ್ಯ ಮಾಡುವ ತಪ್ಪಿಗೆ, ಅದು ದೇವರು ಕೊಡುವ ಶಿಕ್ಷೆ. ಅಂಥ ದೇವರ ಶಕ್ತಿಯೊಡನೆ ಈ ಜನರ ಸೆಣಸಾಟ. ನಾಸ್ತಿಕರು ! ಹುಂ !

ರಾಮನೆಂದ :

" ಹಾಫೀಸರ್‌ಗಳಲ್ಲಿ ಬಿರಾಮರು, ಲಿಂಗವಂತರು, ಒಕ್ಕಲಿಗರು, ಸಾಬರು, ಕಿರಸ್ತಾನರು—ಎಲ್ಲ ಜಾತಿಯವರೂ ಅವರೆ."

ಕಟ್ಟುನಿಟ್ಟಾಗಿ ನಾನೆಂದೆ :

" ಅವರ ಜತೆ ನೀನು ಸೇರ್ಕೋಬ್ಯಾಡ."

ದಿನ ಕಳೆದ ಹಾಗೆ ಜನರೆಲ್ಲ ಅವರ ಜತೆ ಸೇರಿದರು. ಕೆಲಸದ ಜಾಗಕ್ಕೆ ಅಂಟಿಕೊಂಡೇ ಊರು ಹುಟ್ಟಿತು. ಎಲ್ಲೆಲ್ಲಿಂದಲೊ ಜನರು ಬಂದರು. ಸಾವಿರ—ಹತ್ತು ಸಾವಿರ—ಇಪ್ಪತ್ತು ಸಾವಿರ ಜನ. ಹೆಣ್ಣಾಳು, ಗಂಡಾಳು. ಹಟ್ಟಿಗಳನ್ನು ಕಟ್ಟಿದರು. ಜತೆಯಲ್ಲೆ ಹೋಟೆಲು ಬಂತು . . . ದಿನಸಿನಂಗಡಿ, ಹೆಂಡದಂಗಡಿ . . . ಮಣ್ಣು ಅಗೆಯುವವರು, ಕಲ್ಲು ಒಡೆಯುವವರು . . . ಮನುಷ್ಯರು, ಯಂತ್ರಗಳು. ಕಿವಿ ಕಿವುಡಾಗುವ ಹಾಗೆ ಹಗಲೆಲ್ಲ ಸದ್ದು. ಮಣ್ಣುತೋಡಿ ಕಲ್ಲಿರಿಸಿದರು. ಕಲ್ಲು, ಗಾರೆ; ಕಲ್ಲು ಗಾರೆ.

' ಮಳೆ ಬರಲಿ, ಆಗ ತಿಳೀತದೆ,' ಎಂದುಕೊಂಡೆ.

ಮಳೆ ಬಂತು. ಕಟ್ಟಿದ್ದು ಮಿಸುಕಲಿಲ್ಲ.

ನವರಾತ್ರಿಯ ರಜೆಯಲ್ಲಿ ಮನೆಗೆ ಬಂದ ಕೃಷ್ಣನೆಂದ :

"ಅಣೆಕಟ್ಟು ಕಟ್ಟಿದ್ಮೇಲೆ ಮಹಾಪೂರ ಬರೋದಿಲ್ಲ. ಕಾಲಿವೆ ಕಡಿದು, ಊರೂರಿಗೆ ನೀರು ತಗೊಂಡು ಹೋಗ್ತಾರೆ. ಎಲ್ಲೆಲ್ಲೂ ಬೆಳೆ ಬೆಳೀತದೆ. ವಿದ್ಯುಚ್ಛಕ್ತಿ ಉತ್ಪಾದಿಸ್ತಾರೆ. ಮನೆ ಮನೆಗೆ ದೀಪ ಬರ್ತದೆ. ಕಾರ್ಖಾನೆಗಳು ಹುಟ್ಕೊಳ್ತವೆ. ನದೀಲಿ ದೊಡ್ಡ ದೊಡ್ಡ ದೋಣಿಗಳು ಸಂಚಾರ ಮಾಡ್ತವೆ."

ರೇಗುತ್ತ ನಾನೆಂದೆ:

"ನಮ್ಮ ಅಳ್ಳಿ ಏನಾಗ್ತೇತೆ?"

"ಹಳ್ಳಿ ಮುಳುಗೋಗ್ತದೆ."

"ಅಂಗಂತೀಯಾ ನೀನೂ?"

"ಈ ಪುಸ್ತಕದಲ್ಲಿ ಬರೆದವರೆ."

"ಉಚ್ಮುಂಡೆ! ನಿನ್ನ ಪುಸ್ತಕನ ಸುಡ್ತು!"

ಹುಡುಗರು ಮೊದಲು ಕೆಟ್ಟರು. ವಯಸ್ಸಾದವರು ಆಮೇಲೆ. ಲೋಕ ತಲೆ ಕೆಳಗಾಗಿ ಹಾಳಾಗುತ್ತಿದ್ದುದನ್ನು ನೋಡಲು ನಾನೊಬ್ಬನೆ ಉಳಿದೆ ಎನಿಸಿತು . . .

ಭೂಮಿತಾಯಿ ಮುನಿದಳು. ಅರೆ ಹೊಟ್ಟೆ ಕೆಡವಿದಳು.

. . . ವರ್ಷ ಒಂದಾಯಿತು. ಅನಂತರವೂ ಒಂದು. ನದಿಗೆ ಅಡ್ಡವಾಗಿ ಮರಳಿನ ಗೋಡೆ ಕಟ್ಟಿ, ಅದರ ಹಾದಿಯನ್ನೆ ಬದಲು ಮಾಡಿದರು. ಎರಡೂ ಕಡೆಗಳಿಂದ ಬಂದಿದ್ದ ಅಣೆಕಟ್ಟು ನಡುವೆ ಕೂಡಿಕೊಂಡಿತು. ನೀರು ನಿಂತು ಕೆರೆಯಾಯಿತು. ನದಿ ಆಳವಾಯಿತು.

ಆಗ ಬಲ್ಲಿದನಾಗಿದ್ದ ರಾಮುನನ್ನು, ಕೆಣಕಿ ಕೇಳಿದೆ:

"ಅಳ್ಳಿಗಳನ್ನ ಯಾವತ್ತು ಮುಣುಗಿಸ್ತಾರೆ?"

"ಇನ್ನೇನು ಮುಣುಗೋಗ್ತವೆ."

"ಉಂ! ಅನುಮಂತರಾಯನ ಗುಡಿಯೊಳಕ್ಕೆ ನೀರು ನುಗ್ಲಿ. ಆಮ್ಯಾಕೆ ಯೇಳ್ತೀನಿ!"

ಗುಡಿಯೊಳಕ್ಕೆ ನೀರು ನುಗ್ಗಿತು. ಗುಡಿ ಮುಳುಗಿತು. ಹನುಮಂತರಾಯ ಆಕ್ಷೇಪಿಸಲಿಲ್ಲ. ಕೆರೆ ಸರೋವರವಾಯಿತು. ಸರೋವರ ನೀರ ಸಾಗರವಾಯಿತು. ದೇವರು ತುಟಿಪಿಟ್ಟೆನ್ನಲಿಲ್ಲ.

ನನ್ನೊಳಗಿನದೇನೋ ಕುಸಿದುಬಿದ್ದಂತಾಯಿತು.

ನಾನು ಕಾಹಿಲೆ ಮಲಗಿದುದು ಆಗಲೇ . . .

* * * *

ನಿಶ್ಶಕ್ತನಾಗಿ ಎದ್ದ ಬಳಿಕ, ಅಣೆಕಟ್ಟಿನ ಪ್ರಸ್ತಾಪವನ್ನೇ ಹಿರಿಯ ಮಾಡಲಿಲ್ಲ. ಬದುಕಿನಲ್ಲಿ ಆತ ಒಂದಿಷ್ಟಾದರೂ ಆಸಕ್ತಿ ತೋರಲು ಕಾರಣ, ಅದೇ ಮೊದಲ ಬಾರಿ ಸೊಸೆ ಲಚ್ಚಿಗೆ ನೀರು ನಿಂತುದು. ರಾಮನ ಮುಖದ ಮೇಲೆ ಆಗ ಮೂಡಿದ ಮುಗುಳುನಗೆ, ಕರಿಯ ಕಲ್ಲಿನಲ್ಲಿ ಕೊರೆದ ನಿತ್ಯ ಮಲ್ಲಿಗೆಯಾಯಿತು . . .

ಕಿಂವದಂತಿಯ ಕೀಚಲು ಧ್ವನಿ ಕೇಳಿಸಿತೊಮ್ಮೆ:

" ನರಬಲಿ ಕೊಡ್ತಾರಂತಪ್ಪೋ ! ಅಯ್ಯಪ್ಪೋ ! "

ಎಳೆಯರು—ಮೂರನೆಯವನಾದ ಒಬ್ಬ ಹುಡುಗ, ಕೊನೆಯ ಸಂತಾನವಾದ ಹುಡುಗಿ—ಮನೆಯಲ್ಲೇ ಬಂದಿಗಳಾದರು. ತುಂಬಿದ ಬಸುರಿ ಲಚ್ಚಿ, ಹಿತ್ತಲು ದಾಟಿ ಹೊರಕ್ಕಿಳಿಯಲಿಲ್ಲ.

" ಸುಮ್ಸುಮ್ನೆ ಪುಕಾರು ಉಟ್ಟಿಸ್ತಾರೆ," ಎಂದ ರಾಮು.

ಆದರೆ, ಕೆಲಸವೆಲ್ಲ ಮುಗಿಯುತ್ತ ಬಂದಂತೆ, ಒಂದು ಯಂತ್ರ ದಡಿಗೆ ಬಿದ್ದ ಇಬ್ಬರು ಆಳುಗಳು ಬಲಿಯಾದಾಗ, ಜನರೆಲ್ಲ ಕ್ಷಣ ಕಾಲ ಉಸಿರು ಬಿಗಿಹಿಡಿದರು . . .

. . .

. . . ಅಂತೂ ಕೊನೆಗೊಮ್ಮೆ ಬಂದಿತ್ತು ಆ ಘಳಿಗೆ.

ತಂದೆಯನ್ನು ಕರೆದವನು ರಾಮನೇ.

" ನಾನ್ಯಾಕೊ ಬರ್ಲಿ ? "

" ಇಲ್ಲ ಅಪ್ಪ, ನೀನು ನಿನ್ನ ಕಣ್ಣಿಂದ್ಲೇ ನೋಡ್ಬೇಕು."

ಅದಕ್ಕೇ ಆತ ತನ್ನಾಕೆಗೆ ಹೇಳಿದ್ದ.

" ಅದೇನೈತೋ ನೋಡ್ಬರ್ತೀನಿ."

೩

ಅವರನ್ನು ಹಾದು ಮುಂದೆಹೋದವರು—ಓಡುತ್ತ ಹೋದವರು—ಹಲವರು. ಹುಡುಗರಿಗೆ ಯುವಕರಿಗೆ ಮುದುಕರಿಗೆ—ಎಲ್ಲರಿಗೂ ಎಲ್ಲಿಲ್ಲದ ಉತ್ಸಾಹ. ತಗ್ಗಿನಿಂದ ಮೇಲಕ್ಕೆ ನಡೆದು ಬಂದಂತೆ ಅವರ ಕಣ್ಣಿಗೆ ಬಿತ್ತು-ಸಹಸ್ರ ಜನರನ್ನು ಹೊತ್ತು ಎತ್ತರದಲ್ಲಿ ಭವ್ಯವಾಗಿ ನಿಂತಿದ್ದ ಅಣೆಕಟ್ಟು. ಮೇಲೂ ಜನರು, ಕೆಳಗೂ ಜನರು. ಒಂದೇ ಕಡೆ ನೆರೆದಿತ್ತು, ಹತ್ತೂರುಗಳ ಜಾತ್ರೆ. ನೀರಿನ ಅಲೆಗಳು, ಮಾತಿನ ಹಾಡಿನ ಅಲೆಗಳು. ಹರ್ಷೋದ್ಗಾರ, ಜಯಜಯಕಾರ. ನಗೆ—ಎಲ್ಲ ಜನರಿಂದಲೂ ಹೊರಟು, ವಿರಾಟ್‌ರೂಪ ತಳೆದು, ಗಿರಿಕಂದರ ಕಾನನಗಳನ್ನು ಕುಲುಕಿ ಅಲುಗಿಸಿ ನಗಿಸುತ್ತಿದ್ದ ನಗೆ. ತಳಿರುತೋರಣಗಳು, ಬಣ್ಣದ ಕಾಗದಗಳು. ನದಿಯ ಕತ್ತಿಗೆ ನೂರು ಹಾರಗಳಾಗಿದ್ದವು, ಸೂರ್ಯನ ಕೊನೆಯ ರಶ್ಮಿಗೆ ಮಿನುಗುತಿದ್ದ ಗಾಜಿನ ದೀಪಗಳು.

ಮೇಲೆ ಹೋಗಲು ಹಾದಿಯಿರಲಿಲ್ಲ, ಜಾಗವಿರಲಿಲ್ಲ.

"ತಡವಾಗಿ ಬಂದ್ವಿ," ಎಂದು ರಾಮು ಗೊಣಗಿದ.

"ಏನು ಕೊಳ್ಳೆ ಹೋದದ್ದು? ಇಲ್ಲೇ ಇರಾನ," ಎಂದ ಹಿರಿಯ.

ಜಲಾಶಯದೊಳಕ್ಕೆ ಸೂರ್ಯ ಧುಮುಕಿರಬೇಕು. ಒಮ್ಮೆಲೆ, ಕತ್ತಲಾಯಿತು. ಮತ್ತೆ ಒಮ್ಮೆಲೆ, ಗಾಜಿನ ಬುರುಡೆಗಳೆಲ್ಲ ದೀಪದ ಉಂಡೆಗಳಾದುವು. ನದಿಯ ಕೊರಳಹಾರಗಳ ಹಲವು ಸಹಸ್ರ ಮಣಿಗಳು ವರ್ಣರಂಜಿತವಾಗಿ ಬೆಳಗಿದುವು.

ಆಗ ಇದ್ದಕ್ಕಿದಂತೆ, ರುದ್ರಕಡಲು ಭೋರ್ಗರೆಯುತ್ತ ಏರಿ ಬಂದಂತಹ ಸದ್ದಾಯಿತು.

ಹಿರಿಯನ ಅಂಗಾಂಗಗಳು ತಣ್ಣಗಾದುವು.

[ಶಿಕ್ಷೆ ವಿಧಿಸಲು ಆ ಘಳಿಗೆಯನ್ನೆ ಆರಿಸಿದ್ದನೆ ದೇವರು?]

"ಅಗೋ!" ಎಂದ ರಾಮು, ಉಳಿದೆಲ್ಲ ಸದ್ದನ್ನೂ ಮೀರಿಸುವ ಏರು ದನಿಯಲ್ಲಿ.

ಅಣೆಕಟ್ಟೆನೆರಡು ತೆರೆದ ದ್ವಾರಗಳಿಂದ, ಕೋಟಿ ಶ್ವೇತಾಶ್ವಗಳು ಕರ್ಣ ಭೇದಕವಾಗಿ ಕೆನೆಯುತ್ತ, ಬಾಯಿಗಳಿಂದ ನೊರೆಯುಗುಳುತ್ತ, ಮುನ್ನುಗ್ಗಿ

ತ್ತಿದ್ದುವು. ಕುಪ್ಪಳಿಸುತ್ತ ಹಾರುತ್ತ ಕಿಲಕಿಲನೆ ನಗುತ್ತ ನೀರು ಧುಮು ಧುಮುಸಿ ಹರಿಯಿತು, ಕಾಲುವೆಗಳಲ್ಲಿ, ಉಪಕಾಲುವೆಗಳಲ್ಲಿ.

ಎಚ್ಚತ್ತ ಹಿರಿಯ "ಓ್ಹ್!" ಎಂದ.

ಬಾಗಿದ್ದ ನಡು ನಿಡಿದುಕೊಂಡಿತು. ಜಡವಾಗಿದ್ದ ಕಾಲುಗಳು ಚೇತನಗೊಂಡುವು.

ಆತ ಮತ್ತೆ ಅಂದ: "ಓ್ಹ್! ಓ್ಹ್!"

ದೂರಕ್ಕೆ ದೂರಕ್ಕೆ ಆತನ ಹೊಲಗಳಿದ್ದ ಕಡೆಗೂ ನೀರು ಧಾವಿಸಿತು.

ಬೇರೊಂದನ್ನೂ ಗಮನಿಸದೆ ಹಿರಿಯ ಆ ನೀರನ್ನೆ ನೋಡಿದ; ಆ ನೀರಿನ ಹಿಂದೆಯೇ ಓಡಿದ.

ತಂದೆಯಷ್ಟೇ ವೇಗವಾಗಿ ಓಡುವುದು ರಾಮನಿಗೂ ಕಷ್ಟವೆನಿಸಿತು.

. . . ಗುಡಿಸಲ ಮುಂದೆ ರಾಮನ ತಾಯಿ ನಿಂತಿದ್ದಳು. ಚಿಕ್ಕ ಹುಡುಗನಂತೆ ಓಡುತ್ತ ಬಂದ ಗಂಡನನ್ನು ನೋಡಿ ಆಕೆಯೆಂದಳು:

"ಲಚ್ಚಿಗೆ ಎರಿಗೆಯಾಯ್ತು! ಗಂಡು ಮಗು!"

"ಓ್ಹ್!" ಎಂದ ಹಿರಿಯ, ಧಾರಾಕಾರವಾಗಿ ಸುರಿಯುತ್ತಿದ್ದ ಕಂಬನಿಯನ್ನೊರೆಸಿಕೊಳ್ಳುತ್ತ.—"ಓ್ಹ್! ಓ್ಹ್!"

ಎಲ್ಲ ಬೇಗೆಯನ್ನೂ ಮರೆಸುವ ಹಾಗೆ ಬೀಸುತ್ತಿತ್ತು ತಣ್ಣನೆಯ ಗಾಳಿ. ವಾತಾವರಣ ತುಂಬಿತ್ತು, ಹಾಲುಹೊಳೆಯ ಜುಳುಜುಳು ಗೀತದಿಂದ. ಮಂದವಾಗಿ ಕಾಣಿಸುತ್ತಿದ್ದುವು, ಬಲು ದೂರದಲ್ಲಿ ಅಣೆಕಟ್ಟಿನ ದೀಪಮಾಲೆಗಳು.

ಮೇಲ್ಗಡೆ ಆಕಾಶದಲ್ಲಿ ಕೋಟಿ ನಕ್ಷತ್ರಗಳಿದ್ದುವು.

ಅವುಗಳನ್ನೇ ಮುಗ್ಧನಾಗಿ ಹಿರಿಯ ನೋಡಿದ.

ಪಶ್ಚಿಮದಲ್ಲಿ ಒಂಟಿಯಾಗಿಯೆ ಇದ್ದೊಂದು ನಕ್ಷತ್ರ ಅವನನ್ನು ಕಂಡು ನಕ್ಕಿತು.

ಅದನ್ನು ಗಮನಿಸಿದ ಹಿರಿಯ ರುಮಾಲನ್ನೆಳೆದು, ತಲೆಯಾಡಿಸುತ್ತ, ಅಂದ: "ಉಚ್ಮ್ಕಂಡೆ!"

ಆ ನಕ್ಷತ್ರ ಮತ್ತೆ ನಕ್ಕಿತು.

# ಕಥೆ: ಹನ್ನೊಂದು

# ನಂ. ೨೦೮ ಮತ್ತು ನೀಲಿ ಬುಶ್‌ಕೋಟು

ಎರಡನೆಯ ಗಂಟೆ ಹೊತ್ತಿಗೆ ಶಾರದಾ, ಎಂದಿನಂತೆ ಒಳ ಅಂಗಳವನ್ನು ಸೇರಿದ್ದಳು. ಮೂರನೆಯ ಗಂಟೆ ಬಾರಿಸಲು ಆಮೇಲೆ ಉಳಿದುದು ಐದೇ ನಿಮಿಷ.

ಗೇಟಿನ ಹೊರಗೆ ಮೇಜಿನ ಬಳಿ ಒಬ್ಬ ನಿಂತಿದ್ದ; ಇನ್ನೊಬ್ಬ ಕುಳಿತಿದ್ದ.

೪೬ನೆಯ ನಂಬರ್ ಹಾಜರಿಯಾಯಿತು.

"೨೦೮," ಎಂದಳು ಶಾರದಾ.

ಇಬ್ಬರೂ ಮುಖವೆತ್ತಿ ಮಂದಹಾಸ ಸೂಸಿದರು. ಪ್ರತಿಯಾಗಿ ಆಕೆಯೂ ಮುಗುಳ್ನಕ್ಕಳು.

ಕುಳಿತಿದ್ದಾತ ಹಾಜರಿ ಬರೆದ; ನಿಂತಿದ್ದಾತ ಎದುರಿನ ಗೋಡೆಯ ಮೇಲಿನ ಹಲಗೆಯತ್ತ ತಿರುಗಿ, ೨೦೮ನೆಯ ನಂಬರಿನ ಬಿಲ್ಲೆಯನ್ನು ತೆಗೆದು ಮೇಜಿನ ಮೇಲಿರಿಸಿದ. [ಕೈಗೆ ಕೊಡುವುದರಿಂದ ಬೆರಳಿಗೆ ಬೆರಳು ತಗಲಿ ಆಕಸ್ಮಿಕಗಳಾಗುತ್ತವೆ. ಹಾಗಾಗದಿರುವಂತೆ ಮೇಜಿನ ಮೇಲೆಯೇ ಬಿಲ್ಲೆಗಳನ್ನಿಡಬೇಕೆಂದು ಯಜಮಾನರ ಆಜ್ಞೆಯಾಗಿತ್ತು.]

ಅದನ್ನಾಕೆ ಮೇಜಿನ ಮೇಲಿಂದ ಎತ್ತಿಕೊಂಡಳು. ಗೇಟನ್ನು ಹಾದು ಹೊಲಿಗೆಯ ಕಟ್ಟಡವಿದ್ದ ದಿಕ್ಕಿಗೆ ಸಾಗಿದಳು.

ಆಮೇಲೆ ಬೇರೊಂದು ನಂಬರ್.

ವಾರದಲ್ಲಿ ಆರು ದಿನ ಪ್ರತಿ ದಿವಸವೂ ಹೀಗೆಯೇ ನಂಬರ್ ಹೇಳುವುದು, ಮುಗುಳುನಗುವುದು, ಮೇಜಿನ ಮೇಲಿಂದ ಬಿಲ್ಲೆ ಎತ್ತಿಕೊಳ್ಳುವುದು, ಒಳಕ್ಕೆ ಹೋಗುವುದು. ದುಡಿತ–ಎಂಟರಿಂದ ಹನ್ನೆರಡರವರೆಗೆ; ಒಂದರಿಂದ ಐದರ ವರೆಗೆ . . .

*   *   *   *

ಶಾರದೆ ನಾಲ್ಕನೆಯ ಫಾರ್ಮ್ ಓದಿರುವ ವಿದ್ಯಾವಂತೆ. ಆಕೆ ಅಲ್ಲಿಗೇ ತನ್ನ ಓದನ್ನು ನಿಲ್ಲಿಸಿ, ತನ್ನ ಬೆನ್ನಲ್ಲೇ ಅದೇ ತರಗತಿಗೆ ಬಂದ ತಮ್ಮನಿಗೆ ಹಾದಿ ಬಿಟ್ಟುಕೊಟ್ಟಳು.

ಐವತ್ತು ರೂಪಾಯಿ ಸಂಪಾದನೆಯ ತಂದೆ [ಕಾಹಿಲೆಯವಳಾದ ತಾಯಿ] ಮದುವೆಗಾಗಿ ತುಂಬ ಚಡಪಡಿಸಿದರು. ಕೈಹಿಡಿಯುವ ಪುಣ್ಯಾತ್ಮ ಕಾಣಿಸಿಕೊಳ್ಳಲಿಲ್ಲ.

ಹಾಗೆ ಕಾಯುತ್ತ, ಕಾಯುತ್ತ, ಮನೆಯ ಸಂಪಾದನೆಗೆ ಸಹಾಯ ವಾಗಲೆಂದು, ಶಾರದಾ ಹೊಲಿಗೆ ಕಲಿತಳು. ನೆರೆಹೊರೆಯವರ ಹಸುಗೂಸು ಗಳಿಗೆ ಪೋಷಾಕು ಹೊಲಿಯುವ ಸಿಂಪಿಗಳಾದಳು ಆಕೆ. ಮಗಳಿಗಾಗಿ ಚಿಕ್ಕದೊಂದು ಹೊಲಿಗೆಯ ಯಂತ್ರ ಕೊಳ್ಳಬೇಕೆಂದು ತಂದೆ ಯತ್ನಿಸಿದರು. ಕಂತಿನ ಮೇಲೆ ಯಂತ್ರ ದೊರೆಯುವ ಏರ್ಪಾಟೇನೋ ಇತ್ತು. ಆದರೆ, ಅವರ ಪಾಲಿಗೆ ಸಾಕಷ್ಟು ಸುಲಭ ಕಂತುಗಳಾಗಿರಲಿಲ್ಲ ಅವು. ಹೀಗಾಗಿ, ಯಂತ್ರದ ಯೋಚನೆಯನ್ನೇ ಅವರು ಬಿಟ್ಟುಕೊಟ್ಟರು.

ಆ ಬಳಿಕ ಉಗುಳುನುಂಗಿಕೊಂಡು ಆಕೆಯ ತಂದೆ, 'ತಯಾರಿ ಪೋಷಾಕಿನ' ಚಿಕ್ಕ ಕಾರಖಾನೆಯೊಂದರಲ್ಲಿ ಮಗಳನ್ನು ಕೆಲಸಕ್ಕೆ ಸೇರಿಸಿ ದರು. ಮಡಿವಂತರ ಮನೆತನದ ಹುಡುಗಿ ಶಾರದಾ, ದುಡಿಯುವ ಹೆಣ್ಣಾದಳು.

* * * *

ಆ ಕೆಲಸ ಶಾರದೆಗೆ ದೊರೆತು ಇಪ್ಪತ್ತು ದಿನಗಳಾಗಿದ್ದುವಷ್ಟೆ. ಮತ್ತೂ ಹತ್ತು ದಿನ ದುಡಿದರಾಯಿತು, ಮೂವತ್ತೆರಡು ರೂಪಾಯಿ ಸಂಬಳ ದೊರೆಯುವುದು.

ಬೇರೆ ದಿನಗಳಲ್ಲಾಗಿದ್ದರೆ ಆ ಮೂವತ್ತೆರಡರಿಂದ ಎಷ್ಟನ್ನೋ ಸಾಧಿಸುವುದು ಸಾಧ್ಯವಿತ್ತು. ಆದರೆ ಈಗ ಹಾಗಿರಲಿಲ್ಲ. ಅವಳ ಒಡಹುಟ್ಟಿ ದವನು ವಿಷಮಜ್ವರದಿಂದ ಹಾಸಿಗೆ ಹಿಡಿದಿದ್ದ.

[ಪರೀಕ್ಷೆ ಮುಗಿದ ಮೇಲೆ ಕಾಹಿಲೆ ಬಂದಿತ್ತು ಸದ್ಯಃ!

ತಂದೆ ಯೋಚಿಸಿದ್ದರು:

'ಮುಂದಿನ ವರ್ಷ ಮ್ಯಾಟ್ರಿಕ್. ಅದಾದ ಮೇಲೆ ಇವನು ಸಂಪಾದನೆ ಮಾಡಬೇಕು. ಬೇಗನೆ ಇವನಿಗೊಂದು ಹುಡುಗಿಯನ್ನು ತಂದಾದರೂ ಶಾರದೆಯನ್ನು ಇನ್ನೊಬ್ಬರ ಮನೆಗೆ ದಾಟಿಸಬೇಕು . . .

'ಅಂತೂ ಹುಡುಗ ಬೇಸಗೆಯ ರಜೆಯಲ್ಲೇ ಕಾಹಿಲೆ ಬಿದ್ದುದು ಒಳಿತಾಯ್ತು.]

ಆ ಕಾಹಿಲೆಯಿಂದಾಗಿ ಈಗ ಎಷ್ಟೊಂದು ಖರ್ಚು! ದಿನಕ್ಕೆ ಎರಡು ರೂಪಾಯಿಯಾದರೂ ಬೇಕೇಬೇಕಿತ್ತು. ಹಾಗೆ ಆಸ್ಪತ್ರೆಯಲ್ಲಿ ಹದಿನೈದು ದಿವಸ ಎಂದರೆ, ಒಟ್ಟು ವೆಚ್ಚ ಮೂವತ್ತು ರೂಪಾಯಿ. ಜತೆಯಲ್ಲಿ ಜಟಕಾ ಬಾಡಿಗೆ, ಇತ್ಯಾದಿ . . . ಈ ತಿಂಗಳಲ್ಲೇ ಶಾರದೆಗೆ ಕೆಲಸ ಸಿಗದೇ ಹೋಗಿದ್ದರೆ ತುಂಬ ತೊಂದರೆಯಾಗುತ್ತಿತ್ತು. ಅವಳ ತಮ್ಮನ ಆರೈಕೆ ಮಾಡುವುದೂ ಸಾಧ್ಯವಾಗುತ್ತಿತ್ತೋ ಇಲ್ಲವೋ . . .

ಶಾರದೆಗೆ ತಮ್ಮನೆಂದರೆ ಬಲು ಪ್ರೀತಿ. ಆತನಿಗೂ ಅಷ್ಟೇ, ಅಕ್ಕನೆಂದರಾಯಿತು . . . ಕಾರಖಾನೆಯ ಕೆಲಸ ಮುಗಿಸಿ ಈಗ ದಿನಾಲೂ ಸಂಜೆ ಆರರೊಳಗೆ ಶಾರದ ಆಸ್ಪತ್ರೆ ಸೇರುತ್ತಿದ್ದಳು. ಒಂದೆರಡು ದಿನಗಳಿಂದ ಗುಣಮುಖನಾಗತೊಡಗಿದ್ದ ತಮ್ಮನ ಬಳಿ ಕುಳಿತು, ಮುಂಗುರುಳು ನೇವರಿಸುತ್ತ, ನಗೆಮಾತನಾಡುತ್ತ, ತಾಯಿ ತಂದ ಕಿತ್ತಳೆಹಣ್ಣಿನ ಒಂದರ್ಧವನ್ನು ತಮ್ಮನಿಗೆ ಕೊಟ್ಟು ಇನ್ನೊಂದರ್ಧವನ್ನು ತಾನು ತಿಂದು, ತುಸು ಹೊತ್ತು ಕಳೆಯುತ್ತಿದ್ದಳು. ಆಮೇಲೆ ಬೇಗಬೇಗನೆ ನಡೆದು, ಹೆಂಗಸರ ಓಡಾಟ ಇನ್ನೂ ಬೀದಿಯಲ್ಲಿ ಇದ್ದಾಗಲೇ, ಚೆನ್ನಾಗಿ ಕತ್ತಲಾಗುವುದಕ್ಕೆ ಮುಂಚೆಯೇ, ಒಂದೂವರೆ ಮೈಲಿ ದೂರದ ಮನೆ ಸೇರುತ್ತಿದ್ದಳು.

ಆ ಬಳಿಕ ರಾತ್ರೆಯ ಅಡುಗೆ . . .

* * * *

ಆಕೆಯ ಹಾಗೆಯೇ ಆಕೆಯ ತಮ್ಮನೂ ಸ್ಫುರದ್ರೂಪಿ. ಒಳ್ಳೆಯ ಬಟ್ಟೆಬರೆ ಹಾಕಿಕೊಂಡ ಆತನ ಓರಗೆಯವರನ್ನು ಬೀದಿಯಲ್ಲಿ ಕಂಡಾಗ, ತನ್ನ ತಮ್ಮನಿಗೂ ಇಂಥವೇ ಬಟ್ಟೆಗಳಿದ್ದರೆ ಎಂದು ಶಾರದೆಗೆ ಆಸೆಯಾಗುತ್ತಿತ್ತು.

ತಮ್ಮನಿಗಾಗಿ ಆವರೆಗೆ ಕೋಟು ಹೊಲಿಸಿಯೇ ಇರಲಿಲ್ಲ. ಬಿನ್ನಿ ಅರಿವೆಯ ಒಂದು ಪ್ಯಾಂಟನ್ನೇನೋ ಆ ವರ್ಷ ಹೊಲಿಸಿತ್ತು. ಆದರೆ,

ಶರಟನ್ನು ಪ್ಯಾಂಟಿನೊಳಹಾಕಲು ಲಜ್ಜೆ ಅವನಿಗೆ. ಯಾವಾಗಲೂ ಹೊರಗೇ ಇಳಿಬಿಟ್ಟು ಶಾಲೆಗೆ ಹೋಗುತ್ತಿದ್ದ.

ಸಾಮಾನ್ಯವಾಗಿ, ಏನಾದರೂ ಬೇಕೆಂದು ಎಂದೂ ಕೇಳುವವನಲ್ಲ ಆತ. ತಿಂಗಳಿಗೊಮ್ಮೆ ಅಕ್ಕ ಮತ್ತು ತಮ್ಮ ಜತೆಯಾಗಿಯೇ ಸಿನಿಮಾ ನೋಡಲು ಹೋಗುತ್ತಿದ್ದರು. ಜತೆಯಾಗಿಯೇ ವಾರಕ್ಕೊಮ್ಮೆ ಒಂದಾಣೆಯ ಹುರಿಗಾಳು ಕೊಳ್ಳುತ್ತಿದ್ದರು.

ಹೀಗಿದ್ದರೂ, ನೀಲಿ ಬುಶ್‌ಕೋಟಿನ ನೆನಪೊಂದು ಒಮ್ಮೆ ಅವರ ಜೀವನದೊಳಕ್ಕೆ ನುಸುಳಿಕೊಂಡಿತು. ಆ ದಿನ ಎದುರಿನ ಮಹಡಿಮನೆಯ ಚಂದ್ರಹಾಸ, "ಲೋ ನಾಣಿ, ಛರ್ತಿಯೇನಯ್ಯ ಕೊಂಚ?" ಎಂದು ಕೂಗಿದ. ಹೊಲಿಸಿದ್ದ ಹೊಸ ಉಡುಪುಗಳ ರಾಶಿಯನ್ನು ತೋರಿಸಿ ಮೆಚ್ಚುಗೆ ಗಳಿಸಲೆಂದೇ ಆ ಆಹ್ವಾನವನ್ನು ಆತ ನೀಡಿದ್ದ.

ನಾಣಿ ಹಿಂತಿರುಗಿ ಬಂದಾಗ, ಅಷ್ಟೊಂದು ಉತ್ಸಾಹ ತೋರದೇ ಇದ್ದ ತಮ್ಮನ ಮುಖವನ್ನು ಗಮನಿಸಿ, ಶಾರದಾ ಕೇಳಿದಳು :

"ಯಾತಕ್ಕಂತೆ ಬರಹೇಳಿದ್ದು?"

"ಪ್ರದರ್ಶನ ನೋಡೋಕೆ . . . "

ಮೂರು ಜತೆ ಲಿನನ್ ಬುಶ್‌ಕೋಟು-ಪ್ಯಾಂಟುಗಳು; ಎರಡು ಜತೆ ಉಣ್ಣೆ ಸೂಟುಗಳು; ಶರಟುಗಳು . . .

ಮುಂದೆ ಆ ದಿನವೆಲ್ಲ ಅಕ್ಕ ತಮ್ಮ ಪರಸ್ಪರ ಮಾತೇ ಆಡಲಿಲ್ಲ. ರಾತ್ರೆ ಮಲಗಿಕೊಂಡಾಗ, "ಈ ಯುಗಾದಿಗೆ ನಿನಗೊಂದು ಉಡುಗೊರೆ ಕೊಡ ಬೇಕೊಂತಿದೀನಿ, ನಾಣಿ," ಎಂದಳು ಶಾರದಾ.

"ಓಹ್ಹೋ!" ಎಂದು, ನಾಣಿ ನಕ್ಕ.

"ಯಾವ ಬಣ್ಣವೋ ನಿಂಗೆ ಇಷ್ಟ?"

"ನೀಲಿ, ತೆಳು ನೀಲಿ, ಆಕಾಶ ನೀಲಿ . . . " ಮತ್ತೆ ಅಣಕದ ನಗು.

ಇಲ್ಲ; ಯುಗಾದಿಗೆ ಆ ಉಡುಗೊರೆ ಬರಲೇ ಇಲ್ಲ. ಅದಕ್ಕೆ ಬೇಕಾಗಿದ್ದ ಒಂಬತ್ತೂವರೆ ರೂಪಾಯಿ ಜಮೆಯಾಗಬೇಕು ಎಲ್ಲಿಂದ?

ಉಗಾದಿ ಕಳೆದು ಹೋಯಿತು. ಉಡುಗೊರೆಯನ್ನೊಂದು ತಮಾಷೆ ಯಾಗಿಯೇ ಪರಿಗಣಿಸಿದ್ದ ನಾಣಿ, ಅಕ್ಕನನ್ನು ಅಣಕಿಸುತ್ತಲೇ ಇದ್ದ. ಅವಳ ಪಾಲಿಗೆ ಮಾತ್ರ ಇದು ಪರಿಹಾಸ್ಯದ ಮಾತಾಗಿರಲಿಲ್ಲ. ಎಂತಲೇ ಆಕೆಗೆ

ಅಸಹನೀಯ ವೇದನೆಯಾಗುತ್ತಿತ್ತು. ಒಂಟಿಯಾಗಿದ್ದಾಗ ಅಸಹಾಯತೆಯು ಕಣ್ಣು ಹನಿಯನ್ನೂ ಅವಳು ಉರುಳಗೊಟ್ಟಳು . . .

ಅದೇ ಪ್ರೀತಿಯ ಸೋದರ ಆಸ್ಪತ್ರೆಯ ಮಂಚದ ಮೇಲೆ ಮಲಗಿದ್ದ ಈಗ. ಈ ಸಂದರ್ಭದಲ್ಲಿ ಆ ಉಡುಗೊರೆಯನ್ನು ತಾನು ಕೊಡುವುದು ಸಾಧ್ಯವಾದರೆ? ಓ, ಸಾಧ್ಯವಾದರೆ?

ಆದರೆ, ಸಾಧ್ಯಗೊಳಿಸುವ ಹಾದಿ ಯಾವುದು?

* * * *

ಉದ್ದನೆಯ ಕಟ್ಟಡದಲ್ಲಿ ನೂರಾರು ಗಂಡಾಳುಗಳು, ಒಂದೇ ಸಾರಿಗೆ, ಐವತ್ತು ಅರುವತ್ತು ಪದಗಳ ಬಣ್ಣ ಬಣ್ಣದ ಅರಿವೆಯ ಮೇಲೆ ವಿದ್ಯುತ್ ಕತ್ತರಿ ಯಂತ್ರವನ್ನು ಪ್ರಯೋಗಿಸುತ್ತಿದ್ದರು. ಇನ್ನೊಂದು ಉರುಳುಯಂತ್ರ, ಬಟ್ಟೆಯನ್ನು ನೀಟಾಗಿ ಒಂದರ ಮೇಲೊಂದು ಹಾಸುತ್ತಿತ್ತು. ಸುಂಯ್ ಎಂದು ಏಕನಾದ ಮಿಾಟುತ್ತಿತ್ತು ವಿದ್ಯುತ್‌ಯಂತ್ರ. ವಿವಿಧ ಆಕೃತಿಗಳ ಮಾದರಿಗಳ ಸಾಮೂಹಿಕ ಉತ್ಪನ್ನ—ನೂರು ನೂರರ ಸಂಖ್ಯೆಯಲ್ಲಿ. ಇನ್ನೊಂದೆಡೆ, ಫ್ಯಾಷನ್ ರೂಂ. ಅಲ್ಲಿ ಮಾದರಿಗಳು ನಿರ್ಮಾಣವಾಗುವುವು-ಮಕ್ಕಳಿಂದ ಮೊದಲಾಗಿ ವಿವಿಧ ವಯೋಮಾನದ ವರೆಗೆ; ಚಡ್ಡಿಯಿಂದ ತೊಡಗಿ ಉಣ್ಣೆಯ ವೇಸ್ಟ್ ಕೋಟಿನ ತನಕ. ಬಲ ಮಗ್ಗುಲಲ್ಲಿ ಯಂತ್ರ ಹೊಲಿಗೆಯ ವಿಭಾಗ; ಆದರಾಚೆ ಕೈಹೊಲಿಗೆಯ ಶಾಖೆ. ಶಾರದೆಯನ್ನು ಒಳಗೊಂಡು ಮೂವತ್ತು ಹುಡುಗಿಯರು ದುಡಿಯುವುದು ಅಲ್ಲೇ. ಹೊರ ವಠಾರದಲ್ಲಿ ಕೊನೆಯ 'ಇಸ್ತ್ರಿ ಕೋಣೆ' . . .

ಶಾರದೆಗೆ ಬೇಕಾಗಿದ್ದುದು ಒಂದೇ ಒಂದು ನೀಲಿ ಬುಶ್‌ಕೋಟು.

ಸಣ್ಣ ಸೈಜಿನದು, ಪೂರ್ಣ ತೋಳಿನದು . . .

ಕಣ್ಣೀರು ಒತ್ತರಿಸಿ ಬಂತು. ಹುಬ್ಬು ಗಂಟಿಕ್ಕಿತು. ಎಲ್ಲರೂ ತನ್ನನ್ನೇ ನೋಡಿ ನಗುತ್ತಲಿದ್ದಂತೆ ಅವಳಿಗೆ ಭಾಸವಾಯಿತು.

ಯೋಚನೆಗಳು ಮತ್ತೆ ಹರಿದುವು.

ತನ್ನ ಪ್ರೀತಿಯ ತಮ್ಮನಿಗಾಗಿ ಒಂದು ಬುಶ್‌ಕೋಟು ಕೊಂಡುಕೊಳ್ಳುವ ಸಾಮರ್ಥ್ಯವೂ ಇಲ್ಲದೆ ಹೋಯಿತಲ್ಲ ತನಗೆ?

ಕೈ ಬೆರಳುಗಳು ಮಕ್ಕಳ ಫ್ರಾಕುಗಳ ಅಂಗಿಗುಂಡಿಗಳನ್ನು ಹೊಲಿಯುತ್ತಿದ್ದುವು. ಆದರೆ ಅದೆಲ್ಲವೂ ಯಾಂತ್ರಿಕವಾದ ರೀತಿಯಲ್ಲಿ. ತಲೆಬಾಗಿಯೇ

ಇತ್ತು. ಸೂಜಿ–ದಾರ ಒಳ ಹೊರಗೆ ಹೋಗಿ ಬರುತ್ತಲೇ ಇತ್ತು.

ಆದರೆ, ಹೃದಯವನ್ನೇ ಹೊಕ್ಕು ಒಳ ಹೋಗಿ ಬರುತ್ತಿದ್ದ, ಸೂಜಿ ಚುಚ್ಚಿದಂತೆ ನೋಯಿಸುತ್ತಲಿದ್ದ, ಆ ವಿಚಾರಗಳೋ . . .

ಆಗದೆ ಉಳಿದು ಹೋದ ತನ್ನ ಮದುವೆ . . . ಹಾಗೆ ಕೆಲಸಕ್ಕೆ ಹೋಗುವುದರಿಂದ ತನಗಾಗಿ ಬರುವ ವರಗಿರಾಕಿಗಳು ಕಡಮೆಯಾಗುವ ಸಂಭವ. ಹೋಗದೆ ಇದ್ದರೋ ? ಉಪವಾಸದ ಭೀತಿ . . .

ತನ್ನ ಸುತ್ತುಮುತ್ತಲೂ ಕುಳಿತಿದ್ದ ಸಂಗಾತಿಗಳು . . . ಒಬ್ಬೊಬ್ಬರದೂ ಒಂದೊಂದು ಕಥೆ. ಒಡೆದ ನೌಕೆಯ, ಭಗ್ನಮಂದಿರದ, ನೀಚ ಜೀವನದ, ಆತ್ಮಹತ್ಯೆಯ ಆಲೋಚನೆಗಳ, ಕುಟುಂಬ ಪೋಷಣೆಯ ವಿಧವಿಧದ ಕತೆಗಳು.

'ತಯಾರಿ ಪೋಷಾಕಿ'ನ ಆ ಕಾರಖಾನೆಯಲ್ಲಿ ಹಿಂದೆ ಸಾವಿರ ಜನ ದುಡಿಯುತ್ತಿದ್ದರಂತೆ. ಈಗ ಮುನ್ನೂರೂ ಇಲ್ಲ. ಕಳೆದ ತಿಂಗಳಷ್ಟೇ ಎಂಟು ನೂರು ಜನರನ್ನು ವಜಾ ಮಾಡಿದ್ದರಂತೆ. ಆಮೇಲೆ ನೂರು ಜನ ಹೊಸಬರನ್ನು ಕಡಮೆ ಸಂಬಳದ ಮೇಲೆ ಕೆಲಸಕ್ಕೆ ಸೇರಿಸಿಕೊಂಡರಂತೆ. ಶಾರದೆಗೆ ಕೆಲಸ ಸಿಕ್ಕಿದ್ದು ಹಾಗೆ. ಯಾರದೋ ಒಂದು ತುತ್ತನ್ನು ಕಸಿದು . . .

ತುತ್ತು ಅನ್ನಕ್ಕೆ ಹಾದಿಯಾಯಿತು—ಬದುಕಲು ಅಗತ್ಯವಾದ ತುತ್ತು ಅನ್ನ.

ಆದರೆ ತನ್ನ ತಮ್ಮನಿಗೊಂದು ಬುಶ್‌ಕೋಟು ? ಇದು ಎಂಥ ಬಗೆ ಹರಿಯದ ಸಮಸ್ಯೆ !

ಮತ್ತೆ ಯೋಚನೆಗಳು . . . ಎಷ್ಟು ಸುತ್ತುವರಿದರೂ ಆ ಬಿಂದುವಿಗೇ ಬಂದು ತಲಪುವ ಯೋಚನೆಗಳು . . .

ಯೋಚನೆಗಳೆಲ್ಲ ಹೆಪ್ಪುಗಟ್ಟಿ ಮುಖ ಸಿಂಡರಿಸಿಕೊಂಡು ಕಪ್ಪಿಟ್ಟಿತು.

* * * *

ವಿರಾಮ ವೇಳೆಯಲ್ಲಿ 'ಬುತ್ತಿ'ಗಳನ್ನೆತ್ತಿಕೊಂಡು ಎಲ್ಲರೂ ಕ್ಯಾಂಟೀನಿನ ಪಕ್ಕದಲ್ಲಿದ್ದ ವಠಾರಕ್ಕೆ ಹೋದರು . . .

ಸಾರು–ಮಜ್ಜಿಗೆಯಲ್ಲಿ ಕಲಸಿದ್ದ ಎರಡು ತುತ್ತು ಅನ್ನವನ್ನು ಗಬಗಬನೆ ನುಂಗಿ, ಕೊಳಾಯಿಯಿಂದ ನೀರನ್ನು ಕುಡಿದು, ಹೊಲಿಗೆಯ ಕೋಣೆ

ಯೊಳಕ್ಕೆ ಶಾರದಾ ಧಾವಿಸಿದಳು. ನೇರವಾಗಿ ಬರುವ ಬದಲು ಎಡಬದಿ ಯಿಂದ ಹಾದು ಬಂದಳು . . .

ವಿವಿಧ ಪೋಷಾಕುಗಳು ಯಂತ್ರದ ಹೊಲಿಗೆಯನ್ನು ಮುಗಿಸಿ ಕೈ ಹೊಲಿಗೆಯ ಸ್ಪರ್ಶಕ್ಕಾಗಿ ಕಾದು ಕುಳಿತಿದ್ದುವು. ಒಂದಕ್ಕೊಂದು ಸಮೀಪ ವಾಗಿ ಆ ರಾಶಿಗಳು ವಿರಮಿಸುತ್ತಿದ್ದುವು. ಒಂದಕ್ಕೊಂದು ಸಮೀಪವಾಗಿ ಬರಿಯ ಕುರ್ಚಿಗಳು ನಿದ್ರಿಸುತ್ತಿದ್ದುವು.

ಒಂದು ಕ್ಷಣ ಶಾರದಾ ಹಿಂತಿರುಗಿ ನೋಡಿದಳು. ಶರೀರ ಕಂಪಿಸಿತು; ಮೈ ಬೆವತಿತು; ಚಿಟ್ ಚಿಟ್ಟೆಂದು ಮೆದುಳು ಸಿಡಿಯತೊಡಗಿತು; ಮೈಲು ದೂರಕ್ಕೂ ಕೇಳಿಸುವಂತೆ ಎದೆಗುಂಡಿಗೆ ಡವಡವಿಸಿತು.

ಆದರೆ, ಕಣ್ಣುಗಳು ಕೆಲಸ ಬಡಸಿದ್ದುವು. ದೃಷ್ಟಿ ಆ ರಾಶಿಯ ಮೇಲೆಯೇ ಕೇಂದ್ರಿಕರಿಸಿತು. ಅದರಲ್ಲಿದ್ದ ಸರಿಯಾದ ಸೈಜಿನ ಆ ನೀಲಿ—

ಕೈಗಳು ಕಳ್ಳತನ ಮಾಡಿದುವು. ಆ ಅರೆ ಹೊಲಿದ ನೀಲಿ ಲಿನನ್ ಬುಶ್‌ಕೋಟು ಮುದುಡಿ ಮುದುಡಿ ಆಕೆಯ ಪುಟ್ಟ ಟಿಫಿನ್ ಕ್ಯಾರಿಯರಿ ನೊಳಗೆ ಅವಿತುಕೊಂಡಿತು . . . ಕುಸಿದು ಬೀಳುವ ಹಾಗಾಯಿತು ಆಕೆಗೆ. ಕಾಲುಗಳು ಬಲಹೀನವಾದುವು . . .

. . . ಅಂತೂ ತನ್ನ ಸ್ಥಾನವನ್ನಾಕೆ ಸೇರಿದಳು.

ಸ್ವಲ್ಪ ಹೊತ್ತಿನಲ್ಲೇ ಇತರರೂ ಬಂದರು.

ಏನೋ ಯಾತನೆ ಅನುಭವಿಸುತ್ತಿದ್ದಂತೆ ಕಂಡ ಶಾರದೆಯನ್ನು ಕುರಿತು ಪಕ್ಕದವಳು ಕೇಳಿದಳು:

"ಮೈ ಚೆನ್ನಾಗಿಲ್ವೆ?"

"ಹೂಂ . . ."

"ಹೊಟ್ಟೆನೋವೆ?"

"ಹೂಂ . . ."

ಶಾರದೆಯ ಹಣೆಯನ್ನು ಮುಟ್ಟಿ ನೋಡಿದಳಾಕೆ.

"ಅಯ್ಯೋ—ಬೆಚ್ಚಗಿದೆಯಲ್ಲ . . ."

"ಹೂಂ . . ."

. . . ನಾಲ್ಕು ಗಂಟೆಗಳೊಳಗಾಗಿ, ನಡದಿದ್ದ ಘಟನೆ ತಿಳಿದುಹೋಗು ವುದು. ಆಗ ಒಬ್ಬೊಬ್ಬರನ್ನೂ ಶೋಧಿಸುವರು. ಪತ್ತೆಯಾಗುವುದು.

—ಹೇಗಾದರೂ ಮಾಡಿ ಅದಕ್ಕಿಂತ ಮುಂಚೆಯೇ ಹೊರಟು ಹೋಗಬೇಕು.

ಕೈಯಿಂದ ಕೆಲಸ ಸಾಗಲೇ ಇಲ್ಲ.

ಮೇಸ್ತ್ರಿಣಿ ಬಂದಾಗ, ಪಕ್ಕದಲ್ಲಿದ್ದಾಕೆ ಎದ್ದು ನಿಂತು ಹೇಳಿದಳು :

" ಶಾರದಮ್ಮನಿಗೆ ಬವಳಿ ಬರ್‍ತಾ ಇದೆ."

" ಸರಿ!" ಎಂದಳು ಮೇಸ್ತ್ರಿಣಿ, ತಿಳಿವಳಿಕೆಯ ಮುಗುಳ್ನಗೆ ಬೀರಿ. ಬವಳಿ ಬರುವುದಕ್ಕೂ ಯೌವನಕ್ಕೂ ಯಾವಾಗಲೂ ಸಂಬಂಧ ಇದ್ದೇ ಇದೆ ಎನ್ನುವ ದೃಢ ಅಭಿಪ್ರಾಯವಿತ್ತು ಆಕೆಗೆ.

ಅವಳು ತೀರ್ಪು ಕೊಟ್ಟಳು :

" ಮೂರು ಗಂಟೆ ಈಗ . . . ಹೋಗಿಬಿಡು. ಅರ್ಧ ದಿನ ಲೀವ್ ಹಾಕಿಸ್ತೀನಿ. ಸರಿಯಾದ ಔಷಧಿ ತಗೋ. ಬಿಲ್ಲೆ ಕೊಟ್ಬಿಟ್ಟು ಹೊರಟ್ಹೋಗು."

ಬಿಲ್ಲೆಯನ್ನು ಕೊಟ್ಟು ಟಿಫಿನ್ ಕ್ಯಾರಿಯರಿನೊಡನೆ ಶಾರದಾ ಹೊರಟಳು. ಹಾಗೂ ಹೀಗೂ ಕಾಲುಗಳು ಗೇಟನ್ನು ದಾಟಿದುವು.

ಮುಂದೆ ಎಲ್ಲಿಗೆ ಹೋಗಬೇಕು? ಆಸ್ಪತ್ರೆಗೆ? ಇಷ್ಟು ಬೇಗನೆ? ಅಥವಾ ಮನೆಗೆ? ಅದೂ ಇಷ್ಟು ಬೇಗನೆ? ಏನೆಂದು ಉತ್ತರ ಕೊಡಬೇಕು? ಏನೆಂದು?

. . . ಅಯ್ಯೋ! ಅಮ್ಮಾ – ಅಪ್ಪಾ! ಓ ನಾಣೀ!

ಆಗ ನಿಜವಾಗಿ ಅವಳಿಗೆ ಬವಳಿ ಬಂದ ಹಾಗಾಯಿತು. ಬೀದಿಯ ಬಳಿಯಲ್ಲೆ ಒಂದು ಕ್ಷಣ ಆಕೆ ನಿಂತಳು. ಕಾಲುಗಳು ಥರಥರನೆ ಕಂಪಿಸಿದುವು. ಮುಖವೆಲ್ಲ ಬಿಳಿಚಿಕೊಂಡಿತು. ಕಣ್ಣೀರು ಕೋಡಿಕಟ್ಟಿ ಹರಿಯಿತು.

. . . ಬೀದಿಯಲ್ಲಿ ಹಾದು ಹೋಗುತ್ತಿದ್ದವರು ಆಕೆಯನ್ನು ನೋಡ ತೊಡಗಿದರು . . .

ಅಯ್ಯೋ – ತಾನು ಮಾಡಿದ್ದೇನು? ಏನು ಮಾಡಿಬಿಟ್ಟೆ ತಾನು?

ಇದಕ್ಕೆ ಪರಿಹಾರ? ಮುಂದೆ? ಅಪ್ಪ – ಅಮ್ಮನಿಗೆ ಗೊತ್ತಾದರೆ? ನಾಣಿಗೆ ಗೊತ್ತಾದರೆ?

ಮುಂದೆಯೂ ಹೋಗಲಿಲ್ಲ. ಹಿಂದೆಯೂ ಹೋಗಲಿಲ್ಲ. ನಿಂತಲ್ಲೆ ನಿಂತಳು ಆಕೆ . . . ಎರಡು ಕ್ಷಣ ಹಾಗೆಯೇ.

ಆ ಬಳಿಕ ಅವಳು ಹಿಂತಿರುಗಿ, ಯಾಂತ್ರಿಕವಾಗಿ, ಕಾರಖಾನೆಯತ್ತ ನಡೆದಳು.

*   *   *   *

ಹೊರ ಅಂಗಣದ ಬಲಪಾರ್ಶ್ವದಲ್ಲಿತ್ತು ಯಜಮಾನರ ಆಫೀಸು. ನಿತ್ಯದಂತೆ ಅವರೊಬ್ಬರೇ ಇದ್ದರು. ಇಳಿವಯಸ್ಸಿನ, ನರೆಗೂದಲಿನ, ದಯಾಪೂರಿತವೆಂದು ಕಾಣುತ್ತಿದ್ದ ಕಣ್ಣುಗಳ ವ್ಯಕ್ತಿ ಆತ.

ಯಾವ ಧೈರ್ಯದಿಂದಲೋ ಏನೋ ಬಾಗಿಲನ್ನು ತಳ್ಳಿ, ಶಾರದಾ ಒಳಹೋಗಿ, ಅಲ್ಲೇ ನಿಂತಳು. ಕೆಲಸ ಕೇಳಿಕೊಂಡು ಬಂದ ಮೇಲೆ ಯಜಮಾನರ ಮುಂದೆ ಆಕೆ ನಿಂತುದು ಇದೇ ಎರಡನೆಯ ಸಾರಿ.

ಇವಳು ತಮ್ಮ ಕಾರಖಾನೆಯಲ್ಲಿ ಕೆಲಸ ಮಾಡುವಾಕೆಯೇ ಇರಬೇಕೆಂದು ಊಹಿಸಿದರೂ, ಅವರು ಕೇಳಿದರು :

" ಯಾರಮ್ಮ ನೀನು ? "

ಶಾರದೆ ಮಾತಾಡಲಿಲ್ಲ. ಮಾತು ಬರಲಿಲ್ಲ.

" ಏನಮ್ಮ ಸಮಾಚಾರ ? "

ಏನೆಂದು ಶಾರದೆ ಹೇಳಲಿಲ್ಲ. ಉತ್ತರವಾಗಿ ಶಾರದೆ ಬಿಕ್ಕಿ ಬಿಕ್ಕಿ ಅತ್ತಳು.

ಕಾರಖಾನೆಯೊಳಗೆ ಯಾರೋ ಈಕೆಯನ್ನು ಅವಮಾನಿಸಿರಬೇಕು ; ಅಂತಹದೇನೋ ಪ್ರಕರಣ ನಡೆದಿರಬೇಕು – ಎಂದುಕೊಂಡರು ಯಜಮಾನರು. ಹಾಗಾಗುವುದೇನೂ ಅಸಾಧಾರಣ ಸಂಗತಿಯಾಗಿರಲಿಲ್ಲ.

ಒಂದು ಕ್ಷಣ ಅವರು ಸುಮ್ಮನಿದ್ದರು. ಆ ಬಳಿಕ ಧ್ವನಿ ಏರಿಸಿ ಕೇಳಿದರು :

" ಏನದು ? ಏನು ಹೇಳು ? "

ಶಾರದೆಯ ನಡುಗುತ್ತಿದ್ದ ಕೈಬೆರಳುಗಳು ಟಿಫಿನ್ ಕ್ಯಾರಿಯರನ್ನು ತೆರೆದುವು. ಮೈಮುರಿದುಕೊಂಡಿದ್ದ ನೀಲಿ ಬುಶ್‌ಕೋಟು ಹೊರಬಂದು ತನ್ನ ಯಜಮಾನನ ಎದುರಲ್ಲಿ ಬಿದ್ದಿತು.

ಬೆರಗುಗಣ್ಣಿನಿಂದ ಅವರು ಅದನ್ನೇ ನೋಡಿದರು . . .

ಮರುಕ್ಷಣದಲ್ಲೇ ಅವರಿಗೆ ಅರ್ಥವಾಯಿತು. ಹುಬ್ಬು ಹಾರಿಸಿ ರೇಗಾಡಿ ಚೀರಾಡಬೇಕೆಂದು ಅವರಿಗೆನಿಸಿತು.

ಆದರೆ, ಹಾಗೆ ಮಾಡದೆ ಮೇಲಕ್ಕೆದ್ದು, ಅವಳ ಬೆನ್ನು ತಡವಿ, ಕುರ್ಚಿಯ ಮೇಲೆ ಆಕೆಯನ್ನು ಕುಳ್ಳಿರಿಸಿದರು.

"ಹೆದರಬೇಡವಮ್ಮ . . . ನಿನಗೇನೂ ಮಾಡೋದಿಲ್ಲ. ಯಾರಿಗೂ ಹೇಳೋದಿಲ್ಲ."

ಅಭಯದ ಮಾತುಗಳು. ಪುನಃ—

"ಯಾಕೆ, ಬುಶ್‌ಕೋಟು ನಿನಗೆ ಬೇಕಾಗಿತ್ತೆ ?"

ಆ ಪ್ರಶ್ನೆಗೆ ಉತ್ತರ, ಆಕೆಯ ಬಾಳಿನ ಕಥೆಯೇ. ಅದನ್ನು ಹೇಳುವುದುಂಟೆ ? ಹೇಳಿ ಪೂರೈಸುವುದುಂಟೆ ?

"ಯಾರ ಮನೆಯವಳಮ್ಮ ನೀನು ?"

ಅಯ್ಯೋ—ತನ್ನ ಹೆತ್ತ ತಂದೆಯ ಹೆಸರನ್ನೂ ಹೇಳಬೇಕೆ ಇನ್ನು ?

ಯಜಮಾನರಿಗೆ ತನ್ನ ಬಾಲ್ಯದ ನೆನಪಾಯಿತು. ಒಂದು ಕಾಲದಲ್ಲಿ ಅವರೂ ಕಹಿಜೀವನ ಅನುಭವಿಸಿದ್ದರು. ಬಡತನ ಅವರ ತಮ್ಮನೊಬ್ಬನನ್ನು, 'ಅನೀತಿ' ಎನ್ನಿಸಿಕೊಳ್ಳುವ ಜಾರುಗುಂಡಿಯಲ್ಲಿ ಬಹಳ ಆಳಕ್ಕೆ ತಳ್ಳಿತ್ತು. ಆ ಪ್ರಪಾತದಿಂದ ಆತ ಮತ್ತೆ ಚೇತರಿಸಿಕೊಂಡು ಎದ್ದೇ ಇರಲಿಲ್ಲ.

ಮಾರಾಟ ಮಾಡಿ ಸಂಪಾದಿಸುವುದಕ್ಕೆಂದೇನೂ ಈ ಹುಡುಗಿ ಕದ್ದಿರಲಾರಳು; ಅಂಥವರು ಈ ರೀತಿ ಹೊಯ್ದಾಡುವುದೆಂದಿಲ್ಲ—ಎಂದೆಲ್ಲ ಯೋಚಿಸುತ್ತ ಯಜಮಾನರು ಮತ್ತೊಂದು ಮಾತು ಕೇಳಿದರು :

"ತಮ್ಮ ಇದಾನೇನಮ್ಮ ನಿನಗೆ ?"

ತಮ್ಮ—ಎಂಬ ಪದ ಕೇಳಿ ಅವಳು ತಲೆ ಎತ್ತಿ ನೋಡಿದಳು.

"ಹೂಂ. . ."

"ಮನೇಲಿದ್ದಾನೆಯೆ ?"

"ಆಸ್ಪತ್ರೇಲಿ."

"ಓ. . . !"

ಯಜಮಾನರಿಗೆ ವಿಷಯ ಸ್ಪಷ್ಟವಾಗುತ್ತಾ ಬಂತು.

"ಅವನಿಗೋಸ್ಕರ ತಗೊಂಡಿಯಾ ?"

ಹೌದು—ಎನ್ನುವಂತೆ ನೀರು ತುಂಬಿದ್ದ ಶುಭ್ರ ಕಣ್ಣುಗಳೆರಡು ಅವರನ್ನೇ ನೋಡಿದುವು.

" ತಿಳೀತು ಮಗೂ. . .ನನ್ನ ಕೇಳಿದ್ರೆ ಕೊಡ್ತಿದ್ದೆನಲ್ಲಾ."

ಕೊಡುತ್ತಿದ್ದರೋ ಇಲ್ಲವೋ ಆ ಮಾತು ಬೇರೆ.

ಮುಂದಿನ ಕ್ರಮದ ಬಗೆಗೆ ಶೀಘ್ರ ನಿರ್ಧಾರಕ್ಕೆ ಬಂದು ಯಜಮಾನರು ಕೇಳಿದರು :

" ಎಷ್ಟವ್ಮಾ ಸಂಬಳ ನಿನಗೆ ? "

". . .ಮೂವತ್ತೆರಡು."

ಕ್ಷೀಣವಾಗಿದ್ದ ಧ್ವನಿ.

ಯಜಮಾನರು ಮೇಜಿನ ಡ್ರಾಯರನ್ನೆಳೆದರು; ಏನನ್ನೋ ಹುಡುಕುತ್ತ ಕೈಯಾಡಿಸಿದರು. ಸಾಮಾನ್ಯವಾಗಿ ಅಂತಹ ಸಂದರ್ಭಗಳಲ್ಲಿ ಕೆಲಸದಿಂದಲೇ ವಜಾ ಆಗುತ್ತಿತ್ತು; ಎಲ್ಲರೆದುರಲ್ಲಿ ಛೀಮಾರಿಯಾಗುತ್ತಿತ್ತು. ಆದರೆ ಈ ಸಲ ಅವರು ಅವಳಿಗೆ ಸಂಬಳವನ್ನು ಕೊಟ್ಟರು. ಅಷ್ಟೇ ಅಲ್ಲ. . .

" ನಿನ್ನ ಹೆಸರೇನಮ್ಮ ? " ಎಂದರು.

ತನ್ನ ಕೆಲಸ ಹೋಯಿತೆಂದು ಭಾವಿಸಿದ ಆಕೆ, " ಶಾರದಾ,"ಎಂದಳು.

" ಇಲ್ನೋಡಮ್ಮ ಶಾರದಾ. ನನಗೆ ತುಂಬ ಸಾಲವಾಗಿದೆ. ನನ್ನಂಥ ಪುಟ್ಟ ಮಾಲಿಕರು ಇನ್ನು ಯಾರೂ ಬದುಕೋ ಹಾಗೆಯೇ ಇಲ್ಲ. ಬೊಂಬಾಯಿಯ ಮಲಾಮಲ್ ಮಿಲ್ಲಿನ ಸೇಟ್ ಒಬ್ಬರಿಗೆ ಈ ಕಾರಖಾನೇನ ಇನ್ನೊಂದು ವಾರದೊಳಗೆ ಮಾರ್‍ತೀನಿ. . .ಮುಂದೆ ನಿಮಗೆಲ್ಲ ಸಂಬಳ ಕೊಡೋವ್ನು ನಾನಲ್ಲ... ಈಗೆ ನಡೆದಿದ್ದನ್ನ ಯಾರಿಗೂ ನಾನು ಹೇಳೋಲ್ಲ... ನಾಳೆ ಕೆಲಸಕ್ಕೆ ಬಾ. . .ಏನೂ ಆಗೇ ಇಲ್ಲಾಂತ ತಿಳಕೊಂಡು ಬಾ. . . ಬರದೇ ಹೋದರೆ ನನಗೆ ಬೇಸರವಾದೀತು. . .ಒಳ್ಳೇದು. ಹೋಗಮ್ಮ ಹೋಗು. . .ಇಡೀ ತಿಂಗಳ ಸಂಬಳ ಕೊಟ್ಟಿದೀನಿ. . .ಆಸ್ಪತ್ರೆ ಖರ್ಚಿಗಾಗುತ್ತೆ. . .ಹೋಗು ಮಗೂ. . ."

ಸೆರಗಿನಿಂದ ಕಣ್ಣೊರಸಿಕೊಂಡು ಶಾರದಾ ಹೊರಬಿದ್ದಳು.

. . .ಕ್ರಮಪ್ರಕಾರವಾಗಿ ನಾಲ್ಕು ಗಂಟೆಗೆ ಕಳುವಿನ ವರದಿ ಬಂತು. ಯಜಮಾನರು ಸ್ವತಃ ಕೈಹೊಲಿಗೆಯ ಕೋಣೆಗೆ ನಡೆದರು. ದುಡಿಯುತ್ತಿದ್ದ ಹೆಂಗಸರೆಲ್ಲ ಎದ್ದು ನಿಂತರು.

ಯಜಮಾನರು ಕೇಳಿದರು :

" ಯಾವುದು ಶಾರ್ಟ್ ಬಂದಿರೋದು—ಬುಶ್ ಕೋಟೇ ? "

"ಹೌದು ಸಾರ್, ಏಳಿತ್ತು. ಈಗ ಆರೇ ಇದೆ."

[ಅವರ ಕೈಯಲ್ಲೇನೋ ಇತ್ತು.]

"ಸರಿ. ವಿರಾಮದ ವೇಳೆ ಮಾದರಿ ನೋಡೋದಕ್ಕೇಂತ ಒಂದನ್ನು ನಾನೇ ತಗೊಂಡು ಹೋಗಿದ್ದೆ. ತಗೊಳ್ಳಿ, ಇಲ್ಲಿದೆ."

ಕೈಯಲ್ಲಿದ್ದ ನೀಲಿ ಬುಶ್ ಕೋಟನ್ನು ಬಟ್ಟೆಗಳ ರಾಶಿಯ ಕಡೆಗೆ ಅವರು ಎಸೆದರು.

ಆ ಮಾತನ್ನು ಕೇಳಿದ ಹೆಂಗಸರು, ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು.

'ಕಳವಿ'ನ ವಿಚಾರಣೆಯಲ್ಲಿ ತನ್ನ ಹಿರಿತನ ತೋರಿಸಲು ಅವಕಾಶ ದೊರೆಯದೆ ಹೋಯಿತಲ್ಲಾ—ಎಂದು ಮೇಸ್ತ್ರಿಣಿ ಮರುಗಿದಳು.

* * * *

ಆ ಸಂಜೆ ಶಾರದಾ ಆಸ್ಪತ್ರೆಗೆ ಹೋದಳು. ಅಲ್ಲಿಂದ ಮನೆಗೆ.

ಮರುದಿನ, ಆರೋಗ್ಯ ಸರಿಯಾಗಿಲ್ಲವೆಂದು ತಿಳಿಸಿ ರಜೆಯ ಅರ್ಜಿಯನ್ನು ಬರೆದಳು.

ನಂಬರ್ ೨೦೮ ಆಮೇಲೆ ಆ ಕಾರಖಾನೆಗೆ ಕೆಲಸಕ್ಕೆ ಹೋಗಲಿಲ್ಲ...

...ಆ ಖಾರಖಾನೆಯೇ ಆ ತಿಂಗಳ ಕೊನೆಯಲ್ಲಿ ಮುಚ್ಚಿಕೊಂಡಿತು.

ಶಾರದೆಯ ತಂದೆ ಮಗಳಿಗಾಗಿ ಬೇರೆ ಕಡೆ ಕೆಲಸ ಹುಡುಕತೊಡಗಿದ್ದರು.

* * * *

ಆಸ್ಪತ್ರೆಯಿಂದ ಹೊರಬಿದ್ದ ನಾಣಿಗೆ, ಬಿಳಿಯ ಶುಭ್ರತೆಯ ಹುಚ್ಚು ಹಿಡಿದಿತ್ತು.

ಅವನ ರುಚಿ ಬದಲಾಗಿತ್ತು. ನೀಲಿಯಲ್ಲ ಬಿಳಿ—ಅವನಿಗೆ ಪ್ರಿಯವಾಯಿತು.

ಒಂದು ದಿನ ಶಾರದ ಕೇಳಿದಳು :

"ನಾಣಿ, ಅಪ್ಪ ಹನ್ನೆರಡು ರೂಪಾಯಿ ನನ್ನ ಕೈಲೇ ಬಿಟ್ಟಿದ್ದಾರೆ. ಯಾವ ಬಟ್ಟೆ ಹೊಲಿಸೋಣ ನಿಂಗೆ?"

ನಾಣಿಯೆಂದ :

“ಹನ್ನೆರಡು ಎಲ್ಲಿ ಸಾಕಾಗುತ್ತೆ? ನಿನಗೊಂದು ಬಿಳೀ ಸೀರೆ. ನನಗೊಂದು ಬಿಳೀ ಪಾಯಜಾಮ, ಶರಟು. ಇನ್ನೂ ಒಂದು ಆರೇಳು ರೂಪಾಯಿಯಾದರೂ ಬೇಕು.”

“ಹೂಂ.”

ಶಾರದಾ, ತುಂಬಿದ ಕಣ್ಣುಗಳಿಂದ ತಮ್ಮನನ್ನೇ ನೋಡಿದಳು. ಕಾಯಿಲೆ ಬಿದ್ದು ಎದ್ದವನು ಎಷ್ಟು ಕೃಶನಾಗಿ ಕಾಣುತ್ತಲಿದ್ದ! ಮತ್ತೆ ಆ ದೇಹ ತುಂಬಿಕೊಳ್ಳಬೇಕು. ಶಾಲೆಯ ಪುನರಾರಂಭವಾಗುವುದರೊಳಗಾದರೂ ನಾಣಿ ಮೈತುಂಬಿಕೊಂಡಿರಬೇಕು. . .

ತನಗೆ ಬೇರೊಂದು ಕೆಲಸ ಸಿಗಬೇಕು; ತಾನು ಸಂಪಾದಿಸಬೇಕು...

ಆ ಮೇಲೆ ಬಿಳಿಯ ಸೀರೆ, ಬಿಳಿಯ ಪಾಯಜಾಮ, ಬಿಳಿಯ ಶರಟು. . .

## ಕಥೆ: ಹನ್ನೆರಡು

# ಡಿ ಲಕ್ಸ್

ಏನೋ ಧೊಪ್ಪನೆ ಕುಸಿದು ಬಿದ್ದು ಟಣ್‌ಟಣಾರೆಂದು ಸಪ್ಪಳವಾಯಿತು. ರಾಮನ್ ತಿರುಗಿ ನೋಡಿದ. ಆತ ನಿಂತಿದ್ದ ಭೋಜನದ ಡಬ್ಬಿಯ ಬಾಗಿಲ ಮಗ್ಗುಲಲ್ಲೆ, ನಿಲ್ದಾಣದ ಪ್ಲಾಟ್‌ಫಾರ್ಮಿನ ಮೇಲೆ, ಅರಿವೆಯ ಗಂಟು ಹರಿದು, ಚೆಲ್ಲಾಪಿಲ್ಲಿಯಾಗಿ ಅಡ್ಡಾದಿಡ್ಡಿಯಾಗಿ ನಾಲ್ಕಾರು ಡಬ್ಬ ಗಳು ಹೊರಳಾಡುತ್ತಿದ್ದುವು. ಸಾ ಕಷ್ಟು ಹಳೆಯದಾಗಿದ್ದ ಉಕ್ಕಿನ ಟ್ರಂಕನ್ನೂ ಹರಿದ ಹೋಲ್ಡಾಲನ್ನೂ ತಲೆಯ ಮೇಲೆ ಹೊತ್ತಿದ್ದ ಹಮಾಲ, ಕಕ್ಕಾವಿಕ್ಕಿಯಾಗಿ ಆ ಡಬ್ಬಿಗಳ ಮಧ್ಯೆ ನಿಂತಿದ್ದ. ಎತ್ತರದ ಗಾತ್ರದೇಹದ ಹೆಣ್ಣುಮಗಳೊಬ್ಬಳು, ಕೆರಳಿ, ಕೀರಲು ದನಿಯಲ್ಲಿ ಗದರುತ್ತಿದ್ದಳು :

"ಕಣ್ಣಿಲ್ಲ ನಿನಗೆ? ಬುದ್ಧಿ ಇಲ್ಲ? ಕತ್ತೆ! ಕತ್ತೆ!"

ಹಿಂದೀ ಭಾಷೆ. ದಕ್ಷಿಣ ಭಾರತದ ಪದೋಚ್ಚಾರ. ['ಮದರಾಸಿ ನವರೇ ಇರಬೇಕು.'] ನುಸುಳಿ ಹೋಗುತ್ತಿದ್ದ ಯೌವನವನ್ನು ಶರೀರದ ಆಯಕಟ್ಟುಗಳಲ್ಲಿ ಬಿಗಿದು ಕಟ್ಟಿದ್ದಳು ಆಕೆ. ಅವಳ ಅಬ್ಬರಕ್ಕೆ ಆ ಕಟ್ಟು ಗಳಿಗೂ ಅರಿವೆಯ ಗಂಟುಗಳಿಗೆ ಒದಗಿದ ಗತಿಯೇ ಆಗುವುದೇನೋ ಎನಿಸುತ್ತಿತ್ತು.

ಅವಳಿಗಿಂತ ತುಸು ದೂರದಲ್ಲಿ ಗಂಡಸೊಬ್ಬ ನಿಂತಿದ್ದ—ತೆಳ್ಳಗಿನ ವ್ಯಕ್ತಿ. ಒಂದು ಕೈಯಲ್ಲಿ ಟಿಫಿನ್ ಕ್ಯಾರಿಯರ್ ಮತ್ತು ಚೀಲಗಳು ಮೂರು. ಎರಡು ದಿಂಬುಗಳು ಕಂಕುಳಲ್ಲಿ. ಸೊರಗಿದ ಮುಖ ಸಾರು ತ್ತಿತ್ತು, ಬದುಕಿನ ಅಕಾಲ ಬೇಸಗೆಯಲ್ಲಿ ಆತ ಹಣ್ಣಾದವನೆಂಬುದನ್ನು. ಅವನ ಇನ್ನೊಂದು ಕೈಯ ತೋರುಬೆರಳನ್ನು ಹಿಡಿದು, ಯಾವುದರ ಪರಿ ವೆಯೂ ಇಲ್ಲದೆ, ಗಾಡಿಯೊಂದನ್ನೆ ದಿಟ್ಟಿಸುತ್ತ ನಿಂತಿದ್ದಳು, ಹತ್ತು ವರ್ಷದ ಒಬ್ಬಳು ಹುಡುಗಿ. ['ಸಂಸಾರವೇ. ಸಂದೇಹವಿಲ್ಲ. ಸೆ ಕೆ ಗಾ ಲ ದ

ಬೆಂಕಿಯಿಂದ ಪಾರಾಗಲು ದೆಹಲಿ ಬಿಟ್ಟು ಮದರಾಸಿಗೆ ಓಡುತ್ತಿರಬೇಕು ಈ ಜನ.']

ಪ್ಲಾಟ್‌ಫಾರ್ಮಿನ ಮೇಲೆ ವಿಶೇಷ ಗದ್ದಲವೇನೂ ಇರಲಿಲ್ಲ. ಹೊಸ ದಾಗಿ ಆರಂಭವಾಗಿದ್ದ ಡಿ ಲಕ್ಸ್ ಎಕ್ಸ್‌ಪ್ರೆಸ್ ಜನಕ್ಕಿನ್ನೂ ರೂಢಿಯಾಗಿರ ಲಿಲ್ಲ. ಆದರೂ ಗಾಡಿಯೇರುವ ಅವಸರ. ['ಅಗೋ, ಸಮಯವೂ ಆಯಿತು. ಇನ್ನಿರುವುದು ಐದೇ ನಿಮಿಷ.']

ಆ ಮಹಿಳೆಯ ಅಟಾಟೋಪ ನಡದೇ ಇತ್ತು:

"ನೋಡ್ತಾ ನಿಂತಿದೀಯಲ್ಲೋ, ಬೇಕೂಫ! ಎತ್ತು ಅವನ್ನೆಲ್ಲ! ಬಿಗಿದು ಕಟ್ಟು!"

ಕೆಲಸವಿಲ್ಲದ ಜನ ಸುತ್ತುವರಿದು ನಿಂತರು, ಕಣ್ಣಗಲಿಸಿ ಆಕೆಯನ್ನೇ ನೋಡುತ್ತ. ಸಮಾಧಾನದ ವಿಷಯ ಅವಳ ಪಾಲಿಗೆ. ['ತನ್ನ ಒದರಾಟದ ನಡುವೆಯೂ ತೇಲುಗಣ್ಣುಗಳಿಂದ ಸುತ್ತೆಲ್ಲ ನೋಟ ಬೀರಿ, ಕೆಂಪು ಮೆತ್ತಿದ ತುಟಿಗಳನ್ನು ಮಿಸುಕಾಡಿಸಿದಳಲ್ಲ!']

ಚೇತರಿಸಿಕೊಂಡೆದ್ದ ಹಮಾಲನೆಂದ:

"ಎಲ್ಲಾ ಮಾಡತೇನ್ರಿ; ಮೊದಲು ತಲೆ ವ್ಯಾಗಿಂದೀಟು ಬ್ರೇಕ್ ವಾನ್‌ದಾಗ ಇಡಸ್ರಿ."

ಹೆಂಡತಿಯ ಹುಬ್ಬುಗಳ ಕುಣಿತ ಆರಂಭವಾದುದಕ್ಕೂ ಮುಂಚೆ, ಗಂಡನೆಂದ:

"ಯಾಕೆ?"

"ಏರ್ಕಂಡೀಸನ್ ಗಾಡಿ ಐತ್ರಿ ಇದು!"

ಅವಮಾನಿತಳಾದ ಲಲನೆ ಅಂದಳು:

"ಏರ್-ಕಂಡೀಶನ್ಡ್ ಗಾಡಿ ಅಂತಲೇ ಇದರಾಗ ಹೊಂಟೇವಿ! ಒಳ ಗಿಡು ಸಾಮಾನು!"

ಈ ತಾಯಿಗೆ ತಿಳಿಯ ಹೇಳುವುದರಲ್ಲಿ ಅರ್ಥವಿಲ್ಲವೆಂದು, ತಲೆಯ ಮೇಲಿದ್ದ ಹೇರಿನೊಡನೆ ಹಮಾಲ ಡಬ್ಬಿಯನ್ನೇರಿದ.

ಗಂಡನ ಕಡೆ ನೋಡಿದ ಮೆಮ್‌ಸಾಹೇಬರಿಂದ ಇಂಗ್ಲಿಷಿನಲ್ಲಿ ಮಾತು ಬಂತು:

"ಶಿಲಾಪ್ರತಿಮೆಯ ಹಾಗೆ ನಿಂತರಾಯ್ತೇನು? ಜೋಡಿಸಿ ಇಡ ಬಾರ್‍ದಾ ಇವನ್ನ?"

"ನಾನು — ಹೆಂಗ್ಮಾಡ್ಲಿ — ಕೈಯಾಗ—"

ಹಿಂದಿದ್ದವರು ಯಾರೊ ಫಕಪಕನೆ ನಕ್ಕರು.

ಇದನ್ನೆಲ್ಲ ನೋಡುತ್ತ ನಿಂತಿದ್ದ ರಾಮನ್‌ಗೆ ಬಲು ಮೋಜೆನಿಸಿತು. ಅವನ ತುಟಿಗಳ ಮೇಲೆ ಮುಗುಳುನಗೆ ಮೂಡಿತು.

"ಏಯ್! ಯ್ಯಾಕ್ನಿಂತಿದೀಯೊ ಅಲ್ಲಿ? ಒಳಗ್ನಡಿ!"

— ಗುಡುಗಿದವನು ಭೋಜನದ ಡಬ್ಬಿಯ ಮೇಲ್ವಿಚಾರಕ.

ಆ ಅಧಿಕಾರವಾಣಿಯನ್ನು ಕೇಳಿ ರಾಮನ್ ನಡುಗಿದ. ಪಾದ ಕದಲಿಸಿ ತೆಪ್ಪನೆ ಒಳಕ್ಕೆ ಸಾಗಿದ.

ರಾಮನ್ ನಿಂತಿದ್ದ ಜಾಗದಲ್ಲಿ ಈಗ ಆತನ ಒಡೆಯ ನಿಂತು, ಮಂದ ಹಾಸ ಸೂಸುತ್ತ ಆ ದೃಶ್ಯವನ್ನು ನೋಡಿದ. ಆ ಸ್ತ್ರೀರತ್ನ ತನ್ನನ್ನು ಗಮನಿಸಿದಾಗ, ಅರೆಚಣ ಎವೆ ಮುಚ್ಚಿ ತೆರೆದು, ಪ್ರಯತ್ನಪೂರ್ವಕವಾಗಿ ಧ್ವನಿಯನ್ನು ಮಿದುಗೊಳಿಸುತ್ತ, ಅವನೆಂದ:

"ಹೊತ್ತಾಯ್ತು. ನೀವು ಹತ್ತಿರಿ!"

ಒಳಸೇರಿದ ರಾಮನ್, ತನ್ನಂತೆಯೇ ಸ್ವಚ್ಛವಾದ ಬಿಳಿಯ ಸಮವಸ್ತ್ರ ಧರಿಸಿದ್ದ ಸಂಗಡಿಗರನ್ನು ನೋಡಿದ. ಬೇರೆ ರೈಲುಗಾಡಿಯಲ್ಲಾದರೆ ಒಂದು ಪ್ರವಾಸ ಮುಗಿಸುವ ವೇಳೆಗೆ ಬಿಳಿದು ಕರಿದಾಗಲೇಬೇಕು. ಇದರಲ್ಲಿ ಹಾಗಲ್ಲ. ಹೊರಗಿನ ಧೂಳು ಒಳ ಸೇರದು. ಉಗಿಯಂತ್ರದ ಧೂಮ ಬಳಿ ಸಾರದು. ಎಲ್ಲವೂ ಸ್ವಚ್ಛ—ಎಲ್ಲವೂ. ಭೋಜನದ ಉಪಾಹಾರದ ಆ ಕೊಠಡಿಯಲ್ಲಿ, ಮೇಜು ಕುರ್ಚಿಗಳು ಅಣಿಯಾಗಿದ್ದುವು. ಪ್ರತಿಯೊಂದು ಮೇಜಿನ ಮೇಲೆಯೂ ಶ್ವೇತವಸ್ತ್ರ. ಹೂದಾನಿ-ಕಾಗದದ ಹೂಗಳು. ಧೂಮ ಕರಂಡ. ಕಿಟಕಿಗೆ-ಪದರ ಪದರಗಳ ದಪ್ಪನೆಯ ಗಾಜಿನ ಕಿಟಕಿಗೆ-ಪರದೆ. ಕೈಮಗ್ಗದ ಬಣ್ಣ ಬಣ್ಣದ ಅರಿವೆಯನ್ನು ಹೋಲುತ್ತಿತ್ತು, ಪರದೆಗೆ ಬಳಸಿದ ಕ್ಯಾಲಿಕೋ. ಜಗ್ಗಿದರೆ ಕೆಳಕ್ಕೆ ಸರಿಯುತ್ತಿತ್ತು. ಮೇಲಕ್ಕೆ ತಳ್ಳಿದರೆ ಮೇಲ್ಮೊಗವಾಗಿ. ಫ್ಯಾನುಗಳಿಲ್ಲ. ಕೊಠಡಿಯ ತುಂಬೆಲ್ಲ ನಿಯಂತ್ರಿತ ಹವೆ. ಬಹು ಜನ ಪ್ರಯಾಣಿಕರಿಗಾಗಿ ಎರಡು ಡಬ್ಬಿಗಳು; ಮತ್ತೊಂದು. ಮೊದಲ ತರಗತಿಯವರಿಗಾಗಿ ಸಿದ್ಧವಾಗುತ್ತಲಿದ್ದ ತಿಂಡಿಯ ಹಾಗೆ

ಗಾಡಿಯೂ ತಾಜಾ ಮಾಲು. ಪ್ರಯಾಣಿಕರು ಮಾತ್ರ ಹಳಬರೇ. ಮುಖಗಳು ಬೇರೆ ಬೇರೆ. ಆದರೆ, ಒಟ್ಟಿನಲ್ಲಿ ಅವರೆಲ್ಲ ಒಂದೇ.

ಇಪ್ಪತ್ತು ವರ್ಷಗಳ ತನ್ನ ಒಟ್ಟು ಬದುಕಿನಲ್ಲಿ, ಅದರಲ್ಲೂ ತಿಳಿವಳಿಕೆ ಮೂಡಿದ ಬಳಿಕ ತಾನು ಜೀವಿಸಿದ್ದ ಸುಮಾರು ಹದಿನೈದು ವರ್ಷಗಳ ದೀರ್ಘ ಕಾಲ,ರಾಮನ್‌ಗಾಗಿದ್ದ ಅನುಭವಗಳ ಮೊತ್ತ ಒಂದೇ ತತ್ತ್ವವನ್ನು ಸಾರಿತ್ತು :

"ಜನ ಎಲ್ಲಿದ್ದರೂ ಒಂದೇ; ಒಟ್ಟಿನಲ್ಲಿ ಒಂದೇ."

ಘಂಟೆ. ನೀಳವಾಗಿ ಹೊರಟ ಶಿಳ್ಳು.

ಸದ್ದಿಲ್ಲದೆ ಗಾಡಿ ಚಲಿಸತೊಡಗಿತು.

ಹೃದಯದ ಹೊರೆ ಇಳಿದಂತಾಯಿತು ರಾಮನ್‌ಗೆ. ನವದೆಹಲಿಯನ್ನು ಬಿಟ್ಟು ಮುಂದಕ್ಕಿನ್ನು ಪ್ರಯಾಣ, ಮದರಾಸಿಗೆ. ಎತ್ತ ಹೋದರೂ ಸರಿಯೆ, ಆ ಬಗೆಯ ಚಲನೆಯೇ ಅಪೂರ್ವವಾದ ಸುಖ ಅವನ ಪಾಲಿಗೆ.

ಗಾಡಿ ಚಲಿಸುತ್ತಿತ್ತು. ನಿಲ್ದಾಣವನ್ನು ಹಿಂದಿಕ್ಕಬೇಕು ಇನ್ನು.

"ಹಾ! ಅಗೋ!"

ಸಹೋದ್ಯೋಗಿಗಳಲ್ಲಿ ಒಬ್ಬ ತೆಗೆದ ಉದ್ಗಾರ ಅದು.

ಎಲ್ಲರೂ ಕಿಟಕಿಯ ಗಾಜಿನಾಚೆಗೆ ದೃಷ್ಟಿ ಹರಿಸಿದರು.

ಪ್ಲಾಟ್‌ಫಾರ್ಮಿನ ಮೇಲೆ ಅಲ್ಲಿ ಇಲ್ಲಿ ನಿಂತಿದ್ದ ಜನರ ಗುಂಪುಗಳನ್ನು ಸೀಳಿ ಹಾದು, ಯುವಕನೊಬ್ಬ ಗಾಡಿಯ ಕಡೆಗೆ ಧಾವಿಸಿದ್ದ. ಕೈಯಲ್ಲೊಂದು ಸೂಟ್‌ಕೇಸ್. ಗಾಡಿಯ ಕದಗಳೋ ಬಲು ದಪ್ಪ, ಬಲು ಭದ್ರ. ಹಿಡಿ ಸಡಲಿದರೆ, ಅಡಿ ತಪ್ಪಿದರೆ, ಸಾವನ್ನು ಅಪ್ಪಿದಂತೆಯೇ.

ರಾಮನ್ ತಾನೂ ಉದ್ಗಾರವೆತ್ತಿದ :

"ಹಾ!"

ಬಾಗಿಲನ್ನು ತಳ್ಳಿದವನೆ ಮಗ್ಗುಲ ಡಬ್ಬಿಯೊಳಕ್ಕೆ ಬಂದೇ ಬಿಟ್ಟಿದ್ದ ಗಟ್ಟಿಮುಟ್ಟಾದ ಆ ಮನುಷ್ಯ.

ಕೊಠಡಿಯ ಮ್ಯಾನೇಜರು ನುಡಿದ:

"ಚಾರ್‌ಸೌಬೀಸೇ ಸರಿ. ಕೊಲೆಮಾಡಿಯೋ ಕಳವು ಮಾಡಿಯೋ ಬಂದಿರಬೇಕು. ಹುಂ!"

ಓಡಾಡುತ್ತಿರುವ ಗಾಡಿಯನ್ನೇರುವುದು ಕಷ್ಟದ ಕೆಲಸ. ಅಪಾಯಕರ;

ಆದರೂ—

ಸುಮಾರು ಹನ್ನೆರಡು ವರ್ಷಗಳಿಗೆ ಹಿಂದೆ, ಬಲು ಚಿಕ್ಕ ಹುಡುಗನಾಗಿದ್ದಾಗ, ಪಶ್ಚಿಮ ತೀರದ ತೆಂಗು ಕಂಗಿನ ತನ್ನ ಹಳ್ಳಿಯನ್ನು ಬಿಟ್ಟುಬಂದಿದ್ದ, ರಾಮನ್. ಹೆತ್ತವರನ್ನು, ಆರೆಂಟು ಜನ ಒಡಹುಟ್ಟಿದವರನ್ನು, ಬಿಟ್ಟು ಓಡಿ ಬಂದಿದ್ದ. ನಿತ್ಯ ಉಪವಾಸದ ಬಡ ಗುಡಿಸಲಿಗಿಂತ, ಅಪರಿಚಿತ ಊರುಗಳಲ್ಲಿ ಅಂಡಲೆಯುವುದೇ ಮೇಲೆಂದು ಅವನಿಗೆ ಕಂಡಿತ್ತು. ಕಾಲು ಬಳಲಿದವರೆಗೂ ದಾರಿ ನಡೆದು, ದಯೆತೋರಿದವರ ಎತ್ತಿನ ಗಾಡಿಯಲ್ಲಿ ಕುಳಿತು, ಹೇರು ತುಂಬಿದ್ದ ಲಾರಿಯಲ್ಲೂ ಬಂದಷ್ಟು ದೂರ ಸಾಗಿ, ರಾಮನ್ ನಗರ ತಲಪಿದ್ದ. ಚಲಿಸತೊಡಗಿದ್ದ ರೈಲಿನೆಡೆಗೆ ತಾನು ಧಾವಿಸಿದ್ದುದು ಮುಂದೆ ಆ ಊರಲ್ಲೇ. ಯಾರೋ ಕೈನೀಡಿದ್ದರು. ಅದನ್ನು ಹಿಡಿದು ಹತ್ತಿದ್ದ. ಹಳೆಯ ಗಾಡಿ. ನೂಕುನುಗ್ಗಲಿನ ಡಬ್ಬಿ. ಯುದ್ಧ ಕಾಲದ ಗದ್ದಲ. [ಕೊಲೆಯೂ ಮಾಡಿರಲಿಲ್ಲ ತಾನು. ಕಳವೂ ಮಾಡಿರಲಿಲ್ಲ.]

"ಸಪ್ಪೆ ಮೋರೆ ಹಾಕಿ ನಿಂತುಬಿಟ್ಟೆಯಲ್ಲೋ ತತ್ತ್ವಜ್ಞಾನಿ? ಗಿರಾಕಿಗಳು ಬಂದರೂ ಕಾಣಿಸೋದಿಲ್ವೇನು?"

ರಾಮನ್ ಬೆಚ್ಚಿಬಿದ್ದ. ಅದು ಆತನನ್ನು ಕುರಿತು ಮ್ಯಾನೇಜರನಿಂದ ಬಂದ ಗದರಿಕೆ.

ಪ್ರಯಾಣಿಕರು ಬರತೊಡಗಿದ್ದರು ಭೋಜನದ ಉಪಾಹಾರದ ಆ ಡಬ್ಬಿಗೆ. ಧೂಮ್ರಪಾನಕ್ಕೆ ನಿಷೇಧವಿಲ್ಲದಿದ್ದುದು ಗಾಡಿಯಲ್ಲಿ ಇದೊಂದೇ ಕಡೆ.

—"ಲೆಮನ್ ಕ್ರಶ್."

—"ಐಸ್‌ಕ್ರೀಮ್ ಇಲ್ಲ, ಅಂದಿಯೇನು?"

—"ಏಕ್ ಪಾಟ್ ಕಾಫಿ."

ಏನಾದರೂ ಮಾತು, ತಮ್ಮ ತಮ್ಮಲ್ಲೇ ಹರಟೆ. ನಿಮಿಷ ಗಟ್ಟಲೆ. ತಾಸುಗಟ್ಟಲೆ.

—"ಬ್ರೆಡ್ ಬಟರ್ ಔರ್ ಚಾಯ್ . . ."

ಜುಬ್ಬ, ಕಚ್ಚೆಪಂಚೆ, ಶಾಲು. ಭಾರೀ ಮೀಸೆಯ ಧಡೂತಿ ಇಸಮುಗಳು ಮೂವರು. ಆಂಧ್ರದೇಶದ ಜನ. ತೆಲುಗಿನಲ್ಲಿ ಮಾತುಕತೆ. ತೆಲುಗಿನಲ್ಲೇ. ಹಿಂದೆ ರಾಮನ್, ಮೊದಲಲ್ಲಿ ಕಲಿತ ತೆಲುಗು ಪದಗಳು ಎರಡೇ: "ದೊಂಗಲುನ್ನಾರು ಜಾಗ್ರತ!" ["ಕಳ್ಳರಿದ್ದಾರೆ ಎಚ್ಚರಿಕೆ!"] ಈಗ, ಆಡ

ಲಾಗದಿದ್ದರೂ ಎಷ್ಟನ್ನೋ ಅರ್ಥಮಾಡಿಕೊಳ್ಳುತ್ತಿದ್ದ. ಹಿಂದಿ ಬರುತ್ತಿತ್ತು, ಹರುಕು ಮುರುಕು ಹಿಂದಿ. ಮದರಾಸಿನ ಬೀದಿಗಳಲ್ಲಿ ತಿಪ್ಪೆತೊಟ್ಟಿಯ ಶಿಶುವಾಗಿ ಬೆಳೆದಾಗ ತಮಿಳೂ ಅಂಟಿಕೊಂಡಿತ್ತು. ಹಿಂದೆ ಬಹು ಭಾಷಾ ರಾಜಧಾನಿಯಾಗಿತ್ತು ಆ ಊರು. ಹೀಗಾಗಿ ಕನ್ನಡವೂ ಬರುತ್ತಿತ್ತು, ಅಲ್ಪ ಸ್ವಲ್ಪ. ಇಷ್ಟು ಸಾಲದೆಂದು ಬಟ್ಲರ್ ಇಂಗ್ಲಿಷ್ ಬೇರೆ. ಆರ್ಡರಿತ್ತವರು "Understand ?" ಎಂದರೆ, ಈತ ಅನ್ನುತ್ತಿದ್ದ : "Yes" . . .

ಇಲ್ಲಿ ಮೇಜುಗಳನ್ನು ಮೂವರು ಹಂಚಿಕೊಂಡಿದ್ದರು. ಮುಕ್ಕಾಲಂಶ ಸೀಟುಗಳು ಖಾಲಿಯಾಗಿಯೇ ಹೋಗುತ್ತಿದ್ದ ಗಾಡಿ. ಹೆಚ್ಚಿನ ಕೆಲಸವಿರಲಿಲ್ಲ.

. . .ಹುಡುಗಿಯನ್ನು ಕರೆದುಕೊಂಡು ಆ ಮಹಿಳೆ ಬಂದಳು. ರಾಮನ್ ಮೇಜಿನ ಬಳಿ ಸಾರಿದ.

ಹತ್ತಿರ ನಿಂತ 'ಬೇರರ್'ನನ್ನು ದಿಟ್ಟಿಸಿ ಆಕೆ ತಮಿಳಿನಲ್ಲಿ ಅಂದಳು :

"ಗಾಡಿ ಕುಲುಕ್ತದೆ. ನರ್ತನ ಮಾಡ್ಕೊಂಡೇ ಬರಬೇಕಾಗ್ತದೆ ಇಲ್ಲಿಗೆ!"

ರಾಮನ್ ನಗಲಿಲ್ಲ.

ಗಾಂಭೀರ್ಯ ತಳೆದು ಅವಳು ಕೇಳಿದಳು :

"ಏನೇನಿದೆ ?"

ಆಗ ಅಷ್ಟು. ರಾತ್ರಿಗೆ ಏನಿತ್ತು ? ಮಾರನೆಯ ಬೆಳಗ್ಗೆ ?

"ಆರು ಘಂಟೆಗೆ ಕಾಫಿ ಬೇಕೇ ಬೇಕು."

ಅದು ಬೆಡ್ ಕಾಫಿ. [ಮಲಗಲಾಗದೆ ಕುಳಿತೇ ಇದ್ದರೂ ಕೂಡಾ !] ಆಮೇಲೆ break-fast. ಮಧ್ಯಾಹ್ನ ಎಷ್ಟು ಹೊತ್ತಿಗೆ ಸಿಗಬಹುದು ಊಟ ?

ಮಾತು, ಮಾತು, ಮಾತು.

"ಅಬ್ಬ !" ಎಂದುಕೊಂಡ ರಾಮನ್.

ಕಿವಿ, ಕತ್ತು, ಕೈಗಳ ತುಂಬ ಬಂಗಾರ. ಮಾತಿಗಷ್ಟೇ ಬೆಲೆ ಇರಲಿಲ್ಲ.

"ಬಿಲ್ ಮದರಾಸಿನಲ್ಲೇ ಒಟ್ಟಾಗಿ ಕೊಡ್ತೀಯೋ, ಅಲ್ಲ"

ಉತ್ತರ ಥಟ್ಟನೆ ಬಂತು :

"ಇಲ್ಲ. ಲೆಕ್ಕ ಇಡೋದು ತೊಂದರೆ . . ."

"ಸರಿ, ಸರಿ . . ."

ಒಂದು ರೂಪಾಯಿ ಚಿಲ್ಲರೆಯ ಅಲ್ಪೋಪಹಾರ ಮುಗಿಸಿ ಆಕೆ ಹೊರಟಳು. ಎರಡು ದಿನಗಳ ಪ್ರಯಾಣ ಮುಗಿದಾಗ ಬಿಲ್ ಕೊಟ್ಟರೆ,

ಭಕ್ಷೀಸೇನೋ ಸಿಗಬಹುದು. ಆದರೆ ಈ ಮಹಾರಾಯಿತಿಯೊಡನೆ, ಲೆಕ್ಕ ಸರಿ ತಪ್ಪು ಎಂದು ವಾದಿಸುವವರು ಯಾರು? ನಡುವೆ ಕಣ್ಣು ತಪ್ಪಿಸಿ ಇಳಿದು ಹೋದರಂತೂ ತನಗೆ ಕ್ಷೌರವೇ! ಒಮ್ಮೆ ಕೆನ್ನೆ ಕೆತ್ತಿಸಿಕೊಂಡಿದ್ದ ರಾಮನ್‌ಗೆ ಅಂತಹ ಕ್ಷೌರದ ಸವಿ ಚೆನ್ನಾಗಿ ಗೊತ್ತಿತ್ತು.

ಹೊಸ ಹೊಸ ಗಿರಾಕಿಗಳು. ಸಿಗಾರ್ ಹಚ್ಚಿದ್ದ ಬೊಕ್ಕ ತಲೆಯವನೊಬ್ಬ. ಭಾರತ ದರ್ಶನಕ್ಕೆಂದು ಹೊರಟಿದ್ದ ಅಮೇರಿಕನ್ ದಂಪತಿಗಳಿಬ್ಬರು. ಒಂಟಿಯಾಗಿಯೇ ಪ್ರವಾಸ ಬೆಳಸುತ್ತಿದ್ದ ವಿದ್ಯಾರ್ಥಿನಿ ಒಬ್ಬಾಕೆ. ಆಗ್ರಾ ಗ್ವಾಲಿಯರ್‌ವರೆಗಿನ ಪ್ರಯಾಣಿಕರು ಕೆಲವರು. ತಲೆಯಲ್ಲಿ ಪುಟ್ಟ ಚಂಡಿಕೆ ಇರಿಸಿ ಸೂಟು ಧರಿಸಿದವನೊಬ್ಬ.

ಕೊನೆಯ ಆ ಮನುಷ್ಯ, ಕೈತುಪಾಕಿಯ ಗುಂಡುಗಳಂತೆ ವಟವಟ ಮಾತು ನಡಸಿದ್ದ:

"ಏರ್ ಸರ್ವೀಸಿನ ಹಾಗೆ. ಈ ಗಾಡೀಲಿ ರಾತ್ರಿ ಕೂತೇ ಇರೋದು ಬಹಳ ಕಷ್ಟ. ಮಂತ್ರಿಯವರನ್ನು ಭೇಟಿ ಮಾಡಿ ನಾನು ಮಾತಾಡ್ಬೇಕು."

. . . ದೀಪಗಳು ಹತ್ತಿಕೊಂಡುವು. ಹೊರಗಿನ ಮಬ್ಬುಗತ್ತಲೆಯನ್ನೇ ದಿಟ್ಟಿಸುತ್ತ ರಾಮನ್ ನಿಂತ. ಆತನ ಕೆಲಸವಿನ್ನೂ ಖಾಯಂ ಆಗಿರಲಿಲ್ಲ. ಊರಿನಿಂದ ಕಾಗದ ಬಂದಿತ್ತು: 'ವರ್ಷಕ್ಕೊಮ್ಮೆಯಾದರೂ ಬಂದು ಹೋಗಬಾರದೇನು? ನಿನ್ನ ತಾಯಿಗೆ ಕಾಹಿಲೆ, ತಂಗಿಗೆ ಮದುವೆ ಗೊತ್ತಾಗಿ. ರಜಾ ಪಡೆದು ಇದ್ದಷ್ಟು ಹಣ ತಗೊಂಡು ಬಾ . . .' ರಜಾ ಸಿಗುವಂತಿರಲಿಲ್ಲ. ಹಣವನ್ನೇನೋ ಕಳಿಸಬೇಕು; ಈ ತಿಂಗಳ ವೇತನ ಕೈಗೆ ಬಿದ್ದೊಡನೆ ಆದಷ್ಟನ್ನು ಕಳಿಸಬೇಕು . . .

ಯಾರೋ ಬಂದು ಕುಳಿತು ಕೆಮ್ಮಿದಂತಾಯಿತು. ತನ್ನ ಗಮನ ಸೆಳೆದ ಒಣ ಕೆಮ್ಮು. ಮುಗುಳುನಗೆ ಜತೆಗೆ.

"ಊಟ ತಯಾರಿದೆಯೇನು?"

ಇಂಗ್ಲಿಷಿನಲ್ಲಿ ಬಂದ ಪ್ರಶ್ನೆಗೆ ಇಂಗ್ಲಿಷಿನಲ್ಲೇ ಹೌದೆಂದು ಉತ್ತರ. ಮತ್ತೆ ಮುಂದೆ—ತಾನೇ—

"ಮಾಂಸಾಹಾರವೋ? ಶಾಕಾಹಾರವೋ?"

ಉತ್ತರದ ಜತೆ—

". . . ಚಪಾತಿ ಮತ್ತು ಅನ್ನ".

. . . ಆತ ಉಣ್ಣುತ್ತಿದ್ದುದನ್ನು ರಾಮನ್ ನೋಡುತ್ತ ನಿಂತ. ಹಿಂದೆ ಎಲ್ಲಿ ಕಂಡಿದ್ದೆ ಇವನನ್ನು?—ಎಲ್ಲಿ? ಓ! ರೈಲು ದೆಹಲಿ ನಿಲ್ದಾಣ ಬಿಟ್ಟ ಮೇಲೆ ಓಡಿ ಬಂದು ಹತ್ತಿದವನು ಈತನೇ. ನಸುಹಳದಿಯ ಪ್ಯಾಂಟು, ಬಿಳಿಯ ಬುಶ್‌ಶರಟು, ಕನ್ನಡಕ. ಆ್ಞ ಈತನೇ—

ಕೊಲೆಗಡಕನೂ ಅಲ್ಲ, ಕಳ್ಳನೂ ಅಲ್ಲ. ಯಾವುದಾದರೊಂದು ಅವಸರದ ಕೆಲಸದ ಮೇಲೆ ಹೊರಟಿರಬಹುದು. ಉತ್ತರ ಭಾರತೀಯನೆ? ಇರಲಾರದು. ತಮಿಳನಂತೂ ಅಲ್ಲ. ತನ್ನ ನಾಡಿನವನು? ಕಲ್ಪನೆಯೇನೋ ಮಧುರವಾದುದು. ಆದರೆ ಊಹೆಗೆ ಯಾವ ಆಧಾರವೂ ಇರಲಿಲ್ಲ. ತೆಲುಗನೂ ಇದ್ದಂತಿಲ್ಲ.

ತಮಿಳಿನಲ್ಲಿ ರಾಮನ್ ಕೇಳಿದ:

"ಮದರಾಸಿಗೆ ಹೋಗ್ತಿದೀರೇನು?"

"ಮತ್ತೂ ಮುಂದೆ. ಬೆಂಗಳೂರಿಗೆ."

—ಇಂಗ್ಲಿಷಿನಲ್ಲಿ ಬಂದ ಉತ್ತರ.

['ಕನ್ನಡಿಗ ಹಾಗಾದರೆ.']

ಊಟ ಮುಗಿದಾಗ ಆ ಮನುಷ್ಯ ಕೇಳಿದ:

"ಬಿಲ್ ಎಷ್ಟಾಯ್ತು? ಈಗಲೇ ಕೊಡಲಾ?"

"ಹೇಗೆ ಬೇಕೋ ಹಾಗೆ. ಮದರಾಸಿನಲ್ಲೇ ಕೊಟ್ಟೀರಂತೆ."

"ಆಗಲಿ," ಎಂದ ಆತ ಸಿಗರೇಟು ಹಚ್ಚುತ್ತ.

ಮಾತು ತನ್ನ ಬಾಯಿಯಿಂದ ಹೊರಬಿದ್ದ ಬಳಿಕ ರಾಮನ್ ಚಡಪಡಿಸಿದ. ಛೆ! ಏನು ಮಾಡಿದೆ ತಾನು? ಬಿಲ್ಲಿನ ಹಣ ಎಲ್ಲಾದರೂ ಸಿಗದೇ ಹೋದರೆ? ಈ ತಿಂಗಳ ವೇತನಕ್ಕೇ ಸಂಚಕಾರ. ಈಗ ಏನೂ ಮಾಡುವಂತಿರಲಿಲ್ಲ. ಆ ಹೆಂಗಸಿಗಾದರೆ ನಕಾರದ ಉತ್ತರವಿತ್ತಿದ್ದ, ಬಲು ಸುಲಭವಾಗಿ. ಇಲ್ಲಿ ಯಾಕೆ ಹೀಗಾಯಿತು? ಯಾಕೆ?

ಬಾಗಿಲಲ್ಲಿ ಆ ಹೆಣ್ಣುಮಗಳು ಕಾಣಿಸಿಕೊಂಡಳು.

ಮ್ಯಾನೇಜರು, ಪಕ್ಕದಲ್ಲಿದ್ದ ತನ್ನ ಅಚ್ಚುಮೆಚ್ಚಿನ ಕೆಲಸಗಾರನೊಡನೆ ನಗುತ್ತ ಅಂದ:

"ಡಿ ಲಕ್ಸ್ ಬರ್‍ತಿದೆ, ನೋಡು!"

ಅವಳ ಹಿಂದೆ ಹುಡುಗಿ ಇದ್ದಳು. ಹುಡುಗಿಯ ಹಿಂದೆ, ತಂದೆ.

ಕನ್ನಡಕದ ಯುವಕ ಇತರರಂತೆ, ಕಬಳಿಸುವ ನೋಟದಿಂದ ಆಕೆಯನ್ನು ನೋಡಲಿಲ್ಲ. ಎದ್ದು, ತನ್ನ ಡಬ್ಬಿಗೆ ಹಿಂತಿರುಗಿದ.

'ಇವನು ಮೋಸ ಮಾಡಲಾರ,' ಎಂದುಕೊಂಡ ರಾಮನ್.

. . . ಝಾನ್ಸಿ ದಾಟಿದ ಬಳಿಕ, ಮೇಜುಗಳನ್ನು ಸರಿಸಿ ಅಲ್ಲೇ ಶಯನ. ನಿದ್ದೆ ಬರುವುದಕ್ಕೆ ಮುನ್ನ ಯೋಚನೆ ಕಾಡಿತು:

ಬೆಳಗಿನ ಜಾವವೇ ಭೋಪಾಲದಲ್ಲೋ ಇತಾರ್ಸಿಯಲ್ಲೋ ಆತ ಇಳಿದು ಹೋದರೆ?

ಬೆಳಗಾಯಿತು.

ಒರಗು ಆಸನಗಳಲ್ಲಿ ಕುಳಿತೇ ನಿದ್ದೆಹೋಗಿದ್ದ ಜನ ಎದ್ದು ಬಂದರು,—ಕಾಫಿಗೆಂದು, ಚಹಾಕ್ಕೆಂದು.

ತನ್ನ ಮೇಜಿನ ತನ್ನ ಮೂಲೆಗೆ ಸಾಗಿದ, ಆ ಯುವಕ ಕೂಡಾ.

ಮಧ್ಯಾಹ್ನಕ್ಕೆ ನಾಗಪುರ. ಸಂಜೆಗೆ ಕಾಜೀಪೇಟೆ. ನಡುವಿರುಳಿಗೆ ಬೆಜವಾಡಾ.

ಮೂರನೆಯ ಪ್ರಾತಃಕಾಲ . . .

ಹತ್ತು ಹೊಡೆಯುವ ಹೊತ್ತಿಗೆ ಮದರಾಸು ಸೇರಬೇಕು. ಗುಡ್ಡಗಳನ್ನು ಕೊರೆದು, ನದಿಗಳನ್ನು ದಾಟಿ, ಕಣಿವೆಗಳನ್ನು ಬಳಸಿ, ಬಣ್ಣಬಣ್ಣದ ಕನ್ನಡಿ ಹಾವಾಗಿ, ಎರಡು ಇರುಳು ಒಂದು ಹಗಲು ಕಳೆದ ಬಳಿಕ, ಗಾಡಿಗೆ ವಿಶ್ರಾಂತಿ. ರಾಮನ್‌ಗೂ ವಿಶ್ರಾಂತಿ, ಒಂದು ದಿನದ ಮಟ್ಟಿಗೆ. ಆದರೆ ಈಗ ಬಿಲ್ ಸಿದ್ಧಗೊಳಿಸಬೇಕು. ಗೂಡೂರು ದಾಟಿತಲ್ಲ?

ಊಹೂಂ. ಡಬ್ಬಿಗೇ ಒಯ್ದುಕೊಡುವುದು ಚೆನ್ನಲ್ಲ. ಕೊನೆಯ ಘಳಿಗೆಯವರೆಗೂ ಅವನು ಈ ಕಡೆಗೆ ಬರದೇ ಇದ್ದರೆ ಅತ್ತ ಹೋದರಾಯಿತು.

ಜುಕು ಜುಕು ಜೂ, ಜುಕು ಜುಕು ಜೂ . . .

[ಇತರ ಗಾಡಿಗಳಿಗಿಂತ ಕಡಮೆ ಸಪ್ಪಳ.]

ಅಗೋ ಸಿಗ್ನಲ್! ಮದರಾಸಿನ ಕಲರವ. ರಣ ರಣ ಬಿಸಿಲು. ಆ ಪೂರ್ವಾಹ್ನದಲ್ಲೇ . . . ಹತ್ತಾರು ಗಾಡಿಗಳು ನಿಂತ ನಿಲ್ದಾಣದ ಗಲಭೆ. ತಮಿಳೋ ತಮಿಳು. ಇಳಿಯುವವರ ಅವಸರ.

ಎಲ್ಲಿ, ಎಲ್ಲಿ ಆತ?

ಕೊಂಕುನಗೆಯೊಡನೆ ಮ್ಯಾನೇಜರು ಕರ್ಕಶ ಧ್ವನಿಯಲ್ಲಿ ಅಂದ:

" ರಾಮನ್, ಎಂಗೆ ಪಣಂ? "

ಪಣಂ – ಹದಿಮೂರೂವರೆ ರೂಪಾಯಿ. ಎಲ್ಲಿ ಹೋದ ಆತ? ಗಾಡಿ ಆಗಲೇ ನಿಂತಿತ್ತು. ಯುವಕ ಡಬ್ಬಿಯಲ್ಲಿರಲಿಲ್ಲ. ಪ್ಲಾಟ್‌ಫಾರ್ಮಿನ ಮೇಲೆ? ಮೋಸಮಾಡಿಯೇ ಬಿಟ್ಟನೆ? ಅಯ್ಯೋ! ಹದಿಮೂರೂವರೆ ರೂಪಾಯಿ! ಹದಿಮೂರೂವರೆ ರೂಪಾಯಿ! . . .

ರಾಮನ್ ಹುಚ್ಚನಂತೆ ಕೆಳಕ್ಕೆ ಧುಮುಕಿ ಗಾಡಿಯುದ್ದಕ್ಕೂ ಓಡಿದ. ಗೇಟಿನ ಕಡೆಗೆ ಧಾವಿಸಿದ. ಸಿಕ್ಕಿದ, ಸಿಕ್ಕಿ ಬಿದ್ದ—ಎಂದು ಭ್ರಮಿಸಿದ.

ಎಷ್ಟು ಕ್ರೂರವಾಗಿದ್ದುವು ಆ ನಿಮಿಷಗಳು!

ದೆಹಲಿಯಲ್ಲಿ ಅವಸರದಲ್ಲಿ ಗಾಡಿಹತ್ತಿದವನು ಇಲ್ಲಿ ಅವಸರದಲ್ಲಿ ಫರಾರಿ. ಕೊಲೆಗಡಕ—ಕಳ್ಳ!

ಎಂಥ ಪೆದ್ದುತಾನು. . .!

. . .ಬೆವರು ಸುರಿಸುತ್ತ, ಭಾರವಾದ ಹೆಜ್ಜೆಗಳನ್ನಿಡುತ್ತ, ರಾಮನ್ ಭೋಜನದ ಡಬ್ಬಿಯ ಕಡೆಗೆ ಮರಳಿದ.

ಆ ಮಹಿಳೆ ಸಂಸಾರ ಸಮೇತ ಅದೇ ತಾನೆ ಇಳಿಯುತ್ತಲಿದ್ದಳು. ಆ ಪ್ರವಾಸದಲ್ಲಿ ಮೂರನೆಯ ಸಾರೆ ಬದಲಿಸಿದ್ದ ಸೀರೆ. ಬಳಲಿಕೆಯನ್ನು ಮರೆಸಿದ್ದ ಶೃಂಗಾರ, ಒನಪು–ವೈಯಾರ.

" ಏಯ್ ಕೂಲಿ! "

—ದರ್ಪದ ನಿರ್ದೇಶ. ಈ ಬಾರಿ [ಇಲ್ಲಿ] ತಮಿಳಿನಲ್ಲಿ. . .

ಇವಳನ್ನಾದರೂ ನಂಬಬಹುದಾಗಿತ್ತು ತಾನು.

. . .ರಾಮನ್ ನೀಳವಾಗಿ ಉಸಿರುಬಿಟ್ಟು ತನ್ನ ಡಬ್ಬಿ ಹತ್ತಿದ. ಕತ್ತಿನ ನರೆಗಳು ಬಿಗಿದು ಬಂದು ಕಂಬನಿ ಹಣಿಕಿ ಹಾಕಿತು. ಉದ್ವೇಗ ದಿಂದ ಮುಖ ಕೆಂಪಿಟ್ಟಿತು.

ಆತ ಒಳಬರುತ್ತಿದ್ದಂತೆ, ಸಹೋದ್ಯೋಗಿಗಳಲ್ಲೊಬ್ಬ ನಗುತ್ತ ನುಡಿದ:

" ಹೋಗು, ಕಾದಿದೆ! "

ಕಾದಿರಬೇಕು ಬೈಗಳ ಸುರಿಮಳೆ. ಖಾಯಂ ಆಗುವುದಿರಲಿ, ಉದ್ಯೋಗವೇ ಹೋಗಬಹುದಿನ್ನು.

[‘ ತಂಗಿಯ ಮದುವೆಗೆ ಆದಷ್ಟು ಹಣ ಕಳಿಸಬೇಕೆಂದಿದ್ದೆ.’ ]

...ಕಾಲುಗಳು ಕುಸಿದು, ತಾನು ಬೀಳುವಂತಾಯಿತು ರಾಮನ್‌ಗೆ.

ದುರುಗುಟ್ಟಿ ನೋಡುತ್ತ ಮ್ಯಾನೇಜರು ಗುಡುಗಿದ:

“ ಎಲ್ಲೋಗಿದ್ದ್ಯೋ ಪೋಲಿ ಅಲಕೊಂಡು ? ತಗೋ.”

ಹತ್ತರದೊಂದು ಐದರದೊಂದು ನೋಟುಗಳಿದ್ದುವು. ಮೇಜಿನ ಮೇಲೆ, ಬಿಲ್ಲಿನ ಜತೆ. ಚಿಲ್ಲರೆ ಒಂದೂವರೆಯನ್ನು ಮ್ಯಾನೇಜರು ರಾಮನೆಡೆಗೆ ತಳ್ಳುತ್ತಿದ್ದ...

ಚಿಲ್ಲರೆ. . .ಬಿಲ್ಲು. . .

—ಡಿ ಲಕ್ಸ್ ಪ್ರಯಾಣಿಕ ತೆತ್ತುಹೋಗಿದ್ದ ಹಣ.

ಹರ್ಷಾಶ್ರುವಾಗಿ ಮಾರ್ಪಟ್ಟು ಒಸರ ಬಯಸಿದ ತನ್ನ ಕಣ್ಣೊರತೆ ಇತರರಿಗೆ ಕಾಣಿಸದಿರಲೆಂದು, ಗಾಜಿನ ಕಿಟಕಿಯ ಕಡೆಗೆ ರಾಮನ್ ಮುಖ ಮಾಡಿದ.

# ಮೇಲ್ನುಡಿ

ಕನ್ನಡದ ಇಂದಿನ ಲೇಖಕರಲ್ಲಿ ನಿರಂಜನರ ಹೆಸರು ಎಲ್ಲರಿಗೂ ಪರಿಚಿತವಾದುದೇ. 'ನಿರಂಜನ' ಎಂಬುದನ್ನು ಮೊದಲು ಕಾವ್ಯನಾಮವಾಗಿ ಕುಳುಕುಂದ ಶಿವರಾಯರು ಬಳಸಿದರೂ, ಈಗ ಅದು ಆವರಣ ಗುರುತುಗಳನ್ನು ಕಳೆದುಕೊಂಡು ಅವರ ನಾಮಧೇಯವಾಗಿದೆ. ಪತ್ರಿಕಾವೃತ್ತಿಯಲ್ಲಿ ಪಳಗಿದ ಇವರ ಲೇಖನಿ ಕಥೆ ಕಾದಂಬರಿಗಳಲ್ಲಿ ಅನುರಕ್ತವಾಗಿದೆ. ಸುಮಾರು ಇಪ್ಪತ್ತೈದು ಕಾದಂಬರಿಗಳನ್ನೂ ಹತ್ತಾರು ಕಥಾಸಂಕಲನಗಳನ್ನೂ ಅನೇಕ ಅನುವಾದ ಗ್ರಂಥಗಳನ್ನೂ ರಚಿಸಿರುವ ನಿರಂಜನ, ಇತರ ಸಾಹಿತ್ಯ ಪ್ರಕಾರಗಳಲ್ಲಿಯೂ ಗ್ರಂಥಗಳನ್ನು ಹೊರತಂದಿದ್ದಾರೆ. ಅವುಗಳಲ್ಲಿ ನಾಟಕಗಳು ಪತ್ರಸಂಕಲನಗಳು ಮುಖ್ಯವಾದುವು. ಈ ವರೆಗೆ ಅವರ ಒಟ್ಟು ಕೃತಿಗಳ ಸಂಖ್ಯೆ ಐವತ್ತನ್ನು ಮಿಕ್ಕಿದೆ.

'ಬನಶಂಕರಿ', 'ಚಿರಸ್ಮರಣೆ', 'ರಂಗಮ್ಮನ ವಠಾರ', 'ಕಲ್ಯಾಣಸ್ವಾಮಿ', 'ಸ್ವಾಮಿ ಅಪರಂಪಾರ' ಮುಂತಾದುವು ಅವರ ಉತ್ತಮ ಕಾದಂಬರಿಗಳು. ಅವರ ಸಣ್ಣಕಥೆಗಳಲ್ಲಿ ಸ್ವಾರಸ್ಯವಾದ ಕೆಲವನ್ನು ಈ ಸಂಕಲನದಲ್ಲಿ ನಾವು ನೋಡಬಹುದು. ಈ ಮೇಲ್ನುಡಿಯಲ್ಲಿ ನಿರಂಜನರ ಈ ಕಥೆಗಳ ಪರಿಚಯಮಾಡಿಕೊಡಲು ಪ್ರಯತ್ನ ಮಾಡಿದೆ. ವಾಸ್ತವತೆಯನ್ನು ಚಿತ್ರಿಸುವುದರಲ್ಲಿಯೂ, ವಿಡಂಬನೆಯನ್ನು ಸರಿಯಾಗಿ ಮಾಡುವುದರಲ್ಲಿಯೂ, ಭಾವಕ್ಕೆ ಸರಿಯಾದ ಶೈಲಿಯನ್ನಳವಡಿಸುವುದರಲ್ಲಿಯೂ ಸಾಮರ್ಥ್ಯವನ್ನು ಪಡೆದಿರುವ ನಿರಂಜನರ ಕಥೆಗಳ ಮುಂದಿನ ವಿಶ್ಲೇಷಣೆಯಿಂದ ಓದುಗರಿಗೆ ಸಹಾಯವಾಗಬಹುದೆಂದು ಲೇಖಕನ ಆಸೆ.

## ನಾಸ್ತಿಕ ಕೊಟ್ಟ ದೇವರು

ಕಲೆಗಾರ ಸೀತಾಪತಿ ಘಟ್ಟದ ಸೀಮೆಗೆ ಅಲ್ಲಿನ ರಮ್ಯ ವಾತಾವರಣದ ಸುಖಾಸ್ವಾದನೆಗಾಗಿ ಬಂದರೆ ಅಲ್ಲಿ ಅವನಿಗೆ ದೊರಕಿದುದು ಅದಕ್ಕೆ ವಿರುದ್ಧವಾದುದೇ. ಬಯಲುನಾಡಿನ ಬಡವರ ಸೇನೆ ಅಲ್ಲಿ ಬಂದು ದುಡಿಮೆಗಾಗಿ

ಬೀಡುಬಿಟ್ಟಿತ್ತು. ಇಲ್ಲಿಗೆ ಒಂದು ಸಲ ಬಂದರಾಯಿತು ಮುಂದಿನ ಸಲವೂ ಬರುವುದಕ್ಕೆ ಬೇಕಾದಷ್ಟು ಸಾಲದ ಭಾರವನ್ನು ಹೊತ್ತೇ ಊರಿಗೆ ಹಿಂದಿರುಗುವುದು. ಮತ್ತೆ ಈ ಚಕ್ರಕ್ಕೆ ನಿಲುಗಡೆಯೇ ಇಲ್ಲ. ಇಂಥ ಬಿಕ್ಕಟ್ಟಿನಲ್ಲಿ ಸಿಕ್ಕಿದ್ದ ಒಂದು ಕುಟುಂಬದ ಹೆಣ್ಣು ಬಯಲುಸೀಮೆಯ ಅರ್ಧ ಊಟವಾದರೂ ಸಾಕೆಂದು ಹಿಂದಿನ ಆವರಣವನ್ನೆ ಬಯಸುವುದರಲ್ಲಿ ತುಂಬ ಅರ್ಥವಿದೆ. ಇದನ್ನು ಸೀತಾಪತಿಗೆ ತಿಳಿಸಿದ್ದು ಯಾವ ವ್ಯಕ್ತಿಯೂ ಅಲ್ಲ; ಅವನ ಕಿವಿಯಮೇಲೆ ಅಯಾಚಿತವಾಗಿ ಬಿದ್ದ "ತಿಗಳರ ಏಕಾಂತ".

ಕಲಾವಿದನ ಮನಸ್ಸಿನ ಮೇಲಾದ ಗಾಢ ಪರಿಣಾಮದ ಪ್ರತಿಫಲವಾಗಿ ಒಂದು ಕಲಾಕೃತಿ ಜೇಡಿಯ ಮಣ್ಣಿನಿಂದ ನಿರ್ಮಾಣವಾಯಿತು—ಹುಟ್ಟೂರಿನತ್ತ ಕೈಚಾಚಿ ಹಂಬಲದ ದೃಷ್ಟಿಬೀರಿದ ಬಡಪಾಯಿಗಳ ಪ್ರತಿನಿಧಿ. ಇದರಿಂದ ಕಲಾವಿದನಿಗೆ ತೃಪ್ತಿಯಾಯ್ತು.

ಅಲ್ಲಿನ ಧರ್ಮಗುರುಗಳು ಬಂದು ಒಂದು ದೇವರ ವಿಗ್ರಹ ನಿರ್ಮಾಣಕ್ಕೆ ಒತ್ತಾಯಹಾಕಿದರು. ಇದು ಸೀತಾಪತಿಗೆ ಇಷ್ಟವಿಲ್ಲದ ಕೆಲಸ. ತೋಟದಿಂದ ಯಾರೂ ವಾಪಸು ಓಡಿಹೋಗದಂತೆ ಮಾಡಲು ತೋಟದ ಯಜಮಾನ ಧರ್ಮಗುರುಗಳ ಮರೆಹೊಕ್ಕು ಈ ದೇವ ವಿಗ್ರಹವನ್ನು ತಯಾರುಮಾಡಿಸಲು ಹವಣಿಸಿದ್ದ. ಇಲ್ಲೂ ಎರಡು ಪಕ್ಷ. ಒಂದು ಓಡಿಹೋಗಲು ಬಯಸುವ ಪಕ್ಷ—ಆ ಹೆಣ್ಣಿನಂತೆ. ಇನ್ನೊಂದು—ಅವರನ್ನು ಅಲ್ಲೆ ನೆಲೆನಿಲ್ಲುವಂತೆ ಮಾಡುವ ಮತ್ತು ಅದರಿಂದ ತನ್ನ ಬೊಕ್ಕಸತುಂಬಲು ಹವಣಿಸುವ ತೋಟದ ಯಜಮಾನ, ಅವನ ಅನುಯಾಯಿ ಧರ್ಮಗುರು. ಕಲಾವಿದನಿಗೆ ಎರಡೂ ಒಂದೆ—ಎರಡೂ ಒಂದೊಂದು ಸತ್ಯದ ಪ್ರತಿನಿಧಿಗಳು.

ಸೀತಾಪತಿ ದೇವರ ವಿಗ್ರಹವನ್ನು ನಿರ್ಮಾಣ ಮಾಡಿದ. "ಉದ್ದಕ್ಕೂ ಮುಗುಳ್ನಗುತ್ತಿದ್ದ ಸೀತಾಪತಿಯ ಕೈಯಲ್ಲಿ ಆ ಮಣ್ಣು ರೂಪುತಳೆದು ಮೆಲ್ಲಮೆಲ್ಲನೆ ದೇವರಾಗಿ ಮಾರ್ಪಾಟಾಯಿತು." ಆದರ ಪ್ರತಿಷ್ಠಾಪನೆಯ ದಿನ ಅವನು ತನ್ನೂರಿಗೆ ಹಿಂದಿರುಗಿದ್ದ. ಕಲಾವಿದನ ವ್ಯವಹಾರ, ರೀತಿಗಳನ್ನು ಕಂಡ ಧರ್ಮಗುರು ಅವನನ್ನು ನಾಸ್ತಿಕನೆಂದು ಹಿಂದೆಯೇ ತೀರ್ಮಾನಿಸಿದ್ದರು. ಈಗ ಅವನ ಪ್ರತಿಭೆಯಿಂದ ನಿರ್ಮಿತವಾದ ವಿಗ್ರಹಕ್ಕೆ ಪೂಜೆಗೈಯಲು ಸಿದ್ಧರಾಗಿದ್ದರು. ಇದರಲ್ಲಿ ಸೀತಾಪತಿಗೆ

ಆಸಕ್ತಿಯಿಲ್ಲ. ಧರ್ಮಗುರುಗಳಿಗೆ ವಿಗ್ರಹ ಬೇಕೆ ಹೊರತು ವಿಗ್ರಹ ಏನು ಹೇಳುತ್ತಿದೆ ಎಂಬ ಕಡೆ ಗಮನವಿಲ್ಲ.

ಈ ಕಥೆಯಲ್ಲಿ ಬಹು ಭಾಗವನ್ನು ಓದುಗ ಊಹಿಸಿಕೊಳ್ಳಬೇಕು. ಇಲ್ಲದಿದ್ದರೆ ನಡುನಡುವೆ ಏನೋ ಸಂದು ಬಿದ್ದಂತೆ ಕಂಡುಬರುತ್ತದೆ. ಧರ್ಮಗುರುಗಳು ಸೀತಾಪತಿಯ ಪರಿಚಯ ಪಡೆದುದು ಆತನ ಮೊದಲ ವಿಗ್ರಹ ನಿರ್ಮಾಣದ ಮೂಲಕವೇ ಇರಬೇಕು. ಅದು ನಡೆದುದು ಹೇಗೆ, ಎಲ್ಲಿ ಎಂಬುದೆಲ್ಲ ಇಲ್ಲಿ ಸ್ಪಷ್ಟವಿಲ್ಲ. ಊಹಿಸಲು ಸೂಚನೆಯೂ ಇಲ್ಲ. ಕಲಾವಿದನ ಸ್ನೇಹಿತ ಯಾವಾಗ ಊರಿಗೆ ಹೋದ, ಏಕೆ, ಅವನಿಗೂ ಈ ಧರ್ಮಗುರುಗಳಿಗೂ ವಿಶ್ವಾಸ ಹೇಗಿತ್ತು? ಈ ಪ್ರಶ್ನೆಗಳು ತಲೆಯೆತ್ತಿದರೆ ಇಲ್ಲಿ ಉತ್ತರವಿಲ್ಲ. ಕಥೆಯಲ್ಲಿ ಇದೊಂದು ಶೈಥಿಲ್ಯವಾಗಿರಬಹುದು. ಆದರೂ ಆ ಎರಡು ವಿಗ್ರಹಗಳ ಸಂಬಂಧ – ವಿರೋಧ ಇವುಗಳ ಮೂಲಕ ಕಥೆ ಮನಸ್ಸಿಗೆ ಕಚಕ್ಕನೆ ಹಿಡಿಯುತ್ತದೆ. ಕಥೆಯ ಹೆಸರು ಕುತೂಹಲ ಕಾರಿಯಾಗಿದೆ.

## ಮಣ್ಣಿನ ಮಗ ಗನ್ನು ತಂದ

ನಮ್ಮ ದೇಶದ ಇತ್ತೀಚಿನ ರಾಜಕೀಯ ಆವರಣದಿಂದ ಪ್ರೇರಣೆ ಗೊಂಡ ಈ ಕಥೆಯಲ್ಲಿ ನಮ್ಮ ದೇಶಭಕ್ತಿಯ ಆಚಾರ ವಿಚಾರಗಳನ್ನು ಕುರಿತ ಒಂದು ವಿಶ್ಲೇಷಣೆಯಿದೆ. ದೇಶಭಕ್ತಿ ನಮ್ಮ ಜನರೆಲ್ಲರ ನಾಡಿ ನಾಡಿಯಲ್ಲಿ ಮಿಡಿಯುತ್ತಿದೆ. ಒಬ್ಬ ವ್ಯಕ್ತಿ ನಿಷ್ಪ್ರಯೋಜಕನಾಗಿರಬಹುದು. ಅನೇಕ ದೃಷ್ಟಿಗಳಲ್ಲಿ ಅಂಥವನೂ ಅವಕಾಶ ಉಂಟಾದಾಗ ತನ್ನ ಸತ್ವವನ್ನು ವ್ಯಕ್ತಪಡಿಸದೆ ಬಿಡುವುದಿಲ್ಲ. ಇದಕ್ಕೆ ಬೇಕಾಗಿರುವುದೊಂದೆ – ಸರಿಯಾದ ಆವರಣ ನಿರ್ಮಾಣ. ಇದು ಕೆಲವು ವೇಳೆ ಮಾನವನ ಅಧೀನ ಮತ್ತೆ ಕೆಲವು ವೇಳೆ ದೈವದ ಅಧೀನ. ಸಮಾಜವೂ ಅಷ್ಟೆ, ಗೆದ್ದ ಎತ್ತಿನ ಬಾಲ ಹಿಡಿಯುವ ಸ್ವಭಾವದ್ದು. ಎಲ್ಲವೂ ಎಂದು ತಾನೇ ಸರಿಹೋದೀತು! ವಾಸ್ತವ ಚಿತ್ರ ಹೇಗಿದೆಯೆಂಬುದು ಇಲ್ಲಿ ಸ್ಪಷ್ಟವಾಗಿದೆ.

'ಗುಲ್ಡು' ಎಂಬುದು ಬೀರಣ್ಣನಿಗೆ ಅವರ ಉಪಾಧ್ಯಾಯರು ಕೊಟ್ಟ ಬಿರುದು. ಅವನಿಗೆ ಅವರು ಹೇಳಿಕೊಟ್ಟದ್ದು ತಿಳಿಯದೆ ಇದ್ದುದ ರಿಂದ ಅವನು ಎಮ್ಮೆ ಕಾಯುವುದಕ್ಕೆ ಹೋಗಬೇಕಾಯ್ತು. ಆದರೂ

ಬೀರಣ್ಣ ಆ 'ಬಿರುದ'ನ್ನು ನಿಜವಾದ ಬಿರುದೆಂಬಂತೆಯೇ ಉಪಯೋಗಿಸುತ್ತಿದ್ದ. "ನಾನು ಯಾರು ಗೊತ್ತೇನ್ರೋ? **ಗುಲ್ಡು.** ಹುಷಾರ್!" ಮನೆಯಲ್ಲಿಯೂ ಎಲ್ಲರೂ ಗುಲ್ಡುವನ್ನು ನಿಷ್ಪ್ರಯೋಜಕನೆಂದೇ ತಿಳಿದರು. ತಾಯಿ "ಎಂಥ ಮಗ ಹುಟ್ಟಿದನಪ್ಪ!" ಎಂದು ಆಡಿದ ಕಹಿಮಾತು ಬೀರಣ್ಣನ ಮನಸ್ಸನ್ನು ಸಂಪೂರ್ಣವಾಗಿ ಕಲಕಿರಬೇಕು. ಬೀರಣ್ಣ ಬೆಂಗಳೂರಿಗೆ ಬಂದು ಸೈನ್ಯಕ್ಕೆ ಸೇರಿಬಿಟ್ಟನು.

ಹೊಸ ಆವರಣಕ್ಕೆ ಬೀರಣ್ಣ ಬೇಗ ಹೊಂದಿಕೊಂಡ. ಸೈನಿಕರ ಒರಟು ಜೀವನ, ನಗೆಮಾತು, ಶಿಸ್ತು ಇವು ಅವನಿಗೆ ಬೇಕಾದುವು. ಅವನಿಗೆ ಯಾವುದೋ ಹೊಸ ಸ್ವಾತಂತ್ರ್ಯ ಸಿಕ್ಕಂತಾಗಿತ್ತು. ವಿವಿಧ ವೇಷ, ಭಾಷೆಗಳ ಜನರೊಡನೆ ಅವನು ಬೇಗ ಬೆರೆತುಬಿಟ್ಟ.

ವೆಲಾಂಗ್ ರಣರಂಗದಲ್ಲಿ ಬೀರಣ್ಣ ತನ್ನ ಅಸಮ ಸಾಹಸವನ್ನು ವ್ಯಕ್ತಪಡಿಸಿದ್ದನು. ಚೀಣಿಯರ ಅನಿರೀಕ್ಷಿತ ಧಾಳಿಯನ್ನು ಅವನೂ ಅವನ ಸ್ನೇಹಿತರೂ ಎದುರಿಸಬೇಕಾಯ್ತು. ಎಲ್ಲರೂ ಸಿಕ್ಕಾಬಟ್ಟೆ ಓಡಿಹೋದಾಗ ಒಬ್ಬನೇ ತನ್ನ ಮೇಲೆ ಬರುತ್ತಿದ್ದ ಮೂವರಲ್ಲಿ ಇಬ್ಬರನ್ನು ಬಂದೂಕಿನಿಂದ ಹೊಡೆದಾಯಿತು. ಮುಂದೆ ಮದ್ದಿಲ್ಲದ ಅಸಹಾಯ ಪರಿಸ್ಥಿತಿ. ಮೂರನೆಯವನು ಹತ್ತಿರಕ್ಕೆ ಬಂದಾಗ ಅವನನ್ನು ಕೆಳಗೆ ಬೀಳಿಸಿ ಅವನ ಬಂದೂಕಿನಿಂದಲೇ ಅವನನ್ನು ಕೊಂದು ಗುಂಡುಗಳ ಮಧ್ಯೆ ಓಡಿ ಎಲ್ಲೋ ಆಳಕ್ಕೆ ಧುಮುಕಿ ತಪ್ಪಿಸಿಕೊಂಡಿದ್ದ ಬೀರಣ್ಣ, ಹಿಂದೆಯೇ ಓಡಿಬಂದಿದ್ದ ಮೃತ್ಯುವಿನ ಹಿಡಿಯನ್ನು.

ಮುಂದೆ ಆಸ್ಪತ್ರೆ – ರಜ – ಊರು. ಎಲ್ಲವೂ ಅನಿರೀಕ್ಷಿತ, ಅಷ್ಟೇ ಆಶ್ಚರ್ಯ ಸಂತೋಷದಾಯಕ. ಯಾರಿಗೂ ಹೇಳದೆ ಊರಿಗೆ ಬಂದರೆ ಅಲ್ಲೂ ಅನಿರೀಕ್ಷಿತವಾದ ಸ್ವಾಗತ. 'ಗುಲ್ಡು' ಎಂಬ ಬಿರುದು ಕೊಟ್ಟಿದ್ದ ಉಪಾಧ್ಯಾಯರೇ ಆತನ ಪರಾಕ್ರಮವನ್ನು ಹೊಗಳಿದರು. ಎಲ್ಲರೂ 'ಗುಲ್ಡು' ಬೀರಣ್ಣನಿಗೆ ಜಯಕಾರಮಾಡಿದರು.

ಮುಂದೆ ಬೀರನ ತಂಗಿ ಸೀತಮ್ಮನ ಮದುವೆ ಸುಲಭ. ತಾಯಿಗೆ ಜೀವನಕ್ಕೆ ಸ್ವಲ್ಪ ಭೂಮಿಯನ್ನು ಬೇರೆ ಕೊಡುತ್ತಾರಂತೆ. ಹೀಗೆ ಬೀರಣ್ಣ ನಿಷ್ಪ್ರಯೋಜಕ ಸಂಸಾರಕ್ಕೆ ರಕ್ಷಕನಾಗಿಬಿಟ್ಟ.

ಈ ಕಥೆಯಲ್ಲಿ ಹಳ್ಳಿಯ ಮನೆ, ಗ್ರಾಮಶಾಲೆ, ಯುದ್ಧರಂಗ, ಆಸ್ಪತ್ರೆ, ಬಸ್ಸು, ಇವುಗಳೆಲ್ಲದರೊಳಗಿನ ಆವರಣದ ಸ್ಥೂಲ ಚಿತ್ರದ ಮೂಲಕ ಬೀರಣ್ಣನ ಸೂಕ್ಷ್ಮಚಿತ್ರ ಕಾಣಿಸಿಕೊಳ್ಳುತ್ತದೆ. ಬೀರ ನಿಜವಾಗಿ ವೀರನಾದುದು ಇಲ್ಲಿಯ ಸ್ವಾರಸ್ಯ. 'ಮಣ್ಣು,' 'ಗನ್ನು' ಇವೆರಡು ಪದಗಳು ಕವನದಲ್ಲಿ ಪ್ರಾಸವಾಗುತ್ತವೆಯೋ ಇಲ್ಲವೋ ಅವೆರಡರ ಸಂಬಂಧ ಮಾತ್ರ ದೂರವಲ್ಲವೆನ್ನುವುದು ಈ ಕಥೆಯಲ್ಲಿ ಚೆನ್ನಾಗಿ ವ್ಯಕ್ತವಾಗಿದೆ.

## ಹಮಾಲ ಇಮಾಮ್ ಸಾಬಿ

'ಹಮಾಲ' ಎಂದರೆ ಮೂಟೆ ಹೊರುವವನು, ಕೂಲಿ. ಇಮಾಮ್ ಒಬ್ಬ ಹಮಾಲ, ರೈಲ್ವೆ ನಿಲ್ದಾಣದ ಕೂಲಿ. ಅವನ ಕಥೆಯಲ್ಲಿ ಎರಡು 'ಪ್ಲಾಟ್‌ಫಾರಂ' ಗಳ ಕಥೆಗಳು ಒಂದಕ್ಕೊಂದು ಬೆಸೆದುಕೊಂಡಿವೆ. ಒಂದು ಅವನು ಕೂಲಿಗೆ ಹೋಗುತ್ತಿದ್ದುದು. ಎರಡು ಅವನ ಮನೆ, ಸಂಸಾರ. ಜೀವನ ಯಾವಾಗಲೂ ಒಂದು ಪ್ರಯಾಣವೇ. ಕಾಲವೆನ್ನುವ ರೈಲುಬಂಡಿಯಲ್ಲಿ ಕುಳಿತು ಕೆಲವು ಮೈಲಿಗಳು ಪ್ರಯಾಣಮಾಡಿ ಇಳಿದುಬಿಡುವುದು ; ಇತರರಿಗೆ ಸ್ಥಳ ಬಿಡುವು ಮಾಡಿಕೊಡುವುದು.

ಬಾಲ್ಯದಿಂದಲೂ ಇಮಾಮ್ ಹಮಾಲನೇ. ತನ್ನ ಅರುವತ್ತು ವರ್ಷಗಳನ್ನೂ ಅಲ್ಲೇ ಆ 'ಪ್ಲಾಟ್‌ಫಾರಂ' ಮೇಲೆಯೇ ಕಳೆದವನು ಅವನು. ಇಲ್ಲಿ ಮೊದಮೊದಲು ಬಂದವರೆಲ್ಲ ಪರಿಚಯ ಇದ್ದವರು. ಆಮೇಲೆ ಯಾರು ಯಾರೋ, ಅವರ ಪರಿಚಯವಿಲ್ಲ. ಬಂದ ಸಂಪಾದನೆ ಸಾಕಾಗಿತ್ತು ಅವನ ಸಂಸಾರಕ್ಕೆ. ಮೊದಲನೆಯ ಹೆಂಡತಿಯನ್ನು ಕಳೆದುಕೊಂಡು ಎರಡನೆಯ ಮದುವೆ ಮಾಡಿಕೊಳ್ಳುವ ಹೊತ್ತಿಗೆ ಮೂವತ್ತು ವರುಷ ವಯಸ್ಸಾಗಿತ್ತು ಅವನಿಗೆ. ಎರಡನೆಯ ಆಕೆಯಲ್ಲಿ ಪಡೆದ ಐದು ಜನ ಗಂಡುಮಕ್ಕಳಲ್ಲಿ ಹತ್ತಿರ ನಿಂತವನೊಬ್ಬನೆ ಕೊನೆಯವನು. ಮಿಕ್ಕವರೆಲ್ಲ ಪ್ರಯಾಣ ಹೊರಟು ಎಲ್ಲೋ ನೆಲಸಿದರು. ಅವನ ಸೊಸೆ ಗರ್ಭಿಣಿಯಾಗಿದ್ದು ಈಗ ಪ್ರಸವವಾಗಬೇಕಿತ್ತು. ಇಮಾಮನು ಮನಸ್ಸಿನಲ್ಲಿ ತನ್ನ ಮಕ್ಕಳಲ್ಲಿ ನಾಲ್ಕು ಜನ ದೂರ ಹೋಗಿರುವುದು, ಅವರ ಮಕ್ಕಳು ಮರಿಗಳನ್ನು ಕಾಣದಾಗಿರುವುದು, ಈಗ ಈ ಹೊಸ ಜೀವದ ಆಗಮನದ ನಿರೀಕ್ಷೆ ಇವುಗಳ ವಿವಿಧ ಪರಿಣಾಮಗಳನ್ನು ತನ್ನಲ್ಲಿಯೇ ವಿಮರ್ಶಿಸು

ತ್ತಿದ್ದನು. ಅವುಗಳ ಜೊತೆಯಲ್ಲಿ ತನ್ನ ಹಿರಿಯ ಹೆಂಡತಿ ಚೊಚ್ಚಲು ಹೆರಿಗೆಯಲ್ಲಿಯೇ ತೀರಿಕೊಂಡ ಅನುಭವ ತಲೆಯೆತ್ತಿ ಅವನ ಹೃದಯವನ್ನು ಹಿಂಡಿರಬೇಕು. ಇದೊಂದು ಕಡೆ.

ಇನ್ನೊಂದು ಕಡೆ ಹೋಗಿಬರುವ ಗಾಡಿಗಳಮೇಲೆ ಗಮನವಿಟ್ಟಿರಬೇಕು. ಆದರೆ ಹಿಂದಿನಂತೆಯೇ ತಾನೇ ಗಾಡಿಗಳನ್ನು ಹುಡುಕಿ ಸ್ಥಳಗಳನ್ನು ವಿಾಸಲುಮಾಡಿಟ್ಟು, ಪ್ರಯಾಣಿಕರಿಗೆ ಸುಖಮಾಡಿಕೊಡುವ ಶಕ್ತಿ ಸಾಲದಾಗಿದೆ. ಒಬ್ಬ ಯುವಕ ಇನಾಮನಿಂದ ಒದಗಿದ ಸಹಾಯ ಸಾಲದೆಂದೋ, ಅವನಿಗೆ ಚಟುವಟಿಕೆ ಸಾಲದೆಂದೋ ಅವನ ಕೈಗೆ ನಾಲ್ಕಾಣೆ ಹಾಕಿ " ಮುದುಕನಾದೆ ನೀನು, ಹೋಗು " ಎಂದ ಮಾತಿನ ಯಾವ ಪರಿಣಾಮ ಅವನ ಮೇಲಾಯಿತೋ, ಯಾರು ಬಲ್ಲರು ! ಕಣ್ಣೀರು ಬರುವುದರಲ್ಲಿತ್ತು ; ಮುದುಕ ತಡೆದು ಮನೆಯ ಕಡೆಗೆ ನಡೆದ.

ಈ ಎಲ್ಲ ಗೋಜುಗಳನ್ನು ಬಿಡಿಸಿ ಸುಖದ ನೇರದಾರವನ್ನು ತೋರುವಂತೆ ಮನೆಯ ಬಳಿ ಬಂದ ವರ್ತಮಾನ-ಮೊಮ್ಮಗನ ಸುಖಾಗಮನ. ಆನಂದಾತಿರೇಕದಲ್ಲಿ ಕಣ್ಣೀರುಸುರಿಸಿ ನಿಲ್ಲಲಾರದೆ ಕುಳಿತವನು, ಈ ಲೋಕದಲ್ಲಿ ನಿಲ್ಲಲಾರದೆ ಹೊರಟೇಹೋದನು.

ಕಥೆಯ ಸ್ವಾರಸ್ಯವಿರುವುದು ಹಮಾಲನ ಮನಸ್ಸಿನ ಆಲೋಚನೆಗಳ ಪದರಪದರಗಳನ್ನು ಬಿಡಿಸಿರುವುದರಲ್ಲಿ; ನಿರೀಕ್ಷಿಸಿದ್ದ ಫಲ ಕೈಗೆಟುಕಿತೆನ್ನುವಷ್ಟರಲ್ಲಿ ಉಂಟಾದ ಇನಾಮನ ಅನಿರೀಕ್ಷಿತ ಪ್ರಯಾಣದಲ್ಲಿ. ಅವಿಭಕ್ತ ಕುಟುಂಬದ ನಿರ್ನಾಮವಾಗಿ ನಮ್ಮ ದೇಶದ ಸ್ವಾಸ್ಥ್ಯ ಹೇಗೆ ಚೆಲ್ಲಾಪಿಲ್ಲಿಯಾಗಿದೆಯೆಂಬುದೂ, ಹಳೆಯ ನಂಬಿಕೆ ಹೇಗೆ ಇಂಥ ಕಡೆಗಳಲ್ಲಿ ನಾಶಹೊಂದುತ್ತವೆ ಎಂಬುದೂ ಈ ಕಥೆಯಲ್ಲಿ ಧ್ವನಿತವಾಗಿದೆ. ಇದು ಕೇವಲ ಹಮಾಲ ಇನಾಮನ ಕಥೆ ಮಾತ್ರವಲ್ಲ. ಇಂಥ ಎಲ್ಲ ಸಂಸಾರಗಳ ಕಥೆ.

## ತಪ್ಪು ಎಣಿಕೆ

ಜವಾನ ನಾಗಪ್ಪನ ಅನೇಕ ದಿನಗಳ ಅಭ್ಯಾಸ, ಪುಢಾರಿತನ ಎಡವಿಬಿದ್ದ ಪ್ರಸಂಗ ಈ ಕಥೆಯ ಜೀವಾಳ. ಇಂಥವರನ್ನು ಈಗ ಲೋಕದಲ್ಲಿ ಹುಡುಕಬೇಕಾಗಿಲ್ಲ. ಎಲ್ಲ ಕಛೇರಿಗಳಲ್ಲಿ, ಅಂಗಡಿಗಳಲ್ಲಿ, ಸಂಸ್ಥೆಗಳಲ್ಲಿ, ಕೊನೆಗೆ ಬಾಲಕರಲ್ಲಿ, ನಾಗಪ್ಪನ ಪ್ರತಿನಿಧಿಗಳು ಅಸಂಖ್ಯಾತರಾಗಿದ್ದಾರೆ.

ಎದುರಾಳಿಯ ಭಯವೇ ಅವರ ಆಯುಧ. ಅದನ್ನೇ ಉಪಯೋಗಿಸಿ ಎದುರಾಳಿಯನ್ನು ಗೆಲ್ಲುವುದು ಅವರ ಅನೇಕ ವರ್ಷಗಳ ಸಾಧನೆ.

ಇಂಥವನೊಬ್ಬ, ದಕ್ಷ ಅಧಿಕಾರಿಯ ಹಿಡಿತಕ್ಕೆ ಸಿಕ್ಕಿ ನಾಶವಾದ ಸನ್ನಿವೇಶ ಬಹು ಸ್ವಾರಸ್ಯವಾಗಿದೆ. ರೆವಿನ್ಯೂ ಇಲಾಖೆಯ ಅಧಿಕಾರಿಗಳಿಗೆ 'ಸರ್ಕ್ಯೂಟ್' ಇದ್ದೇ ಇರುತ್ತದೆ. ಅವರ ಮನೆಯವರು ಭಯಗ್ರಸ್ತರಾದರೆ ಆಳುಕಾಳಗಳಿಗೆ ಒಳ್ಳೆಯ ಸುಗ್ಗಿ. ಅಂಥ ಸಂಸಾರ ಉಮಾಪತಿಯದು. ಅವನ ಹೆಂಡತಿ ವೀಣಾ ಸ್ವಲ್ಪ ಪುಕ್ಕಲು ಸ್ವಭಾವದವಳು. ಹಳಬನಾದ ನಾಗಪ್ಪ ಕಛೇರಿಯಲ್ಲಿ, ಸಾಹೇಬರ ಮನೆಯಲ್ಲಿ, ಎಲ್ಲರನ್ನೂ ತನ್ನ ಹತೋಟಿಯಲ್ಲಿಟ್ಟುಕೊಂಡಿದ್ದ. ಮನೆಯ ಹೆಣ್ಣಾಳಿನೊಡನೆ ಅಕ್ರಮ ಸಂಬಂಧವನ್ನೂ ಹೊಂದಿದ್ದ. ಒಳಗಿನ ಸಮಾಚಾರವನ್ನೆಲ್ಲ ತಿಳಿದು, ಆಗಬೇಕಾಗಿದ್ದ ಪಿತೂರಿಗಳನ್ನೆಲ್ಲ ಮಾಡುತ್ತಿದ್ದ—ಪರಿಣಾಮವಾಗಿ ಸಂಪಾದನೆ, ಸುಖ, ಜಬರದಸ್ತು ಇಷ್ಟೂ ಇತ್ತು. ಇಂಥವನು ಬಿದ್ದ ಬೇಸ್ತು ಈ ಕಥೆಯಲ್ಲಿ ಚೆನ್ನಾಗಿ ನಿರೂಪಿತವಾಗಿದೆ. ತನ್ನ ಪ್ರತಿಷ್ಠೆಯನ್ನೂ ಅಧಿಕಾರವನ್ನೂ ಪ್ರಕಾಶಪಡಿಸುವುದರ ಮೂಲಕವೇ ಅವನು ಹಳ್ಳಕ್ಕೆ ಬಿದ್ದದ್ದು ಸ್ವಾರಸ್ಯವಾಗಿದೆ. 'ಡಿಸ್ಮಿಸ್' ಆದಮೇಲೆ ಅವನೇನು ಮಾಡಿದನೊ! ಊಹಿಸುವುದಕ್ಕೆ ಚೆನ್ನು.

ಈ ಕಥೆಯ ಅಧಿಕಾರಿ ಶಕ್ತ, ದಕ್ಷ. ನಮ್ಮಲ್ಲಿ ಇನ್ನಷ್ಟು ಜನ ಇಂಥ ಅಧಿಕಾರಿಗಳು ಹೆಚ್ಚಿದರೆ ಜನಕ್ಕೂ ಅನುಕೂಲ, ಸರಕಾರಕ್ಕೂ ಬಿಗಿ. ಆದರೆ ಅನುಕೂಲ ಮಾಡಿಕೊಡುವ, ಬಿಗಿಯಾಗಿರುವ ಅಪೇಕ್ಷೆ ಬೇಕಲ್ಲ! ಅದನ್ನೆಲ್ಲಿಂದ ತರೋಣ?

**ಸ್ವಸ್ತಿಪಾನ**

ಮದ್ಯಪಾನ ಪ್ರಪಂಚಕ್ಕೆ ಸೇರಿದ ಈ ಕಥೆಗೆ ಪೀಠಿಕೆ ಚಿಕ್ಕಣ್ಣಯ್ಯ ಬದರಿ ಇವರ ಸ್ನೇಹ. ಪಾನಾವಸರದಲ್ಲಿ ಬಂದ ಕಥೆ ದಯಾನಂದರಿಗೆ ಸಂಬಂಧಪಟ್ಟದ್ದು. ಮೊದಲ ಪೀಠಿಕೆಯ ಸನ್ನಿವೇಶ ಸಾಧಾರಣವಾದದ್ದು. ಚಿಕ್ಕಣ್ಣಯ್ಯ ಮದುವೆಯಾದಮೇಲೆ ಪಾನ ಪ್ರಸಂಗಗಳನ್ನು ಕಡಮೆ ಮಾಡಿ ಮನೆಯ ಕಡೆ ಗಮನ ಕೊಟ್ಟದ್ದು-ಸಂಸಾರದ ಪುಣ್ಯ. ಬದರಿಯ ಕಥೆ ಸಾಕಷ್ಟು ಸ್ಪಷ್ಟವಿಲ್ಲ. ಹಣವನ್ನೇನೋ ಸಂಪಾದಿಸುತ್ತಿದ್ದ- ವಿವಿಧ

ವ್ಯಾಪಾರ ವ್ಯವಹಾರಗಳಿಂದ. ಈ ಇಬ್ಬರೂ ಮತ್ತೆ ಹಳೆಯ ಪಾನ ಮಂದಿರದಲ್ಲಿಯೇ ಸೇರಿದ್ದಾಗ ಬದರಿ ತನ್ನ ಸ್ಫೂರ್ತಿಯಿಂದ ಹೇಳಿದ ಕಥೆ–ಸಾವುಕಾರರ ಕಥೆ.

ಆವರಣ ನಿರ್ಮಾಣದಲ್ಲಿ ಈ ಕಥೆಗೆ ಹಿರಿಮೆಯಿದೆ. ಎರಡು ಆವರಣಗಳ ನಿರ್ಮಾಣ, ಪೀಠಿಕೆ, ಕಥೆ. ಆವರಣಕ್ಕೆ ಹೊಂದಿಕೊಳ್ಳುವಂತಿದೆ ದಯಾನಂದರ ಚಿತ್ರ. ಕಥೆಯ ಸೊಗಸಿರುವುದೂ ಅಲ್ಲಿಯೇ! ಕಥೆ ಚೋದಿಸುವ ಕಲ್ಪನೆಯಲ್ಲಿ ನಾವು ಆನಂದಪಡಬಹುದು.

## ಯಾವ ಜನ್ಮದ ಶಾಪ?

ವಿಶ್ವನಾಥಯ್ಯ, ಅವರ ಹೆಂಡತಿ, ಮಕ್ಕಳು ಪ್ರಸಾದ, ಗಿರಿಜಾ ಇವರಿಂದ ಕೂಡಿದ ಚೊಕ್ಕ ಸಂಸಾರ. ನೋಡುವವರು ಕರುಬುವಂತಿತ್ತು. ಆದರೆ ಒಳಗಡೆ ಇದ್ದವರಿಗೆ ಗೊತ್ತಿತ್ತು ಅವರ ಧರ್ಮಸಂಕಟ. ಪ್ರಸಾದ ಓದಿ ಎಂಜಿನಿಯರ್ ಆಗಿ ರೂರ್ಕೆಲಾ ಸೇರಿದ. ಗಿರಿಜಾ ಓದಿದ್ದಳು, ಮನೆಯಲ್ಲೇ ಇದ್ದಳು. ವಿಶ್ವನಾಥಯ್ಯ ಕೆಲಸದಿಂದ ನಿವೃತ್ತಿಹೊಂದಿ ಮನೆಗೆ ಬಂದಿದ್ದರು. ಇಲ್ಲಿಂದ ಕಥೆ ಪ್ರಾರಂಭ.

ಗಿರಿಜೆಯ ಮದುವೆ ಯೋಚನೆ, ಅದಕ್ಕೆ ತಗಲುವ ವೆಚ್ಚದ ಯೋಚನೆ. ಮಗನಿಗೆ ವರದಕ್ಷಿಣೆ ತೆಗೆದುಕೊಂಡು ಅದನ್ನೇ ಅಳಿಯನಾಗುವವನಿಗೆ ದಾಟಿಸುವ ಯೋಚನೆ—ಇವೆಲ್ಲ ಒಂದೊಂದಾಗಿ ಗಂಡ ಹೆಂಡಿರ ಮನಸ್ಸಿನಲ್ಲಿ ಸುಳಿಯತೊಡಗಿತು. ವಿಶ್ವನಾಥಯ್ಯ ಮಗನನ್ನು ಊರಿಗೇ ಕರೆಸಿಕೊಂಡು, ಮದುವೆ ಮಾಡಿಸಿ, ಇಲ್ಲೇ ಯಾವುದಾದರೂ ಕೆಲಸಕ್ಕೆ ಹತ್ತಿಸಿದರೆ ತಾನು ನಿವೃತ್ತಿಯಾದ ಮೇಲಿನ ಹಣದ ಅರಕೆಯನ್ನು ಪೂರೈಸಬಹುದು ಎಂದು ಆಲೋಚಿಸಿ ತನ್ನ ದೇಹಸ್ಥಿತಿ ಕೆಟ್ಟಿರುವುದಾಗಿ ತಂತಿ ಕೊಟ್ಟು ಮಗನನ್ನು ಊರಿಗೆ ಕರೆಸಿದರು.

ಹಿರಿಯರಿಗೂ ಕಿರಿಯರಿಗೂ ದೃಷ್ಟಿಭೇದ ಎಷ್ಟಿದೆಯೆಂಬುದು ಈಗ ಸ್ಪಷ್ಟವಾಗುತ್ತದೆ. ತಂದೆಯ ಅಭಿಪ್ರಾಯಕ್ಕೆ ಮಗನ ಒಪ್ಪಿಗೆಯಿಲ್ಲ. ಅವನು ಇಷ್ಟರಲ್ಲಿಯೇ ಜರ್ಮನಿಗೆ ಹೆಚ್ಚಿನ ಅಭ್ಯಾಸಕ್ಕೆ ಹೋಗುವವನು. ಅವನ ಸಂಸ್ಥೆಯವರೇ ಕಳುಹಿಸಲಿದ್ದಾರೆ. ಆದರೆ ತಂದೆಗೆ ಇದೆಲ್ಲ ಯಾವುದೋ ಗಂಡಾಂತರಗಳಿದ್ದಂತೆ ಕಾಣುತ್ತಿದೆ. ತಾಯಿಗೂ ಅಷ್ಟೆ.

ಗಿರಿಜೆಗೇನೋ ಸಂತೋಷ, ತನ್ನ ಅಣ್ಣ ಜರ್ಮನಿಗೆ ಹೋಗುವುದು. ಗಿರಿಜೆಯೂ ಕೆಲಸಕ್ಕೆ ಸೇರಲಿ ಎಂಬುದು ಪ್ರಸಾದನ ಅಭಿಪ್ರಾಯ.

ಹೆಣ್ಣು ಕೊಡಲು ಬಂದ ಚಂದ್ರಶೇಖರಯ್ಯನವರಿಗೆ ವಿವರಗಳು ಸ್ವಲ್ಪ ಸ್ವಲ್ಪವಾಗಿ ತಿಳಿದು ಅವರು ವಿಫಲ ಪ್ರಯತ್ನರಾಗಿ ಮನೆಗೆ ಹಿಂದಿರುಗುತ್ತಾರೆ. ವಿಶ್ವನಾಥಯ್ಯ ತನ್ನ ಸಮಸ್ಯೆಯನ್ನು ಬಗೆಹರಿಸಲಾರದೆ ಆತ್ಮಹತ್ಯೆಯ ಯೋಚನೆಯನ್ನೂ ಮಾಡುತ್ತಾರೆ. ಗಿರಿಜೆ ತಾನು ಈಗಲೇ ಮದುವೆ ಮಾಡಿಕೊಳ್ಳುವುದಿಲ್ಲ, ಕೆಲಸಕ್ಕೆ ಸೇರಿಕೊಳ್ಳುವಳೆಂದು ಹೇಳಿದರೂ ತಂದೆ ತಾನು ಬದುಕಿರುವವರೆಗೂ ಗಿರಿಜೆಯನ್ನು ಸಮಾಜಕ್ಕೂ ಕಳಿಸಲು ಒಪ್ಪುವುದಿಲ್ಲ. ಅವರದು ಒಂದೇ ಮಾತು "ಬಾಗಿಲು ಹಾಕ್ಕೋ."

ಸಂಸಾರದ ಆರ್ಥಿಕ ಅಗತ್ಯಗಳನ್ನು ಪೂರೈಸಲು ವಿಶ್ವನಾಥಯ್ಯ ಮತ್ತೆ ಯಾವುದೋ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ನಿವೃತ್ತಿಯ ವಿವರಣೆಯಲ್ಲಿ ಮೊದಲ್ಗೊಂಡ ಕಥೆ ಹೊಸ ಕೆಲಸಕ್ಕೆ ಹೊರಟ ವಿವರಣೆಯಿಂದ ಕೊನೆಯಾಗುತ್ತದೆ.

ಈ ಕಥೆ ಎರಡು ತಲೆಮಾರುಗಳ ನಡುವೆ ಜೀವನದ ಮೌಲ್ಯಗಳನ್ನು ಕುರಿತು ಭಾವನೆಗಳು ಎಷ್ಟು ವ್ಯತ್ಯಾಸವಾಗಿವೆ ಎಂಬುದನ್ನು ಬಹು ಅರ್ಥವತ್ತಾಗಿ ಚಿತ್ರಿಸುತ್ತದೆ: ಚಿಕ್ಕ ಸಂಸಾರದ ನಾಲ್ಕು ಜನ ಎರಡು ಬಣಗಳಾಗಿ ವಿಭಾಗಗೊಂಡಂತೆ, ಅವರ ನಡುವೆ ಪ್ರಚ್ಛನ್ನ ಸಮರವೇ ಅವ್ಯಕ್ತವಾಗಿ ನಡೆಯುತ್ತಿದ್ದಂತೆ, ಇದರಿಂದ ಇಬ್ಬರಿಗೂ ಸ್ವಾಸ್ಥ್ಯ ಕದಡಿದಂತೆ, ಸಮಾಜ ಕೈಗೆಟಕುವ ಸುಖವನ್ನು ಸಂಪ್ರದಾಯದ ನೆರಳಿನಲ್ಲಿ ನಿಂತು ದೂರ ಮಾಡುವಂತೆ ಕಾಣುವ ಚಿತ್ರ ಎಷ್ಟು ವಾಸ್ತವವಾದುದು ? ವಿಶ್ವನಾಥಯ್ಯ ತಮ್ಮ ಸ್ಥಿತಿಗತಿಯನ್ನು "ಯಾವ ಜನ್ಮದ ಶಾಪ ?" ಎಂದು ಪ್ರಶ್ನಿಸಿಕೊಳ್ಳುತ್ತಾರೆ. ಇದು ಶಾಪವೋ ? ಸ್ವಯಂಕೃತಾಪರಾಧವೋ ?

ಈ ಸಮಸ್ಯೆ ಮಧ್ಯಮ ವರ್ಗದ ಎಲ್ಲ ಸಂಸಾರಗಳ ಸಮಸ್ಯೆ. ಇದಕ್ಕೆ ಉತ್ತರ ಈ ಕಥೆಯಲ್ಲಿಲ್ಲ. ಆದರೆ ಅದು ಓದುಗನಿಗೆ ಬರಬಹುದಾದ ಸ್ಪಷ್ಟ ಚಿತ್ರದಲ್ಲಿ ತಾನಾಗಿಯೇ ಮೂಡುತ್ತದೆ. ಇದೊಂದು ಉತ್ತಮವಾದ ಕಥೆ.

**ಅನ್ನಪೂರ್ಣಾ**

ನಾಲ್ಕು ಪುಟಗಳ ಈ ಸಣ್ಣ ಕಥೆ ನಿಜವಾಗಿಯೂ ಬಹು ಅರ್ಥಪೂರ್ಣವಾದ ಕಥೆ.

ಊರಿನ ದೇವತೆ ಅನ್ನಪೂರ್ಣಾ. ಲೋಕದ ಜನಗಳಿಗೆ ಅನ್ನ ಹಾಕುವುದು ಆಕೆಯ ಆಶಯ. ಎಲ್ಲರನ್ನೂ ಸುಖವಾಗಿಟ್ಟಿರುವುದು ಆಕೆಯ ಅಪೇಕ್ಷೆ. ಆದುದರಿಂದಲೇ ಆ ಊರಿನಲ್ಲಿ ಒಂದು ಪದ್ಧತಿ ನಡೆದುಬಂತು. ದೇವರಿಗೆ ನೈವೇದ್ಯವಾದ ಮೇಲೆ ಅರ್ಚಕ ಕೂಗಿ ಕರೆಯಬೇಕು: "ಉಣ್ಣಲಿಕ್ಕಿದ್ದಾರೆಯೇ! ಇನ್ನೂ ಉಣ್ಣಲಿಕ್ಕಿದ್ದಾರೆಯೇ?" ಎಂದು. ಜನ ದೇವತೆಯು ತಮಗೆ ಕೊಟ್ಟಿರುವ ಸೌಲಭ್ಯವನ್ನು ಗಮನಿಸಿ ಕೃತಜ್ಞತೆಯಿಂದ 'ಹಸಿದವರಿಲ್ಲ, ದೇವಿ' ಎಂದು ಸಂತೃಪ್ತಿಯ ಉತ್ತರವನ್ನೀಯುತ್ತಿದ್ದರು.

ದೇಶದಲ್ಲಿ ದಾರಿದ್ರ್ಯ ದೇವಿ ನರ್ತನಮಾಡಿದಾಗ, ಅರ್ಚಕನ ಕೂಗಿಗೆ ಅನೇಕ ಭಿಕ್ಷುಕರು, ಹಸಿದವರು ಬಂದದ್ದುಂಟು. ಅವರಿಗೆ ದೇವಿಯ ನೈವೇದ್ಯದಲ್ಲಿ ಪಾಲುದೊರೆತದ್ದೂ ಉಂಟು. ಆದರೆ ಈ ಹಸಿದವರ ಸಂಖ್ಯೆ ಹಿರಿದಾದಾಗ, ಎಲ್ಲರಿಗೂ ಧರ್ಮಸಂಕಟವೊದಗಿತು. ಎಷ್ಟು ದಿನ ಎಷ್ಟು ಜನರಿಗೆ ಉಚಿತವಾಗಿ ಅನ್ನದಾನಮಾಡಲಾದೀತು?

ಯಾವುದೋ ಪಿಸುಮಾತು ಹೊರಟು "ಈ ಜನರ ನಡವಳಿಕೆಯಿಂದ ದೇವಿಗೆ ಅತೃಪ್ತಿಯಾಗಿದೆ" ಎಂಬ ವಾರ್ತೆ ಹಬ್ಬಿತು. ಕ್ರಮೇಣ ಜನ ದೇಗುಲಕ್ಕೆ ಅಶನಾರ್ಥಿಗಳಾಗಿ ಬರುವುದು ನಿಂತುಹೋಯಿತು.

ಆದರೆ ಬರಗಾಲ ನಿಲ್ಲಲಿಲ್ಲ. ಬೇರೆ ಊರುಗಳಿಂದ ಭಿಕ್ಷುಕರು, ಹಸಿದವರು ಕೆಲವರು ದೇಗುಲದ ಬಳಿ ಬಂದು ನಿಂತರು. ಅರ್ಚಕ "ಉಣ್ಣಲಿಕ್ಕಿದ್ದಾರೆಯೇ?" ಎಂದರೆ "ಇದ್ದೇವೆ" ಎಂದರು ಈ 'ಪಾಪಿ'ಗಳು. ಅರ್ಚಕನ ದೃಷ್ಟಿಯಲ್ಲಿ ಸತ್ಯವನ್ನು ನುಡಿದ ಇವರು ಪಾಪಿಗಳಾದರು. 'ಇದ್ದೇವೆ' ಎಂದರೂ ಅರ್ಚಕ ಅವರಿಗೆ ಪ್ರಸಾದ ಕೊಡಲಿಲ್ಲ. ಮಾತಾಡದೆ ಮನೆಗೆ ನಡೆದ, ನೈವೇದ್ಯದೊಡನೆ. ಮಾರನೆಯ ದಿನವೂ ಇದೇ ಪ್ರಶ್ನೆ ಎದುರಿಗೆ ನಿಂತಾಗ ಅರ್ಚಕ ಹೇಳಿದ ಮಾತು "ಈಗ ಆ ಪದ್ಧತಿ ಇಲ್ಲ – ಗೊತ್ತಿಲ್ಲವೆ?" ಅದಕ್ಕೆ ಬಡಪಾಯಿಯ ಪ್ರತಿಪ್ರಶ್ನೆ – "ಅನ್ನಪೂರ್ಣೆ ಈಗ ಅನ್ನದಾನ ಮಾಡುವುದಿಲ್ಲವೆ?" ಈ ಪ್ರಶ್ನೆಗೆ ಉತ್ತರವಿಲ್ಲ, ಬೈಗಳು ಮಾತ್ರ ದೊರೆಯುತ್ತವೆ. ಇದು ದೇಗುಲದ ಈ ಸನ್ನಿವೇಶದಲ್ಲಿ ಮಾತ್ರವಲ್ಲ – ಎಲ್ಲ ಕಡೆ ಎಲ್ಲ ಸನ್ನಿವೇಶಗಳಲ್ಲಿ.

ಹಳೆಯ ಸಂಪ್ರದಾಯಗಳು ಹೇಗೆ ಅರ್ಥವನ್ನೂ ಸತ್ವವನ್ನೂ ಕಳೆದುಕೊಂಡು ಸಮಾಜವು ಡಂಭಾಚಾರದ ಗಣಿಗಳಾಗಿವೆ ಎಂಬುದು ಈ ಕಥೆ

ನಮ್ಮನ್ನು ಕೇಳುವ ಪ್ರಶ್ನೆ. ನಾವು, ನಮ್ಮ ಸಮಾಜ ಈ ಪ್ರಶ್ನೆಗೆ ಉತ್ತರಿಸಲಾರೆವು – ಮಾತನಾಡಲೇ ಬೇಕಾದರೆ ಬೈಯುತ್ತೇವೆ – "ಷಂಡ, ನಾಸ್ತಿಕ." "ಅನ್ನಪೂರ್ಣೆ ಒಳಗಣ್ಣಿನಿಂದ ತನ್ನ ಆ ಮಕ್ಕಳನ್ನು ನೋಡಿ ನಗುತ್ತಿದ್ದಂತೆ ತೋರಿತು" ಎಂಬ ಕಥೆಗಾರರ ಮಾತು ಎಷ್ಟು ಅರ್ಥಪೂರ್ಣವಾಗಿದೆ!

## ಅನ್ನದೇವರ ರೈಲು ಪ್ರಯಾಣ

"ಅನ್ನದೇವರು ಎಲ್ಲ ದೇವರ ಹಾಗೆ ಎಲ್ಲ ಕಡೆಯಲ್ಲೂ ಇದಾರೆ. ಆದರೂ ಯಾರಿಗೂ ಕಾಣಿಸುವುದಿಲ್ಲ" ಎಂಬುದು ಈ ಕಥೆಯ ಸಿದ್ಧಾಂತ. ಸದ್ಯದ ಪರಿಸ್ಥಿತಿಗೂ ಚೆನ್ನಾಗಿ ಹೊಂದಿಕೊಳ್ಳುವ ಈ ಕಥೆ ಬರಹಕ್ಕೆ ಇಳಿದದ್ದು ಸುಮಾರು ಹತ್ತು ವರ್ಷಗಳ ಹಿಂದೆ. ಪ್ರಚಾರವೇ ಸರ್ವಸಮಸ್ಯೆಗಳ ಪರಿಹಾರ ಸಾಧನವಾಗಿರುವ ಈ ಕಾಲದಲ್ಲಿ ಅಧಿಕಾರ ಹೇಗೆ ಜನರ ಕಣ್ಣಿಗೆ ಮಣ್ಣೆರಚಬಹುದೆಂಬುದು ಇಲ್ಲಿ ಸೂಚಿತವಾಗಿರುವ ವಿಷಯ. ಜನ ನೋಡುವುದು ರೈಲನ್ನಷ್ಟೆ—ಅಕ್ಕಿಯನ್ನಲ್ಲ. 'ಜೈ' ಕಾರ ಹೇಳಿಸುವವರು ಅಧಿಕಾರ ಗರ್ವಿತರು. ಯಾವ ಊರಿನಲ್ಲಿಯೂ ಅಕ್ಕಿಯ ಮೂಟೆಯನ್ನಿಳಿಸದೆ ಕೊನೆಯ ಊರು ಸೇರಿದಾಗ ಅಕ್ಕಿಯನ್ನು ಕಾಣಲು ಬಂದವರಿಗೆ ದೊರಕುವ ಉತ್ತರ "ಎಷ್ಟೊಂದು ಊರು ದಾಟಿಬಂದಿರೋದು! ಏನ್ಕಥೆ!"

ಉತ್ಸವ, ಸಮಾರಂಭ, ಭಾಷಣ, ಜಯಕಾರ, ಪ್ರಚಾರ, ಪ್ರಕಟಣೆಗಳನ್ನೇ ತಿಂದು ಬದುಕುವುದು ಸಾಧ್ಯವಾದರೆ ನಮ್ಮ ದೇಶದಲ್ಲಿ ಅಜೀರ್ಣವಾಗಬೇಕಾಗಿದೆ—ಯಾರಿಗೂ ಹಸಿವಂತೂ ಇರದು.

## ಆ ಕಾಳರಾತ್ರಿ

ಒಂದು ಸಂಸಾರದ ಕಷ್ಟ ಸಮಯದ ಕಥೆಯಾದ ಈ ಬರೆಹದಲ್ಲಿ "ಪೂರ್ವಸ್ಮರಣ" ತಂತ್ರದಲ್ಲಿ ಆ ಸಂಸಾರದ ಅನೇಕ ವರ್ಷಗಳ ಜೀವನ ಮೂಡುತ್ತದೆ. ಒಂದೊಂದು ಮಾತು ಒಂದೊಂದು ಸನ್ನಿವೇಶವನ್ನೆ ಚಿತ್ರಿಸಿ ಒಂದು ಸ್ಪಷ್ಟ ಸ್ವರೂಪ ನಿರ್ಮಾಣಗೊಳ್ಳುತ್ತದೆ. "ಯುದ್ಧ ವರ್ಷಗಳ ಆಹಾರಾಭಾವ, ರೋಗರುಜಿನ, ನೋವು ಸಾವು" ಇವುಗಳ ತುಳಿತಕ್ಕೆ ಸಿಕ್ಕಿದ ಒಂದು ಕುಟುಂಬದ ಕಥೆ—ಇನ್ನೆಷ್ಟು ಕುಟುಂಬಗಳ ಮೇಲೆ ಈ ಸನ್ನಿವೇಶದ ಪ್ರಭಾವವೋ ಹೇಳುವವರಾರು? ಈ ಕಥೆಯ ಪರಿಣಾಮ ಓದುಗನ ಮೇಲೆ ಅಗಾಧವಾಗಿದ್ದರೆ ಆಶ್ಚರ್ಯವೇಕೆ?

## ಒಂಟಿ ನಕ್ಷತ್ರ ನಕ್ಕಿತು

ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಜನಮನ ಪ್ರಾರಂಭದಲ್ಲಿ ತೋರಿಸುವ ಅಶ್ರದ್ಧೆಯನ್ನೂ, ಕಾರ್ಯವೊಂದು ಪೂರ್ಣವಾದಾಗ ಜನಮನದಲ್ಲಿ ಆಗುವ ಆಶ್ಚರ್ಯವನ್ನೂ ಸಮಾಧಾನವನ್ನೂ ನಾವಿಲ್ಲಿ ದರ್ಶಿಸಬಹುದು. ವಾಗನನ್ನು 'ಉಚ್ಮುಂಡೆ' ಎಂದು ಬೈದ ಹಿರಿಯ ಕೊನೆಗೆ ತನ್ನನ್ನೇ 'ಉಚ್ಮುಂಡೆ' ಎಂದು ಬೈದುಕೊಳ್ಳುವುದರಲ್ಲಿ ಕಥೆ ಪರ್ಯವಸಾನ ಹೊಂದುತ್ತದೆ. ಮೂಢನಂಬಿಕೆ, ಪುರುಷಪ್ರಯತ್ನದಲ್ಲಿ ಅಪನಂಬಿಕೆ, ಸಂಪ್ರದಾಯ ಶರಣತೆ ಇವುಗಳನ್ನು ಉರುಳಿಸಬೇಕಾದರೆ ದೇಶ ಇನ್ನೂ ತುಂಬ ಕಾಲವನ್ನು ಕಳೆಯಬೇಕು. ವಿದ್ಯಾಭ್ಯಾಸ ಹೆಚ್ಚಬೇಕು, ಹೊಸ ತಲೆಮಾರಿನ ಜನ ಶಕ್ತರಾದ ಮುಂದಾಳುಗಳಾಗಬೇಕು.

ಹಿರಿಯನು ಸೋಲೊಪ್ಪಿದುದನ್ನು ನೋಡಿ, ತಾನೇ ತನ್ನನ್ನು ಬೈದುಕೊಂಡದ್ದನ್ನು ನೋಡಿ ಒಂಟಿ ನಕ್ಷತ್ರ ನಕ್ಕಿತಂತೆ. ಈ ಕಥೆಯಲ್ಲಿ ನವಯುಗದ ನಿರ್ಮಾಣ ಕಾರ್ಯದ ಹಿರಿಮೆ, ಕಷ್ಟ, ನಿಷ್ಠೆಗಳ ಅರ್ಥಪೂರ್ಣ ಚಿತ್ರ ಇವು ಮೂಡಿಬಂದಿವೆ. ಕಥೆಯ ಅರ್ಥಕ್ಕೆ ಕಥೆಯ ಕೊನೆಯಲ್ಲಿ ಬರುವ ಗಂಡು ಮಗುವಿನ ಜನನದ ವರ್ತಮಾನ ಹೆಚ್ಚು ಪುಷ್ಟಿಯನ್ನೊದಗಿಸಿದೆ.

## ನಂ. ೨೦೮ ಮತ್ತು ನೀಲಿ ಬುಶ್ ಕೋಟು

ವಾತ್ಸಲ್ಯವು ಬಡತನದ ಇಕ್ಕಟ್ಟಿಗೆ ಸಿಕ್ಕಿದಾಗ ಏನು ತಪ್ಪು ಮಾಡೀತು, ಆತ್ಮಗೌರವದ ಪ್ರತಿಷ್ಠೆ ತಲೆಯೆತ್ತಿದಾಗ ಮನಸ್ಸು ಹೇಗೆ ನಡೆದುಕೊಂಡೀತು ಎಂಬುದು ಸ್ವಾರಸ್ಯವಾದ ವಿಚಾರ. ಈ ವಿಚಾರ ಸರಣಿಗೆ ದೃಷ್ಟಾಂತವಾಗಿದೆ ಇಲ್ಲಿಯ ಕಥೆ.

ಶಾರದಾ ಅಕ್ಕ, ನಾಣಿ ತಮ್ಮ. ಅವರಿಬ್ಬರ ತಂದೆ ಐವತ್ತು ರೂಪಾಯಿನ ನೌಕರ–ತಾಯಿ ರೋಗಪೀಡಿತಳಾದ ನಿತ್ರಾಣಿ. ಈ ಸಂಸಾರದ ಉದರಂಭರಣಕ್ಕೆ ಶಾರದಾ ಸಹಾಯಕಳಾಗಬೇಕಾಗುತ್ತದೆ–'ರೆಡಿಮೇಡ್' ಉಡುಪುಗಳನ್ನು ತಯಾರಿಸುವ ಕಾರ್ಖಾನೆಯನ್ನು ಸೇರಿ. ನೀಲಿಯ ಬುಶ್ ಕೋಟ್ ಒಂದನ್ನು ಹಾಕಿಕೊಳ್ಳಬೇಕೆಂದು ಇಷ್ಟಪಟ್ಟ ನಾಣಿಗೆ ಉಡುಗೊರೆ ಕೊಡುವುದಾಗಿ ಅಕ್ಕನ ಮಾತು. ಅದನ್ನು ಕುರಿತು ಹಾಸ್ಯಮಾಡುತ್ತಿದ್ದ ತಮ್ಮ ನಾಣಿ—ಇವೆಲ್ಲದರ ನಡುವೆ ಶಾರದೆಯ ಕಣ್ಣಿಗೆ ನೀಲಿಯ ಬುಶ್ ಕೋಟ್ ಕಾಣಿಸುತ್ತದೆ, ಒಬ್ಬಳೇ ಇದ್ದಾಗ. ಅದನ್ನೇ ಕದ್ದು ಟಿಫಿನ್

ಕ್ಯಾರಿಯರ್‌ಗೆ ಸೇರಿಸುತ್ತಾಳೆ ಅವಳು. ಮಾಡಿದ ಅಕಾರ್ಯದ ಪರಿಣಾಮವಾಗಿ ತಲೆತಿರುಗಿ ಬೀಳುವುದರಲ್ಲಿರುತ್ತಾಳೆ. ಈ ಬವಳಿಗೆ ಸುತ್ತಣವರು ಅಪಾರ್ಥವನ್ನೇ ಮಾಡುತ್ತಾರೆ. ಮನೆಗೆ ಹೊರಟವಳು, ಶಾರದಾ, ಹಿಂತಿರುಗಿ ಬಂದು ಕಾರ್ಖಾನೆಯ ಯಜಮಾನರಿಗೆ ತನ್ನ ತಪ್ಪನ್ನು ತೋಡಿಕೊಳ್ಳುತ್ತಾಳೆ. ಹಿರಿಯರೂ, ಉದಾರಿಗಳೂ ಆದ ಅವರು ನಡೆದುಕೊಂಡ ರೀತಿ, ತೋರಿಸಿದ ಮರುಕ ಅಪರೂಪವಾದುದು. ಶಾರದಾ ಮತ್ತೆ ಆ ಕೆಲಸಕ್ಕೆ ಹಿಂದಿರುಗಲಿಲ್ಲ.

ಇದೇ ಸಮಯದಲ್ಲಿ ರೋಗಪೀಡಿತನಾಗಿದ್ದ ನಾಣಿ ಆಸ್ಪತ್ರೆಯಿಂದ ಮನೆಗೆ ಬರುವ ವೇಳೆಗೆ, ಅವನಿಗೆ ಪ್ರಿಯವಾದ ಬಣ್ಣವೂ ಬೇರೆಯಾಗಿತ್ತು. ಅದು ನೀಲಿಯಲ್ಲ ಈಗ ಬಿಳಿ. ಸರಿಯೇ, ಶಾರದೆಯ ಹೆಸರೂ ಬಿಳಿಯನ್ನೆ ಸೂಚಿಸುತ್ತದೆ. ನಾಣಿಯ ಆಸೆಯೂ ಬಿಳಿ. ಶುಭ್ರಜೀವನದ ಸಂಕೇತವಾಗಿ ಅವರ ಬಿಳಿ ಬಟ್ಟೆಯ ಅಪೇಕ್ಷೆ ಮುಂದುವರಿಯುತ್ತದೆ.

ಈ ಕಥೆಯಲ್ಲಿ ಶಾರದೆಯ ಅಂತರಂಗದ ತುಮುಲದ ಚಿತ್ರ ಚೆನ್ನಾಗಿದೆ. ಅದೇ ಕಥೆಯ ರಸಸ್ಥಾನ. ಮಿಕ್ಕ ಭಾಗಗಳು ಅದಕ್ಕೆ ಪೋಷಕ ಅಷ್ಟೇ. ಕಥೆಯ ಕರುಣರಸ ಚಿತ್ರಣದಲ್ಲಿ 'Sentimental' ಸ್ವಭಾವವಿದ್ದರೂ ಶೈಲಿಯ ಸತ್ವದಿಂದ ಈ ಕಥೆ ಆಕರ್ಷಕವಾಗಿದೆ.

## ಡಿ ಲಕ್ಸ್

ಡಿ ಲಕ್ಸ್ ಗಾಡಿಯಲ್ಲಿನ ಪ್ರಯಾಣ, ಅದರ ವಿವಿಧ ಸ್ವರೂಪಗಳನ್ನು ನಾವಿಲ್ಲಿ ಕಿಂಚಿತ್ ದರ್ಶಿಸುತ್ತೇವೆ. ಇಲ್ಲಿರುವ ಬೇರೆ ಬೇರೆ ವ್ಯಕ್ತಿಗಳ ನಡವಳಿಕೆಯನ್ನೂ ಮಾತುಗಳನ್ನೂ ನಾವು ಆಸಕ್ತಿಯಿಂದ ಪರಿಶೀಲಿಸುತ್ತೇವೆ. ಕೊನೆಗೆ ರಾಮನ್ ಪಡೆದ ಅನುಭವನ್ನು ಸವಿಯುತ್ತೇವೆ. ಈ ಕಥೆಯಲ್ಲಿನ ಬಹು ಸ್ವಾರಸ್ಯಮಯವಾದ ತರುಣಿಯ ಚಿತ್ರ ನಮ್ಮಲ್ಲಿ ನಗೆಯನ್ನು ಉಕ್ಕಿಸುತ್ತದೆ. ಕಥೆಯಲ್ಲಿ ಹಾಸ್ಯದ ಹಿಂದೆ ತೀವ್ರ ವಿಡಂಬನೆಯಿದೆ. 'ಡಿ ಲಕ್ಸ್' ಅಂದರೆ ಸುಖಸಮೃದ್ಧಿಯಿಂದ ಕೂಡಿದ, ವಿಸ್ತಾರವಾದ ಎಂಬ ಅರ್ಥವಿದೆ. ಇದು ವಸ್ತುಗಳಿಗೆ ಅನ್ವಯಿಸಬಹುದು. ಈ ಕಥೆಯಲ್ಲಿನ ಪ್ರಯಾಣಿಕನೇ 'ಡಿ ಲಕ್ಸ್'. ಅವನ ನಡೆವಳಿಕೆಯಲ್ಲೆಲ್ಲ ಈ 'ಡಿ ಲಕ್ಸ್' ಗುಣ ನಿರೂಪಿತವಾಗಿದೆ.

**—ಜಿ. ವೆಂಕಟಸುಬ್ಬಯ್ಯ**

12 8

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಬೆಂಗಳೂರು-೧೮

AKRUTI
₹ 50.00
2016